ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ



ಹರ್ಮನ್ ಹೆಸ್

ವಾಚಿಕೆ

ಜ. ಹೊ. ನಾರಾಯಣಸ್ವಾಮಿ

ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ

ಹರ್ಮನ್ ಹೆಸ್

ವಾಚಿಕೆ

ಹರ್ಮನ್ ಹೆಸ್
(೧೮೭೭ - ೧೯೬೨)

೧೯೪೬ರ ನೊಬೆಲ್ ಪ್ರಶಸ್ತಿ ವಿಜೇತ ಜರ್ಮನ್ ಲೇಖಕ ಹರ್ಮನ್ ಹೆಸ್. ಜರ್ಮನಿಯ ಸಮರ ಸಿದ್ಧಾಂತವನ್ನು ಪ್ರತಿಭಟಿಸಿ ಜರ್ಮನಿಯನ್ನು ತೊರೆದು ಸ್ವಿಟ್ಜರ್ಲೆಂಡಿನಲ್ಲಿ ಶಾಶ್ವತವಾಗಿ ನೆಲೆಸಿ ಆತ್ಮಗೌರವ ಮೆರೆದ ಈತ ಜರ್ಮನ್ ಸಾಹಿತ್ಯ ಲೋಕದ ಮೇಧಾವಿ ಪ್ರತಿಭಾ ವಂತ. ಜರ್ಮನಿಯ ನಾಜಿಗಳು ಈತನ ಕೃತಿಗಳನ್ನು ಬಹಿಷ್ಕರಿಸಿದರು. ಆದರೆ ಸ್ವಿಸ್ ದೇಶ ಅವರಿಗೆ ಡಾಕ್ಟರೇಟ್ ಕೊಟ್ಟು ಗೌರವಿಸಿತು. ಕತೆ, ಕಾದಂಬರಿಗಳೊಂದಿಗೆ ಕವಿತೆಗಳನ್ನು ಬರೆದಿರುವ ಹೆಸ್ ಭಾರತಕ್ಕೆ ಭೇಟಿ ನೀಡಿದ ಫಲವಾಗಿ 'ಸಿದ್ಧಾರ್ಥ' ಎಂಬ ಕಾದಂಬರಿಯನ್ನು ಬರೆದಿದ್ದಾನೆ. ಯುದ್ಧಗಳು ಉಂಟು ಮಾಡುವ ಕೆಡುಕು, ಮೌಲ್ಯ ಪತನಗಳ ಕುರಿತು ತನ್ನ ಸಂವೇದನೆಯನ್ನು ಹರ್ಮನ್ ಹೆಸ್ ತನ್ನ ಸಾಹಿತ್ಯದಲ್ಲಿ ಸೂಕ್ಷ್ಮವಾಗಿ ಸೃಜಿಸಿದ್ದಾನೆ.

ಜ. ಹೊ. ನಾರಾಯಣಸ್ವಾಮಿ ಅವರು ಈ ವಾಚಿಕೆಯನ್ನು ಕನ್ನಡ ಓದುಗರಿಗೆ ಸಿದ್ಧಪಡಿಸಿದ್ದಾರೆ.

ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ

ಹರ್ಮನ್ ಹೆಸ್

ವಾಚಿಕೆ

ಆಯ್ಕೆ / ಅನುವಾದ

ಜ.ಹೊ. ನಾರಾಯಣಸ್ವಾಮಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.

HERMANN HESSE, Selected writings of Nobel Lauriate Hermann Hesse, selected and edited by Ja. Ho. Narayana Swamy, Published by Kannada Pustaka Pradhikara, (Kannada Book Authority) Chamarajpet, Bangalore - 560 018.

Pages : XXIX + 175 = 204

Price : Rs.32

First Edition : 1997

ಬೆಲೆ : ಮೂವತ್ತೆರಡು ರೂಪಾಯಿಗಳು

ಮೊದಲ ಮುದ್ರಣ : ೧೯೯೭

ಮುಖಪುಟ : ರಾ. ಸೂರಿ

ಅಕ್ಷರ ಜೋಡಣೆ, ಮುದ್ರಣ

ರೋಹಿಣಿ ಪ್ರಿಂಟರ್ಸ್

22, ಕೆ.ವಿ. ಲೇನ್, ಅರಳೇಪೇಟೆ,

ಬೆಂಗಳೂರು - 560 053.

ದೂರವಾಣಿ : 28 71 260

ಮುನ್ನುಡಿ

ಕನ್ನಡ ಪುಸ್ತಕ ಪ್ರಾಧಿಕಾರವು ಕನ್ನಡ ಪುಸ್ತಕೋದ್ಯಮದ ಬೆಳವಣಿಗೆಗೆ ಪೂರಕವಾಗಿ ಅನೇಕ ಯೋಜನೆಗಳನ್ನು ರೂಪಿಸಿಕೊಂಡಿದೆ. ಅವುಗಳಲ್ಲಿ ಮುಖ್ಯವಾದುವೆಂದರೆ: ಕನ್ನಡದಲ್ಲಿ ಆಯಾ ವರ್ಷ ಪ್ರಕಟವಾಗುವ ಕೃತಿಗಳನ್ನು ಲೇಖಕರಿಂದ / ಪ್ರಕಾಶಕರಿಂದ ಕೊಂಡು ಗ್ರಂಥಾಲಯಗಳ ಮೂಲಕ ಓದುಗರಿಗೆ ತಲುಪಿಸುವುದು ಹಾಗೂ ಅತ್ಯುತ್ತಮವಾದ ಕೃತಿಗಳನ್ನು ಪರಿಣತ ವಿದ್ವಾಂಸರಿಂದ ಬರೆಯಿಸಿ ಪ್ರಕಟಿಸುವುದು.

ಈ ಯೋಜನೆಗಳಿಗೆ ಪೂರಕವಾಗಿ ಕಳೆದ ಐದು ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ಸೃಜನಶೀಲ ಹಾಗೂ ಸೃಜನೇತರ ಸಾಹಿತ್ಯವನ್ನು ಕನ್ನಡಿಗರಿಗೆ ಒದಗಿಸುತ್ತಾ ಬಂದಿದೆ. ಕನ್ನಡದ ಮೌಲಿಕವಾದ, ಹಲವಾರು ವರ್ಷಗಳಿಂದ ಬೇಡಿಕೆಯಲ್ಲಿದ್ದೂ ಪುನರ್ ಮುದ್ರಣವಾಗದಿದ್ದ ಗ್ರಂಥಗಳನ್ನು ಆಯ್ದು ''ಜನಪ್ರಿಯ ಪುಸ್ತಕ ಮಾಲೆ''ಯ ಮೂಲಕ ಪ್ರಕಟಿಸುತ್ತಾ ಬಂದಿದೆ. ಹಾಗೆಯೇ ಸಮಕಾಲೀನ ಸಾಹಿತ್ಯ, ಶಿಕ್ಷಣ, ಸಂಸ್ಕೃತಿ, ಮಾನವಿಕ, ಶಾಸ್ತ್ರ, ವಿಚಾರ, ಕಲೆ, ಶಿಶು ಸಾಹಿತ್ಯ ಹಾಗೂ ವಿಜ್ಞಾನ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿಶಿಷ್ಟವಾದ ಕೃತಿಗಳನ್ನು ಹೊರತರುವ ಉದ್ದೇಶದಿಂದ ಮೂಲಭೂತ ಶೈಕ್ಷಣಿಕ ಮಾಲೆ, ವಿಜ್ಞಾನದೀಪ ಮಾಲೆ, ಮಕ್ಕಳ ಪುಸ್ತಕ ಮಾಲೆಗಳನ್ನು ಪ್ರಾರಂಭಿಸಿದೆ. ಅಲ್ಲದೆ, ಕನ್ನಡದ ಕೆಲವು ಲೇಖಕರ ಶತಮಾನೋತ್ಸವ ಸಂದರ್ಭದಲ್ಲಿ ಅವರ ಪ್ರಾತಿನಿಧಿಕ ಸಂಕಲನವನ್ನು ಸಂಪಾದಿಸಿ ಪ್ರಕಟಿಸುವ ಕೆಲಸವನ್ನೂ ಮಾಡುತ್ತಿದೆ.

ಜಗತ್ತಿನ ಬೇರೆ ಬೇರೆ ವಿಜ್ಞಾನಿಗಳ, ತತ್ವಜ್ಞಾನಿಗಳ ಬದುಕು ಮತ್ತು ಬರಹಗಳನ್ನು ಕುರಿತು ತಜ್ಞರಿಂದ ಬರೆಯಿಸಿ ಕನ್ನಡದ ಓದುಗರಿಗೆ ತಲುಪಿಸಬೇಕೆಂಬ ಮಹಾತ್ವಾಕಾಂಕ್ಷೆಯನ್ನೂ ಪ್ರಾಧಿಕಾರ ಹೊಂದಿದೆ. ಹೀಗೆ ಪರಿಚಯಿಸುವುದರ ಮೂಲಕ ಬೇರೆ ಬೇರೆ ದೇಶಗಳ ಭಾಷೆ, ಸಂಸ್ಕೃತಿ ಹಾಗೂ ನಾಗರೀಕತೆಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ನೊಬೆಲ್ ಬಹುಮಾನ ವಿಜೇತ ಲೇಖಕರ ಮಾಲಿಕೆಯನ್ನು 'ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ' ಎಂದು ಆರಂಭಿಸುತ್ತಿದ್ದೇವೆ.

ನೊಬೆಲ್ ಬಹುಮಾನ ಜಗತ್ತಿನಲ್ಲಿಯೇ ಅತ್ಯಂತ ಪ್ರತಿಷ್ಠಿತವಾದ ಬಹುಮಾನ. ಆಲ್‌ಫ್ರೆಡ್ ನೊಬೆಲ್ ತನ್ನ ಉಯಿಲಿನಲ್ಲಿ ತನ್ನ ಉಳಿದಿರುವ ಆಸ್ತಿಯನ್ನೇ ಮೂಲ ಬಂಡವಾಳವಾಗಿಟ್ಟುಕೊಡು ಅದರಿಂದ ಬರುವ ಬಡ್ಡಿ ಹಣದಲ್ಲಿ ಪ್ರತಿವರ್ಷ ಐದು ಬಹುಮಾನಗಳನ್ನು ಕೊಡುವಂತೆ ತಿಳಿಸಿದ್ದಾರೆ. ಈ ಬಹುಮಾನಗಳು 'ಭೌತಶಾಸ್ತ್ರ', 'ರಸಾಯನಶಾಸ್ತ್ರ', 'ಶರೀರ ಶಾಸ್ತ್ರ', ಅಥವಾ 'ವೈದ್ಯಕೀಯ ಶಿಕ್ಷಣ', 'ಸಾಹಿತ್ಯ' ಹಾಗೂ 'ಮನುಕುಲದ ಶಾಂತಿಗಾಗಿ' ಎಂದು ಸೂಚಿಸಿದ್ದಾರೆ. ಹಾಗೆ ಆಯಾ ವರ್ಷ ಬಹುಮಾನ ಪಡೆಯುವವರು ಹಿಂದಿನ ವರ್ಷಾವಧಿಯಲ್ಲಿ ಮಾನವ ಕುಲಕ್ಕೆ ತುಂಬ ಪ್ರಯೋಜನಕಾರಿಯಾದ, ಅತ್ಯಂತ ಶ್ರೇಷ್ಠ ಕಾರ್ಯ ಮಾಡಿರಬೇಕು. ವಿವಿಧ ಅಕಾಡೆಮಿಗಳು ಆಯ್ಕೆ ಮಾಡಿ ಈ ಬಹುಮಾನವನ್ನು ನಿರ್ಧರಿಸುತ್ತವೆ. ಈ ಬಹುಮಾನ ನೀಡುವಲ್ಲಿ ಅಭ್ಯರ್ಥಿಗಳ ರಾಷ್ಟ್ರೀಯತೆಯನ್ನು ಪರಿಗಣಿಸಬಾರದೆಂಬುದನ್ನು ನೊಬೆಲ್ ಸೂಚಿಸಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಇಂತಹ ಪುರಸ್ಕಾರವನ್ನು ಪಡೆದ ಸಾಹಿತಿಗಳನ್ನು ಕುರಿತ ಕೃತಿಗಳನ್ನು ಕನ್ನಡಿಗರಿಗೆ ತಲುಪಿಸುವುದು ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ.

ಪ್ರಸ್ತುತ 'ನೊಬೆಲ್ ವಾಚಿಕೆಗಳು' ಎಂಬ ಈ ಮಾಲಿಕೆಯ ಕೃತಿಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸಿದ್ಧಪಡಿಸಿ ಕೊಟ್ಟಿದೆ. ಈ ಅಕಾಡೆಮಿಯ ಹಿಂದಿನ ಅಧ್ಯಕ್ಷರಾದ ಪ್ರೊ॥ ಬರಗೂರು ರಾಮಚಂದ್ರಪ್ಪ ಅವರು ಬೇರೆ ಬೇರೆ ಲೇಖಕರಿಂದ ಹಸ್ತಪ್ರತಿಗಳನ್ನು ಸಿದ್ಧಪಡಿಸಲು ನೆರವಾಗಿದ್ದಾರೆ, ಅಂತೆಯೇ ಅಕಾಡೆಮಿಯು ಸಿದ್ಧಪಡಿಸಿದ ಈ ಕೃತಿಗಳನ್ನೆಲ್ಲಾ ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸಲು ಇಂದಿನ ಅಧ್ಯಕ್ಷರಾದ ಶ್ರೀ ಶಾಂತರಸರವರು ಒಪ್ಪಿಗೆ ನೀಡಿದ್ದಾರೆ. ಇವರಿಗೆ ಪ್ರಾಧಿಕಾರವು ಆಭಾರಿಯಾಗಿದೆ. ಈ ಮಾಲಿಕೆಯಲ್ಲಿನ ಕೃತಿಗಳು ಇಷ್ಟು ಅಚ್ಚುಕಟ್ಟಾಗಿ ಹೊರಬರಲು ಶ್ರಮಿಸಿದ್ದಾರೆ; ಲಿಂಗರಾಜು ಅವರಿಗೂ, ಹಾಗೆಯೇ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ರೋಹಿಣಿ ಪ್ರಿಂಟರ್ಸ್ ಅವರಿಗೂ, ಈ ಪುಸ್ತಕಕ್ಕೆ ಹೊದಿಕೆಯನ್ನು ಬರೆದುಕೊಟ್ಟ ರಾ. ಸೂರಿಯವರಿಗೂ ಕೃತಜ್ಞತೆಗಳು. ಸಹೃದಯ ಕನ್ನಡಿಗರು ಈ ಮಾಲಿಕೆಯನ್ನು ಆದರಿಂದ ಸ್ವಾಗತಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಾರೆಂದು ಆಶಿಸುತ್ತೇನೆ.

ನೆಲಮನೆ ದೇವೇಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ಪರಿವಿಡಿ

ಪ್ರಸ್ತಾವನೆ

೧೯೧೯ರಲ್ಲಿ ಮೊದಲ ಜಾಗತಿಕ ಯುದ್ಧ ಮುಗಿದ ಮೊದಲ ವಾರದಲ್ಲಿ 'ಜಾರತುಷ್ಟ್ರನ ಪುನರಾಗಮನ' (Zarathustra's Return) ಎಂಬ ಹೆಸರಿನ್ನ ಕರಪತ್ರವನ್ನು ಸ್ವಿಡ್ಜರ್ಲೆಂಡಿನಲ್ಲಿ ಪ್ರಕಟಿಸಲಾಯತು. ಬರೆದವರ, ಪ್ರಕಟಿಸಿದವರ ಹೆಸರು ಅದರಲ್ಲಿರಲಿಲ್ಲ. ಜರ್ಮನಿಯ ಕ್ರಾಂತಿಕಾರಿ ಬರಹಗಾರ 'ಫೆಡ್ರಿಕ್ ನೀಷೆ' ಜಾರತುಷ್ಟ್ರನನ್ನು 'ದಾರ್ಶನಿಕ' ಎಂದು ಪರಿಗಣಿಸಿದ್ದ. ಆತನನ್ನು ಕುರಿತು ನೀಷೆ ಗ್ರಂಥ ಬರೆದಿದ್ದಾನೆ. ಅದರಲ್ಲಿ ನೀಷೆ 'ಹಳೆಯ ಮೌಲ್ಯಗಳನ್ನು ಕಿತ್ತೊಗೆಯಿರಿ. ನಿಮ್ಮ ಹೃದಯದ ಕರೆಗೆ ಓಗೊಡಿ' ಎಂದು ಜರ್ಮನಿಯ ಯುವಕರಿಗೆ ಕರೆಗೊಟ್ಟು ಆ ಪ್ರಬಂಧವನ್ನು 'ನಿಮ್ಮ ಹೃದಯದ ಹಕ್ಕಿ ಹಾಡಿ ನುಡಿದರೆ ಅದನ್ನು ಸ್ಫೂರ್ತಿಯಿಂದ ಅನುಸರಿಸಿ. ಅದು ಕಗ್ಗತ್ತಲೆಗೆ ಕೊಂಡೊಯ್ಯುತ್ತಿದೆ ಎಂದೆನಿಸಿದರೂ ಚಿಂತೆಯಿಲ್ಲ' ಎಂದು ಮುಕ್ತಾಯ ಮಾಡಿದ್ದ.

ಅಂತಹುದೇ ಸಂದೇಶವನ್ನು ಸಾರುವ ಕಾದಂಬರಿಯೊಂದು ಅದೇ ವರ್ಷ ಪ್ರಕಟವಾಯ್ತು. ಪ್ರೌಢ ಓದುಗರು ಅದನ್ನು ಗಮನಿಸಿದರು. ಆ ಕಾದಂಬರಿಯ ಹೆಸರು 'ಡಿಮೇನ್' (Demain) ಎಂದು. ಅಪರಿಚಿತ ಲೇಖಕನೊಬ್ಬ 'ಎಮಿಲ್ ಸಿಂಕ್ಲೇರ್' ಎಂಬ ಹೆಸರಿನಲ್ಲಿ ಅದನ್ನು ಪ್ರಕಟಿಸಿದ್ದ. ಅದೂ ಕೂಡ ಸಾಂಪ್ರದಾಯಿಕ ಸಮಾಜದ ಬಂಧನದಲ್ಲಿ ಒದ್ದಾಡುತ್ತಿರುವ ಹೃದಯದ ಬಿಡುಗಡೆಯ ಕೂಗಾಗಿತ್ತು. ಆ ಕರಪತ್ರ ಮತ್ತು ಕಾದಂಬರಿ ಹೆಚ್ಚು ಓದುಗರನ್ನು ಪಡೆದು ಕಾದಂಬರಿಗೆ ವಿಶೇಷ ಬಹುಮಾನ ಬಂತು. ಆದರೆ ಅವುಗಳ ಕರ್ತೃ ಯಾರು ಎಂದು ಸಾಹಿತ್ಯವಲಯದಲ್ಲಿ ಹಾಗೂ ಪತ್ರಿಕೆಗಳಲ್ಲಿ ವ್ಯಾಪಕವಾಗಿ ಚರ್ಚಿಸಲಾಯ್ತು.

ಆ ಎರಡೂ ಬರಹಗಳನ್ನು ಬರೆದವನು ಹೆಸ್ ಎಂದು ಒಂದು ತಿಂಗಳ ನಂತರ ಗೊತ್ತಾಯ್ತು. ನಲವತ್ತೆರಡು ವರ್ಷದ 'ಹೆಸ್' ಇಡಿಯ ಜನಾಂಗವನ್ನು ಒಂದು ರೀತಿಯ ಸ್ವಾತಂತ್ರ್ಯ ಹಾಗೂ ಜವಾಬ್ದಾರಿಯತ್ತ ಎಚ್ಚರಿಸಿದ್ದ. ಹಳೆಯದರಿಂದ ಬಿಡಿಸಿಕೊಳ್ಳಿ, ನಿಯಮಿತ ವರ್ತನೆಗಳಿಂದ ಹೊರಗುಳಿಯಿರಿ, ಹೊಸ ಜವಾಬ್ದಾರಿಯನ್ನು ಹೊತ್ತುಕೊಳ್ಳಿ ಎಂದು ಜನಾಂಗಕ್ಕೆ ಕರೆಕೊಟ್ಟಿದ್ದ. ತನ್ನ ಹೆಸರು ಪ್ರಚಾರವಾಗುವುದರೊಳಗೆ 'ಹೆಸ್' ಸಾರ್ವಜನಿಕರಿಂದ ಕಣ್ಮರೆಯಾದ.

ಜಾರತುಷ್ಟ್ರನಂತೆ ಏಕಾಂತದ ಎತ್ತರವನ್ನು ಅಪೇಕ್ಷಿಸಿ ಸ್ವಿಸ್ ದೇಶದ ಮಾಂಟಗೋಲಾದಲ್ಲಿನ ಶಿಖರದ ಎತ್ತರದಲ್ಲಿ ತನ್ನ ಅಂತ್ಯದವರೆಗೆ 'ಸಂದರ್ಶಕರಿಗೆ ಅವಕಾಶವಿಲ್ಲ' ಎಂಬ ನಾಮ ಫಲಕವನ್ನು ಹಾಕಿಕೊಂಡು ತೋರಿಕೆಯ ಬದುಕಿಗೆ ವಿದಾಯ ಹೇಳಿ ಅಂತರಂಗದ ಮೌಲ್ಯಗಳಿಗೆ ಮಾನ್ಯತೆ ನೀಡಿ ವಾಸಿಸಿದ. ಆತನದು ಒಂದು ರೀತಿಯ ಋಷಿ ಸದೃಶ ಬದುಕು.

ಬೆಟ್ಟದ ತುದಿಯಲ್ಲಿ ವಾಸಿಸುವ ಈತನಿಂದ ಯಾವ ಬಗೆಯ ಕೃತಿಗಳನ್ನು ನಿರೀಕ್ಷಿಸಬಹುದು? ಪೌರಾಣಿಕ ಪಾತ್ರಗಳೊಂದಿಗೆ ವಾಸ್ತವ ದೃಶ್ಯ ಪರಂಪರೆಗಳನ್ನೇ? ಮೋಸಗೊಳಿಸುವ ಪಿತೂರಿಗಳಿಂದ ಸಾಮಾಜಿಕ ಕುತೂಹಲ ಕೆರಳಿಸುವುದನ್ನೇ? ಖಂಡಿತ ಅಲ್ಲ , ತಾತ್ಕಾಲಿಕ ವಿಷಯ ವಸ್ತುಗಳಿಗಿಂತ ಭಿನ್ನವಾದ ಒಳಶೋಧನೆಯ ಕಾದಂಬರಿಗಳನ್ನು. ತುಂಬಿ ತುಳುಕುವ ಯೂರೋಪಿನ ಗಲಿಬಿಲಿಯ ನಗರಗಳಿಂದ ದೂರವಿರುವ ಮಾಂಟಗೋಲದಂತೆ, ಇಪ್ಪತ್ತನೆಯ ಶತಮಾನದ ಕುದಿತಗಳಿಂದ ದೂರವಾದ ವಾಸ್ತವ ಸತ್ಯಶೋಧನೆಗಳನ್ನು ನಿರೀಕ್ಷಿಸುತ್ತೇವೆ. ಮನುಷ್ಯನ ಅಂತರಂಗ ಜೀವನದಲ್ಲಿ ಹಾಸುಹೊಕ್ಕಾಗಿರುವ ಆತ್ಮರತಿಯ ಬಗೆಗಿನ ದನಿಯೊಂದನ್ನು ಕೇಳುತ್ತೇವೆ. ಆದರೆ ಜಾರತುಷ್ಟ್ರ ತನ್ನ ಹೃದಯದ ಹಕ್ಕಿಯ ನಿರ್ಮಲ ಧ್ವನಿಯನ್ನು ಕೇಳಿಸಿಕೊಂಡ. ಮಾಂಟಗೋಲದ ಎತ್ತರದಲ್ಲಿ ಕುಳಿತು ಹರ್ಮನ್ ಹೆಸ್ ಭಾರತದ ಪುರಾತನ ಮೌಲ್ಯವನ್ನು ಹೊಕ್ಕು 'ಸಿದ್ಧಾರ್ಥ' (೧೯೨೨)ವನ್ನೂ, ಸತ್ವಹೀನವಾದ ಮಧ್ಯಯುಗ ಕುರಿತ 'ನಾರ್ಸಿಸ್ ಅಂಡ್ ಗೋಲ್ಡ್‌ಮೆಂಡ್' (೧೯೩೦) ಅನ್ನೂ, ಅನ್ಯ ಪ್ರಜ್ಞೆಯಿಂದ ಹೊರಗುಳಿದು ಇಪ್ಪತ್ತರ ದಶಕದ ಮೋಡಿಯಿಂದ ಬಿಡುಗಡೆಗೊಂಡ ಬುದ್ಧಿಜೀವಿಯ ಮೇಲೆ ವ್ಯಂಗ್ಯದೃಷ್ಟಿಯನ್ನೊಳಗೊಂಡ 'ಸ್ಟೆಪ್ಪೆನ್‌ವುಲ್ಫ್' (೧೯೨೭) ಅನ್ನೂ, ಕಾಲವನ್ನು ಮೀರಿದ 'ಜರ್ನಿ ಟು ದಿ ಈಸ್ಟ್' (೧೯೩೨) ಅನ್ನೂ, ಮುಂಬರುವ ಪ್ರಪಂಚದ ಪರಿಚಯವನ್ನು ನೀಡುವ 'ದಿ ಗ್ಲಾಸ್‌ಬೀಡ್ ಗೇಮ್' (೧೯೪೨) ಕೃತಿಗಳನ್ನೂ, ನೀಡಿದ. ಆದಾಗ್ಯೂ ಈ ಎಲ್ಲ ಕೃತಿಗಳಲ್ಲಿ ಕೃತಿಗಾರನ ಆಂತರ್ಯದ ಹೊಸ ದೃಷ್ಟಿಕೋನಗಳನ್ನು ಹಾಗೂ ಆತನ ಮನದ ಬಿಂಬಗಳನ್ನು ಅಲ್ಲಿ ಬರುವ ಭೂತಕಾಲ ವರ್ತಮಾನ ಹಾಗೂ ಭವಿಷ್ಯದ ಪಾತ್ರಗಳಲ್ಲಿ ಕಾಣುತ್ತೇವೆ.

'ಹೆಸ್' ದಂತಗೋಪುರದಲ್ಲಿ ಕುಳಿತು ಕೃತಿಗಳನ್ನು ರಚಿಸಿದ ಎಂದು ಭಾವಿಸಬಾರದು. ಆತನ ಜೀವನಾನುಭವ ಅದಕ್ಕೆ ಪೂರಕವಾಗಿತ್ತು, ಪ್ರೇರಣೆಯಾಗಿತ್ತು.

ಜರ್ಮನಿಯ ಪ್ರಸಿದ್ಧ ಬರಹಗಾರರಲ್ಲಿ ಒಬ್ಬರಾದ 'ಹರ್ಮನ್ ಹೆಸ್' ಹುಟ್ಟಿದ್ದು 'ಕ್ಯಾಲಾ' ಎಂಬ ಚಿಕ್ಕನಗರದಲ್ಲಿ, ಜುಲೈ ೨, ೧೮೭೭ ರಂದು. ಆತನ ಬಾಲ್ಯ ಜೀವನ ಸಹ ಕ್ಯಾಲಾನಗರದ ಕಪ್ಪು ಕಾಡಿನ ಜನಪದರ ನಡುವೆ ಕಳೆಯಿತು. ಅಲ್ಲಿ ಆತನ ತಂದೆ ಧರ್ಮಶ್ರದ್ಧೆಯ ಪ್ರಕಟನಾ ಸಂಸ್ಥೆಯಲ್ಲಿ ನಿರ್ದೇಶಕನಾಗಿದ್ದ. ಸಾಂಪ್ರದಾಯಿಕ ಬದುಕಿಗೆ ಹೆಸ್ ಹೊಂದಿ ನಡೆದು ಮಂತ್ರಿ ಪದವಿಗೇರುತ್ತಾನೆ, ಇಲ್ಲವೇ ಚರ್ಚಿನ ಗುರುಪೀಠವನ್ನು ಅಲಂಕರಿಸುತ್ತಾನೆ ಎಂದು ಭಾವಿಸಲಾಗಿತ್ತು. ಆದರೆ ಆತನಿಗೆ ಹನ್ನೆರಡು ವರ್ಷ ಆಗುವುದರಲ್ಲಿ ಆತ ಮತೀಯತೆಯ ವಾತಾವರಣವನ್ನು ಎದುರಿಸಲಾಗದ ಅಶಕ್ತನಾಗಿದ್ದ. ಒಂದು ವರ್ಷದೊಳಗಾಗಿ ಶಾಲೆ ಬಿಟ್ಟು ಓಡಿ ಹೋದ. ಆನಂತರ ಆತನನ್ನು ಶಾಲೆಯಿಂದ ಬಿಡಿಸಿ ಬೇರೆ ಶಾಲೆಗೆ ಸೇರಿಸಿದರು. ಅಶಕ್ತ ಮನಸ್ಸಿನ ಮಕ್ಕಳ ಮನೆಗೆ ಸೇರಿಸಿದರು. ದೆವ್ವ ಹಿಡಿದಿದೆ ಎಂದು ದೆವ್ವ ಬಿಡಿಸುವಲ್ಲಿಗೆ ಕರೆದೊಯ್ದರು. ಈ ಘಟನೆಗಳಿಂದಾಗಿ ದಿಗ್ಭ್ರಮೆಗೊಂಡ ತಂದೆ ತಾಯಿ ತಮ್ಮ ಮಗನಿಗೆ ಸಾಂಪ್ರದಾಯಿಕ ಶಿಕ್ಷಣ ಅಪ್ರಸ್ತುತ ಎಂದು ಭಾವಿಸಿದರು. ಶಾಲೆ ಬಿಡಿಸಿ ಒಂದು ವರ್ಷ ಕ್ಯಾಲಾ ನಗರದ ಒಂದು ಯಂತ್ರಾಗಾರದಲ್ಲಿ ಕೆಲಸಕ್ಕೆ ಸೇರಿಸಿದರು. ಅಲ್ಲಿ ಆತನಿಗೆ ಶ್ರಮಜೀವಿಗಳ ಸರಳ ಜೀವನ ಪರಿಚಯವಾಗಿ ಅವು ಆತನ ಆನಂತರದ ಕಥೆಗಳಲ್ಲಿ ಕಾಣಿಸಿಕೊಂಡವು. ೧೮೯೫ರ ಹೊತ್ತಿಗೆ ಹೆಸ್‌ಗೆ ಸ್ವತಂತ್ರನಾಗಬೇಕೆಂಬ ಇಚ್ಛೆ ಪ್ರಬಲವಾಯ್ತು. ನಾಲ್ಕು ವರ್ಷಗಳ ಕಾಲ ಕೆಲಸ ಮಾಡಿದ. ಅಲ್ಲಿ ಬರವಣಿಗೆಯನ್ನು ಪ್ರಾರಂಭಿಸಿದ.

ಪ್ರಜ್ಞಾಪೂರ್ವಕವಾಗಿ ಹೆಸ್‌ನ ಪ್ರಾರಂಭಿಕ ಸಾಹಿತ್ಯ ಪ್ರಯತ್ನಗಳು ೧೮೯೦ರ ಸಮಯದಲ್ಲಿದ್ದ ಸೌಂದರ್ಯ ಮಾದರಿಯವಾಗಿದ್ದವು. 'ನನ್ನ ಕ್ರಿಯಾತ್ಮಕ ದಿನಗಳಲ್ಲಿ ನನ್ನ ಕನಸಿನ ಪ್ರಪಂಚವು ಕಾಲ ಮತ್ತು ಅನಂತತೆಯ ನಡುವೆ ಮಸಕು ಮಸಕಾಗಿತ್ತು' ಎಂದು ಹೆಸ್ ಹೇಳಿಕೊಂಡಿದ್ದಾನೆ.

೧೮೯೯ರಲ್ಲಿ ಹೆಸ್ ವಿಶ್ವವಿದ್ಯಾನಿಲಯದ ಹತ್ತಿರದಿಂದ ಬಾಸೆಲ್‌ಗೆ ತೆರಳಿದ. ತನ್ನ ಮೊದಲ ಕೃತಿಗಳಲ್ಲಿ ಕಂಡ ಜಾರಿಕೊಳ್ಳುವ ಕಲ್ಪನಾ ಪ್ರಪಂಚದ ಬರವಣಿಗೆಯಿಂದ

ಬಿಡಿಸಿಕೊಂಡು ತನಗಾಗಿ ವಾಸ್ತವತೆಯನ್ನು ಶಾಂತಿಯನ್ನು ಸಾಧಿಸಲು ತೊಡಗಿದ. ಅದು ಆತನ 'Peter Camenzind' (೧೯೦೪) ಕೃತಿಯಲ್ಲಿ ಸಮರ್ಥವಾಗಿ ಅಭಿವ್ಯಕ್ತವಾಯ್ತು. ಅಲ್ಲದೆ ಅದು ಆವನಿಗೆ ಹೆಚ್ಚಿನ ಪ್ರಚಾರವನ್ನೂ ಹಣವನ್ನೂ ತಂದು ಕೊಟ್ಟಿತು. ಆ ಕಾದಂಬರಿಯಲ್ಲಿ ಬರುವ ಸ್ವಿಸ್ ದೇಶದ ರೈತ ಹುಡುಗನೊಬ್ಬ ಬರಹಗಾರನಾಗಿ ಹೆಸರು ಪಡೆದು ಕೆಲವು ಕಾಲ ಸಾಹಿತ್ಯಕ ಘೋಷಣೆಗಳಿಗೆ ಹಾಗೂ ಬೃಹತ್ ನಗರದ ಆಕರ್ಷಣೆಗೆ ಒಳಗಾಗುವುದನ್ನು ಚಿತ್ರಿಸಿ ಆ ಮೂಲಕ ತನ್ನ ಗತಕಾಲದ ಕನಸುಗಳನ್ನು ಅನುಭವಗಳನ್ನು ಹೆಸ್ ಅಲ್ಲಿ ಗುರುತಿಸಿಕೊಂಡಿದ್ದಾನೆ. ಹುಡುಗ ಅಂತಿಮವಾಗಿ ಅದು ಹುರುಳಿಲ್ಲದ ಸ್ವಾತಂತ್ರ್ಯ ಎಂಬುದನ್ನು ಕಂಡುಕೊಂಡು ಹಳ್ಳಿಗೆ ಹಿಂದಿರುಗಿ ಜವಾಬ್ದಾರಿಯುತ ಸೇವಾಜೀವನದಲ್ಲಿ ತೊಡಗುತ್ತಾನೆ.

ಜೀವನಕ್ಕಾಗಿ ಕಲೆಯನ್ನು ಒಂದು ಮಾಧ್ಯಮವಾಗಿ ಅನುಕರಿಸುವುದನ್ನು ಹೆಸ್‌ನಲ್ಲಿ ಪದೆ ಪದೇ ಕಾಣಬಹುದು. ೧೯೦೪ರಲ್ಲಿ ಮದುವೆಯಾಗಿ ಜರ್ಮನಿಯ ಸರೋವರದ ದಡದಲ್ಲಿ ವ್ಯವಸ್ಥಿತವಾದ ಒಂದು ಹಳ್ಳಿಮನೆಯಲ್ಲಿ ಹೆಸ್ ನೆಲೆಸಿದ. ಅಲ್ಲಿ ಎಂಟು ವರ್ಷಗಳ ಕಾಲ ನೋವಿನ ವಾಸ್ತವತೆಯನ್ನನ್ನುಭವಿಸಿ ಕಥೆಗಳನ್ನು, ಕವನಗಳನ್ನು ಬರೆದ. ಆದರ ಫಲವಾಗಿ ೧೯೦೭ರಲ್ಲಿ 'In this World' ಅನ್ನು, ೧೯೦೯ರಲ್ಲಿ 'Neighbors' ಅನ್ನು, ೧೯೧೧ರಲ್ಲಿ 'On the Road' ಕೃತಿಗಳನ್ನು ನೀಡಿದ. ೧೯೦೬ರಲ್ಲಿ ಪ್ರಕಟವಾದ, ಶಾಲಾಮಕ್ಕಳಿಗೆ ಬರೆದ ಕಾದಂಬರಿ 'Beneath the Wheel' ಕೃತಿಯಲ್ಲಿ ತನ್ನ ಶಾಲಾ ಜೀವನದ ಕುದಿತಗಳನ್ನು ಚಿತ್ರಿಸಿದ್ದಾನೆ. ಇದರಲ್ಲಿ ತನ್ನ ಮೆಚ್ಚಿನ ನಾಯಕ ಹ್ಯಾನ್ಸ್‌ಗಿ ಬೆನೆತ್ ನಂತೆ ಆತ್ಮಹತ್ಯೆಯ ಮೂಲಕ ಜೀವನ ಅಂತ್ಯಗೊಳಿಸುವುದನ್ನು ಚಿತ್ರಿಸಲಾಗಿದೆ. ಅದೇ ರೀತಿ ೧೯೧೦ರಲ್ಲಿ ಪ್ರಕಟವಾದ 'Gertrude' ಕಾದಂಬರಿಯಲ್ಲಿ, ಜೀವನದಲ್ಲಿ ಸಂತೋಷವನ್ನು ಕಂಡುಕೊಳ್ಳಲು ಸಾಧ್ಯವಾಗದ ಒಬ್ಬ ಕಲಾವಿದನ ದ್ವಂದ್ವವನ್ನು ಅಭಿವ್ಯಕ್ತಿಯಿದೆ. ಈ ಕಾದಂಬರಿಯ ನಾಯಕ ಹೆಳವ, ಸಂಗೀತಗಾರನಾಗಿದ್ದ. ಆತನ ಆಧ್ಯಾತ್ಮಿಕ ಕ್ಲೇಶ ಆತನ ಶಾರೀರಿಕ ಊನದ ಕುರುಹಾಗಿ ಇಲ್ಲಿ ಚಿತ್ರಿತವಾಗಿದೆ.

ಸಂಪಾದಕನಾಗಿ, ವಿಮರ್ಶಕನಾಗಿ, ಸಂಗ್ರಹಣಕಾರನಾಗಿ ಹೆಸ್‌ನ ಸೇವೆ ಅತ್ಯಗತ್ಯವಾಗಿದೆ ಎಂಬ ಭಾವನೆಗೆ ಆತ ಪಾತ್ರನಾಗಿದ್ದ. ಆಕರ್ಷಣೀಯ ವಿಷಯಗಳನ್ನು

ಕುರಿತು ಮೇಲ್ಮಟ್ಟದ ಮ್ಯಾಗ್‌ಸೈನ್‌ಗಳಿಗೆ ಬರೆದು ಆಗಿನ ಬುದ್ಧಿಜೀವಿಗಳ ಆಸಕ್ತಿಗೆ ಕಾರಣನಾಗಿದ್ದ. ಹೀಗಿದ್ದೂ ತನ್ನ ನಿಲುವಿಗೆ ತಾನು ಬದ್ಧನಾಗದೆ ಇಟಲಿ, ಜರ್ಮನಿ, ಆಸ್ಟ್ರಿಯಾ ಹಾಗು ಸ್ವಿಡ್ಜರ್ಲೆಂಡಿಗೆ ಓಡಿ ಹೋಗಲು ನಿರ್ಧರಿಸಿದ. ಅಂತಿಮವಾಗಿ ೧೯೧೧ರಲ್ಲಿ ಆತನ ಯಾತ್ರೆ ಇಂಡೋನೇಷಿಯಾಕ್ಕೆ ಕರೆದೊಯ್ದಿತು.

ಹೆಸ್‌ನ ಭಾವನೆಗಳನ್ನು ಪೂರ್ವರಾಷ್ಟ್ರಗಳ ಚಿಂತನಾಧಾರೆಗಳು ಸೆಳೆದು ಕೊಂಡವು. ಆತನ ತಂದೆ ತಾಯಿಯರು ಹಾಗೂ ಆತನ ತಾಯಿಯ ತಂದೆ ಭಾರತದಲ್ಲಿ ಕ್ರೈಸ್ತ ಧರ್ಮ ಪ್ರಚಾರಕರಾಗಿದ್ದರು. ಹೀಗಾಗಿ ಭಾರತದ ಬಗ್ಗೆ ಒಲವು ಮೂಡಿಸುವ ಪರಿಸರದಲ್ಲಿ ಆತ ಬೆಳೆದ. ಆತನ ಕಾಲದ ಜರ್ಮನಿಯ ಧರ್ಮಗುರುಗಳಂತೆ ಭಾರತ ಹೆಸ್‌ಗೆ ಆಧ್ಯಾತ್ಮಿಕ ವಾಗಿ ಆತ್ಮೀಯವಾಗಿತ್ತು. ಮನೆಯ ಅಂಧಕಾರದ ಅಳುಕಿನಿಂದ ಹೊರದೂಡಲ್ಪಟ್ಟ ನಾವು ಮಹತ್ವಾಕಾಂಕ್ಷೆಯಿಂದ ದಕ್ಷಿಣ ಮತ್ತು ಪೂರ್ವಕ್ಕೆ ಬಂದಿದ್ದೇವೆ. ಅಲ್ಲಿ ನಾವು ಸ್ವರ್ಗವನ್ನು ಕಂಡಿದ್ದೇವೆ ಎನ್ನುವುದು ಹೆಸ್‌ನ ಅಭಿಪ್ರಾಯವಾಗಿತ್ತು. ಆದರೆ ವಿಶ್ವಾಸಘಾತುಕ ಐರೋಪ್ಯ ಅಂತರಂಗದ ಎದುರು ಪೂರ್ವ ರಾಷ್ಟ್ರಗಳ ಸ್ವರ್ಗದ ಕಲ್ಪನೆ ಯಾವ ಭರವಸೆಯನ್ನೂ ಹುಟ್ಟಿಸಲಿಲ್ಲ. ''ನಾವು ನಮ್ಮೊಳಗೆ ಭಿನ್ನವಾಗಿದ್ದೇವೆ. ನಮಗೆ ಯಾವ ನಾಗರಿಕ ಹಕ್ಕುಗಳೂ ಇಲ್ಲ. ನಮ್ಮ ಸ್ವರ್ಗವನ್ನು ನಾವು ಬಹಳ ಹಿಂದೆಯೇ ಕಳೆದುಕೊಂಡಿದ್ದೇವೆ. ನಾವು ಇಚ್ಚಿಸುವ ಹೊಸದನ್ನು ನಾವು ಭೂಮಧ್ಯ ರೇಖೆಯಲ್ಲಾಗಲಿ ಅಥವಾ ಪೂರ್ವದ ಬೆಚ್ಚನೆಯ ಸಮುದ್ರದಲ್ಲಾಗಲೀ ಕಾಣಲು ಸಾಧ್ಯವೆ ಇಲ್ಲ. ಅದು ನಮ್ಮೊಳಗೆ (ಅಂತರಂಗದಲ್ಲಿ) ಉತ್ತರಮುಖಿಯಾಗಿ ಹುದುಗಿದೆ'' ಎಂಬುದು ಹೆಸ್‌ನ ಅನುಭವವಾಗಿತ್ತು.

ಹೆಸ್‌ನ ಪೂರ್ವ ದೇಶಗಳ ಯಾತ್ರೆಯ ಪ್ರತಿಫಲವೆಂದರೆ ಯಾವುದೇ ನಿಜವಾದ ಸ್ವಾತಂತ್ರ್ಯ ಎನ್ನುವುದು ಅಂತರಂಗಕ್ಕೆ ಸಂಬಂಧ ಪಟ್ಟಿದ್ದು, ಅದು ಹೊರಗಿನ ಹಾರಾಟದಿಂದ ಬರುವಂಥದ್ದಲ್ಲ ಎಂಬ ಸ್ಪಷ್ಟ ಸೂಚನೆಯನ್ನು ಅವನಿಗೆ ಕೊಟ್ಟಿದ್ದು. ಆದರೆ ಆತ ತನ್ನ ಒಳನೋಟಗಳನ್ನು ಅಗತ್ಯ ತೀರ್ಮಾನಗಳಿಗೆ ಅನ್ವಯಿಸಲು ಸಿದ್ಧನಿರಲಿಲ್ಲ. ಆತ ಹಿಂದಿರುಗಿದ ಕೂಡಲೆ ಹೊರಗಿನ ಚಲನೆಯೊಂದಿಗೆ ಒಳಗಿನ ದ್ವಂದ್ವಗಳನ್ನು ತಪ್ಪಿಸುವ ಪ್ರಯತ್ನದಲ್ಲಿ ತನ್ನ ಸಂಸಾರವನ್ನು ಬೆನ್ಸ್‌ಗೆ ಸ್ಥಳಾಂತರಿಸಿದ.

ಯುದ್ಧ ಕಾಲಕ್ಕೆ ಮುನ್ನ ಬರೆದ ಆತನ ಮಹತ್ವದ ಎರಡು ಕೃತಿಗಳು ಆತನ ಉಭಯ ಸಂಕಟವನ್ನು ಪ್ರತಿಬಿಂಬಿಸುತ್ತವೆ. ೧೯೧೪ರಲ್ಲಿ ಹೊರಬಂದ ಆತನ 'Rosshalda' ಕಾದಂಬರಿಯಲ್ಲಿ ಸ್ವಾತಂತ್ರ್ಯ ಮತ್ತು ಜವಾಬ್ದಾರಿಯನ್ನು ಕುರಿತು ಯಾವ ಕಲಾವಿದ ತನ್ನ ಕಲೆಗೆ ತನ್ನನ್ನು ಸಮರ್ಥಿಸಿಕೊಂಡಿರುವನೋ ಆತನಿಗೆ ಸುಖ ಸಂಸಾರ ಎನ್ನುವುದು ಸಾಧ್ಯವಿಲ್ಲ ಎಂಬುದನ್ನು 'Veraguth' ಎಂಬ ಕಲಾವಿದನ ದೃಷ್ಟಿಯಿಂದ ವಿಶ್ಲೇಷಿಸಿದ್ದಾನೆ. ಅದೇ ಸಮಯದಲ್ಲಿ ೧೯೧೫ರಲ್ಲಿ ಬರೆದ 'Knulp' ಎಂಬ ಪ್ರೀತಿಯ ಸ್ವೇಚ್ಛಾಚಾರಿಯ ಕಥಾವಳಿಯಲ್ಲಿ ಸಂಪೂರ್ಣ ಸ್ವಾತಂತ್ರ್ಯ ಎನ್ನುವುದು ಒಂದು ರೀತಿಯ ಅಪರಾಧಿತ್ವದಿಂದ ಬರುವಂಥದ್ದು ಎಂಬುದನ್ನು ತೋರಿಸಿದ್ದಾನೆ. Knulp ಎನ್ನುವವನು ಪೂರ್ಣವಾಗಿ ಸಾಮಾಜಿಕ ಸಂದರ್ಭಗಳನ್ನು ಹೊಂದದ ಮನುಷ್ಯ; ಕಾಲಗತಿಯಿಂದ ಬಹುದೂರ ಮುಂದೆ ಸಾಗಿದ್ದ ಹೆಸ್. ಕರ್ತವ್ಯದಿಂದ ಬಂಧಿತರಾಗಿರುವ ಸಾಮಾನ್ಯ ಜನರ ಬದುಕಿಗೆ, ಮನೆಯ ಹಂಬಲದಿಂದ ಕೊಂಚ ನರಳುವವರಿಗೆ ಸ್ವಾತಂತ್ರ್ಯವನ್ನು ತಂದುಕೊಡುವುದು ತನ್ನ ಕೆಲಸ ಎಂದು ಹೆಸ್ ಭಾವಿಸಿದ್ದ. ಆದಾಗ್ಯು K ನ ಸ್ವಾತಂತ್ರ್ಯದ ಸಂತೋಷ ವಿಷಾದದಿಂದ ಕೂಡಿತ್ತು. ಅದಕ್ಕೆ ಕಾರಣ ಸಮಾಜಕ್ಕೆ ಉಪಯುಕ್ತ ಎನ್ನುವ ಯಾವುದನ್ನೂ ಮಾಡಲು ಆತ ಸೋತಿದ್ದ.

೧೯೧೬ ಮತ್ತು ೧೯೧೭ರಲ್ಲಿ ಮನೋವಿಶ್ಲೇಷಣೆಗೆ ತೊಡಗಿದ ಹೆಸ್‌ನನ್ನು ಅಂತಿಮವಾಗಿ ಇದು ಆಂತರಿಕ ಸಂಘರ್ಷಕ್ಕೆ ಒಳಗುಮಾಡಿತು. ಹೀಗಾಗಿ ನಿರಾಶೆ ಯಿಂದ ಯೂರೋಪ್ ಮತ್ತು ಏಷ್ಯಾಗಳನ್ನು ಸುತ್ತಿದ್ದ. ತಾನು ತಿಳಿಯ ಬಯಸಿದ ಸ್ವಾತಂತ್ರ್ಯ ಎನ್ನುವುದು ಅದರಿಂದ ಬರುವಂಥದ್ದಲ್ಲ. ಬದಲಿಗೆ ಅದು ತನ್ನ ಮನಸ್ಸಿನಾಳ ದಿಂದ ಬರುವಂಥದ್ದು ಎಂಬುದನ್ನು ಆತ ಕಂಡುಕೊಂಡ. ಈ ವಿಶ್ಲೇಷಣೆಯಿಂದ ತತ್‌ಕ್ಷಣ ಆದ ಪರಿಣಾಮವೆಂದರೆ ೧೯೧೭ರಲ್ಲಿ ಆತನ ನರಶಕ್ತಿ ಕುಂದಿತು.

ಅಹಿಂಸೆ, ಹಾಗೂ ಶಾಂತಿಯನ್ನು, ದೃಢವಾಗಿ ನಂಬಿದ್ದ ಹೆಸ್‌ಗೆ ಮೊದಲ ಜಾಗತಿಕ ಯುದ್ಧ ಪ್ರಾರಂಭವಾದಾಗ ದಿಗ್ಭ್ರಮೆಯಾಯ್ತು. ಆ ಕುರಿತು ಲೇಖನಗಳನ್ನು ಬರೆದ ಕಾರಣ ಆತನ ಹಳೆಯ ಗೆಳೆಯರು ಹಾಗೂ ಆಪ್ತ ಓದುಗರು ದೂರವಾದರು. ಆತನ ಯುದ್ಧ ವಿರೋಧಿ ನಿಷ್ಠೆಯನ್ನು ವ್ಯಾಪಕವಾಗಿ ಖಂಡಿಸಿದರು. ಇದು ಆತನಿಗೆ ನಿರಾಶೆಯನ್ನುಂಟುಮಾಡಿತು. ಸ್ವಿಡ್ಜರ್‌ಲೆಂಡ್‌ನ ಸೇವಾ ಸಂಸ್ಥೆಗಳೊಂದಿಗೆ ಯುದ್ಧ ಸಮಯದಲ್ಲಿ ಸೇವೆ ಸಲ್ಲಿಸುವುದರ ಮೂಲಕ ಆ ನಿರಾಶೆಯನ್ನು ತಗ್ಗಿಸಿಕೊಂಡ.

೧೯೧೬ರಲ್ಲಿ ಆತನ ತಂದೆ ತೀರಿಕೊಂಡ. ಆತನ ಮೂರು ಮಕ್ಕಳ ಪೈಕಿ ಒಬ್ಬ ಒಂದು ವರ್ಷಕ್ಕೂ ಹೆಚ್ಚುಕಾಲ ಕಾಯಿಲೆ ಮಲಗಿದ. ನರಗಳ ದೌರ್ಬಲ್ಯಕ್ಕೆ ಒಳಗಾದ ಆತನ ಹೆಂಡತಿಯನ್ನು ಹುಚ್ಚಾಸ್ಪತ್ರೆಗೆ ಸೇರಿಸಲಾಯ್ತು. ದಿನ ಬೆಳಗಾಗುವುದ ರೊಳಗಾಗಿ ಆತನ ಕುಟುಂಬ ಕುಸಿದು ಬಿತ್ತು. ಜೊತೆಯಲ್ಲಿ ಆತನ ಸಾಹಿತ್ಯ ಗತಿಯೂ ಕುಸಿಯಿತು. ಆತನ ಕಲೆಯ ಬಗ್ಗೆ ಆತನಲ್ಲಿ ಸಮಯವೂ ಉಳಿಯಲಿಲ್ಲ. ಆತನ ಆಯ್ದ ಬರಹಗಳ ಕೃತಿಯೊಂದನ್ನು ಸಿದ್ದಪಡಿಸಿಕೊಡಲು ಕೇಳಿಕೊಂಡಾಗ 'ಆಯಲು ಅಲ್ಲೇನಿದೆ' ಎಂದು ನೊಂದು ನುಡಿದ. ಬರಡಾಗಿದ್ದ ಆತನ ಹತಾಶೆಗೆ ಭಾರತದ ಯಾತ್ರೆ ಸಂಜೀವಿನಿಯಾಯ್ತು. ತನ್ನ ಸಮಸ್ಯೆಯ ಪರಿಹಾರಕ್ಕೆ ತನ್ನೊಳಗೆ ಹೋಗುವುದೊಂದೇ ದಾರಿ ಎಂದು ಅಂತಿಮವಾಗಿ ಅಂತರಂಗದ ಶೋಧಕ್ಕಿಳಿದ.

ಹೆಸರಾಂತ ಲೇಖಕರಿಂದಾಗಿ ಮನೋವಿಶ್ಲೇಷಣೆಯ ಬಗ್ಗೆ ಆಗಲೇ ತನಗಿದ್ದ ಈ ಅರಿವನ್ನು ಹೆಸ್ ಅನೇಕ ಪ್ರಬಂಧ ಹಾಗೂ ಪತ್ರಗಳಲ್ಲಿ ಪ್ರಕಟಪಡಿಸಿದ್ದ. ಈಗ ೧೯೧೬ ಮತ್ತು ೧೯೧೭ರಲ್ಲಿ ಜೋಸೆಫ್ ಬಿ. ಲಾಂಗ್ (ಈತ ಯೂಂಗ್‌ನ ಅನುಯಾಯಿ)ನ ಜೊತೆಯ ಚರ್ಚೆಗಳಿಂದಾಗಿ ಸೂತ್ರಬದ್ಧ ಒಳನೋಟಗಳು ಸಿಕ್ಕಿ ಹೆಸ್ ತನ್ನದೇ ಆದ ಸಿದ್ಧಾಂತಗಳಿಗೆ ಒಲಿದ. ಹೊರಜಗತ್ತಿನಿಂದ ಅಡಚಣೆಗಳುಂಟಾಗುತ್ತಿದೆ ಎಂದು ಆರೋಪಿಸುತ್ತಿದ್ದ ಹೆಸ್ ಈಗ ಅವು ತನ್ನೊಳಗಿನ ಅಂತರಂಗದ ಗೊಂದಲಗಳೆಂದು ಅರಿತುಕೊಂಡ. ಉದಾಹರಣೆಗೆ ಯುದ್ಧ ಎನ್ನುವುದು ಯುದ್ಧ ಭೂಮಿಯಲ್ಲಷ್ಟೆ ನಡೆಯುತ್ತಿಲ್ಲ, ಅದು ಇಡೀ ಜನಾಂಗದ ಹೃದಯದೊಳಗೆ ಕುದಿಯುತ್ತಿದೆ ಎಂಬುದನ್ನು ಕಂಡುಕೊಂಡ. ತನ್ನೊಳಗಿನ ಆ ಕುದಿತದಲ್ಲಿ 'Demain' (೧೯೧೭) ಎಂಬ ಕಾದಂಬರಿಯನ್ನು ಕೇವಲ ಆರು ವಾರಗಳಲ್ಲಿ ರಚಿಸಿದ. ಅದರ ಉದ್ದೇಶ ಯುದ್ಧದ ಭೀಕರತೆಯನ್ನು ಚಿತ್ರಿಸುವುದರ ಮೂಲಕ ಸಾಂಪ್ರದಾಯಿಕ ಮೌಲ್ಯ ಹಾಗೂ ನಂಬಿಕೆಗಳ ಮೋಹದಿಂದ ಜನಾಂಗವನ್ನು ಬಿಡುಗಡೆಗೊಳಿಸುವುದಾಗಿತ್ತು.

ಯುದ್ಧಕ್ಕೆ ಮುನ್ನ ತನ್ನ ವಿಚಾರಗಳಿಂದ ಹೆಸ್ ಯುದ್ಧ ವಿರೋಧಿ ಎಂಬ ಜನರ ತಾತ್ಸಾರಕ್ಕೆ ಗುರಿಯಾಗಿದ್ದ ಕಾರಣ ೧೯೧೯ರಲ್ಲಿ ಎಮಿಲ್ ಸಿಂಕ್ಲೇರ್ ಎಂಬ ಸುಳ್ಳು ಹೆಸರಿನಿಂದ ತನ್ನ ಕಾದಂಬರಿ 'Demain' ಅನ್ನು ಪ್ರಕಟಿಸಿದ್ದ. ಆ ಕಾಲದ ಆಶಯವನ್ನು ಅತ್ಯಂತ ಸಮರ್ಥ ರೀತಿಯಲ್ಲಿ ಹಿಡಿದಿಟ್ಟದ್ದ ಕಾರಣ ಅದ್ಭುತ ವಿಜಯಕ್ಕೆ

ಕಾರಣವಾಯ್ತು. ಅದರ ಅಮೆರಿಕಾ ಆವೃತ್ತಿಗೆ ಬರೆದ ಮುನ್ನುಡಿಯಲ್ಲಿ ಥಾಮಸ್ ಮನ್ 'ಓದಿದವರ ಮೇಲೆ ಅದು ವಿದ್ಯುತ್ ಪ್ರಭಾವವನ್ನುಂಟುಮಾಡುತ್ತದೆ,' ಎಂದು ಬರೆದ. ಅಲ್ಲದೆ ಅದನ್ನು ೧೭೭೪ರಲ್ಲಿ ಪ್ರಕಟವಾದ ಗಯಟೆಯ 'The Sorrows of Young Werther' ಕೃತಿಯೊಂದಿಗೆ ಹೋಲಿಸಿ ಆ ಜನಾಂಗದ ದಾಖಲೆ ಎಂದ. ಯಾವುದೇ ಕೃತಿ ಕೇವಲ ಕಾಲದ ಘಟನೆಗಳನ್ನಷ್ಟೆ ವಿವರಿಸಿದರೆ ಅದು ವಿಕ್ಟೋರಿಯಾ ಕಾಲದ ಕಾದಂಬರಿಗಳಂತೆ ಸೀಮಿತ ಪರಿಣಾಮ ಬೀರುತ್ತದೆ. ಆದರೆ ಹೆಸ್ ತನ್ನ ಕಾದಂಬರಿಯಲ್ಲಿ ಪೌರಾಣಿಕ ಹಂದರವನ್ನು ಹಾಕುವುದರ ಮೂಲಕ ಅದು ಈ ಹಿಂದೆ ಪ್ರಸ್ತುತವಾಗಿದ್ದಂತೆ ಈಗಲೂ ಪ್ರಸ್ತುತವಾಗಿರುವಂತೆ ಮಾಡಿದ್ದಾನೆ. ತಮ್ಮ ಪೋಷಕರ ಹಳೆ ಮೌಲ್ಯಗಳ ವಿರುದ್ಧ ಬಂಡೆದ್ದ ಚಿತ್ರಣವನ್ನು 'Demain' ಕಾದಂಬರಿ ಕೊಡುವುದರಿಂದ ೧೯೬೦ರಲ್ಲಿ ಅಮೆರಿಕಾದ ಯುವಜನರು ಕೈಗೆತ್ತಿಕೊಂಡರು.

'Demain' ಗಾಢವಾದ ಆತ್ಮಚರಿತ್ರೆಯ ಕಥೆಯೂ ಹೌದು. ಹೆಸ್ ಅವರ ಬಾಲ್ಯದ ಧರ್ಮಶ್ರದ್ಧೆಯ ಮತ್ತು ನಂತರದ ಸ್ವಾತಂತ್ರ್ಯಕ್ಕಾಗಿ ಹಾತೊರೆವ ಹೊಯ್ದಾಟವನ್ನು ಸಿಂಕ್ಲೇರನ ಪಾತ್ರದ ಮೂಲಕ ಎರಡು ರೀತಿಯಲ್ಲಿ ಚಿತ್ರಿಸಿದ್ದಾನೆ. ಒಂದರಲ್ಲಿ ತನ್ನ ತಂದೆಯ ಮನೆಯಲ್ಲಿ ಕಂಡ ಪ್ರೀತಿ, ಶಿಸ್ತು ಹಾಗೂ ಜವಾಬ್ದಾರಿಗಳ 'ಬೆಳಕಿನ ಪ್ರಪಂಚ'. ಮತ್ತೊಂದರಲ್ಲಿ ಹತ್ತು ವರ್ಷದ ಸಿಂಕ್ಲೆರ್ ಪಡೆದ ಲೈಂಗಿಕತೆ, ಹಿಂಸೆ ಹಾಗೂ ಸ್ವೇಚ್ಛಾಚಾರದ ಕತ್ತಲ ಪ್ರಪಂಚ. ಈ ಕತ್ತಲ ಪ್ರಪಂಚ ಎನ್ನುವುದು ಇಲ್ಲ ಎಂದು ತಂದೆ ತಾಯಿಗಳು ಹೇಳಿದರೂ ಹುಡುಗ ಆಕರ್ಷಕನಾಗುತ್ತಾನೆ. ತಂದೆ ತಾಯಿಯರು ತಿರಸ್ಕರಿಸಿದ ಈ ಕತ್ತಲ ಪ್ರಪಂಚ ಕ್ರಿಶ್ಚಿಯನ್ ನೈತಿಕತೆಯನ್ನು ತೃಪ್ತಿಗೊಳಿಸುವ ಬೆಳಕಿನ ಪ್ರಪಂಚಕ್ಕಿಂತ ಅಸ್ವಾಭಾವಿಕವಲ್ಲ ಎಂದು ತನ್ನ ಪ್ರಾರಂಭದ ಪ್ರೌಢಾವಸ್ಥೆಯಲ್ಲಿ ಇವನು ಗಮನಿಸಿದ್ದ.

ಅನೇಕ ಸ್ವಾಭಾವಿಕ ಘಟನೆಗಳು ಜರುಗುತ್ತಿರುವ ಈ ಪ್ರಪಂಚದಲ್ಲಿ ದುಷ್ಟ ಶಕ್ತಿಗಳನ್ನೊಳಗೊಂಡ ಕ್ರಿಶ್ಚಿಯನ್ ದೇವರ ಮುಂದೆ ಕಣ್ಣು ಮುಚ್ಚಿ ಕೂರುವ ಅಗತ್ಯವಿಲ್ಲ ಎಂದು ಭಾವಿಸಿ ಆ ಸ್ಥಾನದಲ್ಲಿ ಹೊಸದೇವರನ್ನು ಹುಡುಕುವ ಸಿಂಕ್ಲೇರ್‌ನ ಕತೆಯಾಗಿ ಈ ಕಾದಂಬರಿ ಮುಂದುವರೆಯುತ್ತದೆ. 'Demain' ನಲ್ಲಿ ಬರುವ ಈ ಹುಡುಕಾಟ ಸಿಂಕ್ಲೇರ್‌ನನ್ನು ಒಬ್ಬ ಬೋಧಕನಿಂದ ಮತ್ತೊಬ್ಬ ಬೋಧಕನಲ್ಲಿ

ಕೊಂಡೊಯ್ದು ಅವರೆಲ್ಲರ ನಂತರ ಆತ ಪ್ರಬಲವಾದ ಹೊಸಮೌಲ್ಯಗಳನ್ನು ತನ್ನ ಅಂತರಂಗದಲ್ಲೆ ಕಂಡುಕೊಳ್ಳುವತ್ತ ಸಾಗುತ್ತದೆ.

ತೀವ್ರ ಧಾರ್ಮಿಕತೆಯ ಈ ಗ್ರಂಥ -ಧರ್ಮಗಳ ವಿಶ್ಲೇಷಣೆಯನ್ನು ಹೊಂದಿದ್ದು ೧೯೨೦ರ ಜನಜೀವನವನ್ನು ಪ್ರತಿಬಿಂಬಿಸುತ್ತದೆ - ದಲ್ಲಿ ಪ್ರಪಂಚದ ಇತರ ಪ್ರಮುಖ ಧರ್ಮಗಳ ಮಟ್ಟಕ್ಕೆ ಕ್ರಿಶ್ಚಿಯನ್ ಧರ್ಮವನ್ನು ವೈಭವೀಕರಿಸಿದೆ. ಅದರಲ್ಲಿ ಪಿಸ್ಟೋರಿಯಸ್ ಸಿಂಕ್ಲೇರ್‌ನಿಗೆ ಎಲ್ಲ ಧರ್ಮಗಳೂ ಸುಂದರವಾಗಿವೆ. ಧರ್ಮವೇ ಆತ್ಮ, ನೀನು ಕ್ರಿಶ್ಚಿಯನ್ ಧರ್ಮೀಯರೊಂದಿಗೆ ಪಾಲ್ಗೊಳ್ಳುವೆಯೋ ಇಲ್ಲ ಮೆಕ್ಕಾ ಯಾತ್ರೆ ಮಾಡುವೆಯೋ ಅದರಲ್ಲಿ ಅಂಥ ವ್ಯತ್ಯಾಸವೇನಿಲ್ಲ; ಎಲ್ಲವೂ ಒಂದೇ ಎಂದು ಹೇಳುತ್ತಾನೆ. ಬಾಲ್ಯದ ಸ್ವರ್ಗದಿಂದ ನರಕಕ್ಕೆ ಹಾಗೂ ಪಾಪ ಮತ್ತು ಪುಣ್ಯಗಳ ಬಗ್ಗೆ ಸಾಂಪ್ರದಾಯಿಕ ಭಾವನೆಗಳನ್ನುಳ್ಳ ಕ್ರಿಶ್ಚಿಯನ್ ಧರ್ಮದ ಮೂಲಕ ಬದಲಾವಣೆಯಾಗುವ ಮನುಷ್ಯನ ವಿಸ್ತಾರವಾದ ರಹಸ್ಯವನ್ನು ಸಿಂಕ್ಲೇರನ ಬೆಳವಣಿಗೆ ಅಭಿವ್ಯಕ್ತಿಸುತ್ತದೆ. ಮುಗ್ಧ ನಿರಾಶೆಯಿಂದ ಮಹತ್ವದ ವಿಚಾರಕ್ಕೇರುವ ಈ ಸ್ವರತ್ರಯ ಸಾಮರಸ್ಯ-ಹೆಸ್ ತನ್ನ 'A Bit of Theology' (೧೯೩೭) ಪ್ರಬಂಧದಲ್ಲಿ ಸ್ಥೂಲ ವಿವರಣೆಯನ್ನು ಆನಂತರ ಕೊಟ್ಟಿದ್ದಾನೆ-ಹೆಸ್‌ನ ಕಾದಂಬರಿಯ ನಾಯಕರಲ್ಲಿ ಒಂದು ಬಗೆಯ ಬೆಳವಣಿಗೆಯಾಗಿ ಮಾರ್ಪಾಟಾಗಿದೆ.

ಸಿಂಕ್ಲೇರ್‌ನ ಆರಂಭದ ಅಧಃಪಾತ ಹಾಗೂ ಅಂತಿಮ ಪಾಪ ವಿಮೋಚನೆಗಳ ಮಧ್ಯವರ್ತಿಯಾಗಿ ಧಾರ್ಮಿಕ ಚೌಕಟ್ಟಿನೊಳಗೆ 'Demain' ಗುರುತಿಸುವ ಸಾಧ್ಯತೆಯನ್ನು ಕಾಣುತ್ತೇವೆ. ಅದರ ಉಪಶೀರ್ಷಿಕೆಗಳು ಸೂಚಿಸುವಂತೆ ಈ ಕಾದಂಬರಿ ವಾಸ್ತವವಾಗಿ 'ಸಿಂಕ್ಲೇರನ ಬಾಲ್ಯದ ಕಥೆ'. ಹೀಗಿದ್ದೂ 'Demain' ಎಂದು ಏಕೆ ಹೆಸರಿಸಲಾಗಿದೆ? ಹೊರ ವಿವರಗಳು ಇಲ್ಲಿ ಹೆಚ್ಚು ಸಹಕಾರಿಯಾಗಿಲ್ಲ. ಆದರೆ ಆತನ ಪಾತ್ರವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಹೊಸ ಆಯಾಮಗಳನ್ನು ನೀಡುವ ಅಬಾಧಿತ ಮಹತ್ವದ ಗುಣಗಳನ್ನು ಕಾಣುತ್ತೇವೆ. ಆತನ ದೈಹಿಕ ಲಕ್ಷಣಗಳಲ್ಲಿ ಪ್ರಮುಖವಾಗಿ ಕಾಣುವುದು ಭೂಮಧ್ಯದ ಬೆಳಕು. ನಿಗ್ರಹ ಶಕ್ತಿಯಿಂದ ಹಾಗೂ ಚತುರತೆಯಿಂದ ಬೇರೆಯವರನ್ನು ಮಾನಸಿಕವಾಗಿ ಸೂರೆಗೊಳ್ಳುವ ಕ್ರಿಯೆ ಇತರ ಬಾಲಕರನ್ನು ಚಕಿತಗೊಳಿಸುತ್ತದೆ. ಪ್ರಶ್ನೆಗಳನ್ನು ಹಾಕುವ ಹಾಗು ಪ್ರತಿಕ್ರಿಯಿಸುವುದರ ಮೂಲಕ ಆತನ

ಉಪಾಧ್ಯಾಯರನ್ನು ಆಶ್ಚರ್ಯಗೊಳಿಸುವ 'Demain' ನ ವಾಕ್ ಸಾಮರ್ಥ್ಯದ ಪರಿಚಯವಾಗುತ್ತದೆ. ಡಿಮೇನ್ ಸಿಂಕ್ಲೇರನೊಂದಿಗೆ ಮಾತನಾಡುವಾಗ ಬೈಬಲ್‌ನ ದೃಷ್ಟಾಂತಗಳ ಮೂಲಕ ತನ್ನನ್ನು ಅಭಿವ್ಯಕ್ತಿಗೊಳಿಸಿಕೊಳ್ಳುವುದನ್ನು ಕಾಣಬಹುದು. ಆತ ತನ್ನ ಆತ್ಮನಂಬುಗೆಯಿಂದ ಮುಂಬರುವ ಆಧ್ಯಾತ್ಮಿಕ ಸಾಮ್ರಾಜ್ಯದ ಕಡೆಗೆ ನಡೆಯುತ್ತಾನೆ. ಕಾದಂಬರಿಯ ಕಡೆಯಲ್ಲಿ ಡಿಮೇನ್ ಹೇಳಿದ ಆಧ್ಯಾತ್ಮಿಕ ಸಾಮ್ರಾಜ್ಯಕ್ಕೆ ತುಡಿಯುತ್ತಿರುವ ಆತನ ಅನುಯಾಯಿಗಳ ಸಮೂಹವನ್ನು ಕಾಣುತ್ತೇವೆ.

ಈ ಎಲ್ಲಾ ಪಾತ್ರಗಳೊಂದಿಗೆ ಧಾರ್ಮಿಕ ಹಂದರವನ್ನೊಳಗೊಂಡ ಈ ಕೃತಿ ಜೀಸಸ್‌ನ ರೂಪಾಂತರಗೊಳ್ಳುವ ಕ್ರಿಯೆಯಲ್ಲಿ ಇರುವುದು ಸ್ಪಷ್ಟವಾಗುತ್ತದೆ. ಹಾಗಿದ್ದರೂ ಕೂಡ ಅದು ಪೂರ್ಣವಾಗಿ ಅಣಕವಾಗಿದೆ, ವ್ಯಂಗ್ಯವಾಗಿದೆ.

'ಡಿಮೇನ್' ಕಾದಂಬರಿಯ ಕರ್ತೃ ಹರ್ಮನ್ ಹೆಸ್ ಎಂದು ಸಾರ್ವಜನಿಕರಲ್ಲಿ ಪ್ರಚಾರವಾಗುವ ಹೊತ್ತಿಗೆ ಆತ ತನ್ನ ಕುಟುಂಬವನ್ನು ಬಿಟ್ಟು ಮಾಂಟಿಗೋಲಾದ ಏಕಾಂತತೆಗೆ ಮರಳಿದ್ದ. ಅಲ್ಲಿ ೧೯೧೯ರಲ್ಲಿ 'Klingsor's Last Summer' ಕಾದಂಬರಿಯನ್ನು ಹಾಗೂ ದಾಸ್ತವೆಸ್ಕಿಯನ್ನು ಕುರಿತ ಎರಡು ಮುಖ್ಯ ಪ್ರಬಂಧಗಳನ್ನು ('T.S. Eliot' ತನ್ನ 'The Waste Land' ಟಿಪ್ಪಣಿಯಲ್ಲಿ ಇವನ್ನು ಉದ್ಧರಿಸಿದ್ದಾನೆ) ಬರೆದ. ಸಾಂಪ್ರದಾಯಿಕ ಯಹೂದ್ಯ ಕ್ರಿಶ್ಚಿಯನ್ನನೊಂದಿಗೆ ಐರೋಪ್ಯ ಮನುಷ್ಯನ ಅವನತಿಯನ್ನು ಜೀವನದ ಎಲ್ಲಾ ಮುಖಗಳು ಅಷ್ಟೆ ಪ್ರಾಮುಖ್ಯ ಎಂದು ಭಾವಿಸುವ ರಷ್ಯಾ ಮನುಷ್ಯನ ಅಡಿಯಲ್ಲಿ ಗ್ರೀಕ್ ವೈಶಿಷ್ಟ್ಯದ ರೋಮನ್ ಮೌಲ್ಯಗಳನ್ನು ಅದರಲ್ಲಿ ಹೆಚ್ಚು ವ್ಯವಸ್ಥಿತವಾಗಿ ವಿಸ್ತರಿಸಿದ್ದಾನೆ. ಅದೇ ಸಮಯದಲ್ಲಿ ಹೆಸ್ ಡಿಮೇನ್ ನಲ್ಲಿ ಗತಕಾಲದಿಂದ ತನ್ನಿಂದ ತಾನೆ ಬಿಡುಗಡೆಗೊಂಡಂತೆ 'ಸಿದ್ಧಾರ್ಥ' ಕಾದಂಬರಿಯಲ್ಲಿ ವ್ಯಕ್ತಿ ತನ್ನೊಳಗೆ ತಾನೆ ಕಂಡುಕೊಳ್ಳುವ ಸಾಧ್ಯತೆಯನ್ನು ತೋರಿಸಿದ್ದಾನೆ.

ಬ್ರಾಹ್ಮಣ ಪುತ್ರನಾದ ಸಿದ್ಧಾರ್ಥ ತಂದೆಯ ಧರ್ಮವನ್ನು ಅನುಸರಿಸಿ ಬೆಳೆದವನು. ಹದಿನೆಂಟು ವರ್ಷ ತುಂಬಿದಾಗ ಈ ಸಾಂಪ್ರದಾಯಕ ಹಿಂದೂ ಧರ್ಮದಲ್ಲಿ ಪರಿಪೂರ್ಣತೆಯನ್ನು ಪಡೆಯಲು ಸಾಧ್ಯವಿಲ್ಲವೆಂದು ತೀರ್ಮಾನಿಸಿ

ಸಮಣನಾಗುತ್ತಾನೆ. ಮೂರು ವರ್ಷಗಳು ಸಮಣರೊಂದಿಗೆ ಕಳೆದು ಕಠಿಣ ವ್ರತಾಚರಣೆಗಳಿಂದ, ಮೋಡಿಗಳಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲವೆಂದು ವಾಸ್ತವ ನಿಸರ್ಗದಿಂದ ಹೊರಗುಳಿದು ತಂತ್ರಗಳಿಂದ ವಂಚನೆ ಮಾಡುತ್ತಾ ವಂಚನೆಗೆ ಒಳಗಾಗ ಬೇಕಾಗುತ್ತದೆಂಬ ಸತ್ಯವನ್ನು ಕಂಡುಕೊಳ್ಳುತ್ತಾನೆ. ಗೌತಮ ಬುದ್ಧನ ಉಪದೇಶ ಕೇಳಿ ಆತನೊಂದಿಗೆ ಚರ್ಚಿಸಿ ನಂತರ ತನ್ನ ದಾರಿಯಲ್ಲಿ ನಡೆದು ಪ್ರಾಪಂಚಿಕವಾದ ಆಸಕ್ತಿ ಗಳಿಸಿ ವೇಶ್ಯೆ ಕಮಲೆಯೊಂದಿಗೆ ಸುಖದ ತುತ್ತತುದಿಗೇರುತ್ತಾನೆ.

ನಲವತ್ತು ವರ್ಷಗಳಾದ ಮೇಲೆ ಈ ಪ್ರಾಪಂಚಿಕ ಸುಖದಿಂದ ನಿಜವಾದ ಆನಂದ ಸಾಧ್ಯವಿಲ್ಲ ಎಂಬುದನ್ನು ಅರಿತುಕೊಳ್ಳುತ್ತಾನೆ. ಕಮಲೆಯನ್ನು, ತಾನು ಗಳಿಸಿದ ಸಂಪತ್ತನ್ನು ತೊರೆದು ಕಡೆಯ ಜೀವನವನ್ನು ಅಂಬಿಗನಾಗಿ ಕಳೆಯುತ್ತಾನೆ. ಅಲ್ಲಿ ಬರುವ ಹಿರಿಯ ಕಿರಿಯರೊಂದಿಗೆ, ಜ್ಞಾನಿ ಅಜ್ಞಾನಿಗಳೊಂದಿಗೆ, ನದಿಯೊಂದಿಗೆ ಬೆರೆತು ಪರಿಪೂರ್ಣ ಸ್ಥಿತಿಗೆ ತಲುಪುತ್ತಾನೆ. ಎಲ್ಲರಲ್ಲಿ ಹಾಗೂ ಎಲ್ಲದರಲ್ಲಿ ಸಾಮರಸ್ಯವನ್ನು ಸಾಧಿಸುತ್ತಾನೆ. ಆ ಅರಿವಿನ ಗಳಿಗೆಯಿಂದ ಸಿದ್ಧಾರ್ಥ ಅದೃಷ್ಟದ ಬೆನ್ನುಹತ್ತುವುದರಿಂದ ಹೊರಗುಳಿಯುತ್ತಾನೆ. ಆತನ ಮುಖದಲ್ಲಿ ಜ್ಞಾನದ ಬೆಳಕು ಬೆಳಗುತ್ತದೆ. ಬಯಕೆಯ ಯಾವ ಛಾಯೆಯೂ ಅಲ್ಲಿ ಸುಳಿಯುವುದಿಲ್ಲ. ಸಮಷ್ಟಿಯ ಸಾಮರಸ್ಯದಲ್ಲಿ ಸಚ್ಚಿದಾನಂದವನ್ನು ಕಂಡು ಅನುಭವಿಸುತ್ತಾ ತಾನೇ ಅದಾಗಿ ಉಳಿಯುತ್ತಾನೆ.

ಹೆಸ್ ಅವರ 'ಸಿದ್ಧಾರ್ಥ' ಕಾದಂಬರಿ ಬಹುಶಃ ಸೌಂದರ್ಯದ ದೃಷ್ಟಿಯಿಂದ ಹೆಚ್ಚು ತೃಪ್ತಿ ತಂದ ಕೃತಿ. ಅದರ ಬಂಧ, ಭಾಷೆ, ಓಘ ಆಕರ್ಷಣೀಯ. "Demain' ಗೆ ಹೋಲಿಸಿದಾಗ 'ಸಿದ್ಧಾರ್ಥ' ಗಂಭೀರವಾದ ಕೃತಿ. ಧಾರ್ಮಿಕವಾಗಿ ಗೊಂದಲಗೊಂಡ ಸಿದ್ಧಾರ್ಥ ಸಾಮಾಜಿಕಮೌಲ್ಯಗಳನ್ನು ತಿರಸ್ಕರಿಸಿ ಧ್ಯಾನದ ಮೂಲಕ, ಸಾಧನೆಯ ಮೂಲಕ ಶಾಂತಿಯನ್ನು ಕಂಡು ಕೊಂಡವನು. ೧೯೨೦ರ ಹೊತ್ತಿಗೆ ಹೆಸ್ ಧ್ಯಾನ ಒಂದರಿಂದಲೇ ಬದುಕಿ ಉಳಿಯಲು ಸಾಧ್ಯವಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಂಡ. ಸಂದರ್ಭಗಳು-ಮುಖ್ಯವಾಗಿ ಹಣ ಮತ್ತು ಆರೋಗ್ಯ - ಪ್ರಾಪಂಚಿಕ ಸಂಬಂಧಗಳಿಗೆ ಒತ್ತಡವನ್ನುಂಟು ಮಾಡಿದುವು. ಆತನ ಪ್ರತಿಕ್ರಿಯೆ ಈಗ ಮತ್ತಷ್ಟು ಪ್ರೌಢವಾಗಿದ್ದುವು. 'ನಾನು ನಮ್ಮ ಕಾಲದ ಯಾವೊಂದು ಮೌಲ್ಯಗಳಲ್ಲಿ ಭಾಗಿಯಾಗಲಾರೆ' ಎಂದು ಒಪ್ಪಿಕೊಂಡಿದ್ದಾನೆ. ಸಮಾಜದ ವಿರುದ್ಧ ಉದ್ರೇಕ

ಗೊಳ್ಳದೆ ಹಾಸ್ಯದ ಮೂಲಕ ಪಾವಿತ್ರ್ಯವನ್ನು ಕಾಪಾಡಲು ಹೆಸ್ ನಿರ್ಧರಿಸಿದ್ದ. 'ಸಿದ್ಧಾರ್ಥ'ನ ತಪ್ಪಿಸಿಕೊಳ್ಳುವ ಧ್ಯಾನದ ಯಾತ್ರೆಯ ಸ್ಥಾನವನ್ನು ಮನುಷ್ಯನ ಘನತೆಯ ನಂಬಿಕೆ ಪುನರ್ ಸ್ಥಾಪಿಸಿತು. ಈ ಹೊಸ ಪ್ರವೃತ್ತಿ 'Steppen Wolf' (೧೯೩೭) ನಲ್ಲಿ ಅಭಿವ್ಯಕ್ತವಾಗಿದೆ.

ಹ್ಯಾರಿಹ್ಯಾಲರ್ ಕಾದಂಬರಿಯ ನಿರೂಪಕ ನಲವತ್ತು ವರ್ಷದ ಬುದ್ಧಿಜೀವಿ. ತನಗೆ ಬೆಲೆ ಇಲ್ಲದ ಪ್ರಪಂಚದಿಂದ ತಪ್ಪಿಸಿಕೊಳ್ಳಲು, ಐವತ್ತನೆ ವರ್ಷದಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ ಹ್ಯಾಲರ್ ತನ್ನ ನೈತಿಕ ಶ್ರೇಷ್ಠತೆ ಹಾಗೂ ಸ್ವತ್ವಧದಿಂದಾಗಿ ಆತನ ಬಳಗದಲ್ಲಿ ಗೌರವಕ್ಕೆ ಪಾತ್ರನಾಗಿದ್ದ. ಆದರೆ ಅವನು ಗೊಂದಲಕ್ಕೆ ಈಡಾಗಿದ್ದ. ''ಸಂಸ್ಕೃತಿ, ಚೈತನ್ಯ, ಆತ್ಮ, ಸೌಂದರ್ಯ, ಪಾವಿತ್ರ್ಯ ಎಂದು ನಾವು ಕರೆಯುವ ಅವುಗಳು ಕೇವಲ ಭೂತ; ಗತಿಸಿ ಬಹುಕಾಲವಾದರೂ ಇಂದಿಗೂ ಪವಿತ್ರ ಎಂದು ಭಾವಿಸಿ ನನ್ನಂಥ ಕೆಲವು ಮೂರ್ಖರಿಂದ ಅವೆಲ್ಲ ಜೀವಂತವಾಗಿವೆ'' ಎನ್ನುತ್ತಾನೆ. ವಿಹಾರದ ಕಾಲದ ಸಮಯದಲ್ಲಿ ಹ್ಯಾಲರ್ ಅದುವರೆಗೆ ತನ್ನೊಳಗೆ ಮುಚ್ಚಿಟ್ಟುಕೊಂಡಿದ್ದ ಸಂಗೀತ, (Jozz - ಒಂದು ಬಗೆಯ ಅಮೆರಿಕ ಸಂಗೀತ), ವೇಶ್ಯಾವೃತ್ತಿ, ಸಲಿಂಗಕಾಮಿ ಹಾಗೂ ಮಾದಕ ಸಂಸ್ಕೃತಿಗಳಿಂದ ಶೀಘ್ರವಾಗಿ ವಾಸ್ತವ ಪ್ರಪಂಚಗಳಿಗೆ ತೆರೆದುಕೊಂಡ. ಹೃದಯವಂತರೊಂದಿಗೆ ಅಥವಾ ಏಕಾಂತ ಧ್ಯಾನಕ್ಕೆ ಒಲಿಯುವ ಬದಲು ಹ್ಯಾಲರ್ ನಗುತ್ತಲೇ ಪ್ರಪಂಚದ ಕ್ಷುಲ್ಲಕತೆಯಲ್ಲಿ ಚಿನ್ನದ ಗೆರೆ ಕಾಣುವುದರಲ್ಲಿ ಜೀವನದ ಅರ್ಥವನ್ನು ಕಂಡು ಬದುಕುವ ಜಾಣ್ಮೆಯನ್ನು ಕಲಿತುಕೊಂಡ.

'Steppen Wolf' ಪ್ರಕಟವಾದಾಗ ಅದು ಓದುಗರನ್ನು ಆಘಾತಗೊಳಿಸಿತ್ತು. ಅದಕ್ಕೆ ಕಾರಣ ೧೯೩೦ರ ಓದುಗರು ಅದನ್ನು ಲೈಂಗಿಕತೆಗೆ ಕೊಟ್ಟ ಪರವಾನಗಿ, ಮಾದಕ ಚಟ, ಸಂಗೀತ ಕುಣಿತವನ್ನು ಉದ್ರೇಕಿಸುವಂಥದ್ದು ಎಂದು ತಪ್ಪು ಭಾವಿಸಿದ್ದಾಗಿತ್ತು. ಆದರೆ ಅದು ಚಂಚಲ ಪ್ರಕೃತಿಯಲ್ಲಿ ಅನಂತತೆಯನ್ನು, ಲೌಕಿಕದ ಎದುರು ಆಧ್ಯಾತ್ಮಿಕತೆಯನ್ನು, ಸಂಗೀತದಲ್ಲಿ ನಿತ್ಯವಾದುದನ್ನು ಅಭಿವ್ಯಕ್ತಿಸುವುದಾಗಿತ್ತು. ಬೆಚ್ಚಿದ್ದ ಈ ಓದುಗರು ಹೆಸ್ ಅವರ ಮುಂದಿನ ಕೃತಿ 'Narcissus and Goldmund' (೧೯೩೦)ನಲ್ಲಿ ತಮ್ಮನ್ನು ಗುರುತಿಸಿಕೊಂಡರು. ಇಬ್ಬರು ವಿಭಿನ್ನ ನಾಯಕರ ಮೂಲಕ

ಹದಿನೈದನೆ ಶತಮಾನದ ಯೂರೋಪಿನ ಸ್ವಾತಂತ್ರ್ಯ ಮತ್ತು ಜವಾಬ್ದಾರಿಯ ಬಗ್ಗೆ ಹಳೆಯ ತಿಕ್ಕಾಟವನ್ನು ಆ ಕೃತಿ ಒಳಗೊಂಡಿದೆ. ಪಾದ್ರಿಯಾದ ನಾರ್ಸಿಸ್ ನಿಜವಾದ ಚೈತನ್ಯ ಎಂಬುದು ಪ್ರಾಪಂಚಿಕತೆಯಿಂದ ದೂರವಾದ ಚರ್ಚಿನಲ್ಲಿದೆ ಎಂದು ವೈಭವೀಕರಿಸುತ್ತಾನೆ. ಆದರೆ ಪಾದ್ರಿಯಾಗಿದ್ದ ಗೋಲ್ಡ್‌ಮಂಡ್ ಚರ್ಚಿನಿಂದ ಓಡಿಹೋಗಿ ಹೆಣ್ಣು ಮತ್ತು ಕಲೆಯ ಮೂಲಕ ಪ್ರಪಂಚವನ್ನು ಅನುಭವಿಸುತ್ತಾ ಜೀವನವನ್ನು ಹುಡುಕುತ್ತಾನೆ.

ನಾರ್ಸಿಸ್ ಗೋಲ್ಡ್‌ಮಂಡ್‌ಗೆ ಬ್ರಹ್ಮಚರ್ಯ ಜೀವನಕ್ಕೆ ತಾನು ಯೋಗ್ಯನಲ್ಲ ಎಂದು ಕಂಡುಕೊಳ್ಳಲು ಸಹಕರಿಸುವ ಮಾರಿಯಾಬ್ರಾನ್ ನಲ್ಲಿ ಕಥೆ ಪ್ರಾರಂಭವಾಗುತ್ತದೆ. ನಂತರ ನಾರ್ಸಿಸ್ ಕಾದಂಬರಿಯ ಮಧ್ಯಭಾಗದಲ್ಲಿ ಕಾಣೆಯಾಗುತ್ತಾನೆ. ಆದರೆ ಗೋಲ್ಡ್‌ಮಂಡ್ ಪ್ರಪಂಚ ಪರ್ಯಟನ ಮಾಡುತ್ತಾ ಆಕರ್ಷಕ ಸಾಹಸಗಳಲ್ಲಿ ಹೋರಾಡುತ್ತಾನೆ. ಅನೇಕ ಸ್ತ್ರೀಯರೊಂದಿಗೆ ಸಂಗವನ್ನೂ ಮಾಡುತ್ತಾನೆ. ಸುಂದರ ಮರದ ಕೆತ್ತನೆ ಮಾಡುವ ಕಲಾಕಾರನಾಗುತ್ತಾನೆ. ಯುದ್ಧ, ಕೊಲೆ, ಸುಲಿಗೆ, ಅತ್ಯಾಚಾರ ಮಾಡುವುದನ್ನು ಕಣ್ಣಾರೆ ಕಾಣುತ್ತಾನೆ. ಕೊನೆಯಲ್ಲಿ ಗೋಲ್ಡ್‌ಮಂಡ್‌ನನ್ನು ಸೆರೆಯಿಂದ ಬಿಡಿಸಿಕೊಳ್ಳಲು ನಾರ್ಸಿಸ್ ಬರುತ್ತಾನೆ. ಇವನನ್ನು ಚರ್ಚಿಗೆ ಕರೆದೊಯ್ಯುತ್ತಾನೆ. ನೊಂದ ಗೋಲ್ಡ್‌ಮಂಡ್ ಅಲ್ಲಿ ಅಸುನೀಗುತ್ತಾನೆ. ಪ್ರಾಪಂಚಿಕ ಅನುಭವಗಳಿಂದ ಗೋಲ್ಡ್‌ಮಂಡ್ ದೈಹಿಕವಾಗಿ ಸೊರಗಿ ಹೋಗಿರುತ್ತಾನೆ. ಆದರೆ ನಾರ್ಸಿಸ್ ಚರ್ಚಿನಲ್ಲಿಯೇ ಉಳಿದು ಕಾಲದಿಂದ ಆಬಾಧಿತನಾಗಿ ಉಳಿಯುತ್ತಾನೆ. ಗೋಲ್ಡ್‌ಮಂಡ್ ಜೀವನದ ಅನುಭವವನ್ನು ಬದುಕು ನಿರಂತರ ಪರಿವರ್ತನಶೀಲವಾದುದು ಎಂಬುದನ್ನು ಚಿತ್ರಿಸುವುದರೊಳಗಾಗಿ ಸಾವನ್ನಪ್ಪುತ್ತಾನೆ. ಆದರೆ ನಾರ್ಸಿಸ್‌ಗೆ ಜೀವನದ ಆ ಯಾವೊಂದೂ ಅನುಭವವೂ ಆಗದ ರೀತಿಯಲ್ಲಿ ಬದುಕಿನ ಆವರಣದೊಳಗೆಯೇ ಉಳಿಯುತ್ತಾನೆ.

ನಾರ್ಸಿಸ್ ಮತ್ತು ಗೋಲ್ಡ್‌ಮಂಡ್ ಕಾದಂಬರಿಯ ಕಡೆಯಲ್ಲಿ ಹೇಳಲಾಗದ ಅಂಶ ೧೯೩೨ರಲ್ಲಿ ಪ್ರಕಟವಾದ ಅವರ 'The Journey to the East' ಕಾದಂಬರಿಯ ಕೇಂದ್ರವಸ್ತು. ಅದರಲ್ಲಿ ಬರುವ ನಿರೂಪಕ H.H ಆತನ ಯಾತ್ರೆಯನ್ನು ಕುರಿತು ಹೇಳುವಲ್ಲಿ ಸೋಲುವುದರಿಂದ ಆ ಶೀರ್ಷಿಕೆಯೇ ವ್ಯಂಗ್ಯದಿಂದ ಕೂಡಿದೆ.

-ಮೊದಲ ಮಹಾಯುದ್ಧ ಕಳೆದ ನಂತರ H.H ಪ್ರಾಚ್ಯದೇಶಗಳ ಪ್ರವಾಸ ಕೈಗೊಳ್ಳುವ ಸಲುವಾಗಿ ಪೌರಾತ್ಯ ಪ್ರಯಾಣಿಕರ ಒಕ್ಕೂಟಕ್ಕೆ ಸೇರಿದ.* ಪ್ರವಾಸದ ಪ್ರಾರಂಭ ದಲ್ಲಿಯೇ ಸೇವಕ 'ಲಿಯೋ' ಕಣ್ಮರೆಯಾಗುತ್ತಾನೆ. ಈ ಕ್ಷುಲ್ಲಕ ಘಟನೆ ಒಬ್ಬೊಬ್ಬರಾಗಿ ಒಕ್ಕೂಟದಿಂದ ಕಳಚಿಕೊಳ್ಳಲು ಕಾರಣವಾಗುತ್ತದೆ. ಹತ್ತು ವರ್ಷಗಳ ನಂತರ H.H ಒಕ್ಕೂಟದ ಚರಿತ್ರೆ ಬರೆಯಲು ಯತ್ನಿಸಿದಾಗ ಯಾವ ಘಟನೆಗಳು ಸ್ಮರಣೆಗೆ ಬರದೆ ಮೇಲ್ಪದರದ ವಿವರಗಳ ಹೊರತಾಗಿ ಯಾತ್ರೆಯ ಸತ್ವ ಶೂನ್ಯವಾಗಿರುತ್ತದೆ. ವ್ಯವಸ್ಥೆ ಆತನಿಗೆ ಕೂಡಿ ಬರದಿದ್ದರೇನಂತೆ? ಅರಿಯದೆ ಆತನೇ ಒಕ್ಕೂಟವನ್ನು ಬಿಟ್ಟು ಹೋಗಿದ್ದರೇನಂತೆ 'ಲಿಯೋ'ನನ್ನು ಹುಡುಕುವುದರಲ್ಲಿ ಆತ ಯಶಸ್ವಿ ಯಾಗುತ್ತಾನೆ. ಲಿಯೋನ ಸೌಹಾರ್ದಯುತ ಅಸ್ತಿತ್ವ ಈತನ ದುಃಖಿತ ಸ್ಥಿತಿಗೆ ಹೊಂದಿಕೊಳ್ಳುವುದಿಲ್ಲ. H.Hಗೆ ಲಿಯೋ ಎಲ್ಲಾ ಸರಿಯಾಗಿದೆ, ನನ್ನ ಚರಿತ್ರೆನ್ನು ಬರೆದು ಮುಗಿಸಬಹುದೆಂದು ಎನ್ನುತ್ತಾನೆ. H.Hನನ್ನು ಸಂಗ್ರಹಾಲಯಕ್ಕೆ ಕರೆದುಕೊಂಡು ಹೋದಾಗ ಅಲ್ಲಿ H.H 'ಲಿಯೋ'ನ ಅದ್ಭುತ ವ್ಯಕ್ತಿತ್ವವನ್ನು ಕಂಡು ಆತನ ನಿಸ್ವಾರ್ಥ ಸೇವೆಯನ್ನು ದಾಖಲಿಸುತ್ತಾನೆ. ನಿರೂಪಕ H.H ನಿಗೆ ತನ್ನ ವ್ಯಕ್ತಿತ್ವದ ಬಗ್ಗೆಯೇ ಕಾಡು ವುದರಿಂದ ಶ್ರೇಷ್ಠವಾದ ಸೇವೆಗೆ ಮನಕೊಡದೆ ತ್ಯಜಿಸಲ್ಪಡುತ್ತಾನೆ. ಆತನ ತಪ್ಪಿನ ಅರಿವಾಗಿ ಒಮ್ಮೆ ಸಹ ಸದಸ್ಯರಿಂದ ವ್ಯಂಗ್ಯದ ನಗುವಿಗೆ ಈಡಾಗಿ ಮತ್ತೆ ಅವರೊಂದಿಗೆ ಒಂದಾಗುತ್ತಾನೆ.

ಹೆಸ್ ತಾನು ಕಂಡುಕೊಂಡ ದೃಷ್ಟಾಂತಗಳನ್ನು ಕಲಾತ್ಮಕವಾಗಿ ಸಂವಹನ ಗೊಳಿಸುವಲ್ಲಿ ಇದ್ದ ತೊಡಕನ್ನು ನಿವಾರಿಸಿಕೊಳ್ಳಲು ಹದಿನೆಂಟನೇ ಶತಮಾನದ ಚೌಕಟ್ಟಿನಲ್ಲಿ ಯತ್ನಿಸಿದ್ದಾನೆ. ಆ ಕಾಲದಲ್ಲಿ ಈತ ಮನೆಯಲ್ಲಿಯೇ ಅಧ್ಯಾತ್ಮ ಸಾಧನೆಗೆ ತೊಡಗಿರುತ್ತಾನೆ.

ಆತನ ಬರಹದ ವಿವರಗಳು ಏಕಕಾಲದಲ್ಲಿ ಆತ್ಮಕಥೆಯ ರೂಪವನ್ನು ಪಡೆಯುತ್ತವೆ. ಸ್ಥಳಗಳೂ ಘಟನೆಗಳು ಅಲ್ಲಿ ಬರುವ ಅನೇಕ ಪಾತ್ರಗಳು ಹೆಸ್‌ನ ಜೀವನದಿಂದಲೇ ಮೂಡಿಬಂದಿರುವಂಥವು. ಮಾಂಟಗೋಲಾದ ಮೊದಲ ಹನ್ನೆರಡು

---

*ಹೆಸ್ ಪ್ರವಾಸ ಮಾಡಿದ ಇಂಡೋನೇಷಿಯಾ ಹಾಗೂ ೧೯೨೦ರಲ್ಲಿ ಅವಶ್ಯಕವಾಗಿದ್ದ ಪ್ರಾಚ್ಯ 'ಅನುಭವಪಂಥ' ಕುರಿತು ಅನ್ವಯಿಸಿದ್ದಾನೆ.

ವರ್ಷಗಳು ಕೆಲವು ಹೊರಘಟನೆಗಳಿಂದ ಕೂಡಿ ಗುರುತಿಸಲ್ಪಟ್ಟಿವೆ. ೧೯೩೨ರಲ್ಲಿ ಹೆಸ್ ಸ್ವಿಸ್ ದೇಶದ ನಾಗರಿಕನಾದ. ೧೯೨೪ರಲ್ಲಿ ಎರಡನೆ ಮದುವೆಯಾದ. ಆನಂತರ ಶಿಖರದಿಂದ ಕೆಳಗಿಳಿದು ಅಲ್ಲಲ್ಲಿ ಉಪನ್ಯಾಸಗಳನ್ನು ಕೊಡುತ್ತಾ ಆರೋಗ್ಯವನ್ನು ಕಾಪಾಡಿಕೊಂಡ. ಮಾಂಟಗೋಲದಿಂದ ಹೊರಬಂದು ಹೀಗೆ ಶಾಂತಿಯುತವಾಗಿ ಕಳೆದ ಹೆಸ್‌ನ ಕಾಲ ಅವನ ಕ್ರಿಯಾತ್ಮಕತೆಗೆ ಸಹಕಾರಿಯಾಯ್ತು. ಕಾದಂಬರಿಯ ಜೊತೆಗೆ ಉತ್ತಮ ಕವಿತೆ, ಪ್ರಬಂಧ, ಕಥೆಗಳನ್ನು ಆ ಕಾಲದಲ್ಲಿ ಬರೆದ. ಮಧ್ಯಕಾಲೀನ ಲ್ಯಾಟಿನ್ ಕಥೆಗಳಿಂದ, ಜರ್ಮನಿಯ ರಮ್ಯ ಕಾವ್ಯದವರೆಗೆ ಅನೇಕ ಗ್ರಂಥಗಳನ್ನ ರಚಿಸಿದ. ಪ್ರಸಿದ್ಧ ನಿಯತಕಾಲಿಕಗಳಿಗೆ ಅನೇಕ ಕೃತಿಗಳನ್ನು ಕುರಿತು ವಿಮರ್ಶೆ ಬರೆದ. ಚಿತ್ರಕಲೆ ಪ್ರಾರಂಭಿಸಿ ಸಚಿತ್ರಗಳನ್ನೊಳಗೊಂಡ ಯಕ್ಷಿಣಿ ಕಥೆಗಳನ್ನು ಬರೆದು ಪ್ರಕಟಿಸಿದ. ಈ ಕಾಲದಲ್ಲಿ ಆತನಲ್ಲಿನ ಆನಂದ ಹಾಗು ಕ್ರಿಯಾತ್ಮಕತೆ ಉಚ್ಛ್ರಾಯ ಸ್ಥಿತಿಗೇರಿದ್ದುವು. ಅಂತಿಮವಾಗಿ ೧೯೩೧ರಲ್ಲಿ 'ನಿನಾ ಅಸ್ಲಾಂಡರ್'ಳೊಂದಿಗೆ ಮೂರನೆ ಮದುವೆಯಾದ.

'The Journey to the East' ನಿರುದ್ವೇಗ ಮನಸ್ಸಿನ ಪ್ರತಿಬಿಂಬವಾಗಿದ್ದರೆ, ೧೯೪೩ರಲ್ಲಿ ಪ್ರಕಟವಾದ 'Glass Bead Game' ಮೂವತ್ತರ ದಶಕದ ಕರಾಳತೆಯನ್ನು ಕಟ್ಟಿ ಕೊಡುವುದಾಗಿದೆ. ೧೯೩೧ರಲ್ಲಿ ಚೈತನ್ಯದ ಸುಂದರ ಸಾಮ್ರಾಜ್ಯದ ಗೀತೆಯಾಗಿ ಪ್ರಾರಂಭವಾದ ಹೆಸ್ ಅವರ ಕಡೆಯ ಅತ್ಯುತ್ತಮ ಕೃತಿ ತಾನು ಪ್ರಕಟವಾಗುವ ಹೊತ್ತಿಗೆ ವೈಯಕ್ತಿಕ ಬದ್ಧತೆಗಾಗಿ ಬಿಡುಗಡೆಗೊಳ್ಳಲು ನಿರಾಕರಿಸುತ್ತದೆ.

ಹೆಸ್ ಅವರ ಇತರೆ ಕಾದಂಬರಿಗಳಲ್ಲಿ ಬರುವ ನಾಯಕರಂತೆ ಇಲ್ಲಿಯ ನಾಯಕ ಜೋಸೆಫ್‌ನೆಟ್ ಜೀವನದಲ್ಲಿ ಯಾವ ಪ್ರತಿಭಟನೆ ಅಥವಾ ದ್ವಂದ್ವಗಳಿಲ್ಲದೆ ತನ್ನ ಪ್ರತಿಭೆಯನ್ನು ಬೆಳೆಸಿಕೊಳ್ಳುತ್ತಾನೆ. ಆತನಿಗಿದ್ದ ಸಂಗೀತ ಹಾಗೂ ವಿದ್ವತ್ ಪ್ರತಿಭೆಗಳಿಂದಾಗಿ ಬಾಲ್ಯದಲ್ಲಿ ಒಂಟಿಯಾಗಿ ಬೆಳೆದ ಜೋಸೆಫ್ ಒಂದೊಂದೇ ಅಂತಸ್ತುಗಳನ್ನು ಏರುತ್ತಾ ತನ್ನ ನಲವತ್ತನೆ ವರ್ಷಕ್ಕೆ ಅಲ್ಲಿಯ ಮೌಲ್ಯಗಳನ್ನು ತನ್ನದೆಂದು ಒಪ್ಪಿಕೊಂಡು ಶಿಕ್ಷಣ ಶಾಸ್ತ್ರದ ಮುಖ್ಯಸ್ಥನಾಗಿ ಮ್ಯಾಜಿಸ್ಟ್ ಲೂದಿಯಾಗುತ್ತಾನೆ.

ಮ್ಯಾಜಿಸ್ಟರ್ ಲೂದಿಯಾಗಿ ಎಂಟುವರ್ಷಗಳ ಅವಧಿಯಲ್ಲಿ ಅಲ್ಲಿನ ಕೊರತೆಗಳನ್ನು ಕಂಡುಕೊಳ್ಳುತ್ತಾನೆ. ತನ್ನ ಆತ್ಮೀಯ ಗೆಳೆಯ ಸಂಗೀತಗಾರ ಬೆಗುಲೇರಿಯಸ್‌ನಲ್ಲಿ ಅದ್ಭುತ ಪ್ರತಿಭೆಯಿದ್ದೂ ಮನಸ್ಸು ಒತ್ತಾಯ ಪೂರ್ವಕವಾಗಿ ಆತ್ಮಶ್ಲಾಘನೆಗೆ

ತೊಡಗಿ ತನ್ನ ಸಂಕುಚಿತತೆಯಿಂದ ವ್ಯವಸ್ಥೆಯೊಂದಿಗೆ ಆತ ಹೊಂದಿಕೊಳ್ಳಲಾಗದೆ ನಿಷ್ಕ್ರಿಯ ವಾಗಿ ಹಾಳಾಗುವುದನ್ನು ಕಾಣುತ್ತಾನೆ. ಜೊತೆಗೆ, ಕ್ಯಾಸ್ಟೆಲಿಯನ್ ಕ್ಷೇತ್ರದ ಸಂಸ್ಕೃತಿ ಮತ್ತು ಮನಸ್ಸು ಚರ್ಚ್‌ನ ಸಾಮ್ರಾಜ್ಯದಿಂದ ಕ್ರಮೇಣ ಕಣ್ಮರೆಯಾಗಿ ತನ್ನಲ್ಲೆ ಕೊನೆ ಗೊಳ್ಳುವುದನ್ನು ಹಾಗೂ ತೀವ್ರ ಬುದ್ಧಿಜೀವಿಗಳು ಧಾರ್ಮಿಕ ಕ್ರಿಯೆಗಳಲ್ಲಿ ಅಥವಾ ಸಾಮಾಜಿಕ ಸೇವೆಗೆ ತೊಡಗುವಲ್ಲಿ ಸಿಡುಕಿನಿಂದ ತಿರಸ್ಕರಿಸುವುದನ್ನೂ ಕಾಣುತ್ತಾನೆ.

ಈ ಎಲ್ಲವನ್ನೂ ಕಾದಂಬರಿಯ ನಾಯಕ ಜೋಸೆಫ್ ಶಿಕ್ಷಣ ತಜ್ಞ ಮಂಡಲಿಯ ಗಮನಕ್ಕೆ ತರುತ್ತಾನೆ. ಅಲ್ಲದೆ ಈ ಸಂಸ್ಥೆ ಬದಲಾವಣೆಗೆ ತೆರೆದುಕೊಳ್ಳದೆ ಸಾಂಪ್ರದಾಯಕ ಮೌಲ್ಯಗಳನ್ನು ಉಳಿಸಿಕೊಳ್ಳಲು ಹೋರಾಡುತ್ತಿದೆ ಎಂಬುದನ್ನೂ ಕಂಡುಕೊಳ್ಳುತ್ತಾನೆ. ''ಚಾರಿತ್ರಿಕ-ರಾಜಕೀಯ ಕುರಿತ ನನ್ನ ದೂರದೃಷ್ಟಿ ಹಾಗೂ ಊಹಾಶಕ್ತಿಯ ಗ್ರಹಿಕೆಯನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ. ಆದರೆ ನನ್ನ ಯಾವುದೇ ನಿರ್ದಿಷ್ಟ ಅಭಿಪ್ರಾಯಗಳು ಅಥವಾ ಅದನ್ನು ಭವಿಷ್ಯದೃಷ್ಟಿ ಎನ್ನಬಹುದಾದರೆ ಅವನ್ನು ಪೂರ್ಣವಾಗಿ ಒಪ್ಪಿಕೊಂಡಿಲ್ಲ..... ಕಲಾ ಸ್ಫೂರ್ತಿಯ ಆದರ್ಶಗಳಾಗಲೀ, ಶಿಸ್ತಿನ ಧ್ಯಾನದ ಮೂಲಕ ಉತ್ತಮ ಸಂಸ್ಕೃತಿಯ ಆದರ್ಶಗಳಾಗಲೀ ಚರಿತ್ರೆಯನ್ನು ರೂಪಿಸಲು ವಿಶ್ವದ ರಾಜಕೀಯ ಸ್ಥಿತಿಯ ಮೇಲೆ ಮಹತ್ವದ ಪ್ರಭಾವ ಬೀರುತ್ತವೆ ಎಂಬ ಬಗ್ಗೆ ನಾವು ಒಪ್ಪಲು ಸಾಧ್ಯವಿಲ್ಲ''. ಕಾಲ್ಪನಿಕ ಆದರ್ಶದ ವರ್ಣನೆ ಎನ್ನುವುದು ವಾಸ್ತವವಾಗಿ ಸಮಾಜದಿಂದ ದೂರವಾಗಿ ಕಲಿಕೆಯ ಜ್ಞಾನದ ಒಂದು ವ್ಯವಸ್ಥಿತ ವಿಮರ್ಶಾ ಸಂಸ್ಥೆಯಾಗುತ್ತದೆ ಎಂಬುದು ಈ ಹಂತದಲ್ಲಿ ಸ್ಪಷ್ಟವಾಗುತ್ತದೆ.

ಜೋಸೆಫ್ ಹಿಂದಿನ ಅಸಮಾನ್ಯ ನಾಯಕರಂತೆ ಸಂಸ್ಥೆಯನ್ನು ಹಿಂಸಾತ್ಮಕ ವಾಗಿ ಪುನರ್ ರೂಪಿಸಲು ಇಚ್ಚಿಸಲಿಲ್ಲ. ಬದಲಾಗಿ ತನ್ನ ಆದರ್ಶಗಳಿಗೆ ಸಂಸ್ಥೆ ಬದ್ಧವಾಗುವಂತೆ ಶಾಂತ ರೀತಿಯಲ್ಲೆ ಕಾರ್ಯನಿರತನಾಗಲು ನಿಶ್ಚಯಿಸಿದ.

ಮುಂದೆ ಮೂವತ್ತರ ದಶಕದಲ್ಲಿದ್ದ ರಾಜಕೀಯ ಸ್ಥಿತ್ಯಂತರಗಳ ಮುಖಾಂತರ ಹೆಸ್ ಅವರ ಸ್ವಂತ ಅನುಭವಗಳು ಪ್ರಕಟವಾದವು. ಮೊದಲ ಜಾಗತಿಕ ಯುದ್ಧದ ಸಂದರ್ಭದಲ್ಲಿ ಮಾಡಿದಂತೆ ಹೆಸ್ ನಾಜಿ ಪಂಥದ ವಿರುದ್ಧ ಅಹಿಂಸಾವಾದವನ್ನು

ಮುಂದಿಟ್ಟುಕೊಂಡು ಪ್ರತಿಭಟಿಸಿದರು. ಅನಾರೋಗ್ಯದ ಕಾರಣ ಪರಿಹಾರ ಕಾರ್ಯ ಗಳಲ್ಲಿ ಭಾಗವಹಿಸಲಾಗುವುದಿಲ್ಲ. ಮಾಂಟಗೋಲಾದಲ್ಲಿ ಆನೇಕ ನಿರಾಶ್ರಿತರಿಗೆ ಆಶ್ರಯವನ್ನು ಕೊಟ್ಟದ್ದಲ್ಲದೆ ಹಿಟ್ಲರನ ಜರ್ಮನಿಯಿಂದ ತಪ್ಪಿಸಿಕೊಂಡು ಹೋಗಲು ಹಲವರಿಗೆ ಸಹಾಯ ಮಾಡಿದರು.

'Glass Bead Game' ಹೆಸ್ ಅವರ ಕಡೆಯ ಮಹತ್ವದ ಕಾದಂಬರಿ. ಮುಂದಿನ ಹದಿನೈದು ವರ್ಷಗಳ ಕಾಲ, ಪದ್ಯಗಳನ್ನ, ಪ್ರಬಂಧಗಳನ್ನ, ಆತ್ಮಚರಿತ್ರೆಯ ತುಣುಕುಗಳನ್ನ, ಸ್ನೇಹಿತರಿಗೆ ಸುತ್ತೋಲೆ ಪತ್ರಗಳನ್ನು, ಪ್ರಪಂಚದಾದ್ಯಂತ ಓದುಗರಿಗೆ ನೂರಾರು ಓಲೆಗಳನ್ನ ಈ ಅವಧಿಯಲ್ಲಿ ಬರೆದರು. ಈ ಅವಧಿಯಲ್ಲಿಯೇ ನೊಬೆಲ್ ಬಹುಮಾನ ದೊಂದಿಗೆ ಅನೇಕ ಪ್ರಶಸ್ತಿಗಳನ್ನು ಸ್ವೀಕರಿಸಿದರು. ಅನಾಗರಿಕ ಕೃತ್ಯಗಳಿಂದ ಅಸ್ತವ್ಯಸ್ತವಾಗಿದ್ದ ಮೃಗೀಯ ಸ್ಥಿತಿಗಿಳಿದಿದ್ದ ಮಾನವ ಸಮಾಜ ಹೆಸ್ ಅವರ ಬರವಣಿಗೆಯಿಂದಾಗಿ ಯುದ್ಧಾನಂತರ, ಅಹಿಂಸೆಯನ್ನ, ಮಾನವೀಯತೆಯನ್ನ, ಮಾನವನ ಗೌರವ ಘನತೆ ಗಳನ್ನು ಎತ್ತಿಹಿಡಿದುದು ಪ್ರಪಂಚದ ಗಮನವನ್ನ ತನ್ನೆಡೆಗೆ ಸೆಳೆದುಕೊಂಡಿತು. ಬಹುಮುಖ್ಯವಾದದ್ದೆಂದರೆ ಯುದ್ಧ ಕಾಲದಲ್ಲಿ ಕಡೆಗಣಿಸಲ್ಪಟ್ಟಿದ್ದ ಗತ ಸಂಸ್ಕೃತಿ ಯೊಂದಿಗೆ ಅವರ ಸಾಹಿತ್ಯ ಸೇತುವೆಯಾಗಿ ನಿಂತದ್ದು.

ಆದಾಗ್ಯೂ ಅರವತ್ತರ ದಶಕದಲ್ಲಿ ಅಮೆರಿಕಾದ ಯುವಜನರೊಂದಿಗೆ ಜನಪ್ರಿಯತೆ ಗಳಿಸಿ ಆನಂದಿಸಿದ Glass Bead Game ಕರ್ತೃ ಒಬ್ಬರೆ ಅಲ್ಲ. ಮೊದಲ ಜಾಗತಿಕ ಯುದ್ಧಾನಂತರ ಆದ ಸ್ಥಿತ್ಯಂತರಗಳು ಮತ್ತೊಮ್ಮೆ ಪಲಾಯನವಾಗಿ ಹೆಸ್‌ನ 'ಸಿದ್ಧಾರ್ಥ' ಕಾದಂಬರಿಯನ್ನು ಹಾಗೂ ಕ್ರಾಂತಿಕಾರಿ ಹೆಸ್‌ನ 'Demain' ಕಾದಂಬರಿಯನ್ನ ಯುವಜನತೆ ಓದುವಂತೆ ಮಾಡಿತು. ಯುವಕರಲ್ಲಿದ್ದ ಆಂತರಿಕ ಧಾರ್ಮಿಕ ದಾಹ ಮೌಲ್ಯಗಳಿಗಾಗಿ ತಡಕಾಡಿತು. ಸಾಂಪ್ರದಾಯಿಕ ಹುಸಿ ಕ್ರಿಶ್ಚಿಯನ್ ಧರ್ಮದಿಂದ ದೂರವಾಗಿ ಪ್ರಾಚ್ಯಧರ್ಮದ ಪೂಜೆಗೆ ಹೆಚ್ಚು ಮನವೊಲಿಯಿತು. ಈ ಮಾರ್ಗದ ಅನ್ವೇಷಕರಲ್ಲಿ ಅನೇಕರು ನಿರಂಕುಶಮತಿಯಿಂದ ತಮ್ಮದೇ ಮಾರ್ಗ ಗಳನ್ನನುಸರಿಸಿದರಲ್ಲದೆ ಆ ಮಾರ್ಗವನ್ನು ಅನೇಕರಿಗೆ ತೆರೆದು ಕೊಟ್ಟರು; ಈ ಸ್ಥಿತಿಯಲ್ಲಿ ಒಳಿತು ಕೆಡಕುಗಳಾಚೆ ಇರುವ ನಿಜದತ್ತ ಹೆಜ್ಜೆ ಹಾಕಿತು. ಹಿಂದಿನ ಸಂಪ್ರದಾಯಕ್ಕೆ

ಸಾಂಪ್ರದಾಯಿಕ ಮೌಲ್ಯಗಳಿಗೆ ಜೋತು ಬಿದ್ದಿದ್ದ ಹಿರಿಯರಿಂದ ಇವರನ್ನು ಮುಕ್ತಗೊಳಿಸಿತು.

೧೯೪೬ರ ನೊಬೆಲ್ ಪ್ರಶಸ್ತಿಯನ್ನು ಹೆಸ್ ಅವರಿಗೆ ಕೊಡಲಾಯ್ತು. ಇದನ್ನು ಕೊಡುವಲ್ಲಿ ಅವರ ಯಾವುದೇ ಒಂದು ಕೃತಿಗೆ ಕೊಡದೆ, ಅವರ ಸ್ಫೂರ್ತಿದಾಯಕ ಕೆಚ್ಚೆದೆಯ ಬರವಣಿಗೆಯನ್ನು, ಸಾಹಸ ಪ್ರವೃತ್ತಿಯನ್ನು, ಮಾನವೀಯ ಆದರ್ಶಗಳನ್ನು ಹಾಗೂ ಅವರ ಲೇಖನಿಯ ಉನ್ನತ ಶೈಲಿಯನ್ನು ಗಮನಕ್ಕೆ ತೆಗೆದುಕೊಳ್ಳಲಾಗಿತ್ತು.

ಹೆಸ್ ನೊಬೆಲ್ ಪ್ರಶಸ್ತಿಯನ್ನು ಸ್ವೀಕರಿಸಲು ಸ್ವೀಡನ್‌ಗೆ ಹೋಗಲಿಲ್ಲ. ಆ ಸಂದರ್ಭಕ್ಕೆ ಅವರು ಕಳುಹಿಸಿದ ' ಒಪ್ಪಿಗೆಯ ಭಾಷಣ ' ಅರ್ಥಪೂರ್ಣವಾಗಿದೆ:

''ಈ ಸಂತೋಷಕರವಾದ ಸಂಭ್ರಮದ ಸಮಾರಂಭಕ್ಕೆ ಆತ್ಮೀಯವಾಗಿ ಗೌರವದ ಶುಭ ಸಂದೇಶವನ್ನು ಕಳುಹಿಸುತ್ತಾ ನಾನು ನಿಮ್ಮ ಅತಿಥಿಯಾಗಿ ಬಂದು ನಿಮ್ಮನ್ನು ವೈಯಕ್ತಿಕವಾಗಿ ಅಭಿನಂದಿಸಿ ಕೃತಜ್ಞತೆ ಸಲ್ಲಿಸಲು ಸಾಧ್ಯವಾಗದುದಕ್ಕೆ ವಿಷಾಧಿಸುತ್ತೇನೆ. ನನ್ನ ಆರೋಗ್ಯ ಯಾವಾಗಲೂ ಸೂಕ್ಷ್ಮವಾಗಿದೆ. ಅಲ್ಲದೆ ೧೯೩೩ರಿಂದ ಉಂಟಾದ ಕ್ಲೇಶಗಳಿಂದ ನಾನು ಪೂರ್ಣ ಅಶಕ್ತನಾಗಿದ್ದೇನೆ. ಆದ ಕಾರಣ ನನ್ನ ಕಾರ್ಯ ಚಟುವಟಿಕೆಗಳು ಕುಂದಲು ಕಾರಣವಾಗಿದೆ. ಅದು ಹೆಚ್ಚು ಹೆಚ್ಚು ಜವಾಬ್ದಾರಿ ಹೊರಲು ಕಾರಣವಾಗಿದೆ. ಆದಾಗ್ಯೂ ನನ್ನ ಮನಸ್ಸು ಮಾತ್ರ ಗಟ್ಟಿಯಾಗಿಯೇ ಇದೆ. 'ನಾನು ಕೂಡ ಮನಸ್ಸು ಎಂಬುದು ಅಂತರ ರಾಷ್ಟ್ರೀಯವಾದುದು ಮತ್ತು ವಿಶ್ವವ್ಯಾಪಕವಾದುದು, ಅದು ನಿಯೋಜಿಸ ಬೇಕಾದ್ದು ಯುದ್ಧವನ್ನಲ್ಲ, ಶಾಂತಿ ಮತ್ತು ಸೌಹಾರ್ದತೆಯನ್ನ' ಎಂಬ ಉದ್ದೇಶವನ್ನು ಹೊಂದಿದ ನೊಬೆಲ್ ಸ್ಥಾಪಕರ ಸಮಾನ ಮನಸ್ಕನಾಗಿದ್ದೇನೆ.

ನನ್ನ ಆದರ್ಶ ಎನ್ನುವುದು ಬೌದ್ಧಿಕವಾಗಿ ಒಂದಾಗಬಲ್ಲ ಮನುಷ್ಯರನ್ನು ನಿರ್ಮಿಸುವ ಅಸ್ಪಷ್ಟವಾದ ರಾಷ್ಟ್ರಿಯ ಗುಣಗಳಲ್ಲ, ಬದಲಾಗಿ ಈ ಸುಂದರವಾದ ಪ್ರಿಯವಾದ ಭೂಮಿಯ ಮೇಲೆ ತನ್ನೆಲ್ಲ ಹೊಂಬಣ್ಣಗಳನ್ನ ಬೀರುವ ವೈವಿಧ್ಯತೆ ಚಿರಾಯುವಾಗಲಿ ಎಂಬುದು. ಅನೇಕ ಜನಾಂಗಗಳು, ಜನರು, ಭಾಷೆಗಳು, ಅಲ್ಲದೆ

ಅನೇಕ ವೈವಿಧ್ಯಮಯ ದೃಷ್ಟಿಕೋನಗಳನ್ನುಳ್ಳ ಈ ನಮ್ಮ ಇರುವಿಕೆ ಅದೆಷ್ಟು ಆನಂದಮಯವಾದುದು ! ಯುದ್ಧದ ಬಗ್ಗೆ ಆಕ್ರಮಣದ ಬಗ್ಗೆ ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ನಾನು ರಾಜಿ ಮಾಡಿಕೊಳ್ಳಲಾಗದಷ್ಟು ದ್ವೇಷಿಸುತ್ತೇನೆ. ನಾನು ಹಾಗೆ ಮಾಡಲು ಅನೇಕ ಕಾರಣಗಳಿವೆ. ಅಲ್ಲದೆ ಸ್ವತಂತ್ರ ಮನಸ್ಸಿನ ಸದೃಢವಾದ ಹಾಗೂ ವೈವಿಧ್ಯಮಯ ಸಂಸ್ಕೃತಿಯ ಸೌರಭವನ್ನೊಳಗೊಂಡ ಎಲ್ಲವೂ ಈ ಕರಾಳ ಕೃತ್ಯಕ್ಕೆ ಬಲಿಯಾಗಿವೆ. ನಾನು ಮೌಲ್ಯವನ್ನು ಅಪ್ರತಿಮ ಕಲಾ ಕೌಶಲ್ಯವನ್ನು ಹಾಗೂ ಐಕ್ಯತೆಯನ್ನು ಪ್ರೀತಿಸುತ್ತೇನೆ. ಸ್ಪಷ್ಟೀಕರಿಸುವ ಮಹಾ ಮಹಾಮೇಧಾವಿಗಳನ್ನ ಅಷ್ಟೇ ದ್ವೇಷಿಸುತ್ತೇನೆ.

''ನಿಮ್ಮ ಗೌರವಾನ್ವಿತ ಅತಿಥಿಯಾಗಿ ಹಾಗೂ ಸಮಾನ ಮನಸ್ಕನಾಗಿ ಸ್ವೀಡನ್ನಿಗೆ, ಆಕೆಯ ಹನ್ಮಂದಿರಗಳಲ್ಲಿ ತುಂಬಿರುವ ಭಾಷಾ ಸಂಪತ್ತಿಗೆ, ಸಂಸ್ಕೃತಿಗೆ, ಸಂಪದ್ಭರಿತ ಇತಿಹಾಸಕ್ಕೆ ಅಲ್ಲದೆ ಸ್ವಂತಿಕೆಯನ್ನು ಕಾಪಾಡಿಕೊಳ್ಳುವಲ್ಲಿ ಇರುವ ನಿರಂತರ ತಾಳ್ಮೆಗೆ ನಾನು ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನಾನು ಸ್ವೀಡನ್ ದೇಶಕ್ಕೆ ಎಂದೂ ಬಂದಿಲ್ಲ. ಆದರೆ ಅನೇಕ ಒಳ್ಳೆಯ ಹಾಗೂ ಸ್ಮರಣೀಯ ಕೊಡುಗೆಗಳನ್ನು ನಿಮ್ಮ ದೇಶ ಅನೇಕ ದಶಕಗಳಿಂದ ನೀಡುತ್ತಾ ಬಂದಿದೆ; ಈಗ್ಗೆ ನಲವತ್ತು ವರ್ಷಗಳ ಹಿಂದೆ 'ಸೆಲ್ಮಾ ಲಾಗರ್‌ಲಾಫ್' * ಬರೆದು ನನಗೆ ಅರ್ಪಿಸಿದ ಸ್ವೀಡಿಷ್ ಪುಸ್ತಕ 'Christ Legends' (ಕ್ರಿಸ್ತನ ದಂತಕತೆ)ನ ಪ್ರಥಮ ಆವೃತ್ತಿಯನ್ನು ನೀಡಿದೆ. ಈ ಅವಧಿಯವರೆಗೆ ಅನೇಕ ಮಹತ್ವದ ಕೊಡುಗೆಗಳು ನಿಮ್ಮ ದೇಶದಿಂದ ಸಂದಿವೆ. ನನಗೆ ಆಶ್ಚರ್ಯವಾಗುವ ಹಾಗೆ ಈಗ ಈ ನೊಬೆಲ್ ಪ್ರಶಸ್ತಿಯನ್ನಿತ್ತು ಗೌರವಿಸಿದ್ದೀರಿ. ಅದಕ್ಕಾಗಿ ನಾನು ನನ್ನ ತುಂಬು ಹೃದಯದ ಕೃತಜ್ಞತೆಗಳನ್ನ ಅರ್ಪಿಸುತ್ತೇನೆ.''

ಈ ಮೊದಲೇ ಇದ್ದ ಹೆಸ್ ಅವರ ಕಣ್ಣಿನ ತೊಂದರೆ ಆನಂತರ ಉಲ್ಬಣ ಗೊಂಡಿತು. ಹದಗೆಟ್ಟ ಅವರ ಆರೋಗ್ಯ ವೈದ್ಯಕೀಯ ಶುಶ್ರೂಷೆಯಿಂದ ಸುಧಾರಿಸಿತು. ತಮ್ಮ ಬರವಣಿಗೆಯನ್ನು ಮುಂದುವರೆಸಿದರು. ಜಲವರ್ಣದ ಚಿತ್ರ ಗಳನ್ನು ಬಿಡಿಸಿದರು. ಸಂಗೀತವನ್ನು ಸವಿದರು. ಕಡೆಯತನಕ ತೋಟದ ಬಗ್ಗೆ ಆಸಕ್ತಿ

---

*ಸೆಲ್ಮಾ ಲಾಗರ್‌ಲ್‌ಪ್ ೧೯೦೯ರಲ್ಲಿ ಸಾಹಿತ್ಯಕ್ಕಾಗಿ ನೊಬೆಲ್ ಪುರಸ್ಕಾರ ಪಡೆದ ಸ್ವೀಡಿಷ್ ಲೇಖಕಿ. ನೊಬೆಲ್ ಪುರಸ್ಕಾರ ಪಡೆದ ಮೊದಲ ಮಹಿಳೆ ಈಕೆ.

ತೋರಿದರು. ೮-೮-೧೯೬೨ರಂದು ಈ ಹಿಂದೆ ಬರೆಯುತ್ತಿದ್ದ ಪದ್ಯದ ಮೂರನೆ ಭಾಗವನ್ನು ರಚಿಸಿದರು. ಅಂದು ಸಂಜೆ ಸಂಗೀತವನ್ನು ಕೇಳಿ ವಿರಮಿಸಿದರು. ಮಾರನೆಯ ದಿನ (೯-೮-೧೯೬೨) ಬೆಳಿಗ್ಗೆ ಇಹಲೋಕವನ್ನು ಬಿಟ್ಟು ತೆರಳಿದರು.

''ಗ್ರಂಥಗಳ ಗುರಿ ಪರಾವಲಂಬಿಗಳನ್ನು ಮತ್ತಷ್ಟು ಪರಾವಲಂಬಿಗಳನ್ನಾಗಿಸುವುದಲ್ಲ; ಬದುಕಲು ಅಶಕ್ತರಾದವರಿಗೆ ಅಗ್ಗದ ಭ್ರಮೆಯನ್ನು ಪ್ರತಿಯಾಗಿ ಕೊಡುವುದೂ ಅಲ್ಲ. ಬದಲಿಗೆ ಗ್ರಂಥಗಳು ಬದುಕನ್ನು ನಿರ್ಮಿಸುವುದಕ್ಕೆ, ಬದುಕು ಫಲಪ್ರದವಾಗುವುದಕ್ಕೆ ಸಹಕಾರಿಯಾದರೆ ಅವಕ್ಕೆ ಬೆಲೆ ಇರುತ್ತದೆ. ಶಕ್ತಿಯ ಬೆಳಕನ್ನು ಬೀರದಿದ್ದರೆ, ಜೀವನ ಸಾಮರ್ಥ್ಯವನ್ನು ತಿಳಿಯ ಹೇಳದೆ ಹೋದರೆ, ಹೊಸಬೆಳಕು ಪ್ರತಿಫಲಿಸದಿದ್ದರೆ ಓದುವ ಪ್ರತಿಯೊಂದು ಕ್ಷಣವೂ ವ್ಯರ್ಥವಾದಂತೆ''

ಹೆಸ್ ಅವರ ಈ ಮಾತುಗಳು ಬರೆಯುವವರ ಮಾರ್ಗದರ್ಶಿಗಳಾಗಿ ಬೆಳಕಿನತ್ತ ಕೈದೊರುವಂತಿವೆ.

ಅವರ ಬಹುಮಟ್ಟಿನ ಬರಹ ಒಳಚೈತನ್ಯವನ್ನು ಕುರಿತದ್ದು. ಅಮೂರ್ತವನ್ನು ಸಾಹಿತ್ಯದಲ್ಲಿ ಮೂರ್ತಗೊಳಿಸಲು ಹೆಸ್ ಯತ್ನಿಸಿದರು. ಸೃಷ್ಟಿಯೊಂದಿಗೆ ಸ್ಪಂದಿಸಿ ಮಾನವ ಜೀವನದ ಶ್ರೇಷ್ಠತೆಯನ್ನ ಎತ್ತಿ ಹಿಡಿಯಲು ಬದುಕಿನುದ್ದಕ್ಕೂ ಯತ್ನಿಸಿದರು. ಆಳವಾದ ನಿಗೂಢವಾದ ಭಾವನೆಗಳನ್ನು ಕಂಡುಕೊಂಡು ಹೆಸ್ ಅಭಿವ್ಯಕ್ತಿಸಿದರು. ಸೃಷ್ಟಿಯೊಂದಿಗೆ ಮಾನವನ ಬದುಕಿನ ಸಾಂಗತ್ಯವನ್ನ ಅಥವಾ ಮಾನವನ ಬದುಕಿನ ಮೇಲೆ ಸೃಷ್ಟಿಯ ಸೂತ್ರಬದ್ಧ ಆದರೆ ಅಷ್ಟೆ ನಿಗೂಢವಾದ ಪ್ರಭವವನ್ನು ಕುರಿತು ವಿಶ್ಲೇಷಿಸಿದರು. ಅವರೆ ಹೇಳುವಂತೆ:

''ನನ್ನ ಬಹುಮಟ್ಟಿನ ಬರವಣಿಗೆಯೆಲ್ಲ 'ಚೈತನ್ಯ' ವನ್ನು ಕುರಿತ ಆತ್ಮ ಚರಿತ್ರೆ. ಅವು ಕಥೆಗಳಲ್ಲ, ತೊಡಕಿನಲ್ಲಿ ತೊಡಗಿಸುವವೂ ಅಲ್ಲ, ಒತ್ತಡವನ್ನುಂಟು ಮಾಡುವವೂ ಅಲ್ಲ. ಅವು ಮೂಲಭೂತವಾಗಿ ಒಬ್ಬ ವ್ಯಕ್ತಿ ತನಗೂ ವಿಶ್ವಕ್ಕೂ ಇರುವ ಸಂಬಂಧವನ್ನು ಚಿತ್ರಿಸಿ ಕೊಡುವ ಸ್ವರ್ಗಗಳಾಗಿವೆ.''

ಅದನ್ನು ಸಾಧಿಸಲು, ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳಲು ಮನುಷ್ಯ ತಾನು ಹೊಂದಬೇಕಾದ ಮೌಲ್ಯಗಳು ಯಾವುವು? ಇದನ್ನು ಕುರಿತು ಜೀವನವನ್ನು

ಕೆಳಮಟ್ಟಕ್ಕಿಳುಸುವಂಥವುಗಳಿಗೆ ನಮ್ಮಲ್ಲಿನ ಉತ್ತಮ ಆಯುಧಗಳೆಂದರೆ ಧೈರ್ಯ, ನಿರಂಕುಶಮತಿ ಹಾಗೂ ತಾಳ್ಮೆ, ಧೈರ್ಯ ಉತ್ಸಾಹ ತುಂಬುತ್ತದೆ. ನಿರಂಕುಶಮತಿತ್ವ ಉಲ್ಲಾಸ ತರುತ್ತದೆ. ತಾಳ್ಮೆ ಶಾಂತಿಯನ್ನು ಕೊಡುತ್ತದೆ. ಎನ್ನುವ ಹೆಸ್ ಹೃದಯಕ್ಕೆ ಸ್ವಾಂತನ ನೀಡುತ್ತಾ :

''ನಾನೊಬ್ಬ ಕವಿ, ಅನ್ವೇಷಕ, ತಪ್ಪೊಪ್ಪಿಕೊಳ್ಳುವವ; ಸತ್ಯ ಮತ್ತು ಪ್ರಾಮಾಣಿಕತೆಗೆ ಮಣಿಯುವವ, ಅನ್ವೇಷಕರಿಗೆ ನನ್ನದೊಂದು ಚಿಕ್ಕ ಸಂದೇಶ ವಿದೆ. ಅದು ನಾನು ಒಂಟಿಯಲ್ಲ ಎಂಬ ಭರವಸೆಯನ್ನು ತುಂಬಿ ಪ್ರಪಂಚ ವನ್ನರಿತು ಅವರೊಂದಿಗೆ ಒಂದಾಗುವಂತೆ ಸಹಾಯ ಮಾಡುವುದು''

ಒಬ್ಬ ಉತ್ತಮ ಬರಹಗಾರ ಸಹಜವಾಗಿ ತಾನು ತಾಳಬೇಕಾದ ನಿಲುವಿಗೆ ಇದು ಸ್ಪಷ್ಟ ಉದಾಹರಣೆಯಾಗಿದೆ. ಅಂತಹ ಸಾರ್ಥಕ ಕೆಲಸವನ್ನು ಉಪನಿಷತ್ತುಗಳು ಬಹುಮಟ್ಟಿಗೆ ಮಾಡಿವೆ ಎಂಬುದನ್ನು ನಾವು ಮರೆಯುವಂತಿಲ್ಲ.

ಜೀವನ ನಿಂತ ನೀರಲ್ಲ. ಜಡಗಟ್ಟಿದ ಸ್ಥಿತಿಯೂ ಅಲ್ಲ. ಅಲ್ಲದೆ ಸಾಂಪ್ರದಾಯಿಕ ರೀತಿಯ ಚಕ್ರೀಯ ಬದುಕೂ ಅಲ್ಲ. ಒಂದಕ್ಕೆ ಅಂಟಿಕೊಂಡು ಅದೇ ಸರ್ವಸ್ವ ಎನ್ನುವ ಭ್ರಮೆಗೆ ಒಳಗಾಗುವುದೂ ಅಲ್ಲ. ಚಲನಶೀಲವಾದ ಪ್ರಕೃತಿ ವಿಕಾಸದ ಉಸಿರನ್ನು ಹೊಂದಿ ಪರಿಪೂರ್ಣತೆಯತ್ತ ಪಯಣಿಸುತ್ತಿರುವ ಸತ್ಯವನ್ನರಿತು ಅಡಿ ಇಡಬೇಕು. ಅದಕ್ಕೆ ಒದಗುವ ಪ್ರೇರಣೆ ಬಹುಮುಖದ್ದು. ಕುವೆಂಪು ಹೇಳುವಂತೆ 'ಜೀವಕ್ಕೆ ಕಷ್ಟ ಬರದಿದ್ದರೆ ಅದು ತನ್ನ ಜಡತ್ವದಲ್ಲಿಯೇ ಸುಖವಾಗಿ ತಂಗಿ ಬಿಡುತ್ತದೆ. ಅದು ಮುಂದುವರಿಯಬೇಕಾದರೆ ಕಷ್ಟರೂಪದ ಪ್ರೇರಣೆ ಅವಶ್ಯಕ'.

ಅಂತಹ ಬದುಕಿನ ಪ್ರೇರಣೆಯಿಂದ ಪುಟಗೊಂಡಿದ್ದರಿಂದಲೇ ಹೆಸ್ ಹೇಳಿರುವ: ''ಹೊಸ ಜಗತ್ತನ್ನು ಕಾಣಬೇಕು, ಅದರಲ್ಲಿ ಬದುಕಬೇಕು. ಅಲ್ಲದೆ ಅದರ ಯಾತನೆಯನ್ನು ಅನುಭವಿಸಬೇಕು. ನಿಶ್ಯಕ್ತಗೊಳಿಸುವ ಬದುಕಿನಲ್ಲಿ ಕೆಲವು ಪ್ರೇರಣೆಗಳ ಅಗತ್ಯವಿದೆ, ಜೊತೆಗೆ ಸಾವಿಗೆ ಸ್ನೇಹವಾಗುವ ಕೆಲವು ದೌರ್ಬಲ್ಯಗಳ ಪ್ರಕೃತಿಯಲ್ಲಿ ಅಭಿವ್ಯಕ್ತವಾಗುವ ದೈವವನ್ನು ಕಾಣಲು ವಸ್ತುವಿನ ಮೂಲಸ್ವರೂಪವನ್ನು ತಿಳಿಯಲು ಜೀವನದ ನಿಗೂಢತೆಯನ್ನು ಅರಿಯಲು, ವೈರುಧ್ಯಗಳಲ್ಲಿರುವ ಹೊಂದಾಣಿಕೆಯನ್ನು

ಕಂಡುಕೊಳ್ಳಲು, ಎಲ್ಲವೂ ಒಂದೆಂಬ ಅರಿವಿಗೆ ಬರಲು, ನನ್ನ ಮನಸ್ಸಿನಲ್ಲಿರುವ ಏನೆಲ್ಲವನ್ನೂ ಅನುಭವಿಸಬೇಕಾದರೆ ಸುಧಾರಿಸಿದ ಕಾಲದ ಅಗತ್ಯ ಅನಿವಾರ್ಯ ವಾಗಿದೆ''.

ಅಂತಹ ಅನಿವಾರ್ಯತೆಯಲ್ಲಿ ಸೂಕ್ಷ್ಮ ಮನಸ್ಸಿನ ಜೀವಿಗಳು ತೊಳಲಾಡು ತ್ತಿದ್ದರೆ, ಅದರ 'ಅ' ಕಾರವನ್ನೂ ಅರಿಯದ ಅಸಂಖ್ಯಾತ ಜನಕೋಟಿ ಹಿಮ್ಮುಖವಾಗಿ ಸೆಳೆಯಲು ಯತ್ನಿಸುತ್ತಿರುವ ದುರಂತಮಯ ಜಗ್ಗಾಟದಲ್ಲಿ ಜಗತ್ತು ಸಾಗುತ್ತಲೇ ಇದೆ, ಸಾಗುತ್ತಲೇ ಇರುತ್ತದೆ.

ಆದರೆ ದಾರ್ಶನಿಕ ವ್ಯಕ್ತಿಗಳು ತಾವು ಕಂಡುಂಡ ಬದುಕಿನ ಸಾರವನ್ನು ಸಾರುತ್ತಲೇ ಬಂದಿದ್ದಾರೆ. ಅವುಗಳದು ಅನಂತ ಮುಖ. ಹೆಸ್ ತಮ್ಮ ಗುರಿ ಕುರಿತು ಸ್ಪಷ್ಟವಾಗಿ ಹೇಳಿದ್ದಾರೆ:

''ಮಾರ್ಕ್ಸ್ ಪ್ರಪಂಚವನ್ನು ಬದಲಿಸಬೇಕೆಂದು ಇಚ್ಛಿಸಿದ. ನಾನು ವ್ಯಕ್ತಿ ಯನ್ನು ಬದಲಾಯಿಸಬೇಕು ಎಂದು ಇಚ್ಛಿಸಿದೆ. ಆತ ಸಮೂಹಕ್ಕೆ ಬೋಧಿಸಿದ, ನಾನು ವ್ಯಕ್ತಿಗಳಿಗೆ ಬೊಧಿಸಿದೆ.'' ಇದು ಅವರ ಕೃತಿಗಳಲ್ಲಿ ಎದ್ದು ಕಾಣುವ ಪ್ರಧಾನ ಗುಣವೂ ಆಗಿದೆ.

❀ ❀ ❀ ❀ ❀ ❀ ❀

ಈ ವಾಚಿಕೆಯನ್ನು ಸಿದ್ಧ ಪಡಿಸಿಕೊಡಲು ಅವಕಾಶ ಮಾಡಿದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಬರಗೂರು ರಾಮಚಂದ್ರಪ್ಪ ಅವರಿಗೆ, ಸಿದ್ಧ ಪಡಿಸುವಲ್ಲಿ ಬಹುವಾಗಿ ಸಹಕರಿಸಿದ ಮಗಳು ಜೆ. ಎನ್. ತೇಜಶ್ರೀ ಹಾಗೂ ಕುಮಾರಿ ಅಗ್ನೇಸ್ ಮೇರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕೃತಿಗಳನ್ನು ಒದಗಿಸಿದ ಗೆಳೆಯ ಕೆ. ಆರ್. ಕೃಷ್ಣಮೂರ್ತಿಯನ್ನು ನೆನೆಯದಿರಲಾರೆ. ಈ ವಿಸ್ತೃತ ಪ್ರಸ್ತಾವನೆಯ ನೆರವಿಗೆ ಬಂದ 'ನೊಬೆಲ್ ಪ್ರೈಸ್ ಲೈಬ್ರರಿ' ಕೃತಿಗೆ ನಾನು ಋಣಿಯಾಗಿದ್ದೇನೆ.

ಜ. ಹೊ. ನಾರಾಯಣಸ್ವಾಮಿ.

ಕೊಳಲ ಕನಸು

"ಕೇಳಿಲ್ಲಿ" ನನ್ನ ತಂದೆ ದಂತದ ಒಂದು ಸಣ್ಣ ಕೊಳಲನ್ನು ಕೊಡುತ್ತಾ ಹೇಳಿದರು. "ಇದನ್ನ ತೆಗೆದುಕೋ, ಹೊರದೇಶಗಳಲ್ಲಿ ಊದುತ್ತಾ ಜನರನ್ನು ರಂಜಿಸುವಾಗ ನಿನ್ನ ಈ ವೃದ್ಧ ತಂದೆಯನ್ನ ಮರೆಯಬೇಡ. ಪ್ರಪಂಚವನ್ನ ಸುತ್ತಿ ಜ್ಞಾನ ಸಂಪಾದಿಸೋಕೆ ನಿನಗೆ ಇದು ಸಕಾಲ. ಹಾಡುವುದನ್ನ ಬಿಟ್ಟರೆ ಬೇರೆ ಏನೂ ನಿನಗೆ ಇಷ್ಟವಾಗದ ಕಾರಣ ಈ ಕೊಳಲನ್ನ ನಿನಗಾಗಿಯೇ ತೆಗೆದಿರಿಸಿದ್ದೇನೆ. ಸದಾ ಬೆಳಕು ಬೀರುವ ಸಂತಸ ನೀಡುವ ಹಾಡುಗಳನ್ನೇ ನೀನು ಆರಿಸಿಕೊ. ಇಲ್ಲದಿದ್ದರೆ ದೇವರು ನಿನಗೆ ಕೊಟ್ಟಿರೋ ಪ್ರತಿಭೆ ವ್ಯರ್ಥವಾಗುತ್ತೆ."

ನನ್ನ ಪ್ರೀತಿಯ ತಂದೆ ವಿದ್ವಾಂಸರಾಗಿದ್ದರೂ ಸಂಗೀತದ ಬಗ್ಗೆ ಹೆಚ್ಚು ತಿಳಿದವರಲ್ಲ. ಆ ಪುಟ್ಟ ಕೊಳಲನ್ನು ನಾನು ಊದುತ್ತಾ ಇರಬೇಕು ಎಂಬುದು ಅವರ ಇಚ್ಛೆಯಾಗಿತ್ತು. ಅವರ ಆ ಇಚ್ಛೆಗೆ ವಿರುದ್ಧವಾಗಿ ಹೋಗಲು ನಾನು ಇಷ್ಟಪಡಲಿಲ್ಲ. ಅವರಿಗೆ ಧನ್ಯವಾದಗಳನ್ನು ಹೇಳಿ ಕೊಳಲನ್ನು ಜೇಬಿಗೆ ಹಾಕಿಕೊಂಡು ಹೊರಟೆ.

ನನಗೆ ನನ್ನ ಊರಿನ ಪರಿಚಯವಿದ್ದುದು ದೊಡ್ಡತೋಟದ ಗಿರಣಿಯವರೆಗೆ ಮಾತ್ರ. ಅದರಿಂದಾಚೆಗೆ ತೆರೆದುಕೊಳ್ಳುವ ಹೊಸ ಜಗತ್ತು ನನಗೆ ತುಂಬ ಸಂತೋಷವನ್ನು ಉಂಟುಮಾಡಿತ್ತು. ದಾರಿಯಲ್ಲಿ ಹೋಗುವಾಗ ಹಾರಿಹಾರಿ ಬರುತ್ತಿದ್ದ ಒಂದು ಜೇನುನೊಣ ಸುಸ್ತಾಗಿ ಕಡೆಗೆ ನನ್ನ ತೋಳ ಮೇಲೆ ಕುಳಿತುಕೊಂಡಿತು. ನಾನು ಮೊದಲು ವಿಶ್ರಾಂತಿ ಪಡೆದ ಸ್ಥಳದಿಂದ ಊರಿಗೆ ಸುದ್ದಿ ಕಳುಹಿಸಲು ಒಬ್ಬ ದೂತ ಸಿಕ್ಕಿದನೆಂದು ಅದನ್ನು ಹಾಗೇ ಕರೆದುಕೊಂಡು ಹೋದೆ.

ನನ್ನ ದಾರಿಯಲ್ಲಿ ದಟ್ಟವಾದ ಕಾಡು, ನಡುನಡುವೆ ಇದ್ದ ಬತ್ತದ ಗದ್ದೆಗಳು ನನಗೆ ಸಂಗಾತಿಗಳಾದುವು. ಪಕ್ಕದಲ್ಲಿ ಹೊಳೆ ಉಲ್ಲಾಸದಿಂದ ತುಂಬಿ ಹರಿಯುತ್ತಿತ್ತು. ಮನೆಗಿಂತ ಈ ಜಗತ್ತು ವಿಭಿನ್ನವಾಗಿರುವುದರ ಅನುಭವವಾಯ್ತು. ಗಿಡಮರಗಳು, ಹೂಗಳು, ತೆನೆಗಳು, ಮಂಜಿನಿಂದ ಮುಸುಕಿದ ಪೊದೆಗಳು ನನ್ನೊಂದಿಗೆ ಮಾತನಾಡಿದುವು. ಅವುಗಳೊಂದಿಗೆ ಒಂದಾಗಿ ನಾನು ಅವುಗಳ ಹಾಡುಗಳನ್ನು ಹಾಡಿದೆ. ಮನೆಯವರಂತೆ ಅವು ನನ್ನನ್ನು ಅರ್ಥಮಾಡಿಕೊಂಡವು. ತೋಳಿನ ಮೇಲೆ

ಕುಳಿತಿದ್ದ ಜೇನ್ನೊಣವನ್ನು ನನ್ನ ಹಾಡು ಎಚ್ಚರಿಸಿತು. ಅದು ಮೆಲ್ಲಗೆ ನನ್ನ ಭುಜದ ಮೇಲೆ ಬಂದಿತು. ನಂತರ ಅಲ್ಲಿಂದ ಹಾರಿ ಅದರ ಮಧುರ ಸೂಂಯ್ ಗಾನದೊಂದಿಗೆ ಎರಡು ಸಾರಿ ನನ್ನ ಸುತ್ತ ಸುತ್ತು ಹಾಕಿದ ಮೇಲೆ ಬಾಣದಂತೆ ನೆರವಾಗಿ ಮನೆಯ ಕಡೆಗೆ ಹಾರಿಹೋಯಿತು.

ಆಗ ಅಲ್ಲಿ ಕಾಡಿನಿಂದ ಯುವತಿಯೊಬ್ಬಳು ಹೊಂಬಣ್ಣದ ತಲೆಗೆ ಹುಲ್ಲಿನ ಹ್ಯಾಟ್ ಧರಿಸಿ ಕೈನಲ್ಲಿ ಒಂದು ಬುಟ್ಟಿ ಹಿಡಿದು ಉಲ್ಲಾಸದಿಂದ ಹೊರಬಂದಳು. ನಾನು ಅವಳನ್ನು ''ಏ ಹುಡುಗಿ, ಎಲ್ಲಿಗೆ ಹೋಗತಿದೀಯೆ?'' ಎಂದು ಕೇಳಿದೆ.

''ಗದ್ದೆ ಕೊಯ್ಯುವವರಿಗೆ ಊಟ ತಗೊಂಡು ಹೋಗತಿದೇನೆ'' ಎಂದು ನನ್ನ ಸನಿಹಕ್ಕೆ ಬರುತ್ತ ಕೇಳಿದಳು, ''ನೀನು ಎಲ್ಲಿಗೆ ಹೊಗತಿದೀಯ ?''

''ನಾನು ಜಗತ್ತನ್ನು ತಿಳಿಯಲು ದೂರ ಹೋಗತಿದೇನೆ. ನಾನು ಕೊಳಲಿನಲ್ಲಿ ಹಾಡುಗಳನ್ನ ಹಾಡಬೇಕೂಂತ ಇಚ್ಛಿಸಿ ನನ್ನ ತಂದೆ ಕಳುಹಿಸಿದರು. ಆದರೆ ಹೇಗೆ ಹಾಡಬೇಕೂಂತ ನನಗೆ ಖಂಡಿತವಾಗಲು ಗೊತ್ತಿಲ್ಲ. ಮೊದಲು ನಾನು ಕಲಿಯಬೇಕು.''

''ಸರಿ. ದಿಟವಾಗಿಯೂ ಈಗ ನೀನು ಏನು ಮಾಡಬಲ್ಲೆ? ಪ್ರತಿಯೊಬ್ಬರೂ ಏನಾದರೊಂದನ್ನು ಮಾಡಲೇಬೇಕಲ್ಲ !''

''ಅಂಥ ವಿಶೇಷ ಏನೂ ಇಲ್ಲ, ನಾನು ಹಾಡಬಲ್ಲೆ''.

''ಹಾಡತೀಯ? ಎಂಥ ಹಾಡುಗಳನ್ನ!''

''ಎಲ್ಲ ತರಹದ ಹಾಡುಗಳನ್ನ. ಮುಂಬೆಳಗಿಗೆ, ಮುಸ್ಸಂಜೆಗೆ, ಎಲ್ಲ ಗಿಡಮರ ಗಳಿಗೆ, ಪ್ರಾಣಿಪಕ್ಷಿಗಳಿಗೆ, ಎಲ್ಲ ಥರದ ಹೂಗಳಿಗೆ. ಈಗ ನೋಡು ಉದಾಹರಣೆಗೆ, ಗದ್ದೆ ಕೊಯ್ಯುವವರಿಗೆ ಊಟ ತೆಗೆದುಕೊಂಡು ಹಸಿರು ಕಾಡಿನಿಂದ ಹೊರಗೆ ಹೋಗತಿರೋ ಯುವತಿಯನ್ನ ಕುರಿತು ಮೋಹಕವಾದ ಹಾಡು ಹಾಡಬಲ್ಲೆ''

''ನಿಜವಾಗಲೂ? ಹಾಗಿದ್ದರೆ ಅದನ್ನ ಹಾಡು !''

''ಸರಿ. ನಿನ್ನ ಹೆಸರೇನು?''

''ಬ್ರಿಗಿಟೀ''.

ನಾನು ಸುಂದರ ಯುವತಿ ಆ ಬ್ರಿಗಿಟೀಯನ್ನು ಕುರಿತು, ಅವಳ ಹುಲ್ಲಿನ ಹ್ಯಾಟ್ ಅನ್ನು, ಆಕೆಯ ಕೈಬುಟ್ಟಿಯೊಳಗಿರುವುದನ್ನು ಕುರಿತು ಎಲ್ಲ ಹೂಗಳು ಆಕೆಯನ್ನು ಹೇಗೆ ದೃಷ್ಟಿಸುತ್ತಿವೆ ಎಂಬುದನ್ನು, ತೋಟದ ಅಂಚಿನ ಬಳ್ಳಿಗಳು ಅವಳತ್ತ ಬಾಗುತ್ತಿರುವುದನ್ನು, ಜೊತೆಗೆ ಇತರ ವಿವರಗಳನ್ನೆಲ್ಲಾ ಕುರಿತು ಹಾಡಿದೆ. ಆಕೆ ಗಮನವಿಟ್ಟು ಏಕಾಗ್ರತೆಯಿಂದ ಕೇಳಿ ತುಂಬ ಸೊಗಸಾಗಿದೆ ಎಂದಳು. ನನಗೆ ಹಸಿವಾಗುತ್ತಿದೆ ಎಂದಾಗ ಬುಟ್ಟಿಯ ಮುಚ್ಚಳವನ್ನು ತೆಗೆದು ತುಂಡು ರೊಟ್ಟಿಯನ್ನು ಕೊಟ್ಟಳು. ನಾನು ಅದನ್ನು ಕಚ್ಚಿ ಆನಂದದಿಂದ ಎರಡು ಹೆಜ್ಜೆ ಓಡಿದೆ.

''ತಿನ್ನುವಾಗ ನೀನು ಓಡಬಾರದು. ಒಂದಾದ ಮೇಲೆ ಮತ್ತೊಂದು'', ಎಂದಳು. ಆಮೇಲೆ ಇಬ್ಬರೂ ಹಸಿರು ಹುಲ್ಲಿನ ಮೇಲೆ ಕುಳಿತು ಕೊಂಡೆವು. ನಾನು ರೊಟ್ಟಿ ತಿನ್ನುತ್ತಿದ್ದೆ. ಅವಳು ತನ್ನ ಕಂದು ಬಣ್ಣದ ಕೈಗಳನ್ನು ಮಂಡಿಯ ಸುತ್ತ ಸುತ್ತಿ ನನ್ನತ್ತ ನೋಡಿದಳು.

ನಾನು ರೊಟ್ಟಿ ತಿಂದಾದ ಮೇಲೆ ಕೇಳಿದಳು, ''ನೀನು ನನಗಾಗಿ ಮತ್ತೇನನ್ನಾದರೂ ಹಾಡುತೀಯಾ?''

''ಓಹೋ ಖಂಡಿತ ಹಾಡತೀನಿ, ಯಾವ ಹಾಡು ಬೇಕು?''

''ಓಡಿ ಹೋದ ಪ್ರಿಯತಮನನ್ನು ನೆನೆದು ದುಃಖಿಸ್ತಿರೋ ಒಬ್ಬಳು ಹೆಣ್ಣನ್ನು ಕುರಿತು''.

'' ಇಲ್ಲ ನಾನದನ್ನ ಮಾಡೋಲ್ಲ. ಅದು ಎಂಥದು, ಹೇಗಿರುತ್ತೆ ಅಂತಲೇ ನನಗೆ ಗೊತ್ತಿಲ್ಲ. ಅಲ್ಲದೆ ಯಾರೂ ಅಂಥ ದುಃಖಿಗಳಾಗಬಾರದು. ಬೆಳಕು ನೀಡೋ ಆನಂದಕೊಡುವ ಹಾಡುಗಳನ್ನ ನಾನು ಹಾಡಬೇಕೂಂತ ನನ್ನ ತಂದೆ ನನಗೆ ಹೇಳಿದ್ದಾರೆ. ನಾನು ನಿನಗಾಗಿ ಕೋಗಿಲೆ ಮೇಲೆಯೋ ಅಥವಾ ಬಣ್ಣದ ಚಿಟ್ಟೆಗಳ ಬಗೆಗೋ ಹಾಡುತೀನಿ''.

''ಹಾಗಾದರೆ ನಿನಗೆ ಪ್ರೇಮದ ಬಗ್ಗೆ ಏನೂ ಗೊತ್ತಿಲ್ಲವೆ?''

''ಪ್ರೇಮದ ಬಗ್ಗೆ? ಹೌದು ನನಗೆ ಗೊತ್ತು. ಮಿಕ್ಕ ಎಲ್ಲದಕ್ಕಿಂತ ಅದು ಅತ್ಯಂತ ಸುಂದರವಾದದ್ದು''.

ನಾನು ಹಾಡಲು ಶುರುಮಾಡಿದೆ. ತುಂಬಿ ಅರಳಿದ ಕೆಂಪುಹೂಗಳ ಮೇಲೆ ಸೂರ್ಯನ ಪ್ರೇಮ ಕಿರಣಗಳು ಮುತ್ತಿಕ್ಕುತ್ತಿರುವುದನ್ನು, ಅವು ಪರಸ್ಪರ ಆನಂದದಿಂದ ತುಂಬಿ ಒಲಿವುದನ್ನು ಕುರಿತು ಹಾಡಿದೆ. ನಂತರ ಗಂಡಿಗಾಗಿ ಕಾಯ್ದಿರುವ ಹೆಣ್ಣು ಹಕ್ಕಿಯನ್ನು ಕುರಿತು, ಗಂಡು ಬಂದಾಗ ಅದು ಹಾರಿ ದೂರ ಹೋಗಿ ಹೆದರಿದಂತೆ ನಟಿಸುವುದನ್ನು ಕುರಿತು ಹಾಡಿದೆ. ಮುಂದುವರೆದು ಕಂದು ಬಣ್ಣದ ಕಣ್ಗಳ ಹುಡುಗಿಯನ್ನು ಕುರಿತು, ಅವಳ ಜೊತೆಯಲ್ಲಿ ಬರುತ್ತಿರುವ ಯುವಕನೊಬ್ಬ ಹಾಡಿ ರೊಟ್ಟಿಯನ್ನು ಬಹುಮಾನವಾಗಿ ಪಡೆದದ್ದನ್ನು ಕುರಿತು ಹಾಡಿದೆ. ಈಗ ಆತನಿಗೆ ರೊಟ್ಟಿ ಬೇಕಾಗಿಲ್ಲ, ಆತ ಆ ಹುಡುಗಿಯ ಕಂದು ಬಣ್ಣದ ಸುಂದರ ಕಣ್ಣುಗಳನ್ನು ನೋಡಬೇಕು. ಆತನಿಗೆ ಹುಡುಗಿಯಿಂದ ಚುಂಬನಬೇಕು. ಹುಡುಗಿ ನಗುವವರೆಗೆ ಮತ್ತು ಆಕೆಯ ತುಟಿಗಳಿಂದ ಆತನ ತುಟಿಗಳನ್ನು ಒಂದಾಗಿಸುವವರೆಗೆ ಆತ ನಿಲ್ಲಿಸುವುದಿಲ್ಲ. ಹಾಡುತ್ತಲೇ ಇರುತ್ತಾನೆ.

ಆಗ ಬ್ರಿಗಿಟೀ ತನ್ನ ತುಟಿಗಳಿಂದ ನನ್ನ ತುಟಿಗಳನ್ನು ಬೆಸೆದಳು. ಕಣ್ಣುಗಳನ್ನು ಮುಚ್ಚಿ ಮತ್ತೆ ತೆರೆದಳು. ಹತ್ತಿರದಿಂದ ಅವಳ ಕಂದು ಬಣ್ಣದ ಕಣ್ಣುಗಳನ್ನು ನೋಡಿದೆ. ಆ ನಕ್ಷತ್ರಗಳಲ್ಲಿ ನಾನು ನನ್ನನ್ನೇ ಕಂಡೆ. ಬಳಿಯಲ್ಲಿದ್ದ ಬಿಳಿಯ ಹೂಗಳೂ ಅಲ್ಲಿ ಪ್ರತಿಫಲಿಸಿದುವು.

''ಜಗತ್ತು ಎಷ್ಟು ಸುಂದರವಾಗಿದೆ! ನನ್ನ ತಂದೆ ಹೇಳಿದ್ದು ಸರಿ. ಈಗ ನಿನ್ನ ಬುಟ್ಟಿಯನ್ನು ಒಯ್ಯಲು ನಾನು ಸಹಕರಿಸುತ್ತೇನೆ. ಅದನ್ನು ನಿನ್ನ ಜನರ ಹತ್ತಿರ ತೊಗೊಂಡು ಹೋಗೋಣ'' ಎಂದೆ.

ಆಕೆಯ ಬುಟ್ಟಿಯನ್ನು ನಾನೇ ಎತ್ತಿಕೊಂಡೆ. ಇಬ್ಬರೂ ಜೊತೆಯಲ್ಲಿ ನಡೆದೆವು. ಆಕೆಯ ಹೆಜ್ಜೆಗಳು ನನ್ನ ಹೆಜ್ಜೆಯಲ್ಲಿ ಒಂದಾದುವು. ಆಕೆಯ ಆನಂದ ನನ್ನ

ಆನಂದದಂತಿತ್ತು. ಕಾಡು ಬೆಟ್ಟದ ತಪ್ಪಲಿನಿಂದ ಮೃದು ಮಧುರವಾಗಿ ಪಿಸುಗುಟ್ಟಿತು. ಹಿಂದೆಂದೂ ನಾನು ಅಷ್ಟೊಂದು ಆನಂದದಿಂದ ಅಲೆದಿರಲಿಲ್ಲ. ಸಂತಸದ ಸಂತೃಪ್ತಿಯ ಹಾಡು ಬಂದು ತಡೆಯುವವರೆಗೂ ನಾನು ಸ್ವಲ್ಪ ಕಾಲ ಉಲ್ಲಾಸದಿಂದ ಹಾಡುತ್ತಲೇ ಇದ್ದೆ. ಪರ್ವತ ಶಿಖರಗಳಿಂದ, ಕಣಿವೆಗಳಾಳದಿಂದ, ಹುಲ್ಲಿನೆಸಳುಗಳಿಂದ, ತುಂಬಿ ಹರಿವ ನದಿಗಳ ಒಳಹೊರಗೆಲ್ಲಾ ಪಿಸುಮಾತುಗಳು, ಕಥೆಗಳು, ಅನೇಕ ಹಾಡುಗಳು ಹರಿದು ಬರುತ್ತಿದ್ದುವು.

ಈ ಜಗತ್ತಿನ ಅಸಂಖ್ಯಾತ ಹಾಡುಗಳನ್ನು ನಾನು ಪ್ರತಿಧ್ವನಿಸಬೇಕು, ಹುಲ್ಲನ್ನು, ಹೂಗಳನ್ನು, ಜನರನ್ನು, ಮೋಡವನ್ನು ಏನೆಲ್ಲವನ್ನೂ ಕುರಿತು; ಹಸಿರು ಎಲೆಗಳಿಂದ ತುಂಬಿದ ವನಗಳನ್ನು, ದೇವದಾರು ಕಾಡುಗಳನ್ನು, ಸಕಲ ಪ್ರಾಣಿಗಳನ್ನು, ಜೀವಕೋಟಿಗಳನ್ನು, ದೂರದ ಸಮುದ್ರವನ್ನು, ಪರ್ವತಗಳನ್ನು, ನಕ್ಷತ್ರಗಳನ್ನು ಚಂದ್ರನನ್ನು, ಕುರಿತು ಅರ್ಥಮಾಡಿಕೊಳ್ಳುತ್ತಲೆ ಈ ವಿಶ್ವದ ಅಪ್ರತಿಮ ಹಾಡುಗಳನ್ನು ಹಾಡಬಲ್ಲವನಾದರೆ! ಈ ಎಲ್ಲವೂ ಪ್ರತಿಧ್ವನಿಸಿ ನನ್ನೊಳಗೆ ಒಮ್ಮೆಲೆ ಹಾಡಾಗಿ ಹೊಮ್ಮಿದರೆ ! ಆಗ ನಾನು ಅಸಮಾನ್ಯನಾಗುತ್ತೇನೆ. ಸರ್ವಶಕ್ತನಾಗುತ್ತೇನೆ. ಆಗ ಒಂದೊಂದು ಹೊಸ ಹಾಡೂ ನವನಕ್ಷತ್ರಗಳಂತೆ ಹೊಳೆಯುತ್ತವೆ. ನಾನು ನನ್ನೊಳಗೆ ಮುಕ್ತನಾಗಿ ಇದನ್ನು ಚಿಂತಿಸುತ್ತಿರುವಾಗ ಆಶ್ಚರ್ಯದಿಂದ ತುಂಬಿ ಹೋದೆ. ಏಕೆಂದರೆ ಈ ಮೊದಲು ಅಂತಹ ಸ್ಪಂದನ ನನ್ನೊಳಗೆ ಯಾವಾಗಲೂ ಉಂಟಾಗಿರಲಿಲ್ಲ. ಬ್ರಿಗಿಟೀ ನಿಂತು ಬುಟ್ಟಿಯ ಹಿಡಿಯನ್ನು ಎಳೆದು ನನ್ನನ್ನು ನಿಲ್ಲಿಸಿದಾಗ ಎಚ್ಚೆತ್ತೆ.

ಆಕೆ ಹೇಳಿದಳು, '' ನಾನು ಆ ದಿಣ್ಣೆ ಏರಿ ಹೋಗಬೇಕು. ನನ್ನ ಜನ ಆಚೆಕಡೆ ಗದ್ದೆಯಲ್ಲಿ ಇದಾರೆ. ಈಗ ನೀನು ಎಲ್ಲಿಗೆ ಹೋಗ್ತೀಯಾ? ನನ್ನ ಜೊತೆ ಬರ್ತೀಯೇನು?''

'' ಇಲ್ಲ, ನಿನ್ನ ಜೊತೆ ಬರಲಾರೆ. ನಾನು ಜಗತ್ತಿಗೆ ಹೋಗಬೇಕು. ಬ್ರಿಗಿಟೀ, ನೀನು ಕೊಟ್ಟ ರೊಟ್ಟಿ ಹಾಗೂ ಚುಂಬನಕ್ಕೆ ನನ್ನ ತುಂಬು ಧನ್ಯವಾದಗಳು. ನಾನು ನಿನ್ನನ್ನು ಎಂದೂ ಮರೆಯೋದಿಲ್ಲ''.

ಆಕೆ ಊಟದ ಬುಟ್ಟಿಯನ್ನು ತೆಗೆದುಕೊಂಡಳು. ಅವರ ಅಡ್ಡಲಾಗಿ ಬಾಗಿ ಕವಿದ ನೆರಳಲ್ಲಿ ಅವಳ ಕಣ್ಣುಗಳನ್ನು ನನ್ನ ಕಣ್ಣುಗಳ ಹತ್ತಿರ ತಂದಳು. ಅವಳ ತುಟಿಗಳು

ನನ್ನ ತುಟಿಗಳೊಂದಿಗೆ ಒಂದಾದವು. ಅವಳ ಚುಂಬನ ಎಷ್ಟು ಮಧುರವಾಗಿತ್ತೆಂದರೆ, ಆನಂದೋಲ್ಲಾಸದ ಮತ್ತಿನಲ್ಲಿ ಮುಳುಗಿಹೋದೆ. ನಂತರ ಒಲ್ಲದ ಮನಸ್ಸಿನಿಂದ ಬೀಳ್ಕೊಂಡು ಕೆಳಗಿನ ರಸ್ತೆಗೆ ಇಳಿದೆ.

ಹುಡುಗಿ ಏರು ದಿಣ್ಣೆಯನ್ನು ಹತ್ತಿ ಕಾಡಿನ ತುದಿಯಲ್ಲಿ ಹರಡಿ ತೂಗುತ್ತಿದ್ದ ಹೊಂಗೆ ಮರದಡಿ ನಿಂತು ನನ್ನತ್ತ ದೃಷ್ಟಿಸಿ ನೋಡಿದಳು. ನಾನು ನನ್ನ ತಲೆಯ ಹ್ಯಾಟನ್ನು ತೆಗೆದು ಆಡಿಸಿದಾಗ ಒಮ್ಮೆ ಕತ್ತು ಅಲುಗಿಸಿ ಹೊಂಗೆ ಮರದ ನೆರಳಿನಲ್ಲಿ ಚಿತ್ರದಂತೆ ಕಣ್ಮರೆಯಾದಳು. ನಾನು ರಸ್ತೆಯಲ್ಲಿ ನಡೆಯುತ್ತಾ ತಿರುವು ಬರುವವರೆಗೆ ನನ್ನ ಆಲೋಚನೆಯಲ್ಲಿ ಮುಳುಗಿದ್ದೆ.

ಅಲ್ಲಿ ಒಂದು ಗಿರಣಿಯಿತ್ತು. ಅದರ ಪಕ್ಕದಲ್ಲಿಯೇ ನೀರಿನಲ್ಲಿ ಒಂದು ದೋಣಿ ನಿಂತಿತ್ತು. ಅದರಲ್ಲಿ ನನಗಾಗಿಯೇ ಕಾಯುತ್ತಿರುವಂತೆ ಏಕಾಂಗಿಯೊಬ್ಬ ಕುಳಿತಿದ್ದ. ನಾನು ನನ್ನ ಹ್ಯಾಟನ್ನು ಆತನಿಗೆ ಮುಟ್ಟಿಸಿ ದೋಣಿಹತ್ತಿದೆ. ದೋಣಿ ತಕ್ಷಣ ಚಲಿಸಿ ನೀರಿನಾಳದ ಕಡೆಗೆ ಓಡಿತು. ನಾನು ದೋಣಿಯ ಮಧ್ಯದಲ್ಲಿ ಕುಳಿತೆ. ಆತ ತುದಿಯಲ್ಲಿ ಕುಳಿತ. ನಾವು ಎಲ್ಲಿಗೆ ಹೋಗುತ್ತಿದ್ದೇವೆ ಎಂದು ಕೇಳಿದಾಗ ಕತ್ತೆತ್ತಿ ತನ್ನ ಮುಸುಕಿದ ಬೂದುಬಣ್ಣದ ಕಣ್ಣುಗಳಿಂದ ನೋಡಿದ.

''ನೀನು ಇಚ್ಛಿಸಿದಲ್ಲಿಗೆ'' ಮೆಲುದನಿಯಲ್ಲಿ ಹೇಳಿದ. ''ಕೆಳಗಿನಾಳಕ್ಕೆ, ಸಾಗರದೊಳಕ್ಕೆ ಅಥವಾ ಬೃಹತ್ ನಗರಗಳಿಗೆ, ಆಯ್ಕೆ ನಿನ್ನದು. ಈ ಎಲ್ಲವೂ ನನಗೆ ಸೇರಿವೆ''.

'' ಈ ಎಲ್ಲಾ ನಿನಗೆ ಸೇರಿವೆ? ಹಾಗಿದ್ದರೆ ನೀನು ಚಕ್ರವರ್ತಿ?''

'' ಇದ್ದರೂ ಇರಬಹುದು'', ಆತ ಹೇಳಿದ. ''ನೀನು ಒಬ್ಬ ಕವಿಯಂತೆ ಕಾಣ್ತೀಯ. ಹಾಗಿದ್ದರೆ ನಮ್ಮ ದಾರಿ ಸಾಗ್ತಿರೋ ಹಾಗೆಯೇ ನನಗೊಂದು ಹಾಡನ್ನ ಹಾಡು'' ಎಂದ.

ನಾನು ಒಂದಾಗಲು ಯತ್ನಿಸಿದೆ. ಗಂಭೀರ ವದನದ, ನೆರೆತ ಕೂದಲಿನ ವ್ಯಕ್ತಿಯನ್ನು ಕಂಡು, ದೋಣಿ ಅತಿವೇಗವಾಗಿ ನಿಶ್ಯಬ್ದದಿಂದ ನದಿಯೊಳಕ್ಕೆ ಚಲಿಸಿದ್ದನ್ನು

ಕಂಡು ಭಯವಾಯ್ತು. ದೋಣಿಗಳನ್ನು ಹೊತ್ತೊಯ್ಯುವ ಸೂರ್ಯನನ್ನು ಪ್ರತಿಫಲಿಸುವ, ದಡದ ಬಂಡೆಗಳ ಮೇಲೆ ಉಕ್ಕಿ ಹರಿವ ಈ ಹೊಯ್ದಾಟಗಳ ನಂತರ ಸಂತಸದಿಂದ ನಲಿವ ನದಿಯನ್ನು ಕುರಿತು ಹಾಡಿದೆ.

ಆ ವ್ಯಕ್ತಿಯ ಮುಖದಲ್ಲಿ ಯಾವ ಭಾವವೂ ಸುಳಿಯಲಿಲ್ಲ. ನಾನು ಹಾಡುವುದನ್ನು ನಿಲ್ಲಿಸಿದಾಗ ಕನಸಿಗನಂತೆ ಶಾಂತವಾಗಿ ತಲೆಯಾಡಿಸಿದ. ನನಗೆ ಅಶ್ಚರ್ಯವಾಗುವಂತೆ ಇದ್ದಕ್ಕಿದ್ದಂತೆ ತನಗೆ ತಾನೇ ಹಾಡಲು ಶುರುಮಾಡಿದ. ಆತನೂ ಕೂಡ ನದಿಯನ್ನು ಕುರಿತು, ಕಣಿವೆಯಿಂದ ಪಯಣಿಸುವ ನದಿಯನ್ನು ಕುರಿತು ಹಾಡಿದ. ಆತನ ಹಾಡು ನನ್ನ ಹಾಡಿಗಿಂತ ಸುಮಧುರವಾಗಿತ್ತು, ಸುಂದರವಾಗಿತ್ತು, ಶಕ್ತಿಯುತವಾಗಿತ್ತು, ಅದರಲ್ಲಿ ಪ್ರತಿಯೊಂದು ಭಿನ್ನವಾಗಿ ವ್ಯಕ್ತವಾದುವು.

ಆತ ಹಾಡಿದ ನದಿ ಉಪದ್ರವ ಕೊಡುವ ಕಿರಾತನಂತೆ ಬೆಟ್ಟಗಳ ಮೇಲಿಂದ ಕಪ್ಪಾಗಿ ಭಯಂಕರವಾಗಿ ಧುಮುಕುತ್ತಿತ್ತು, ಮಸೆಯುವ ಹಲ್ಲುಗಳಿಂದ ಕಮಾನು ಸೇತುವೆಗಳ ಮೇಲೆ, ಕಲ್ಲು ಬಂಡೆಗಳ ಮೇಲೆ ಅಪ್ಪಳಿಸುತ್ತಿತ್ತು. ಹೊತ್ತೊಯ್ಯುವ ಪ್ರತಿದೋಣಿಯನ್ನು ರೋಸಿ ತಳ್ಳುತ್ತಿತ್ತು. ಅದರ ಅಲೆಗಳಲ್ಲಿ ಉದ್ದವಾದ ಹಸಿರು ತೊಂಡೆಗಳನ್ನು ನಗುತ್ತ ಮುಳುಗಿಸಿ ತೂಗುತ್ತಿತ್ತು.

ಈ ಯಾವುದೂ ನನ್ನನ್ನು ಸಂತಸಗೊಳಿಸಲಿಲ್ಲ. ಆದರೂ ಅದರ ಶಬ್ದ ಎಷ್ಟು ಆಕರ್ಷಕ ಹಾಗೂ ನಿಗೂಢವಾಗಿತ್ತೆಂದರೆ ನಾನು ಸಂಪೂರ್ಣವಾಗಿ ಗೊಂದಲಗೊಂಡೆ ಹಾಗೂ ಮನೋವ್ಯಥೆಯಿಂದ ಮೌನವಾದೆ. ಗೂಢ ವೃದ್ಧ ಚತುರ ಹಾಡುಗಾರ ತನ್ನ ಮೌನದಲ್ಲಿ ಹಾಡುವ ಹಾಡು ನಿಜವಾದರೆ ಈ ನನ್ನ ಹಾಡುಗಳಿಗೆ ಅರ್ಥವಿಲ್ಲ, ಅಲ್ಲವೆ ಅವು ಮಕ್ಕಳಾಟಿಕೆಯಾಗಿವೆ. ಈ ಪ್ರಪಂಚ ತನ್ನ ಆಳದಲ್ಲಿ ದೇವರ ಹೃದಯದಂತೆ ಪವಿತ್ರವಾದುದಲ್ಲ. ಅದು ಈಗ ಕಗ್ಗತ್ತಲಿಂದ, ನಿರಾಶೆಯಿಂದ, ಕೇಡಿನಿಂದ, ದುಃಖದಿಂದ ತುಂಬಿದೆ, ಕಾಡು ಮರ್ಮರಿಸಿದರೆ ಅದು ಸಂತೋಷದಿಂದಲ್ಲ, ಮಡುಗಟ್ಟಿದ ಸಂಕಟದಿಂದ.

ನಾವು ಹೀಗೆಯೇ ವಿಹರಿಸಿದೆವು. ಇಳಿ ಹೊತ್ತಾಗುತ್ತಾ ಬಂದಿತು. ನಾನು ಹಾಡಲು ಶುರು ಮಾಡಿದ ಪ್ರತಿ ಸಾರಿಯೂ ಅದು ಭರವಸೆಯನ್ನು ನೀಡಲಿಲ್ಲ. ನನ್ನ

ಸ್ವರ ತುಂಬ ಕ್ಷೀಣಿಸಿತು. ಆ ಅಪರಿಚಿತ ಹಾಡಿನ ಮೂಲಕ ನನಗೆ ಉತ್ತರಿಸಿದಾಗಲೆಲ್ಲ. ಅದು ಈ ವಿಶ್ವವನ್ನು ಮತ್ತಷ್ಟು ನಿಗೂಢವಾಗಿಸುತ್ತಿತ್ತು. ದುಃಖಮಯವಾಗಿಸುತ್ತಿತ್ತು. ಅದರಿಂದ ನಾನು ಹಿಂದೆಂದಿಗಿಂತಲೂ ದುಃಖಕ್ಕೆ ತೊಂದರೆಗೆ ಒಳಗಾದೆ.

ಹೃದಯಕ್ಕೆ ನೋವಾಯಿತು. ನಾನು ಗಿಡಮರಗಳೊಂದಿಗೆ ಅಥವಾ ಸುಂದರಿ ಬ್ರಿಗಿಟೀಯೊಂದಿಗೆ ಉಳಿಯದಿದ್ದುದಕ್ಕೆ ದುಃಖಿಸಿದೆ. ಮುಸುಕುತ್ತಿದ್ದ ಕತ್ತಲೆಯೊಂದಿಗೆ ನನ್ನನ್ನು ಸಮಾಧಾನ ಪಡಿಸಿಕೊಳ್ಳಲು ಎತ್ತರದ ಧ್ವನಿಯಲ್ಲಿ ಮತ್ತೆ ಹಾಡಲು ಶುರುಮಾಡಿದೆ. ಕೆಂಪಿನಿಂದ ರಂಗಾಗುತ್ತದ್ದ, ಸುಂದರ ಸಂಜೆಯ ನಡುವೆ ಬ್ರಿಗಿಟೀಯ ಮತ್ತು ಅವಳು ನೀಡಿದ್ದ ಸವಿಚುಂಬನ ಹಾಡನ್ನು ಹಾಡಿದೆ.

ನಸುಕು ಆವರಿಸಿತು. ನಾನು ಮೌನವಾದೆ. ದೋಣಿಯ ತುದಿಯಲ್ಲಿ ಕುಳಿತಿದ್ದ ವ್ಯಕ್ತಿ ಹಾಡಿದ. ಆತನೂ ಸಹ ಪ್ರೀತಿಯನ್ನು ಕುರಿತು, ಪ್ರೀತಿಯ ಆನಂದವನ್ನು ಕುರಿತು, ಕಂದು ಬಣ್ಣದ, ನೀಲಿ ಬಣ್ಣದ ಕಣ್ಣುಗಳನ್ನು ಕುರಿತು, ತೇವವಾದ ಕೆಂಪು ತುಟಿಗಳನ್ನು ಕುರಿತು ಹಾಡಿದ. ಕವಿಯುತ್ತಿದ್ದ ಕತ್ತಲೆಯನ್ನು ಕುರಿತು ಭಾವ ತುಂಬಿ ಹಾಡಿದ ಹಾಡು ಬಹು ಸುಂದರವಾಗಿತ್ತು, ಹಿತಕರವಾಗಿತ್ತು. ಆದರೆ ಅವನ ಆ ಹಾಡಿನಲ್ಲಿ ಪ್ರೀತಿಯೂ ಕತ್ತಲಾಯಿತು, ಭೀಕರವಾಯ್ತು. ಆ ಭಯಂಕರ ನಿಗೂಢದಲ್ಲಿ ಜನ ಗುಂಪುಗೂಡಿದರು. ಹುಚ್ಚರಾಗಿ ನೋವಿನಿಂದ ನರಳುತ್ತ ಒಬ್ಬರನ್ನೊಬ್ಬರು ಹಿಂಸಿಸಿಕೊಂಡರು.

ಕೇಳಿದ ನಾನು ಆಯಾಸದಿಂದ ಬಳಲಿದೆ. ದುಖ ನೋವುಗಳಲ್ಲಿ ದೀರ್ಘಕಾಲ ಪಯಣಿಸಿದಂತೆ ಅನುಭವವಾಯ್ತು. ಆ ಅಪರಿಚಿತ ವ್ಯಕ್ತಿಯಿಂದ ದುಃಖದ ಶೀತಲ ಪ್ರವಾಹ ನನ್ನನ್ನು ನಿರಂತರ ನಿಶ್ಯಕ್ತನನ್ನಾಗಿಸುತ್ತಿರುವಂತೆ ಭಾಸವಾಯ್ತು. ಅದು ನನ್ನ ಹೃದಯವನ್ನು ಪ್ರವೇಶಿಸಿತು.

ಕೊನೆಗೆ ನಾನು, ಹಾಗಿದ್ದರೆ ಜೀವನ ಎನ್ನುವುದು ಉತ್ತಮವೂ ಅಲ್ಲ, ಉತ್ಕ್ರುಷ್ಟವೂ ಅಲ್ಲ ಸಾವು ಎಂದು ಜೋರಾಗಿ ಕೂಗಿದೆ. ಓ ದಯಾಮಯ ಪ್ರಭುವೇ ನಾನು ನಿನ್ನನ್ನು ಪ್ರಾರ್ಥಿಸುವೆ, ಸಾವಿನ ಹಾಡನ್ನು ಹಾಡು.

ಆಗ ದೋಣಿಯ ತುದಿಯಲ್ಲಿ ಕುಳಿತಿದ್ದ ಮನುಷ್ಯ ಸಾವನ್ನು ಕುರಿತು ಹಾಡಿದ. ಆ ಹಾಡು ನಾನು ಈವರೆಗೆ ಕೇಳಿದ ಎಲ್ಲ ಹಾಡಿಗಿಂತ ಇಂಪಾಗಿತ್ತು. ಸಾವು ಕೂಡ ಉತ್ತಮವಾದುದೂ ಉತ್ಕೃಷ್ಟವಾದುದೂ ಆಗಿರಲಿಲ್ಲ. ಸಾವಿನಲ್ಲೂ ಕೂಡ ಸೌಖ್ಯ ಇರಲಿಲ್ಲ. ಸಾವು ಜೀವನವಾಗಿತ್ತು. ಜೀವನ ಸಾವಾಗಿತ್ತು. ಅವು ಅನಂತದಲ್ಲಿ ಹುಚ್ಚು ಪ್ರೀತಿಯ ಹೋರಾಟದಲ್ಲಿ ಪರಸ್ಪರ ಒಂದಾಗಿದ್ದುವು. ಇದೇ ಪ್ರಪಂಚದಲ್ಲಿ ಅಂತಿಮ ಪದ, ಅರ್ಥ. ಅಲ್ಲಿಂದ ಎಲ್ಲಾ ನೋವನ್ನು ಶಮನಗೊಳಿಸಬಲ್ಲ ಕಾಂತಿ ಹೊಮ್ಮುವುದು. ಅಲ್ಲಿಂದ ಸಂತೋಷ ಸೌಂದರ್ಯವನ್ನು ಕವಿವ ಕತ್ತಲ ಛಾಯೆ ಮೂಡುವುದು. ಈ ಕತ್ತಲೆಯಲ್ಲಿ ತೀವ್ರವಾಗಿದ್ದ ಅಪಾಯ ಮೌನವಾಗಿ ಸುಂದರವಾಗಿ ಆನಂದ ಸುಟ್ಟು ಹೋಗಿದೆ. ಈ ರಾತ್ರಿಯ ಒಳಗೆ ಪ್ರೀತಿ ಪ್ರಾಜ್ವಲ್ಯ ಮೌನವಾಗಿದೆ.

ನಾನು ಕಿವಿಗೊಟ್ಟು ಕೇಳಿದೆ, ನಿಶ್ಚಲವಾದೆ, ಆತನ ಪ್ರಭಾವದಿಂದ ಹೊರಗುಳಿವ ಶಕ್ತಿ ನನ್ನಲ್ಲಿರಲಿಲ್ಲ. ಆತನ ದೃಷ್ಟಿ ನನ್ನ ಮೇಲೆ ಶಾಂತವಾಗಿ ಒಂದು ರೀತಿಯ ಹುಚ್ಚು ಕರುಣೆಯಿಂದ ಕೇಂದ್ರೀಕೃತವಾಯ್ತು. ಆತನ ಬೂದು ಬಣ್ಣದ ಕಣ್ಣುಗಳು ಪ್ರಪಂಚದ ಸೌಂದರ್ಯದಿಂದ ಮತ್ತು ಕರುಣೆಯಿಂದ ತುಂಬಿದುವು. ಆತ ನನ್ನನ್ನು ನೋಡಿ ನಕ್ಕ. ಆಗ ನನ್ನ ಹೃದಯ ಹಿಡಿದು ನನ್ನ ದುಃಖವನ್ನು ತೋಡಿಕೊಂಡೆ. ''ಓ ನಿನ್ನಲ್ಲಿ ಬೇಡುವೆ, ಈ ಕತ್ತಲೆಯಲ್ಲಿ ನಾನು ಭೀತನಾಗಿದ್ದೇನೆ. ನಾನು ಬ್ರಿಗಿಟೀ ಎಲ್ಲಿರುವಳೋ ಅಥವಾ ನನ್ನ ತಂದೆಯ ಮನೆ ಎಲ್ಲಿರುವುದೋ ಅಲ್ಲಿಗೆ ಹಿಂದಿರುಗಬೇಕು''.

ಆ ಮನುಷ್ಯ ಎದ್ದು ನಿಂತು ರಾತ್ರಿಯೊಳಗೆ ತೀಕ್ಷ್ಣ ದೃಷ್ಟಿ ಹರಿಸಿದ, ಲಾಟೀನಿನ ಬೆಳಕಲ್ಲಿ ಅವನ ಮುಖದ ದೃಢಭಾವ ಪ್ರಕಾಶಿಸಿತು.

''ಹಿಂದಿರುಗಲು ಮಾರ್ಗವಿಲ್ಲ'' ಮೃದುವಾಗಿ ಆದರೆ ಅಷ್ಟೇ ಗಂಭೀರವಾಗಿ ಆತ ಹೇಳಿದ. '' ವಿಶ್ವದ ವಿಸ್ತಾರವನ್ನರಿಯಬೇಕಾದರೆ ಮುಂದೆ ಮುಂದೆ ಹೋಗಲು ತೊಡಗಬೇಕು. ನೀನು ಈಗಾಗಲೇ ಕಂದು ಬಣ್ಣದ ಕಣ್ಗಳ ಹುಡುಗಿಯಿಂದ ಅತ್ಯುತ್ತಮವಾದುದ್ದನ್ನು ಪಡೆದಿದ್ದಿಯೇ. ನೀನು ಆಕೆಯಿಂದ ತಂದೆಯಾದರೆ ಇನ್ನೂ ಉತ್ತಮವಾಗುತ್ತದೆ. ಆದರೆ ಅದಕ್ಕೆ ಚಿಂತಿಸಬೇಕಾಗಿಲ್ಲ. ನೀನು ಇಚ್ಛಿಸಿದ ಕಡೆಗೆ ಪ್ರಯಾಣಿಸು. ಈ ಚುಕ್ಕಾಣಿಯ ತುದಿಯಲ್ಲಿ ನಾನು ನಿನಗೆ ನನ್ನ ಜಾಗ ಬಿಟ್ಟು ಕೊಡುವೆ.''

ನಾನು ತೀವ್ರ ಹತಾಶೆಗೊಳಗಾದೆ. ಆದರೂ ಆತ ಸರಿ ಇರುವುದನ್ನು ಕಂಡುಕೊಂಡೆ. ತುಂಬು ಬಯಕೆಯಿಂದ ನನ್ನ ಮನೆಯನ್ನು , ಬ್ರಿಗಿಟೀಯನ್ನು, ಇತ್ತೀಚೆಗೆ ನನಗೆ ಹತ್ತಿರವಾಗಿ ಬೆಳಕಾದ ನನ್ನೆಲ್ಲವನ್ನು ಹಾಗೂ ಈಗ ಇಲ್ಲವಾದ ನನ್ನನ್ನು ಕುರಿತು ಚಿಂತಿಸಿದೆ. ನಾನೀಗ ಅಪರಿಚಿತ ವ್ಯಕ್ತಿಯ ಜಾಗವನ್ನು ಚುಕ್ಕಾಣಿಯ ಮನುಷ್ಯನಾಗಿ ತೆಗೆದುಕೊಳ್ಳಬೇಕು.

ಆದ್ದರಿಂದ ಮೌನವಾಗಿ ಎದ್ದೆ. ದೋಣಿಯ ಒಳಗೆ ಚುಕ್ಕಾಣಿಯ ಕಡೆ ಹೆಜ್ಜೆ ಹಾಕಿದೆ, ಆ ಮನುಷ್ಯ ಮೌನವಾಗಿ ನನ್ನ ಕಡೆ ಬಂದ. ನಾವಿಬ್ಬರೂ ಹೋಗುವಾಗ ಆತ ನನ್ನ ಮುಖವನ್ನು ದೃಷ್ಟಿಸಿ ನೋಡಿ ಲಾಟೀನನ್ನು ನನ್ನ ಕೈಗಿತ್ತ.

ಆದರೆ ನಾನು ಚುಕ್ಕಾಣಿಯಲ್ಲಿ ಕುಳಿತು ಲಾಟೀನನ್ನು ನನ್ನ ಪಕ್ಕ ಇರಿಸಿದಾಗ ದೋಣಿಯಲ್ಲಿ ನಾನೊಬ್ಬನೇ ಇದ್ದೆ. ಆ ಮನುಷ್ಯ ಇಲ್ಲದುದನ್ನು ಕಂಡು ನಡುಗಿದೆ. ಆದರೂ ನನಗೆ ಅಶ್ಚರ್ಯವಾಗಲಿಲ್ಲ. ನನಗೆ ಮೊದಲೆ ಅನಿಸಿತ್ತು. ಅಲೆದಾಡಿದ ಆ ಸುಂದರ ದಿನ ಬ್ರಿಗಿಟೀ, ತಂದೆ, ಮನೆ ಎಲ್ಲವೂ ಕೇವಲ ಕನಸಾಗಿತ್ತು. ನಾನು ವೃದ್ಧನಾಗಿ ದುಃಖತಪ್ತನಾಗಿ ಈ ಅಮೃತಮಯ ನದಿಯಲ್ಲಿ ಈಗಾಗಲೆ ನಿರಂತರ ಪಯಣಿಸುತ್ತಿದೆ.

ನಾನು ಮನುಷ್ಯನನ್ನು ಕರೆಯಬಾರದು ಎಂದು ತಿಳಿದಿದ್ದೆ, ಸತ್ಯದ ಅರಿವು ಶೀತಲವಾಗಿ ನನ್ನನ್ನು ಆವರಿಸಿತು.

ನಾನು ಅನುಮಾನಿಸಿದ್ದನ್ನು ಸ್ಪಷ್ಟ ಪಡಿಸಿಕೊಳ್ಳುವ ಸಲುವಾಗಿ ನೀರಿನ ಕಡೆ ಬಾಗಿ ಲಾಟೀನನ್ನು ಎತ್ತಿ ಹಿಡಿದೆ. ಆ ಕಪ್ಪುನೀರಿನ ಕನ್ನಡಿಯಲ್ಲಿ ಸಮಾನವಾದ ಏಕಾಗ್ರತೆಯ, ಗಂಭೀರ ಮುಖಮುದ್ರೆಯ, ಬೂದು ಕಣ್ಣಿನ ಹಳೆಯ ಪರಿಚಿತ ಮುಖ ಬಂದು ನನ್ನತ್ತ ದೃಷ್ಟಿಸಿತು. ಅದು ನಾನಾಗಿದ್ದೆ.

ಯಾವ ದಾರಿಯೂ ನನ್ನನ್ನು ಹಿಂದಕ್ಕೆ ಕರೆದೊಯ್ಯದ ಕಾರಣ ಕಪ್ಪುನೀರಿನ ಮೇಲೆ ರಾತ್ರಿಯ ಹೃದಯದಾಳಕ್ಕೆ ನಾನು ಪಯಣಿಸಿದೆ.

ಅಗಸ್ಟಸ್

ಮೊಸಾಕೆಸ್ಟೆಸ್‌ನಲ್ಲಿ ವಾಸಿಸುತ್ತಿದ್ದ ತರುಣ ಹೆಂಗಸು ತನ್ನ ಮದುವೆಯ ಕೆಲ ದಿನಗಳಲ್ಲೇ ಅಪಘಾತದಲ್ಲಿ ಗಂಡನನ್ನು ಕಳೆದುಕೊಂಡಳು. ಈಗ ಆಕೆ ತನ್ನ ಪುಟ್ಟ ಕೋಣೆಯಲ್ಲಿ ಕುಳಿತು ಹುಟ್ಟುವ ಮೊದಲೇ ತಂದೆಯನ್ನು ಕಳೆದುಕೊಂಡ ಮಗುವಿನ ಆಗಮನದ ನಿರೀಕ್ಷೆಯಲ್ಲಿದ್ದಳು. ಅವಳ ಒಂಟಿತನ ಆಕೆಯ ಆಲೋಚನೆಗಳನ್ನೆಲ್ಲ ಆ ಮಗುವಿನ ಮೇಲೆ ಕೇಂದ್ರೀಕರಿಸಿತ್ತು. ಆಕೆ ಆ ಪುಟ್ಟ ಮಗುವಿಗಾಗಿ ಇಚ್ಛಿಸಿ ಸುಂದರವಾದ, ಭವ್ಯವಾದ, ಅಸೂಯೆ ಹುಟ್ಟಿಸುವ ಎಲ್ಲವನ್ನು ಯೋಚಿಸಿ ಕನಸು ಕಂಡಳು. ಗಾಜಿನ ಕಿಟಕಿಗಳಿಂದ ಕೂಡಿದ್ದ ಕಲ್ಲಿನ ಮನೆ, ಹೂದೋಟದ ಕಾರಂಜಿ, ಹುಟ್ಟುವ ಪುಟ್ಟ ಕಂದನಿಗೆ ಸಾಕು ಎಂದುಕೊಂಡಳು. ಮಗು ಬೆಳೆದು ಪ್ರೊಫೆಸರ್ ಅಥವಾ ರಾಜನಾಗಬೇಕೆಂಬ ಬಹು ಎತ್ತರದ ಆಶಾಗೋಪುರವನ್ನ ಆಕೆಯ ಕಣ್ಣುಗಳು ತುಂಬಿಕೊಂಡಿದ್ದವು.

ಈ ಬಡ ಫ್ರಾ ಎಲಿಜಬೆತಳ ಪಕ್ಕದ ಮನೆಯಲ್ಲಿ ಒಬ್ಬ ವಯಸ್ಸಾದ ಮನುಷ್ಯ ವಾಸಿಸುತ್ತಿದ್ದ. ಅವನ ಕೂದಲು ಅಲ್ಲಲ್ಲಿ ನೆರೆತಿದ್ದವು. ಆಗಾಗ್ಗೆ ಪ್ರವಾಸ ಮಾಡುವುದು ಅವನ ಹವ್ಯಾಸವಾಗಿತ್ತು. ಹಾಗೆ ಹೋಗುವಾಗ ಆತ ಕುಚ್ಚಿನಿಂದ ಕೂಡಿದ್ದ ಟೋಪಿ ಹಾಗೂ ತಿಮಿಂಗಿಲದಂತಿದ್ದ ಹಳೆಯ ಹಸಿರು ಛತ್ರಿ ಕೊಂಡೊಯ್ಯುತ್ತಿದ್ದ. ಮಕ್ಕಳು ಆತನನ್ನು ಕಂಡರೆ ಹೆದರುತ್ತಿದ್ದರು. ವಯಸ್ಸಾದವರು ತಮ್ಮತಮ್ಮಲ್ಲಿ ಹೀಗೆ ಹಳೆಯ ಮಾದರಿಯ ಜೀವನ ಮಾಡಲು ಆತನಲ್ಲಿ ಏನಾದರು ಬಲವಾದ ಕಾರಣವಿರಬೇಕು ಎಂದು ಮಾತನಾಡಿಕೊಳ್ಳುತ್ತಿದ್ದರು. ಬಹಳ ಸಮಯದವರೆಗೆ ಆತ ಯಾರಿಗೂ ಕಾಣಿಸಿಕೊಳ್ಳುತ್ತಿರಲಿಲ್ಲ. ಕೆಲವೊಮ್ಮೆ ಅನೇಕ ಸಣ್ಣ, ಸೂಕ್ಷ್ಮ ವಾದ್ಯಗಳ ಸಂಗೀತ ಸಂಜೆಯ ವೇಳೆಯಲ್ಲಿ ಆತನ ಶಿಥಿಲವಾದ ಪುಟ್ಟಮನೆಯಿಂದ ಮಂದವಾಗಿ ತೇಲಿಬರುತ್ತಿತ್ತು. ತಮ್ಮ ತಾಯಂದಿರ ಜೊತೆ ಹೋಗುತ್ತಿದ್ದ ಮಕ್ಕಳು ದೇವದೂತ ಅಥವಾ ಯಕ್ಷಿಣಿಯರು ಹಾಡುತ್ತಿದ್ದಾರೆಯೆ? ಎಂದು ಕೇಳುತ್ತಿದ್ದರು. ಆದರೆ ಅಂತಹ ಯಾವುದೇ ಸಂಗತಿಯೂ ಇಲ್ಲವೆಂದು ತಿಳಿದಿದ್ದ ಅವರ ತಾಯಂದಿರು '' ಇಲ್ಲ ಇಲ್ಲ ಅದು ಸಂಗೀತದ ಪೆಟ್ಟಿಗೆಯಿರಬೇಕು'' ಎಂದು ಮನವರಿಕೆ ಮಾಡುತ್ತಿದ್ದರು.

ಹೆರ್ ಬಿನ್ಸ್‌ವಾಂಗ್ ಎಂದು ನೆರೆಹೊರೆಯವರಲ್ಲಿ ಪರಿಚಿತನಾಗಿದ್ದ ಈ ಕುಳ್ಳ ಮನುಷ್ಯ, ಫ್ರಾ ಎಲಿಜಬೆತಳೊಂದಿಗೆ ವಿಲಕ್ಷಣ ರೀತಿಯ ಗೆಳೆತನ ಬೆಳೆಸಿಕೊಂಡಿದ್ದ. ನಿಜಸಂಗತಿಯೆಂದರೆ, ಅವರು ಒಬ್ಬರಿಗೊಬ್ಬರು ಮಾತನಾಡುತ್ತಿರಲಿಲ್ಲ. ಆದರೆ ಆತ ಆಕೆಯ ಮನೆಯ ಕಿಟಕಿಯ ಮುಂದೆ ಹೋಗುವಾಗಲೆಲ್ಲ ಸ್ನೇಹದಿಂದ ಬಾಗಿ ನಮಸ್ಕರಿಸುತ್ತಿದ್ದ. ಆಕೆಯೂ ಅದನ್ನು ಗೌರವದಿಂದಲೇ ಸ್ವಾಗತಿಸಿ, ಗೌರವ ಸೂಚಿಸುತ್ತಿದ್ದಳು. ಅದನ್ನು ಆಕೆ ಇಚ್ಛಿಸಿದ್ದಳು. ಒಂದು ವೇಳೆ ವಿಷಯಗಳೇನಾದರೂ ಕೈಮೀರಿ ಹೋಗುತ್ತಿದ್ದರೆ, ನಾನು ಖಂಡಿತವಾಗಿ ನನ್ನ ನೆರೆಯವರಿಗೆ ಸಹಾಯ ಮಾಡುತ್ತೇನೆ ಎಂದು ಇಬ್ಬರೂ ಆಲೋಚಿಸಿದ್ದರು. ಸೂರ್ಯ ಪಶ್ಚಿಮ ದಿಗಂತದಲ್ಲಿ ಮುಳುಗುವಾಗ ಫ್ರಾ ಎಲಿಜಬೆತಳು ಕಿಟಕಿಯ ಬದಿಯಲ್ಲಿ ಏಕಾಂಗಿಯಾಗಿ ಕುಳಿತು ತನ್ನ ಪ್ರೀತಿಯ ಪ್ರಿಯಕರನನ್ನು ನೆನೆದು ದುಃಖಿಸುತ್ತಿದ್ದಳು. ಇಲ್ಲವೇ ಅವಳ ಪುಟ್ಟ ಕಂದನನ್ನು ನೆನೆದು ಅದರ ಸುತ್ತ ಕನಸನ್ನು ಹೆಣೆಯುತ್ತಿದ್ದಳು. ಆ ಸಮಯದಲ್ಲಿ ಹೆರ್ ಬಿನ್ಸ್‌ವಾಂಗ್ ಸೌಮ್ಯವಾಗಿ ತನ್ನ ಮನೆಯ ಕಿಟಕಿಯನ್ನು ತೆರೆಯುತ್ತಿದ್ದ. ಅವನ ಕತ್ತಲ ಕೋಣೆಯಿಂದ ಆಕಾಶವನ್ನು ಸೀಳಿ ಬಂದಂತೆ ತೋರುವ ಚಂದ್ರ ಬಿಂಬದಂತೆ ಹೊಳೆವ ಮೃದುವಾದ ಮುದನೀಡುವ ಸಂಗೀತ ಹರಿದು ಬರುತ್ತಿತ್ತು. ಫ್ರಾ ಎಲಿಜಬೆತಳ ವಿಷಯ ಹೇಳಬೇಕೆಂದರೆ, ಅವಳು ಅವನ ಮನೆಯ ಹಿಂದಲ ಕಿಟಕಿಯಲ್ಲಿ ಬೆಳೆಯುತ್ತಿದ್ದ ಜರೇನಿಯಂ ಗಿಡವನ್ನು ಆರೈಕೆ ಮಾಡುತ್ತಿದ್ದಳು. ಆತ ಯಾವಾಗಲೂ ಅವುಗಳಿಗೆ ನೀರೆರೆಯಲು ಮರೆಯುತ್ತಿದ್ದ. ಆದರೂ ಪ್ರತಿದಿನ ಬೆಳಿಗ್ಗೆ ಆಕೆ ಅವುಗಳಿಗೆ ನೀರು ಹಾಕಿ ಆರೈಕೆ ಮಾಡುತ್ತಿದ್ದುದರಿಂದ ಎಲೆಗಳು ಬತ್ತಿಹೋಗದೆ ಸದಾ ಹಸಿರಿನಿಂದ ಕಂಗೊಳಿಸುತ್ತ ಗೊಂಚಲು ಹೂಗಳಿಂದ ತುಂಬಿರುತ್ತಿತ್ತು.

ಶೀತಲಗಾಳಿಯಿಂದ ಕೂಡಿದ ಶರತ್ಕಾಲದ ಒಂದು ದಿನ ಮೊಸಾಕೆಸ್ಟ್ರೆಸ್ ಹಳ್ಳಿಯಲ್ಲಿ ಯಾರೂ ಓಡಾಡುತ್ತಿರಲಿಲ್ಲ. ತನ್ನ ಹೆರಿಗೆಯ ನೋವು ಜಾಸ್ತಿ ಯಾಗುತ್ತಿದ್ದುದನ್ನು ಅರಿತ ಆ ಬಡಹೆಂಗಸು ತಾನು ಒಂಟಿಯಾಗಿರುವುದನ್ನು ನೆನೆದು ಮತ್ತಷ್ಟು ಆತಂಕಗೊಂಡಳು. ಆದರೆ ರಾತ್ರಿಯಾದಂತೆ ಕೈಯಲ್ಲಿ ದೀಪ ಹಿಡಿದ ಮಯಸ್ಸಾದ ಹೆಂಗಸೊಬ್ಬಳು ಮನೆಯನ್ನು ಪ್ರವೇಶಿಸಿದಳು. ನೀರನ್ನು ಕಾಯಿಸಿ, ಮಗು ಪ್ರಪಂಚಕ್ಕೆ ಕಾಲಿಡುವ ಮುನ್ನ ಮಾಡುವಂತಹ ಎಲ್ಲ ಅಗತ್ಯ ಕಾರ್ಯಗಳನ್ನು ನೆರವೇರಿಸಿದಳು. ಆ ಮೌನದಲ್ಲಿ ಫ್ರಾ ಎಲಿಜಬೆತ್ ತನಗೆ ಆರೈಕೆ ಮಾಡಲು

ಅವಕಾಶವಿತ್ತಳು. ಶುಭ್ರವಾದ, ದಪ್ಪಬಟ್ಟೆಯಿಂದ ಸುತ್ತಿದ್ದ, ಪ್ರಪಂಚದಲ್ಲಿ ತನ್ನ ಮೊದಲ ಸುಖನಿದ್ರೆ ಮಾಡುತ್ತಿದ್ದ ಪುಟ್ಟಮಗುವನ್ನು ನೋಡಿದಾಗ ಆಕೆ ವಯಸ್ಸಾದ ಹೆಂಗಸನ್ನು ಯಾವಾಗ ಬಂದೆ ಎಂದು ಕೇಳಿದಳು.

ಆ ಹೆಂಗಸು ''ಹೆರ್ ಬಿನ್ಸ್‌ವಾಂಗ್ ತನ್ನನ್ನು ಕಳುಹಿಸಿದ'' ಎಂದಳು. ಬಳಲಿದ್ದ ಆ ತಾಯಿ ನಿದ್ರೆ ಹೋದಳು. ಆಕೆ ಬೆಳಿಗ್ಗೆ ಎದ್ದಾಗ ಕಾದ ಹಾಲು ಅವಳಿಗಾಗಿ ಕಾದಿತ್ತು. ಕೊಠಡಿಯೆಲ್ಲ ಅಚ್ಚುಕಟ್ಟಾಗಿ ಸಜ್ಜಾಗಿತ್ತು. ಪಕ್ಕದಲ್ಲಿ ಮಲಗಿದ್ದ ಅವಳ ಪುಟ್ಟಮಗು ಹಸಿವಿನಿಂದ ಅಳುತ್ತಿತ್ತು. ವಯಸ್ಸಾದ ಹೆಂಗಸು ಹೊರಟು ಹೋಗಿದ್ದಳು. ಫ್ರಾ ಎಲಿಜಬೆತ್ ಮುದ್ದಾದ ಮತ್ತು ದೃಢವಾದ ತನ್ನ ಮಗುವನ್ನು ಎದೆಗವಚಿಕೊಂಡು ಆನಂದಿಸಿದಳು. ಆ ಮುದ್ದು ಮಗುವನ್ನು ನೋಡಲು ಅದೃಷ್ಟವಿರದ ಅದರ ತಂದೆಯನ್ನು ನೆನೆದು ಅವಳ ಕಣ್ಣುಗಳು ತೇವಗೊಂಡವು. ಆಕೆ ಆ ಪುಟ್ಟ ಮಗುವನ್ನು ಅಪ್ಪಿಕೊಂಡು ಅದನ್ನು ಮತ್ತೊಮ್ಮೆ ನೋಡಿ ಸಂತೋಷಪಟ್ಟಳು. ಮಲಗಿದ್ದ ಮಗುವಿನೊಂದಿಗೆ ನಿದ್ದೆ ಹೋದಳು. ಅವಳು ಎದ್ದಾಗ ಸಾಕಷ್ಟು ಹಾಲು ತಯಾರಿಸಿದ ಸೂಪ್ ಅಲ್ಲಿತ್ತು. ಅಲ್ಲದೆ ಶುಭ್ರವಾದ ಬಟ್ಟೆಯಿಂದ ಮಗು ಸುತ್ತಲ್ಪಟ್ಟಿತ್ತು.

ಬಹುಬೇಗನೆ ಆ ತಾಯಿಯು ಆರೋಗ್ಯವಂತಳಾಗಿ ಮತ್ತು ದೃಢವಾಗಿ, ತನ್ನ ಪುಟ್ಟ ಅಗಸ್ಟಸ್ ಮತ್ತು ತನ್ನ ಆರೈಕೆಯನ್ನು ತಾನೆ ಮಾಡಿಕೊಳ್ಳಲಾರಂಭಿಸಿದಳು. ಮಗುವಿಗೆ ನಾಮಕರಣ ಮಾಡಬೇಕಾಗಿರುವುದನ್ನು, ಅಲ್ಲದೆ ಅವನಿಗೆ ಧರ್ಮೀಯ ಪಿತ ಇಲ್ಲದಿರುವುದನ್ನೂ ಆಕೆ ಅರಿತಳು. ಸಂಜೆಯ ಸೂರ್ಯನ ಹೊಂಬೆಳಕು ಭೂಮಿಯನ್ನೆಲ್ಲ ಆವರಿಸುತ್ತಿದ್ದಾಗ ಮತ್ತೊಮ್ಮೆ ಪಕ್ಕದ ಪುಟ್ಟ ಮನೆಯಿಂದ ಸುಮಧುರ ಸಂಗೀತ ಹಾಯ್ದು ಬರಲಾರಂಭಿಸಿತು. ಆಕೆ ಹೆರ್ ಬಿನ್ಸ್‌ವಾಂಗ್‌ನ ಮನೆಗೆ ಹೋದಳು. ಅಂಜುತ್ತ ಬಾಗಿಲು ತಟ್ಟಿದ ಅವಳನ್ನು 'ಒಳಗೆ ಬನ್ನಿ!' ಎಂಬ ಪ್ರೀತಿಯ ಧ್ವನಿ ಸ್ವಾಗತಿಸಿತು. ತಕ್ಷಣ ಸಂಗೀತ ನಿಂತಿತು. ಆ ಕೋಣೆಯಲ್ಲಿ ಪುಟ್ಟದಾದ ಹಳೆಯ ಮೇಜಿನ ಮೇಲೆ ದೀಪ ಮತ್ತು ಪುಸ್ತಕವಿತ್ತು. ಉಳಿದಂತೆ ಸಾಮಾನ್ಯವಾಗಿ ಎಲ್ಲ ವಸ್ತುಗಳು ಆಯಾಯ ಸ್ಥಳದಲ್ಲಿದ್ದವು.

'ನಾನು ನಿಮಗೆ ಕೃತಜ್ಞತೆಗಳನ್ನು ಸಲ್ಲಿಸಲು ಬಂದಿದ್ದೇನೆ' ಎಂದಳು ಫ್ರಾ ಎಲಿಜಬೆತ್. 'ಏಕೆಂದರೆ ನೀವು ಒಳ್ಳೆಯ ಹೆಂಗಸನ್ನು ನನ್ನಲ್ಲಿಗೆ ಕಳುಹಿಸಿದ್ದಿರಿ. ನಾನು

ಎಂದಿನಂತೆ ಕೆಲಸ ಮಾಡಲು ಪ್ರಾರಂಭಿಸಿ ಗಳಿಸುವಂತಾದಾಗ ಆಕೆಯನ್ನು ಸತ್ಕರಿಸುವೆ. ನನಗೆ ಈಗ ಮತ್ತೊಂದು ಚಿಂತೆ ಪ್ರಾರಂಭವಾಗಿದೆ. ಏಕೆಂದರೆ ಮಗುವಿನ ತಂದೆಯ ನಂತರ ಅದನ್ನು ಅಗಸ್ಟಸ್ ಎಂಬ ಹೆಸರಿನಿಂದ ನಾಮಕರಣ ಮಾಡಬೇಕಾಗಿದೆ. ಆದರೆ ನನಗೆ ಬೇರೆ ಯಾರೂ ಪರಿಚಯವಿಲ್ಲ. ಅಲ್ಲದೆ ಅವನಿಗೆ ಧರ್ಮೀಯ ಪಿತನಿಲ್ಲ'.

ತನ್ನ ಬಿಳಿಯ ಗಡ್ಡವನ್ನು ನೇವರಿಸುತ್ತ 'ಹೌದು, ಈ ಕುರಿತು ನಾನೂ ಆಲೋಚಿಸಿದೆ' ಎಂದ ಆತ. 'ದಯಾಪರನಾದ ಶ್ರೀಮಂತ ಧರ್ಮೀಯಪಿತನಿದ್ದಿದ್ದರೆ ಮಗನಿಗೆ ಎಂತಹ ಕಷ್ಟದ ಸಮಯವಲ್ಲಾದರೂ ಪೋಷಿಸಲು ಸರಿಯಾಗುತ್ತಿತ್ತು. ಆದರೆ ನಾನು ಕೆಲವೇ ಗೆಳೆಯರನ್ನು ಬಲ್ಲ ವಯಸ್ಸಾದ ಒಬ್ಬಂಟಿ. ಆದ್ದರಿಂದ ನಿಮ್ಮ ಒಪ್ಪಿಗೆ ಇದ್ದರೆ ನನ್ನನ್ನು ಹೊರತುಪಡಿಸಿ ಬೇರೆ ಯಾರ ಹೆಸರನ್ನೂ ಸೂಚಿಸಲು ನನಗೆ ಸಾಧ್ಯವಿಲ್ಲ'.

ಆತನ ಈ ಮಾತುಗಳು ಬಡವೆಯಾದ ಆಕೆಯನ್ನು ಹರ್ಷಗೊಳಿಸಿದವು. ಉತ್ಸಾಹದಿಂದ ಒಪ್ಪಿಕೊಂಡು ಆಕೆ ಅವನನ್ನು ಅಭಿನಂದಿಸಿದಳು. ಭಾನುವಾರ ಮಗುವನ್ನು ಚರ್ಚಿಗೆ ಕೊಂಡೊಯ್ದು ಪವಿತ್ರ ಸ್ನಾನ ಮಾಡಿಸಿದರು. ಆಗ ಅಲ್ಲಿಗೆ ಆ ವೃದ್ಧ ಹೆಂಗಸು ಬಂದು ಮಗುವಿಗೆ ಅದೃಷ್ಟದ ಕಾಣಿಕೆಯಿತ್ತಳು. ಫ್ರಾ ಎಲಿಜಬೆತ್ ಅದನ್ನು ಸ್ವೀಕರಿಸಲು ಇಚ್ಛಿಸದಿದ್ದಾಗ ವೃದ್ಧ ಹೆಂಗಸು ಹೇಳಿದಳು. '' ಇಲ್ಲ, ಇದನ್ನು ತೆಗೆದುಕೋ, ನನಗೆ ವಯಸ್ಸಾಗಿದೆ. ಅಲ್ಲದೆ ನನಗೆ ಬೇಕಾದ್ದೆಲ್ಲ ಇದೆ. ಬಹುಶಃ ನಾನಿತ್ತ ಕಾಣಿಕೆ ಅವನಿಗೆ ಅದೃಷ್ಟವನ್ನು ತರಬಹುದು. ಹಿಂದೊಮ್ಮೆ ಹೆರ್ ಬಿನ್ಸ್‌ವಾಂಗ್‌ಗೆ ಸಹಾಯ ಮಾಡಲು ಸಂತಸಪಟ್ಟಿದ್ದೆ. ನಾವು ಹಳೆಯ ಸ್ನೇಹಿತರು.''

ಫ್ರಾ ಎಲಿಜಬೆತಳ ಮನೆಗೆ ಅವರು ಜೊತೆಯಲ್ಲಿ ಬಂದರು. ಆಕೆ ಅತಿಥಿಗಳಿಗೆ ಕಾಫಿ ಮಾಡಿದಳು. ಹೆರ್ ಬಿನ್ಸ್‌ವಾಂಗ್ ಕೇಕ್ ತಂದಿದ್ದರಿಂದ ಆ ದಿನ ನಿಜವಾದ ಪವಿತ್ರ ಸ್ನಾನದ ಹಬ್ಬವಾಯಿತು. ಅವರು ಊಟಮಾಡಿ ಚಹಾ ಕುಡಿಯುವ ವೇಳೆಗೆ ಪುಟ್ಟ ಮಗು ನಿದ್ದೆ ಹೋಗಿತ್ತು. ಆಗ ಆ ವಯಸ್ಸಾದ ಮನುಷ್ಯ ಸ್ವಲ್ಪ ಸಂಕೋಚದಿಂದಲೇ, 'ನಾನು ಈಗ ಈ ಪುಟ್ಟ ಅಗಸ್ಟಸ್‌ನ ಧರ್ಮೀಯ ಪಿತ. ನಾನು ಅವನಿಗೆ ರಾಜರ ಅರಮನೆಯನ್ನೂ, ಚೀಲದ ತುಂಬ ಚಿನ್ನದ ಗಟ್ಟಿಗಳನ್ನು ಉಡುಗೊರೆಯಾಗಿ ಕೊಡ ಬೇಕೆಂದಿ

ದ್ದೇನೆ. ಆದರೆ ಅವು ನನ್ನಲ್ಲಿರದ ವಸ್ತುಗಳು. ನಾನು ನಿನ್ನ ನೆರೆಯವನಾಗಿ ಮಗುವಿಗೆ ಮತ್ತೊಂದು ಅದೃಷ್ಟದ ಕಾಣಿಕೆ ಸೇರಿಸಬಹುದು. ಏನಾದರಾಗಲಿ ನಾನು ಅವನಿಗಾಗಿ ಏನೇನು ಮಾಡಬೇಕೋ ಅವನ್ನೆಲ್ಲ ಮಾಡುತ್ತೇನೆ. ಫ್ರಾ ಎಲಿಜಬೆತ್ ಎಲ್ಲರಂತೆ ಸಾಮಾನ್ಯವಾಗಿ ನೀನೂ ಸಹ ನಿನ್ನ ಪುಟ್ಟ ಮಗ ಎಲ್ಲ ವಿಧದ ಉತ್ತಮ ಮತ್ತು ಸುಂದರ ವಸ್ತುಗಳನ್ನೂ ಹೊಂದಿರಬೇಕೆಂದು ಇಚ್ಛಿಸುತ್ತೀಯೆ. ನೀನು ಈಗ ಗಮನವಿಟ್ಟು ಆತನಿಗೆ ಯಾವುದು ಒಳ್ಳೆಯದು ಎಂಬುದನ್ನು ಕುರಿತು ಯೋಚಿಸು, ನಾನು ಅದನ್ನು ಸಾಕಾರಗೊಳ್ಳುವಂತೆ ಮಾಡುತ್ತೇನೆ. ಆ ಪುಟ್ಟ ಮಗುವಿಗೆ ನೀನು ಇಚ್ಛಿಸುವ ಯಾವುದೇ ಒಂದನ್ನು ಹರಸಿಕೋ, ಆದರೆ ಒಂದೇ ಒಂದನ್ನು ಆಯ್ಕೆಮಾಡು. ಸರಿಯಾಗಿ ಯೋಚಿಸು, ಈ ಸಂಜೆ ನೀನು ನನ್ನ ಪುಟ್ಟ ಸಂಗೀತ ಪೆಟ್ಟಿಗೆಯ ವಾದ್ಯವನ್ನು ಆಲಿಸುವಾಗ ಆ ಪುಟ್ಟ ಮಗುವಿನ ಎಡಕಿವಿಯಲ್ಲಿ ಆ ಹಾರೈಕೆಯನ್ನು ಉಸುರು. ಅದು ಈಡೇರುತ್ತದೆ.'

ನಂತರ ಆತ ಅಲ್ಲಿಂದ ವೇಗವಾಗಿ ಹೊರನಡೆದ. ಪಕ್ಕದ ಮನೆಯ ಹೆಂಗಸು ಜೊತೆಯಲ್ಲಿ ಹೋದಳು. ಒಂಟಿಯಾದ ಫ್ರಾ ಎಲಿಜಬೆತ್ ಮೂಕಳಾದಳು. ಅದೃಷ್ಟದ ಕಾಣಿಕೆ ತೊಟ್ಟಿಲಲ್ಲಿ ಇರದಿದ್ದರೆ ಹಾಗೂ ಮೇಜಿನ ಮೇಲೆ ಕೇಕ್ ಇರದಿದ್ದರೆ ಈ ಎಲ್ಲವೂ ಒಂದು ಕನಸು ಎಂದು ಭಾವಿಸುತ್ತಿದ್ದಳು. ಅವಳು ಮೆಟ್ಟಿಲಿನ ಪಕ್ಕದಲ್ಲಿ ಕೆಳಗೆ ಕುಳಿತಳು. ಮನದಲ್ಲಿ ಧ್ಯಾನಿಸುತ್ತ, ಸುಂದರ ಕಲ್ಪನೆಗಳನ್ನು ಹೆಣೆಯುತ್ತ ತೊಟ್ಟಿಲನ್ನು ತೂಗಿದಳು. ಮೊದಲಿಗೆ ತನ್ನ ಮಗ ಶ್ರೀಮಂತನಾಗಬೇಕೆಂದೂ, ನಂತರ ಸುಂದರನಾಗಬೇಕೆಂದು, ನಂತರ ಅಸಾಧಾರಣವಾಗಿ ಬಲಿಷ್ಟನಾಗಬೇಕೆಂದೂ, ನಂತರ ಬುದ್ಧಿವಂತನೂ ಚತುರನೂ ಆಗಬೇಕೆಂದುಕೊಂಡಳು. ಆದರೆ ಪ್ರತಿಯೊಂದು ಆಯ್ಕೆಯಲ್ಲೂ ಆಕೆ ಹಿಂಜರಿಯುತ್ತಿದ್ದಳು. ಕಡೆಗೆ, ಇದೆಲ್ಲ ವಯಸ್ಸಾದ ಕುಳ್ಳಮನುಷ್ಯನ ತಮಾಷೆ ಯಿರಬೇಕೆಂದು ತೀರ್ಮಾನಿಸಿದಳು.

ಅಷ್ಟು ಹೊತ್ತಿಗೆ ಆಗಲೆ ಕತ್ತಲು ಹಬ್ಬಿತ್ತು. ಅವಳು ತೊಟ್ಟಿಲ ಬಳಿಯಲ್ಲಿ ಕುಳಿತು ಪೂರ್ಣ ನಿದ್ದೆ ಹೋಗಿದ್ದಳು. ಬಂದವರಿಗೆ ಆತಿಥ್ಯ ಮಾಡಿ ಪುಟ್ಟ ಕಂದನಿಗಾಗಿ ಹಲವಾರು ಆರೈಕೆಗಳನ್ನು ಯೋಚಿಸಿ ಸೋತು ಹೊಗಿದ್ದಳು. ತಕ್ಷಣವೆ ಪಕ್ಕದ ಮನೆಯಿಂದ ಆವರೆಗೆ ಕೇಳದಿದ್ದ ಮಂದಗತಿಯಲ್ಲಿ ಸೂಕ್ಷ್ಮವಾಗಿ ಹರಿದು ಬರುತ್ತಿದ್ದ ನವಿರಾದ ಸಂಗೀತವನ್ನು ಆಲಿಸಿದಳು. ಆ ಶಬ್ದ ಕೇಳಿ ಯೋಚಿಸಲಾರಂಭಿಸಿದಳು. ಈಗ ಮತ್ತೊಮ್ಮೆ ಆಕೆ ತನ್ನ ಪಕ್ಕದ ಮನೆಯ ಹೆರ್ ಬಿನ್ಸ್‌ವಾಂಗ್‌ನನ್ನು ಮತ್ತು ಧರ್ಮೀಯ

ಪಿತನಾಗಿ ಆತನ ಉಡುಗೊರೆಯನ್ನೂ ನಂಬಿದ್ದಳು. ಆಕೆ ಹೆಚ್ಚು ಹೆಚ್ಚು ಯೋಚಿಸಿದಾಗಲೂ ಹಾರೈಸಬೇಕೆಂದು ಚಿಂತಿಸಿದಾಗಲೂ ಮನಸ್ಸು ಗಲಿಬಿಲಿಗೊಳ್ಳುತ್ತಿತ್ತು. ಯಾವುದರ ಬಗ್ಗೆಯೂ ತೀರ್ಮಾನಕ್ಕೆ ಬರಲಾಗುತ್ತಿರಲಿಲ್ಲ. ಆಕೆ ಹೆಚ್ಚು ಯಾತನೆಯನ್ನನುಭವಿಸಿದಳು. ಕಣ್ಣುಗಳಿಂದ ನೀರು ಹರಿಯಿತು. ಸಂಗೀತ ಹೆಚ್ಚು ಮೃದುವೂ, ಸೂಕ್ಷ್ಮವೂ ಆಗಲಾರಂಭಿಸಿತು. ತಕ್ಷಣವೆ ತನ್ನ ಹಾರೈಕೆಯನ್ನು ಹೇಳದಿದ್ದರೆ ಅದು ಕೈಮೀರುತ್ತದೆ ಎಂಬುದನ್ನು ಗಮನಿಸಿದಳು.

ಆಕೆ ನಿಟ್ಟುಸಿರು ಬಿಟ್ಟು ಮಗುವಿನತ್ತ ಬಾಗಿ ಆತನ ಎಡಕಿವಿಯಲ್ಲಿ 'ನನ್ನ ಪುಟ್ಟ ಮಗುವೆ ನಾನು ನಿನಗೆ ಹಾರೈಸುತ್ತೇನೆ. ನಾನು ನಿನಗೆ ಹಾರೈಸುತ್ತೇನೆ' ಎಂದಳು. ಇಂಪಾದ ಸಂಗೀತ ತೀರ ಸೂಕ್ಷ್ಮವಾಗತೊಡಗಿದಂತೆ ಆತಂಕಗೊಂಡು ತಕ್ಷಣವೆ, 'ಎಲ್ಲರೂ ನಿನ್ನನ್ನೂ ಪ್ರೀತಿಸಲಿ ಎಂದು ಹಾರೈಸುತ್ತೇನೆ' ಎಂದು ಉಸುರಿದಳು.

ಸಂಗೀತದ ನಾದ ಸಂಪೂರ್ಣವಾಗಿ ನಿಂತುಹೋಗಿತ್ತು. ಕೋಣೆಯಲ್ಲಿ ಸ್ಮಶಾನ ಮೌನ ಆವರಿಸಿತ್ತು. ಆಕೆ ತೊಟ್ಟಿಲೆಡೆಗೆ ಬಾಗಿ ಅತ್ತಳು. ವ್ಯಾಕುಲತೆ ಮತ್ತು ಕರುಣೆ ಮನಸ್ಸನ್ನು ಆವರಿಸಿದ್ದವು. ಆಕೆ 'ಓ, ಈಗ ನಾನು ಅತ್ಯಂತ ಉತ್ತಮ ಹಾರೈಕೆ ಎಂದು ಭಾವಿಸಿ ಹೇಳಿದ್ದು ಸರಿಯಾದ ಆಯ್ಕೆಯಲ್ಲವೆಂದು ಬಲ್ಲೆ. ನಿನ್ನನ್ನು ಎಲ್ಲರೂ ಅಥವಾ ಯಾರೊಬ್ಬರೂ ಪ್ರೀತಿಸಿದರೂ ನಿನ್ನ ತಾಯಿಗಿಂತ ಹೆಚ್ಚಾಗಿ ಯಾರೂ ಪ್ರೀತಿಸಲಾರರು' ಎಂದು ಅತ್ತಳು.

ಅಗಸ್ಟಸ್ ನಸುಹೊಂಬಣ್ಣದ ಕೂದಲುಳ್ಳ ಸುಂದರ ಹುಡುಗನಾಗಿದ್ದಾನೆ. ತನ್ನ ತಾಯಿಯಿಂದ ಪಡೆದುಕೊಂಡಿದ್ದ ಹೊಳಪಾದ ಆಕರ್ಷಕ ಕಣ್ಣುಗಳುಳ್ಳ ಆತ ಎಲ್ಲರಿಂದಲು ಪ್ರೀತಿಸಲ್ಪಡುತ್ತಿದ್ದ. ನಾಮಕರಣ ದಿನದ ಹಾರೈಕೆ ಫಲಕಾರಿಯಾಗಿದೆ ಎಂದು ಫ್ರಾ ಇಲಿಜಬೆತ್ ತಕ್ಷಣವೆ ಅರಿತಳು. ಪುಟ್ಟ ಮಗು ರಸ್ತೆಯಲ್ಲಿ ಓಡಾಡುವಷ್ಟು ದೊಡ್ಡವನಾದ ಮೇಲೆ ಅವನನ್ನು ನೋಡಿದವರೆಲ್ಲ ಆತ ಸುಂದರನೆಂದೂ, ದಿಟ್ಟನೆಂದೂ, ಚತುರನೆಂದೂ ಅವನ ಕೈಕುಲುಕಿ ತೆರೆದ ಮನಸ್ಸಿನಿಂದ ಹೊಗಳುತ್ತಿದ್ದರು. ತಾರುಣ್ಯದ ತಾಯಂದಿರು ಅವನನ್ನು ಕಂಡು ನಗು ಸೂಸುತ್ತಿದ್ದರು. ವಯಸ್ಸಾದ ಹೆಂಗಸರು ಅವನಿಗೆ ಸೇಬು ಕೊಡುತ್ತಿದ್ದರು. ಯಾವಾಗಲಾದರೂ ಅವನು 'ತುಂಟತನ

ಮಾಡಿದರೆ ಆತ ತಪ್ಪು ಮಾಡುತ್ತಿದ್ದಾನೆಂದು ಯಾರೂ ಒಪ್ಪುತ್ತಿರಲಿಲ್ಲ. ಅಥವಾ ನಿಸ್ಸಂಶಯವಾಗಿ ಅವನೇನಾದರು ತಪ್ಪು ಮಾಡಿದ್ದಾನೆಂದಾಗ ಜನರು 'ಉದಾಸೀನದಿಂದ ಭುಜ ಹಾರಿಸಿ ಆ ಪುಟ್ಟ ಹುಡುಗನ ವಿರುದ್ಧವಾಗಿ ನೀನು ಏನು ಹೇಳಲೂ ಸಾಧ್ಯವಿಲ್ಲ' ಎನ್ನುತ್ತಿದ್ದರು.

ಆ ಸುಂದರ ಹುಡುಗನನ್ನು ನೋಡಿದ ಕೆಲವರು ಅವನ ತಾಯಿಯನ್ನು ನೋಡಲು ಬರುತ್ತಿದ್ದರು. ಒಂದು ಕಾಲದಲ್ಲಿ ಒಂಟಿಯಾಗಿದ್ದ ಆಕೆ ಈಗ ಸ್ವಲ್ಪ ಹೊಲಿಗೆ ಕೆಲಸವನ್ನು ಮಾಡುತ್ತಿದ್ದಳು. ಅಗಸ್ಟಸ್‌ನ ತಾಯಿಯಾದ ಅವಳಿಗೆ ಈಗ ಹೆಚ್ಚು ಹೆಚ್ಚು ಪ್ರೋತ್ಸಾಹ ಕೊಡುವವರಿದ್ದಾರೆ. ಆಕೆಯ ಮತ್ತು ಪುಟ್ಟ ಹುಡುಗನ ಕಾರ್ಯಗಳೆಲ್ಲ ಸುಸೂತ್ರವಾಗಿ ಸಾಗುತ್ತಿದ್ದವು. ಯಾವಾಗಲಾದರು ಅವರು ವಿಹಾರಕ್ಕೆಂದು ಹೊರಟಾಗ ನೆರೆಹೊರೆಯವರು ಮುಗುಳ್ನಗುತ್ತಿದ್ದರು, ನಮಸ್ಕರಿಸುತ್ತಿದ್ದರು, ಅಲ್ಲದೆ ಅದೃಷ್ಟದ ಹುಡುಗನನ್ನು ನೋಡಲು ಮುಂದಾಗುತ್ತಿದ್ದರು.

ಅಗಸ್ಟಸ್‌ಗೆ ಏನೇ ಒಳ್ಳೆಯದಾದರೂ ಮುಂದಿನದು ಅವನ ಧರ್ಮೀಯ ತಂದೆಯದಾಗಿತ್ತು. ಹೆರ್‌ಬಿನ್ಸ್‌ವಾಂಗ್ ಅವನನ್ನು ಸಂಜೆಯ ಸಮಯ ಒಮ್ಮೊಮ್ಮೆ ಮನೆಗೆ ಕರೆದೊಯ್ಯುತ್ತಿದ್ದ. ಕತ್ತಲಾಗುತ್ತಿದ್ದಂತೆ ಮನೆಯೊಳಗೆ ತಗ್ಗಿನಲ್ಲಿದ್ದ ಬೆಂಕಿಯ ಗೂಡಿನಿಂದ ಬರುತ್ತಿದ್ದ ಕೆಂಪು ಉರಿಯೇ ಬೆಳಕಾಗಿತ್ತು. ವಯಸ್ಸಾದ ಮನುಷ್ಯ ನೆಲದ ಮೇಲಿದ್ದ ತುಪ್ಪಟದ ಕಂಬಳಿಯ ಮೇಲೆ ಮಗುವನ್ನು ಬರಸೆಳೆದು ಕೂರಿಸಿಕೊಂಡು ದೊಡ್ಡ ದೊಡ್ಡ ಕತೆಗಳನ್ನು ಹೇಳುತ್ತಿದ್ದ. ಇಬ್ಬರೂ ಬೆಂಕಿಯ ಜ್ವಾಲೆಯನ್ನೇ ದಿಟ್ಟಿಸುತಿದ್ದರು. ಕೆಲವು ಸಂದರ್ಭಗಳಲ್ಲಿ ದೊಡ್ಡಕತೆ ಮುಗಿಯುವ ಹಂತದಲ್ಲಿದ್ದಾಗ ಪುಟ್ಟ ಮಗು ನಿದ್ರೆಯ ತೆಕ್ಕೆಯಲ್ಲಿ ಲೀನವಾಗುವ ಕಡೆಯ ಕ್ಷಣಗಳಲ್ಲಿಅರೆಗಣ್ಣಿನಿಂದ ದಟ್ಟ ಮೌನದಲ್ಲಿ ಜ್ವಾಲೆಯನ್ನು ದಿಟ್ಟಿಸಿ ನೋಡುತ್ತಿತ್ತು. ಕತ್ತಲಾಳದಿಂದ ಹಿತವಾದ ಮಧುರ ಸಂಗೀತ ಹರಿದು ಬರುತಿತ್ತು. ಕತ್ತಲಲ್ಲಿ ಬಹಳ ಹೊತ್ತಿನವರೆಗೆ ಅದನ್ನು ಆಲಿಸುವಾಗ ಇಡೀ ಕೋಣೆಯೇ ಹೊಳೆಯುವ ಪುಟ್ಟ ದೇವತೆಗಳಿಂದ ತುಂಬಿ, ಅವು ಚಿನ್ನದ ರೆಕ್ಕೆಗಳಿಂದ ವೃತ್ತವನ್ನು ಮಾಡಿ, ಒಂದಕ್ಕೊಂದು ಜೋಡಿಯಾಗಿ ನರ್ತಿಸುತ್ತ ಒಟ್ಟಿಗೆ ಹಾಡುತ್ತಿದ್ದವು. ಇಡೀ ಕೋಣೆಯೇ ಸಂತೋಷ ಮತ್ತು ಪ್ರಶಾಂತತೆಯ ಸೌಂದರ್ಯದಿಂದ ಪ್ರತಿಧ್ವನಿಸುತ್ತಿತ್ತು. ಇಂಥಹುದು ಅಗಸ್ಟಸ್ ಎಂದೂ ಅನುಭವಿಸದ

ಅತ್ಯಂತ ರಮಣೀಯ ಕ್ಷಣವಾಗಿತ್ತು. ಅನಂತರ ಆತ ತನ್ನ ಬಾಲ್ಯದ ಬಗ್ಗೆ ಯೋಚಿಸಿದಾಗ ಎಲ್ಲವೂ ಮಬ್ಬಾಗಿತ್ತು. ತನ್ನ ಧರ್ಮೀಯಪಿತನ ಮನೆಯ ಶಾಂತವಾದ ಕತ್ತಲಕೋಣೆ, ಬೆಂಕಿಯ ಗೂಡಿನ ಕೆಂಪು ಜ್ವಾಲೆಗಳು, ಸಂಗೀತ, ಉಲ್ಲಾಸಮಯ ಸಮಯ, ಚಿನ್ನದ ದೇವದೂತರ ಮಾಯಾಲೋಕ ಅವನ ನೆನಪುಗಳನ್ನು ತುಂಬಿ ಮನೆಯ ಗೀಳನ್ನು ಹಿಡಿಸಿದವು.

ಹುಡುಗ ದೊಡ್ಡವನಾದಂತೆ ಅವನ ತಾಯಿ ಆಗಾಗ್ಗೆ ಬೇಸರ ಪಡುತ್ತಿದ್ದಳು. ಆಗ ಬಲವಂತವಾಗಿ ನಾಮಕರಣದ ರಾತ್ರಿಯನ್ನು ನೆನೆಯುವಂತಾಗುತ್ತಿತ್ತು. ಅಗಸ್ಟಸ್ ಉಲ್ಲಾಸದಿಂದ ಹತ್ತಿರದ ರಸ್ತೆಯಲ್ಲೆಲ್ಲ ಓಡಾಡುತ್ತಿದ್ದ, ಗೇರುಹಣ್ಣು, ಚಾಕಲೇಟು, ಬೊಂಬೆಗಳು ಮುಂತಾದುವನ್ನು ಕೊಡುತ್ತಿದ್ದರು, ಅವನಿಗೆ ತಿನ್ನಲು, ಕುಡಿಯಲು, ಒಳ್ಳೆಯ ಪದಾರ್ಥಗಳನ್ನು ಕೊಟ್ಟು ತಮ್ಮ ತೊಡೆಯ ಮೇಲೆ ಕುಳ್ಳಿರಿಸಿಕೊಳ್ಳುತ್ತಿದ್ದರು. ಅವನನ್ನು ಅವರ ಹೂದೋಟಗಳಲ್ಲಿ ಹೂ ಕೀಳಲು ಬಿಡುತಿದ್ದರು. ಅವನು ರಾತ್ರಿ ಬಹಳ ಹೊತ್ತಿನವರೆಗು ಮನೆ ಸೇರುತ್ತಿರಲಿಲ್ಲ. ಮನೆಯಲ್ಲಿ ತಾಯಿ ಕೊಟ್ಟ ಸೂಪನ್ನು ಸಿಟ್ಟಿನಿಂದ ದೂರ ತಳ್ಳುತ್ತಿದ್ದ. ಆಕೆ ಅಸಮಾಧಾನಗೊಂಡು ಅತ್ತರೆ ಅಪ್ರಸನ್ನನಾಗಿ ಬೇಸರಗೊಂಡು ಹಾಸಿಗೆಗೆ ತೆರಳುತ್ತಿದ್ದ. ಆಕೆ ಏನಾದರೂ ಬೈದು ಶಿಕ್ಷಿಸಿದರೆ ಚೀರುತ್ತ ಅವನ ತಾಯಿಯನ್ನು ಬಿಟ್ಟು ಉಳಿದವರೆಲ್ಲ ಒಳ್ಳೆಯವರೆಂದೂ, ಕರುಣಾಮಯಿಗಳೆಂದೂ ದೂರುತ್ತಿದ್ದ. ಇಂತಹ ಸಮಯಗಳಲ್ಲಿ ಆಕೆ ಅವನ ಮೇಲೆ ಸಿಟ್ಟುಗೊಳ್ಳುತ್ತಿದ್ದಳು. ಆದರೆ, ಅವನು ದಿಂಬುಗಳ ಮಧ್ಯೆ ಮಲಗಿರುವಾಗ ಮೇಣದ ಬತ್ತಿಯ ಬೆಳಕು ಅವನ ಮುಗ್ಧ ಮಂದಹಾಸದ ಮುಖದ ಮೇಲೆ ಬಿದ್ದಾಗ ಅವಳ ಕೋಪವೆಲ್ಲ ಮಾಯವಾಗುತ್ತಿತ್ತು. ಅವನು ಎಚ್ಚರಗೊಳ್ಳದಂತೆ ಆಕೆ ಮೃದುವಾಗಿ ಮುತ್ತುಕೊಡುತ್ತಿದ್ದಳು. ಎಲ್ಲರೂ ಅಗಸ್ಟಸ್‌ನನ್ನು ಪ್ರೀತಿಸುತ್ತಿದ್ದುದು 'ಅವಳ' ತಪ್ಪಾಗಿತ್ತು. ಆಕೆ ಕೆಲವೊಮ್ಮೆ ಬೇಸರದಿಂದ ಹಾಗೂ ಪೂರ್ಣ ಭೀತಿಯಿಂದ ನಾನು ಆ ಹಾರೈಕೆ ಮಾಡದಿದ್ದರೆ ತುಂಬ ಒಳ್ಳೆಯದಾಗುತ್ತಿತ್ತೇನೋ ಎಂದು ಯೋಚಿಸುತ್ತಿದ್ದಳು.

ಒಮ್ಮೆ ಆಕೆ ಹೆರ್ ಬಿನ್ಸ್‌ವಾಂಗನ ಕಿಟಕಿಯ ಬಳಿ ಇದ್ದ 'ಜರೇನಿಯಂ' ಗಿಡದ ಒಣ ಎಲೆಗಳನ್ನು ಕತ್ತರಿಯಿಂದ ಕತ್ತರಿಸುತ್ತಿದ್ದಳು. ಮನೆಯ ಹಿಂಬದಿಯಲ್ಲಿದ್ದ

ಅಂಗಳದಿಂದ ಅವಳ ಮಗನ ಸ್ವರ ಕೇಳಿ ನೋಡಲು ಅತ್ತ ತಿರುಗಿದಳು. ಅವನ ಮುದ್ದು ಮುಖದಲ್ಲಿ ಅಸಡ್ಡೆಯ ಭಾವವಿದ್ದು ಗೋಡೆಯ ಮೇಲೆ ಬಾಗಿದ್ದ. ಅವನ ಎದುರಿಗೆ ಅವನಿಗಿಂತ ಎತ್ತರವಾಗಿದ್ದ ಹುಡುಗಿ ನಿಂತಿದ್ದಳು. ಆಕೆ 'ನೀನು ಸುಂದರವಾಗಿದ್ದೀಯ ಅಲ್ಲವೆ?' 'ಬಾ ಈಗ ನನಗೊಂದು ಮುತ್ತು ಕೊಡು' ಎಂದು ಪುಸಲಾಯಿಸಿದಳು.

ಕೈಗಳನ್ನು ಕಿಸೆಯೊಳಗಿಡುತ್ತ 'ನನಗೆ ಇಷ್ಟವಿಲ್ಲ' ಎಂದ.

''ಓ, ದಯವಿಟ್ಟು ಕೊಡು.'' ಆಕೆ ಮತ್ತೆ ಕೇಳಿದಳು. ''ನಾನು ನಿನಗೆ ಸುಂದರವಾದದ್ದೇನೋ ಕೊಡುವೆ''

''ನೀನು ನನಗೆ ಏನು ಕೊಡ್ತೀಯಾ? ಎಂದು ಹುಡುಗ ಕೇಳಿದ.

''ನನ್ನ ಹತ್ತಿರ ಎರಡು ಸೇಬುಗಳಿವೆ'' ಆಕೆ ಗಾಬರಿಯಿಂದ ಹೇಳಿದಳು.

''ನನಗೆ ಯಾವ ಸೇಬುಗಳೂ ಬೇಡ'' ತಿರಸ್ಕಾರದಿಂದ ನುಡಿದ ಅವನು ಅಲ್ಲಿಂದ ಹೊರಡಲು ಅನುವಾದ.

ಆದರೆ ಹುಡುಗಿ ಅವನ ಕೈಗಳನ್ನು ಹಿಡಿದು ಸಮಾಧಾನ ಮಾಡುತ್ತ ''ತಾಳು, ನನ್ನ ಹತ್ತಿರ ಸುಂದರವಾದ ಉಂಗುರವೂ ಇದೆ''. ಎಂದಳು.

''ನೋಡೋಣ ತೋರಿಸು'' ಎಂದ ಅಗಸ್ಟಸ್.

ಅವಳು ಅವನಿಗೆ ತನ್ನ ಉಂಗುರ ತೋರಿಸಿದಳು. ಅವನು ಅದನ್ನು ಕುತೂಹಲದಿಂದ ನೋಡಿ, ಜಾಗರೂಕತೆಯಿಂದ ತೆಗೆದುಕೊಂಡು ತನ್ನ ಬೆರಳಿಗೆ ಹಾಕಿಕೊಂಡ. ಅದನ್ನು ಬೆಳಕಿಗೆ ತೋರಿಸುತ್ತ, ಒಪ್ಪಿಕೊಂಡವನಂತೆ ತಲೆಯಾಡಿಸಿದ. ''ಸರಿ ನೀನು ಮುತ್ತು ಪಡೆಯಬಹುದು'' ಎಂದು ಬೇಕೋ ಬೇಡವೋ ಎಂಬಂತೆ ಹುಡುಗಿಯ ತುಟಿಗೆ ಆತುರದ ಮುತ್ತಿಕ್ಕಿದ.

''ನೀನೀಗ ನನ್ನ ಹತ್ತಿರ ಆಡ್ತೀಯ ಅಲ್ಲವೆ?'' ಅವನ ಕೈ ಹಿಡಿದುಕೊಂಡು ಪ್ರೀತಿಯಿಂದ ಕೇಳಿದಳು.

ಆದರೆ ಅವನು ಅವಳನ್ನು ಪಕ್ಕಕ್ಕೆ ತಳ್ಳಿ, ಒರಟಾಗಿ ''ನನಗೆ ಶಾಂತಿಯಿಂದ ಇರೋಕೆ ಬಿಡೋದಕ್ಕೆ ಆಗೋಲ್ಲವೆ? ಆಟ ಆಡೋಕೆ ನನಗೆ ಬೇರೆಯವರು ಇದ್ದಾರೆ.'' ಎಂದು ಕಿರುಚಿದ. ಆ ಹುಡುಗಿ ಅಳಲು ಪ್ರಾರಂಭಿಸಿದಳು. ಅಲ್ಲದೆ ಆ ಅಂಗಳದಿಂದ ಎದ್ದು ಓಡಿಹೋದಳು. ಬೇಸರ ಮತ್ತು ಕೆರಳಿದ ಭಾವದಿಂದ ಅವಳು ಹೋದ ಕಡೆ ನೋಡಿದ. ಬೆರಳಿನ ಸುತ್ತ ಉಂಗುರವನ್ನು ತಿರುಗಿಸುತ್ತ ಪರೀಕ್ಷಿಸಿದ ನಂತರ, ಸೀಟಿ ಊದುತ್ತ ಅಲ್ಲಿಂದ ನಿಧಾನವಾಗಿ ನಡೆದ.

ಕತ್ತರಿಯನ್ನು ಇನ್ನೂ ಕೈಯಲ್ಲಿ ಹಿಡಿದೇ ಇದ್ದ ಅವನ ತಾಯಿ ಇನ್ನೊಬ್ಬರ ಪ್ರೀತಿಯನ್ನು ಒರಟಾಗಿ ಅಲಕ್ಷ್ಯದಿಂದ ಕಂಡುದನ್ನು ನೋಡಿ ಗಾಬರಿಯಾದಳು. ಅವಳು ಗಿಡಗಳ ಹೊರಗೆ ಬಂದು ತನ್ನೊಳಗೆ ಮತ್ತೆ ಮತ್ತೆ 'ಏಕೆ ಅವನು ಕೆಟ್ಟವನು, ಅವನಿಗೆ ಹೃದಯವೇ ಇಲ್ಲ' ಎಂದು ತಲೆಯಾಡಿಸಿದಳು. ಅಗಸ್ಟಸ್ ಸ್ವಲ್ಪ ಸಮಯದ ನಂತರ ಮನೆಗೆ ಬಂದಾಗ ಅವನನ್ನು ತರಾಟೆಗೆ ತೆಗೆದುಕೊಂಡಳು. ಆದರೆ ಅವನು ತನ್ನ ನೀಲಿ ಕಣ್ಣುಗಳಿಂದ ಅವಳತ್ತ ನೋಡಿ ನಗುತ್ತಿದ್ದ. ತಾನು ದೋಷಿಯೆಂಬ ಯಾವ ಭಾವವನ್ನು ತೋರಲಿಲ್ಲ. ನಂತರ ಹಾಡಲು ಪ್ರಾರಂಭಿಸಿದ. ಆಕೆಯ ಜೊತೆ ಬಹಳ ಪ್ರೀತಿಯಿಂದ ಸಂತೋಷದಿಂದ, ಚಿತ್ತಾಕರ್ಷಕನಾಗಿ, ಸರಳವಾಗಿ ಇದ್ದ. ಆಕೆಯೂ ನಕ್ಕಳು. ಮಕ್ಕಳ ಬಗ್ಗೆ ಯಾವುದನ್ನು ಗಂಭೀರವಾಗಿ ತೆಗೆದುಕೊಳ್ಳಬಾರದೆಂದು ನಿರ್ಧರಿಸಿದಳು.

ಆದರೆ ಹುಡುಗ ತನ್ನ ತಪ್ಪು ನಡವಳಿಕೆಗಳಿಗೆ ಶಿಕ್ಷೆಯಿಂದ ಪೂರ್ಣವಾಗಿ ತಪ್ಪಿಸಿಕೊಳ್ಳಲಾಗಲಿಲ್ಲ. ಅಗಸ್ಟಸ್ ತನ್ನ ಧರ್ಮೀಯ ತಂದೆ ಹೆರ್‌ಬಿನ್ಸ್‌ವಾಂಗ್‌ನಿಗೆ ಮಾತ್ರ ಗೌರವ ತೋರುತ್ತಿದ್ದ. ಸಂಜೆ ಅವರನ್ನು ನೋಡಲು ಹೋದಾಗ, ಧರ್ಮೀಯ ತಂದೆ, '' ಇಂದು ಬೆಂಕಿ ಉರಿಯುತ್ತಿಲ್ಲ, ಯಾವುದೇ ಸಂಗೀತ ಇಲ್ಲ, ಪುಟ್ಟದೇವತೆಗಳು ನೀನು ಕೆಟ್ಟವನೆಂದು ಬೇಸರಗೊಂಡಿವೆ'' ಎಂದ. ಅಗಸ್ಟಸ್ ಮೌನವಾಗಿ ಮನೆಗೆ ಹೋಗಿ ಹಾಸಿಗೆ ಮೇಲೆ ಬಿದ್ದು ಅಳಲಾರಂಭಿಸಿದ. ನಂತರ ಒಳ್ಳೆಯವನಾಗಿರಲು, ಮೃದುವಾಗಿ ನಡೆದುಕೊಳ್ಳಲು ಬಹಳದಿನಗಳವರೆಗೆ ಕಷ್ಟಪಟ್ಟ, ಅವನ ಧರ್ಮೀಯ ತಂದೆಯ ಅನುಕಂಪದ ಕಣ್ಣೀರು ಸುರಿಯದಿದ್ದರೂ ಗೂಡಿನ ಬೆಂಕಿ ಕ್ರಮೇಣವಾಗಿ ಕಡಿಮೆಯಾಗುತ್ತ ಬಂತು. ಅಗಸ್ಟಸ್ ಹನ್ನೆರಡು ವರ್ಷದವ

ನಾದಾಗ ಧರ್ಮೀಯ ಪಿತನ ಮನೆಯ ಉಲ್ಲಾಸಮಯ ದೈವೀಕ ಅಲೆಗಳು ಸಂಪೂರ್ಣ ವಾಗಿ ದೂರದ ಕನಸುಗಳಾದವು. ಒಂದು ವೇಳೆ ರಾತ್ರಿಯೇನಾದರೂ ಅದರ ಬಗ್ಗೆ ಕನಸು ಕಂಡರೆ, ಮರುದಿನ ಆತ ತೀರ ಒರಟಾಗುತ್ತಿದ್ದ. ಅಲ್ಲದೆ ಕಿರಿಚಾಡುತ್ತದ್ದ. ಗೆಳೆಯರ ಮೇಲೆ ಸರ್ವಾಧಿಕಾರದಿಂದ ಕರುಣೆಯಿಲ್ಲದೆ ಅಧಿಕಾರ ಚಲಾಯಿಸುತ್ತಿದ್ದ.

ತನ್ನ ಮಗ ಸುಂದರ ಮತ್ತು ಹಸನ್ಮುಖಿ ಎಂದು ಎಲ್ಲರಿಂದ ಕೇಳಿ ಕೇಳಿ ಅವನ ತಾಯಿಗೆ ಬೇಸರವಾಗಿತ್ತು. ಯಾವ ರೀತಿಯಿಂದಲೂ ಅವನಿಗೆ ತೊಂದರೆ ಯಾಗದಂತೆ ಎಚ್ಚರವಹಿಸಿದಳು. ಒಂದು ದಿನ ಅವನ ಉಪಾಧ್ಯಾಯರೊಬ್ಬರು ಅವಳಲ್ಲಿಗೆ ಬಂದು ದೂರದ ಒಳ್ಳೆಯ ಶಾಲೆಯೊಂದರಲ್ಲಿ ತನಗೆ ತಿಳಿದಿರುವವ ರಿದ್ದಾರೆಂದೂ, ಸ್ವತಃ ತಾನೆ ಅಲ್ಲಿಗೆ ಅವನನ್ನು ಕಳುಹಿಸುವುದಾಗಿಯೂ ಹೇಳಿದರು. ಅವಳು ಪಕ್ಕದ ಮನೆಗೆ ಹೋಗಿ ಮಾತನಾಡಿ ಬಂದಳು. ಬಹುಬೇಗನೆ ವಸಂತ ಮಾಸದ ಒಂದು ಬೆಳಗ್ಗೆ ಸರಕು ಸಾಗಿಸುವ ವಾಹನ ಬಂದಿತು. ಅಗಸ್ಟಸ್ ಒಳ್ಳೆಯ ಹೊಸದಾದ ಬಟ್ಟೆ ಧರಿಸಿ ಅವನ ತಾಯಿ, ಧರ್ಮೀಯ ತಂದೆ ಹಾಗೂ ಎಲ್ಲ ನೆರೆಹೊರೆಯವರಿಗೂ ಹೋಗಿ ಬರುವೆನೆಂದು ಹೇಳಿ ಅದನ್ನು ಹತ್ತಿದ. ಅವನ ತಾಯಿ, ಅವನ ನಸು ಹೊಂಬಣ್ಣದ ಕೂದಲನ್ನು ಕೊನೆಯ ಬಾರಿಗೆ ಸುಂದರವಾಗಿ ಬಾಚಿ ತನ್ನ ಆಶೀರ್ವಾದ ನೀಡಿದಳು. ಆಗ ಕುದುರೆಗಳು ಹೊರಟವು. ಅಗಸ್ಟಸ್ ದೊಡ್ಡ ನಗರ ಪ್ರವೇಶಿಸಿದ.

ಬಹಳ ವರ್ಷಗಳ ನಂತರ ಅಗಸ್ಟಸ್ ಕಾಲೇಜು ಹುಡುಗನಾಗಿ ಮೀಸೆ ಬಿಟ್ಟು, ಕೆಂಪು ಟೋಪಿಯನ್ನು ಧರಿಸುತ್ತಿದ್ದ. ಅವನ ಧರ್ಮೀಯ ತಂದೆ ಪತ್ರ ಬರೆದು ಅವನ ತಾಯಿಯ ಆರೋಗ್ಯ ಬಹಳ ಕೆಟ್ಟಿದೆಯೆಂದೂ, ಬಹಳ ದಿನ ಬದುಕಲಾರಳೆಂದು ತಿಳಿಸಿದ್ದ. ಹೀಗಾಗಿ ಗಾಡಿಯಲ್ಲಿ ಹುಟ್ಟೂರಿಗೆ ಬಂದಿದ್ದ. ಆಗ ಸಂಜೆಯಾಗಿತ್ತು. ನೆರೆಹೊರೆಯವರೆಲ್ಲ ಆತ ಗಾಡಿಯಿಂದ ಹೊರಬರುವುದನ್ನು ಕಾತುರದಿಂದ ನೋಡುತ್ತಿದ್ದರು. ಚರ್ಮದ ಬ್ಯಾಗನ್ನು ಹಿಡಿದು ಗಾಡಿ ಹೊಡೆಯುವವನು ಮುಂದೆ ನಡೆದ. ಹಿಂಬಾಲಿಸುತ್ತಿದ್ದ ಅಗಸ್ಟಸ್‌ನನ್ನು ಕಂಡು ಎಲ್ಲರೂ ಅಶ್ಚರ್ಯಚಕಿತರಾದರು. ಫ್ರಾ ಎಲಿಜಬೆತ್ ಸಾರಣೆ ಮಾಡಿದ ಪುಟ್ಟ ಕೋಣೆಯಲ್ಲಿ ಮಲಗಿದ್ದಳು. ಸುಂದರ ಯುವಕ ಬಿಳಿಯ ದಿಂಬಿನ ಮೇಲಿದ್ದ ಆಕೆಯ ಬಿಳಿಚಿದ, ಒಣಗಿದ ಮುಖ ನೋಡಿದ.

ಆಕೆ ತನ್ನ ಸೌಮ್ಯ ಕಣ್ಣುಗಳಿಂದ ಮಾತ್ರ ಅತನನ್ನು ಸ್ವಾಗತಿಸಲು ಶಕ್ತಳಾಗಿದ್ದಳು. ಅವನು ಅಳುತ್ತ ಹಾಸಿಗೆಯ ಮೇಲೆ ಕುಸಿದು ಕುಳಿತ. ಅವಳ ತಣ್ಣನೆಯ ಕೈಗಳಿಗೆ ಮುತ್ತಿಟ್ಟ. ಕೈಗಳು ತಣ್ಣಗಾಗುವವರೆಗೆ ಹಾಗೂ ಕಣ್ಣುಗಳು ನಿರ್ಜೀವವಾಗುವವರೆಗೆ ರಾತ್ರಿಯೆಲ್ಲ ಅವನು ಅವಳ ಪಕ್ಕದಲ್ಲಿ ಕುಳಿತಿದ್ದ.

ಅವನ ತಾಯಿಯ ಶವಸಂಸ್ಕಾರವಾದ ಮೇಲೆ ಹೆರ್ ಬಿನ್ಸ್‌ವಾಂಗ್ ಅವನನ್ನು ತನ್ನ ಕೈಗಳಲ್ಲಿ ಹಿಡಿದು ತನ್ನ ಪುಟ್ಟ ಮನೆಗೆ ಕರೆದೊಯ್ದು. ಆ ತರುಣನಿಗೆ ಅದು ಮೊದಲಿಗೆ ಹೆಚ್ಚು ಛಿದ್ರವಾದಂತೆ, ಕತ್ತಲಾದಂತೆ ಕಂಡಿತು. ಬಹಳ ಹೊತ್ತಿನವರೆಗೆ ಇಬ್ಬರೂ ಒಟ್ಟಿಗೆ ಕುಳಿತಿದ್ದರು. ಚಿಕ್ಕ ಕಿಟಕಿ ಮಾತ್ರ ಕತ್ತಲೆಯಲ್ಲಿ ಮಂದ ಪ್ರಕಾಶದಿಂದ ಮಿನುಗುತ್ತಿತ್ತು. ನಂತರ ವಯಸ್ಸಾದ ಮನುಷ್ಯ ತನ್ನ ಸಣಕಲು ಬೆರಳುಗಳಿಂದ ಬಿಳಿಯ ಗಡ್ಡವನ್ನು ನೇವರಿಸುತ್ತ ಅಗಸ್ಟಸ್‌ನಿಗೆ ನಾನು ಬೆಂಕಿಯ ಗೂಡಿನಲ್ಲಿ ಬೆಂಕಿ ಹತ್ತಿಸುತ್ತೇನೆ. ನಂತರ ನಮಗೆ ದೀಪದ ಅವಶ್ಯಕತೆಯಿರುವುದಿಲ್ಲ. ನೀನು ನಾಳೆ ಇಲ್ಲಿಂದ ಹೊರಡಬೇಕು ಎಂದು ಗೊತ್ತು. ಈಗ ನಿನ್ನ ತಾಯಿ ಇಲ್ಲದಂತಾದಳು, ನೀನು ತಿರುಗಿ ಬರೋದಿಲ್ಲವೇನೋ ಎಂದ.

ಹೀಗೆಂದ ಆತ ಗೂಡಿನಲ್ಲಿ ಸಣ್ಣದಾಗಿ ಬೆಂಕಿ ಹೊತ್ತಿಸಿದ. ಕುರ್ಚಿಯನ್ನು ಅದರ ಹತ್ತಿರ ಎಳೆದುಕೊಂಡು, ಅಗಸ್ಟಸ್‌ನ ಕುರ್ಚಿಯನ್ನೂ ತನ್ನದರ ಹತ್ತಿರ ಹಾಕಿದ, ಇನ್ನು ಸ್ವಲ್ಪ ಕಾಲ ಅವರಿಬ್ಬರು ಒಟ್ಟಿಗೆ ಕುಳಿತು ಉರಿಯುವ ಜ್ವಾಲೆಗಳು ಚದುರಿ ಹೋದ ನಂತರ ಕನಲುವ ಕೆಂಡವನ್ನು ವೀಕ್ಷಿಸಿದರು. ವಯಸ್ಸಾದ ಮನುಷ್ಯ ಮೃದುವಾಗಿ, ಒಳ್ಳೆಯದು, ಅಗಸ್ಟಸ್ ನಾನು ನಿನಗೆ ಒಳ್ಳೆಯದಾಗಲಿ ಅಂತ ಬಯಸುತ್ತೇನೆ. ನೀನು ಒಳ್ಳೆಯ ತಾಯಿಯನ್ನು ಪಡೆದಿದ್ದೆ. ಆಕೆ ನೀನು ಅಪೇಕ್ಷಿಸಿದ್ದಕ್ಕಿಂತ ಹೆಚ್ಚಿನದನ್ನೇ ಮಾಡಿದ್ದಾಳೆ. ನಾನು ನಿನಗಾಗಿ ಪುನಃ ಸಂಗೀತವನ್ನು ಹಾಡಿ, ಪುಟ್ಟದೇವತೆಗಳನ್ನು ತೋರಿಸಬೇಕು ಅಂತ ಬಯಸಿದ್ದೆ. ಆದರೆ ಅದು ಸಾಧ್ಯವಿಲ್ಲ ಅಂತ ನಿನಗೆ ಗೊತ್ತು. ಆದರೆ ನೀನು ಅವನ್ನು ಎಂದಿಗೂ ಮರೆಯಬಾರದು. ಅಲ್ಲದೆ ಅದು ಯಾವಾಗಲೂ ಹಾಡುತ್ತಿವೆ ಎಂದು ಯೋಚಿಸಬೇಕು. ನೀನು ಒಂಟಿಯಾಗಿದ್ದಾಗ ಅಲ್ಲದೆ ಹಂಬಲಿಸುವ ಹೃದಯದಿಂದ ಕೇಳಲು ಇಚ್ಚಿಸಿದಾಗ ಮಾತ್ರ ಮತ್ತೊಮ್ಮೆ ಕೇಳುವ ಸಮಯ

ಬರಬಹುದು. ಮಗೂ, ಈಗ ನೀನು ಕೈಗಳನ್ನು ಕೊಡು. ನನಗೆ ವಯಸ್ಸಾಯಿತು. ನಾನು ಹಾಸಿಗೆಗೆ ಹೋಗಬೇಕು ಎಂದನು.

ಅಗಸ್ಟಸ್ ಅವನ ಕೈಕಲುಕಿದ. ಆದರೆ ಮಾತನಾಡಲಾಗಲಿಲ್ಲ. ದುಃಖದಿಂದ ಹೋಗಿ ಕೊನೆಯಬಾರಿಗೆ ಯಾರೂ ಇರದ ತನ್ನ ಹಳೆಯ ಮನೆಯಲ್ಲಿ ಮಲಗಿದ. ಆದರೆ ನಿದ್ರಿಸುವುದಕ್ಕಿಂತ ಮೊದಲು ಬಹುದೂರದ, ಸೂಕ್ಷ್ಮವಾದ, ಬಾಲ್ಯದ ಸುಮಧುರ ಸಂಗೀತವನ್ನು ಪುನಃ ಕೇಳಿದಂತೆ ಭಾಸವಾಯಿತು. ಮರುದಿನ ಬೆಳಿಗ್ಗೆ ಅವನು ಅಲ್ಲಿಂದ ಹೊರಟ. ಆದರೆ ಬಹಳ ದಿನಗಳವರೆಗೆ ಅವನ ಬಗ್ಗೆ ಅವನ ತಾಯ್ನಾಡಿನಲ್ಲಿ ಯಾವುದೇ ವಿಷಯ ತಿಳಿದು ಬರಲಿಲ್ಲ.

ಬಹಳ ಬೇಗ, ಅವನು ತನ್ನ ಧರ್ಮೀಯ ತಂದೆ ಹೆರ್‌ಬಿನ್ಸ್‌ವಾಂಗ್‌ನನ್ನು, ದೇವದೂತರನ್ನು ಮರೆತ. ಅವನು ಆಡಂಬರದ ಜೀವನ ನಡೆಸಿದ. ಅದರಲ್ಲೆ ನಲಿದಾಡಿದ. ಹುಡುಗಿಯರನ್ನು ಹೊಗಳುತ್ತ ವಿಶಿಷ್ಟ ಮುಖಭಾವದಿಂದ ಛೇಡಿಸುತ್ತ, ವೇಗವಾಗಿ ಕುದುರೆ ಓಡಿಸುತ್ತ ಮೆರೆಯುತ್ತಿದ್ದ ಅವನ ಶೋಕಿಗೆ ಯಾರೂ ಸಾಟಿಯಿರಲಿಲ್ಲ. ನಾಲ್ಕು ಕುದುರೆಯ ರಥವನ್ನು, ಅಂತಹ ಬೆಡಗು, ಲಾವಣ್ಯದಿಂದ ಓಡಿಸಲು ಯಾರಿಂದಲೂ ಸಾಧ್ಯವಿರಲಿಲ್ಲ. ಹೂದೋಟದಲ್ಲಿ ಬೇಸಿಗೆಯ ರಾತ್ರಿಯ ಅವನ ಕುಡಿತದ ಆವೇಶ, ಪ್ರಚಂಡತೆ, ಗರ್ವ ಯಾರಲ್ಲೂ ಇರಲಿಲ್ಲ. ಶ್ರೀಮಂತ ವಿಧವೆಯೊಬ್ಬಳ ಪ್ರಿಯಕರನಾಗಿದ್ದ ಅವನಿಗೆ ದುಡ್ಡು, ಬಟ್ಟೆ, ಕುದುರೆಗಳು, ಅವನು ಇಚ್ಛಿಸಿದ್ದನ್ನೆಲ್ಲ ಆಕೆ ನೀಡಿದ್ದಳು. ಅವಳ ಜೊತೆ ಪ್ಯಾರಿಸ್, ರೋಮ್‌ಗಳಿಗೆ ಪ್ರಯಾಣ ಬೆಳೆಸಿದ. ಅವಳ ರೇಶಿಮೆಯ ದುಪ್ಪಟಿಯೊಳಗೆ ಮಲಗಿದ. ಪೇಟೆಯವನ ಮಗಳಾದ ನಸು ಹೊಂಬಣ್ಣದ, ಕೋಮಲಳಾದ ಅವನ ಪ್ರೇಯಸಿ ಯಾರಿಗೂ ಲೆಕ್ಕಿಸದೆ ತಂದೆಯ ಹೂದೋಟದಲ್ಲಿ ಅವನನ್ನು ಸಂಧಿಸುತ್ತಿದ್ದಳು. ಅಲ್ಲದೆ ಅವನು ಬೇರೆ ದೇಶಕ್ಕೆ ಹೋದಾಗ ಅವನಿಗೆ ಬಹಳ ಉದ್ದದ ಉತ್ಸಾಹಪೂರಿತ ಪತ್ರಗಳನ್ನು ಬರೆಯುತ್ತಿದ್ದಳು.

ಆದರೆ ಅವನು ತಿರುಗಿ ಬರದಂಥಾ ಕಾಲವೂ ಬಂದಿತು. ಅವನಿಗೆ ಪ್ಯಾರಿಸ್‌ನಲ್ಲೇ ಹಲವರು ಗೆಳೆಯರಾದರು. ಮುಖ್ಯವಾಗಿ ಅವನ ಶ್ರೀಮಂತ ಹೆಂಡತಿ ಅವನಿಗೆ ಬೇಸರ ಮಾಡಲಾರಂಭಿಸಿದಳು. ಓದುವುದು ಬಹಳ ದಿನಗಳಿಂದಲೆ ಹೇಸಿಗೆ

ತರಿಸಿತ್ತು. ಅವನು ವಿದೇಶದಲ್ಲೇ ನೆಲಸಿ, ಉನ್ನತ ದರ್ಜೆಯ ಸಮಾಜ ಜೀವನ ನಡೆಸಿದ. ಆತ ಕುದುರೆಗಳು, ನಾಯಿಗಳು, ಹೆಂಗಸರನ್ನು ಇಟ್ಟುಕೊಂಡಿದ್ದ. ಹಣ ಕಳೆದುಕೊಂಡ, ಮತ್ತೆ ಹಣ ಗಳಿಸಿದ. ಎಲ್ಲೆಡೆಯಲ್ಲೂ ಜನ ಅವನ ಬೆನ್ನತ್ತಿ ಬಂದರು. ಅವನಿಂದ ಸೂರೆಗೊಳ್ಳುತ್ತಿದ್ದರು. ಅವನ ಸೇವೆ ಮಾಡಿದರು. ನಗುನಗುತ್ತ ಎಲ್ಲವನ್ನೂ ಒಪ್ಪಿಕೊಂಡ-ಬಹಳ ಹಿಂದೆ ಪುಟ್ಟ ಹುಡುಗಿಯ ಉಂಗುರವನ್ನು ಒಪ್ಪಿಕೊಂಡಂತೆ-ಅವನ ತಾಯಿಯ ಹಾರೈಕೆಯ ಮಂತ್ರದ ಶಕ್ತಿ ಅವನ ಕಂಗಳು ಮತ್ತು ತುಟಿಗಳಲ್ಲಿ ತುಂಬಿತ್ತು. ಹೆಂಗಸರು ಅವನನ್ನು ಮೃದುವಾಗಿ ನಿಗ್ರಹಿಸುತ್ತಿದ್ದರು. ಗೆಳೆಯರು ಅವನನ್ನು ಮಿತಿಮೀರಿದ ಉತ್ಸಾಹದಿಂದ ಹೊಗಳುತ್ತಿದ್ದರು. ಆದರೆ ಇದನ್ನು ಯಾರೂ ನೋಡಲಿಲ್ಲ. ಆತನೆ ಅದನ್ನು ಭಯದಿಂದ ಗಮನಿಸಿದ-ಅವನ ಹೃದಯ ಶೂನ್ಯವಾಗಿತ್ತು. ಅತಿಯಾದ ಲೋಭದಿಂದ ಹಾತೊರೆಯುತ್ತಿತ್ತು. ಅವನ ಆತ್ಮ ರೋಗಗ್ರಸ್ತವಾಗಿದ್ದು, ಪೂರ್ಣ ನೋವಿನಿಂದ ತುಂಬಿತ್ತು. ಅವನು ಎಲ್ಲರಿಂದ ಹೊಗಳಿಸಿಕೊಂಡು ಬೇಸರವಾದಾಗ ಮಾರುವೇಷದಲ್ಲಿ ಪಟ್ಟಣಗಳಿಗೆ ಹೋಗುತ್ತಿದ್ದ. ಆದರೆ ಎಲ್ಲೆಡೆಯಲ್ಲೂ ಬಹುಬೇಗನೆ ಗೆದ್ದುಬಿಡಬಹುದಾದ ಉದ್ದೇಶರಹಿತ ಜನರನ್ನೇ ಕಾಣುತ್ತಿದ್ದ. ಎಲ್ಲೆಡೆಯಲ್ಲೂ ಉತ್ಸಾಹ ಪೂರ್ವಕವಾಗಿ ಹಿಂಬಾಲಿಸಿ ಬಂದ ಪ್ರೀತಿಯನ್ನು ತಿರಸ್ಕರಿಸಿದ. ಅದರಿಂದ ಅಲ್ಪಮಾತ್ರ ತೃಪ್ತಿ ಪಡೆದಿದ್ದ. ಸ್ವಾಭಿಮಾನ ರಹಿತ ಹೆಂಗಸರು ಮತ್ತು ಗಂಡಸರನ್ನು ಕಂಡಾಗ ಆಗಾಗ ಜಿಗುಪ್ಸೆಗೊಳ್ಳುತ್ತಿದ್ದ. ಇಡೀ ದಿನವನ್ನು ತನ್ನ ನಾಯಿಗಳ ಜೊತೆಯಲ್ಲಿ ಒಂಟಿಯಾಗಿ, ಜೊತೆಗೆ ಮೀಸಲಿರಿಸಿದ್ದ ಸುಂದರ ಬೆಟ್ಟಗುಡ್ಡಗಳಲ್ಲಿ ಕಳೆಯುತ್ತಿದ್ದ. ನೀತಿಗೆಟ್ಟ ಸುಂದರ ಹೆಂಗಸಿನ ಮೇಲಿನ ಜಯಕ್ಕಿಂತ, ಗತ್ತಿನಿಂದ ಹೆಜ್ಜೆ ಹಾಕುವ ಹರಿಣ ಹಾಗು ಬಂದೂಕಿನ ಹೊಡೆತವೇ ಅವನನ್ನು ಹೆಚ್ಚು ಸಂತೋಷಗೊಳಿಸಿತ್ತು.

ನಂತರ ಸಮುದ್ರ ಸಂಚಾರ ಮಾಡುವ ಸಮಯದಲ್ಲಿ ಅವನಿಗೆ ಯಾರೊಡನೆಯೂ ಹೆಚ್ಚು ಬೆರೆಯದ, ರಾಯಭಾರಿಯ ಬಳುಕುವ ಮೈಯಿನ ಪತ್ನಿಯನ್ನು ನೋಡುವ ಅವಕಾಶ ದೊರೆಯಿತು. ಆಕೆ ಉತ್ತರದ ಶ್ರೀಮಂತ ಪದವಿ ಹೊಂದಿದ್ದು ಅನೇಕ ಸುಂದರ ಯುವತಿಯರಲ್ಲಿ, ಶ್ರೀಮಂತ ಯುವಕರಲ್ಲಿ ಉತ್ತಮ ಸ್ಥಾನ ಹೊಂದಿದ್ದಳು. ಯಾರೂ ತನಗೆ ಸಾಟಿಯಿಲ್ಲವೆಂಬಂತೆ ಆಕೆ ಹೆಮ್ಮೆಯ, ಸೌಮ್ಯ ಹೆಣ್ಣಾಗಿದ್ದಳು.

ಅವನು ಆಕೆಯನ್ನು ಗಮನಿಸಿದಾಗ ತಾತ್ಸಾರದಿಂದ ತನ್ನನ್ನು ಉಪೇಕ್ಷಿಸುತ್ತಿದ್ದ ಅವಳ ದೃಷ್ಟಿಯಿಂದಾಗಿ ಪ್ರಥಮ ಬಾರಿಗೆ ಪ್ರೀತಿಯೆಂದರೇನು ಎಂಬುದನ್ನು ಅನುಭವಿಸಿದಂತಾಯಿತು. ಅವನು ಆಕೆಯ ಹೃದಯ ಗೆಲ್ಲಬೇಕೆಂಬ ಛಲತೊಟ್ಟ. ಆನಂತರ ದಿವಸದ ಪ್ರತಿಯೊಂದು ಘಂಟೆಯೂ ಅವನು ಆಕೆಯ ಹಾಗೂ ಆಕೆಯ ದೃಷ್ಟಿಯ ಹತ್ತಿರವೇ ಇರುತ್ತಿದ್ದ. ಏಕೆಂದರೆ ಆತ ಸ್ವತಃ ಯಾವಾಗಲೂ ಹೊಗಳುತ್ತಿದ್ದ. ಹಾಗು ವಿಚಾರಿಸಲು ಬರುತ್ತಿದ್ದ ಜನರಿಂದ ತುಂಬಿರುತ್ತಿದ್ದ. ರಾಜ ರಾಣಿಯರಂತೆ ಆತ ಮತ್ತು ಆ ಸುಂದರ ಹೆಂಗಸು ಪ್ರವಾಸಿಗರ ಕೇಂದ್ರದಲ್ಲಿರುತ್ತಿದ್ದರು. ನಸು ಹೊಂಬಣ್ಣದ ಆಕೆಯ ಗಂಡ ಅವನನ್ನು ಗೌರವದಿಂದ ಆತಿಥ್ಯ ಮಾಡುತ್ತಿದ್ದ. ಅಲ್ಲದೆ ಅವನನ್ನು ಒಲಿಸಿಕೊಳ್ಳಲು ಕಷ್ಟಪಡುತ್ತಿದ್ದ.

ಪಟ್ಟಣವನ್ನು ಸುತ್ತಲು ಹೊರಟಿದ್ದ ಪ್ರವಾಸಿಗರ ಇಡೀ ತಂಡ ತಿರುಗಿ ಬರುವವರೆಗೆ ದಕ್ಷಿಣ ಬಂದರಿನಲ್ಲಿ ಸುಂದರವಾದ ಅಪರಿಚಿತಳೊಡನೆ ಒಂಟಿಯಾಗಿರುವುದು ಅವನಿಂದ ಖಂಡಿತ ಸಾಧ್ಯವಿರಲಿಲ್ಲ. ಆತ ತನ್ನ ಕಾಲಿನ ಅಡಿಯಲ್ಲಿ ಭೂಮಿಯ ಸ್ಪರ್ಶದ ಅನುಭವ ಪಡೆಯಲು ಪ್ರೇಯಸಿಯ ಪಕ್ಕದಿಂದ ಕದಲಲಿಲ್ಲ. ಒಡನೆಯೆ ರಂಗುರಂಗಿನ ನಗರದ ಬಗ್ಗೆ ಮಾತನಾಡುತ್ತ, ಆ ಸಂಭಾಷಣೆಯಲ್ಲಿ ಅವಳನ್ನು ತಡೆದು ನಿಲ್ಲಿಸಲು ಸಫಲನಾದ. ಆತ ಆಕೆಯನ್ನು ಕರೆದೊಯ್ದ ಹಾದಿಯಲ್ಲಿ ಲೆಕ್ಕವಿಲ್ಲದಷ್ಟು ಕಪ್ಪುಗಲ್ಲಿಗಳು ಆ ಚೌಕವನ್ನು ಸೇರಿದ್ದವು. ಆಕೆ ನಂಬಿಕೆಯಿಂದ ಅವನ ಜೊತೆ ನಡೆದಳು. ಆದರೆ ಆಕೆ ತಾನು ಒಬ್ಬಳೇ ಆತನೊಂದಿಗಿರುವುದು ಎಂಬುದನ್ನು ಅರಿತಾಗ ಭಯಗೊಂಡಳು. ತಮ್ಮ ಸಹ ಪ್ರಯಾಣಿಕರಿಗಾಗಿ ಸುತ್ತಲೂ ನೋಡಿದಳು. ಆತ ಭಾವೋದ್ರೇಕದಿಂದ ಆಕೆಯ ಕಡೆ ತಿರುಗಿ ಆಕೆಯ ಒಲ್ಲದ ಕೈಗಳನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಹಡಗನ್ನು ಬಿಟ್ಟು ತನ್ನ ಜೊತೆಯಲ್ಲಿ ಓಡಿ ಬರುವಂತೆ ಕೇಳಿಕೊಂಡ.

ತರುಣ ಹೆಂಗಸಿನ ಮುಖ ಬಿಳಿಚಿಕೊಂಡಿತು. ಆಕೆಯ ದೃಷ್ಟಿ ಭೂಮಿಯನ್ನು ನೆಟ್ಟಿತು. 'ಓ ಇದು ವೀರರಿಗೆ ಯೋಗ್ಯವಾದ ಕೆಲಸವಲ್ಲ' ಆಕೆ ಮೃದುವಾಗಿ ನುಡಿದಳು. 'ನೀನು ಈಗಷ್ಟೆ ಹೇಳಿದುದನ್ನು ಮರೆಯಲು ನನ್ನನ್ನು ಸಮ್ಮತಿಸು'.

'ನಾನು ವೀರನಲ್ಲ' ಅಗಸ್ಟಸ್ ಕಿರುಚಿದ. 'ನಾನು ಪ್ರಿಯಕರ, ಪ್ರಿಯಕರ ತನ್ನ ಪ್ರೇಯಸಿಯನ್ನು ಬಿಟ್ಟು ಬೇರೇನನ್ನೂ ತಿಳಿದಿಲ್ಲ. ಆಕೆಯನ್ನು ಬಿಟ್ಟು ಬೇರೆ ಯಾವ

ಯೋಚನೆಗಳೂ ಇಲ್ಲ. ಓ ಸುಂದರಿಯೇ, ನನ್ನೊಡನೆ ಓಡಿ ಬಾ. ನಾವು ಸಂತೋಷ ವಾಗಿರುತ್ತೇವೆ.'

ಆಕೆ ತನ್ನ ಕವಲದ ನೀಲಿ ಕಣ್ಣುಗಳಿಂದ ಗಂಭೀರವಾಗಿ ಆಕ್ಷೇಪಿಸುವವಳಂತೆ ಅವನನ್ನು ನೋಡಿದಳು. 'ನಿನಗೆ ಹೇಗೆ ತಿಳಿದಿದೆ.' ಆಕೆ ದುಃಖದಿಂದ ಉಸುರಿದಳು. 'ನಾನು ನಿನ್ನನ್ನು ಪ್ರೀತಿಸುತ್ತೇನೆಂದು? ನಾನು ನಿನ್ನನ್ನು ದ್ವೇಷಿಸಲಾರೆ; ನಾನು ನಿನ್ನನ್ನು ಪ್ರೀತಿಸುತ್ತೇನೆ. ನೀನು ನನ್ನ ಗಂಡನಾಗಿರಬೇಕಿತ್ತೆಂದು ನಾನು ಮೇಲಿಂದ ಮೇಲೆ ಬಯಸುತ್ತೇನೆ. ನನ್ನ ಪೂರ್ಣ ಹೃದಯದಿಂದ ಮೊದಲಿಗೆ ಪ್ರೀತಿಸಿದ್ದು ನಿನ್ನನ್ನೆ. ಅಯ್ಯೋ, ಪ್ರೀತಿ ದಾರಿ ತಪ್ಪಿ ಅಷ್ಟು ದೂರ ಹೇಗೆ ಹೋಗುತ್ತದೆ ! ಶುಭ್ರನಲ್ಲದ, ಒಳ್ಳೆಯವನಲ್ಲದ ಮನುಷ್ಯನನ್ನು ಪ್ರೀತಿಸಲು ನನಗೆ ಸಾಧ್ಯ ಎಂದು ಎಂದೂ ಯೋಚಿಸಿರಲಿಲ್ಲ. ನಾನು ನನ್ನ ಗಂಡನನ್ನು ಪ್ರೀತಿಸದಿದ್ದರೂ ಅವನ ಜೊತೆಗಿರಬೇಕೆಂದೇ ಇಚ್ಛಿಸುತ್ತೇನೆ. ಆತನಲ್ಲಿ ವೀರಯೋಧನಿಗೆ ಬೇಕಾದ ಎಲ್ಲ ಗೌರವಗಳಿವೆ, ಆತ ವೀರಪುರುಷ. ಆದರೆ ಇವೆಲ್ಲ ನಿನಗೆ ಅಸಂಗತವಾದವು. ಈಗ ಮತ್ತೇನನ್ನೂ ಹೇಳಬೇಡ. ನನ್ನನ್ನು ಪುನಃ ಹಡಗಿಗೆ ಕರೆದುಕೊಂಡು ಹೋಗು. ಇಲ್ಲವಾದರೆ ನಾನು ನಿನ್ನ ದುರಹಂಕಾರದ ವಿರುದ್ಧ ನನ್ನನ್ನು ರಕ್ಷಿಸಿಕೊಳ್ಳಲು ಅಪರಿಚಿತರನ್ನು ಕರೆಯಬೇಕಾಗುತ್ತದೆ.'

ಆತ ತೀವ್ರವಾಗಿ ಚಡಪಡಿಸಿದ. ಆಕೆಯನ್ನು ಬೇಡಿದ. ಆಕೆ ಆತನಿಗೆ ಬೆನ್ನು ಮಾಡಿ ಒಬ್ಬಳೇ ಹೊರಟಳು. ಆತ ಮೌನವಾಗಿ ಆಕೆಯನ್ನು ಹಿಂಬಾಲಿಸಿದ. ಅಲ್ಲದೆ ಹಡಗಿನವರೆಗೂ ಅವಳ ಸಹಚರನಾಗಿ ಬಂದ. ಅಲ್ಲಿ ತನ್ನ ಪೆಟ್ಟಿಗೆಯನ್ನು ತೆಗೆದುಕೊಂಡು ಯಾರಿಗೂ ಹೇಳದೆ ಹೊರಟುಹೋದ.

ಅಲ್ಲಿಂದ ಮುಂದೆ, ಅತಿಯಾಗಿ ಪ್ರೀತಿಸಲ್ಪಡುತ್ತಿದ್ದ ಅವನ ಅದೃಷ್ಟ ಬದಲಾಯಿತು. ಸದ್ಗುಣ ಮತ್ತು ಯಶಸ್ಸುಗಳು ದ್ವೇಷಿಗಳಾದವು. ಆತ ಅವುಗಳನ್ನು ಪಾದದಡಿ ಹಾಕಿ ತುಳಿದ. ಅಲ್ಲದೆ, ತನ್ನ ಯಕ್ಷಣಿ ತಂತ್ರದಿಂದ ಸದ್ಗೃಹಿಣಿಯರ ಶೀಲ ಕೆಡಿಸಿದ್ದಕ್ಕಾಗಿ, ಅತಿ ಬೇಗನೆ ಎಲ್ಲರನ್ನೂ ತನ್ನ ಗೆಳೆಯರನ್ನಾಗಿ ಮಾಡಿಕೊಂಡ ಪಾಪಕ್ಕಾಗಿ ತನ್ನ ಮನಸ್ಸನ್ನು ಪರಿವರ್ತಿಸಿಕೊಂಡ. ಅಲ್ಲದೆ, ಅವೆಲ್ಲವನ್ನೂ ತಿರಸ್ಕರಿಸಿ ಸಂಪೂರ್ಣ

ವಾಗಿ ತೂರಿದು ಬಿಟ್ಟ. ಆತ ಹುಡುಗಿಯರನ್ನು ಬಡತನಕ್ಕಿಳಿಸಿ ಹಾಗೆ ತಕ್ಷಣವೆ ತಿರಸ್ಕರಿಸಿ ಬಿಟ್ಟ. ಆತನನ್ನು ತಣಿಸದ ಮತ್ತು ಆತ ಬರಿದು ಮಾಡಿದ ಯಾವುದೇ ಸಂತೋಷವೂ ಇರಲಿಲ್ಲ. ಆತ ರೂಢಿಸಿಕೊಳ್ಳದ, ತೊಡೆದು ಹಾಕದ ಯಾವುದೇ ಅವಗುಣಗಳೂ ಇರಲಿಲ್ಲ. ಆದರೆ, ಯಾವುದೇ ಸಂತೊಷವೂ ಅವನ ಹೃದಯದಲ್ಲಿ ಬಹುಕಾಲ ಉಳಿಯಲಿಲ್ಲ. ಎಲ್ಲೆಡೆಯೂ ಕೈ ಚಾಚಿದ ಪ್ರೀತಿಗೆ ಆತನ ಆತ್ಮ ಪ್ರತಿ ಧ್ವನಿಸಲಿಲ್ಲ.

ಆತ ಸಮುದ್ರ ತೀರದಲ್ಲಿದ್ದ ಹಳ್ಳಿಯ ಮನೆಯೊಂದರಲ್ಲಿ ಅಸಮಾಧಾನ ದಿಂದ ಚಿಂತಾಕ್ರಾಂತನಾಗಿದ್ದ. ಆತನಲ್ಲಿಗೆ ಬಂದ ಹೆಂಗಸರು, ಗಂಡಸರನ್ನೆಲ್ಲ ತನಗಿಚ್ಛೆ ಬಂದಂತೆ ಈರ್ಷೆಯಿಂದ ಕಂಡು ಯಾತನೆಗೀಡುಮಾಡಿದ. ಅವರನ್ನು ಹಂಗಿಸಿ ಅವಮಾನ ಮಾಡುವುದರಲ್ಲಿ ಆನಂದವನ್ನು ಕಂಡ. ಅವನ ಸುತ್ತ ಆವರಿಸಿದ್ದ ಇಚ್ಛಿಸಿದ, ಬಯಸದ, ಪ್ರೀತಿಗೆ ಯೋಗ್ಯವಲ್ಲದವುಗಳಿಂದ ಅತೃಪ್ತನಾದ. ಅಸ್ತವ್ಯಸ್ತಗೊಂಡ ಬದುಕಿನ ನಿಷ್ಪ್ರಯೋಜಕತೆಯನ್ನು ಸರಳವಾಗಿ ಸ್ವೀಕರಿಸಿದ. ತನ್ನ ಬಯಕೆಯನ್ನು ಪೂರೈಸಿ ಕೊಳ್ಳುವುದಕ್ಕಾಗಿ ಬಹುಕಾಲ ಆಹಾರವನ್ನು ಸೇವಿಸದೆ ಹಸಿವಿನಿಂದ ಬಸವಳಿದ.

ಆತ ಅನಾರೋಗ್ಯದಿಂದ ಇದ್ದಾನೆ, ಆತನಿಗೆ ಏಕಾಂತತೆ ಮತ್ತು ಶಾಂತಿ ಬೇಕಾಗಿದೆ ಎಂಬ ಸುದ್ದಿ ಆತನ ಗೆಳೆಯರಲ್ಲಿ ಹಬ್ಬಿತ್ತು. ಕಾಗದಗಳು ಬಂದವು. ಆದರೆ ಆತ ಅವುಗಳನ್ನು ಓದಲಿಲ್ಲ. ಚಿಂತಾಕ್ರಾಂತರಾದ ಜನರು ಆತನ ಸೇವಕನ ಮೂಲಕ ಆತನ ಆರೋಗ್ಯವನ್ನು ವಿಚಾರಿಸಿದರು. ಆತ ತೀವ್ರ ಅಸ್ವಸ್ಥತೆಯಿಂದ ಕೊಠಡಿಯಲ್ಲಿ ಕುಳಿತ, ಆತನ ಬದುಕು ಶೂನ್ಯವಾಯಿತು. ಅಲೆಯ ತಳದಲ್ಲಿ ಉಪ್ಪಿನ ಸಮುದ್ರ ಇರುವಂತೆ ಪ್ರೀತಿಯಿಂದ ವಂಚಿತನಾದ ಅವನ ಸುತ್ತ ಒಂಟಿತನ ಆವರಿಸಿತು. ದೊಡ್ಡ ಕಿಟಕಿಯ ಹತ್ತಿರದ ಕುರ್ಚಿಯಲ್ಲಿ ಆತ ಅಡಗಿಕೊಂಡಂತೆ , ಆತನ ಮುಖವೂ ಮರೆಯಾಯಿತು. ಆತ, ಆತನೊಂದಿಗೇ ಒಂದಾಗಬೇಕಿತ್ತು. ಬಿಳಿಯ ಕಡಲಕಾಗೆಗಳು ಹಾರಿಹೋದವು. ಅವನು ಅವುಗಳನ್ನು ನಿರ್ಜೀವ ಶವದಂತೆ ದೃಷ್ಟಿಸಿದ. ಅವನು ತನ್ನ ಮೌನ ಮುರಿದು ಹಾಡಲೆತ್ನಿಸಿದಾಗ ಕೇವಲ ಅವನ ತುಟಿಗಳು ಒರಟಾಗಿ, ಅಳಿನಗು ವಿನಿಂದ ಚಲಿಸಿದವು. ಒಂದು ದಿನ ತನ್ನ ಸ್ನೇಹಿತರನ್ನೆಲ್ಲ ಊಟಕ್ಕೆ ಆಹ್ವಾನಿಸಬೇಕೆಂದು

ಆಜ್ಞಾಪಿಸಿದ. ಅದರ ಉದ್ದೇಶ ತನ್ನ ಸತ್ತ ಶವವನ್ನು ಬರಿದಾದ ಮನೆಯನ್ನು ತೋರಿಸಿ ಅವರಿಗೆ ಆಘಾತವನ್ನುಂಟುಮಾಡುವುದಾಗಿತ್ತು. ವಿಷ ಕುಡಿದು ಜೀವನವನ್ನು ಅಂತ್ಯ ಗೊಳಿಸಲಿಚ್ಛಿಸಿದ.

ನಿಗದಿ ಪಡಿಸಿದ ಊಟದ ದಿನದಂದು ತನ್ನ ಕೆಲಸಗಾರರು, ಸೇವಕರನ್ನೆಲ್ಲ ಮನೆಯಿಂದ ಹೊರಗೆ ಕಳುಹಿಸಿದ. ದೊಡ್ಡ ಕೊಠಡಿಗಳನ್ನೆಲ್ಲ ಮೌನ ಆವರಿಸಿತು. ತನ್ನ ಮಲಗುವ ಕೋಣೆಗೆ ಹೋದ. ದ್ರಾಕ್ಷಾರಸದೊಂದಿಗೆ ಮರಣಾಂತಿಕ ವಿಷವನ್ನು ಬೆರೆಸಿ ತನ್ನ ತುಟಿಗಿರಿಸಿದ.

ಇನ್ನೇನು ಕುಡಿಯಬೇಕು ಅಷ್ಟರಲ್ಲಿ ಬಾಗಿಲು ಬಡಿದ ಶಬ್ದವಾಯಿತು. ಅವನು ಓಗೊಳ್ಳದಿದ್ದಾಗ ಬಾಗಿಲು ತೆರೆದುಕೊಂಡಿತು. ಗಿಡ್ಡ ವೃದ್ಧನೊಬ್ಬ ಒಳಗೆ ಬಂದ. ಆತ ನೇರವಾಗಿ ಅಗಸ್ಟಸ್ ಹತ್ತಿರ ನಡೆದ. ಜಾಗ್ರತೆಯಿಂದ ಅವನ ಕೈಲಿದ್ದ ಲೋಟವನ್ನು ತೆಗೆದುಕೊಂಡ; ನಂತರ ಆ ಪರಿಚಿತ ಧ್ವನಿ ಹೇಳಿತು. 'ಸಂಜೆಯ ನಮಸ್ಕಾರಗಳು ಅಗಸ್ಟಸ್, ನೀನು ಹೇಗಿದ್ದೀಯೇ? ಜೀವನ ಹೇಗೆ ಸಾಗುತ್ತಿದೆ?'

ಸ್ತಂಭೀಭೂತನಾಗಿ ಕೋಪೋದ್ರಿಕ್ತನಾದ. ಆದರೆ ಅದೇ ಸಮಯದಲ್ಲಿ ನಾಚಿಕೆಯಿಂದ ನಲುಗಿದ ಅಗಸ್ಟಸ್ ವ್ಯಂಗ್ಯನಗೆ ನಕ್ಕು ಹೇಳಿದ; 'ಹೆರ್‌ಬಿನ್ಸ್‌ವಾಂಗ್ ನೀನಿನ್ನೂ ಬದುಕಿದ್ದೀಯೇ? ಬಹಳ ಕಾಲ ಕಳೆದು ಹೋಗಿದೆ. ಆದರೆ ನೀನಿನ್ನೂ ಹಾಗೇ ಇದ್ದೀಯೇ. ಓ ನನ್ನ ಆತ್ಮೀಯನೆ, ಈ ಕ್ಷಣದಲ್ಲಿ ನೀನು ನನಗೆ ಅಡಚಣೆಯುಂಟು ಮಾಡುತ್ತಿದ್ದೀಯೆ. ನಾನು ಬಳಲಿದ್ದೇನೆ; ಆದ ಕಾರಣ ನಿದ್ರೆಯ ಕಷಾಯವನ್ನು ಈಗ ತೆಗೆದುಕೊಳ್ಳುವುದರಲ್ಲಿದ್ದೆ.'

'ಓಹೋ ಹಾಗೋ,' ಅವನ ಧರ್ಮೀಯ ತಂದೆ ಶಾಂತವಾಗಿ ಉತ್ತರಿಸಿದ. ನೀನು ನಿದ್ರೆಯ ಕಷಾಯ ತೆಗೆದುಕೊಳ್ಳುವುದರಲ್ಲಿದ್ದೆ. ನೀನು ಮಾಡುತ್ತಿರುವುದು ಸರಿ, ಇದೇ ಕಡೆಯ ದ್ರಾಕ್ಷಾರಸ. ಅದು ಈಗಲೂ ನಿನಗೆ ಸಹಕಾರಿಯಾಗಬಲ್ಲುದು. ಆದರೆ ಅದಕ್ಕೆ ಮೊದಲು ಒಂದು ನಿಮಿಷ ಮಾತನಾಡೋಣ. ನಾನು ಬಹುದೂರದಿಂದ ಬಂದಿರುವುದರಿಂದ ಕೊಂಚ ದ್ರಾಕ್ಷಾರಸ ಕುಡಿದರೆ ನೀನು ತಪ್ಪು ಭಾವಿಸುವುದಿಲ್ಲ ತಾನೆ.

ಹಾಗೆ ಹೇಳುತ್ತಿದ್ದಂತೆ ಆತ ಲೋಟವನ್ನು ತೆಗೆದು ತುಟಿಗಿಟ್ಟ. ಅಗಸ್ಟಸ್ ತಡೆಯುವದರೊಳಗಾಗಿ ಲೋಟವನ್ನು ಎತ್ತಿ ಒಂದೇ ಗುಟುಕಿಗೆ ಕುಡಿದು ಖಾಲಿ ಮಾಡಿ ಬಿಟ್ಟ.

ಅಗಸ್ಟಸ್ ಶವದಂತೆ ಕಳೆಗುಂದಿದ. ತನ್ನ ಧರ್ಮೀಯ ತಂದೆಯ ಹತ್ತಿರ ನೆಗೆದು ಭುಜ ಹಿಡಿದು ಅಲುಗಿಸಿ ತೀಕ್ಷ್ಣಧ್ವನಿಯಿಂದ ಕೂಗಿದ; 'ಓ ವೃದ್ಧನೇ, ನೀನು ಈಗ ಏನು ಕುಡಿದೆ ಎಂದು ಗೊತ್ತೆ?'

ಹೆರ್‌ಬಿನ್ಸ್‌ವಾಂಗ್ ತನ್ನ ಚತುರ ಬಿಳಿಗೂದಲ ತಲೆಯನ್ನು ಆಡಿಸಿ ಮುಗುಳ್ನಕ್ಕ. 'ಇದು ದ್ರಾಕ್ಷಾರಸ. ನನಗೆ ಗೊತ್ತು. ಇದು ಕೆಟ್ಟದಲ್ಲ. ನಿನಗೆ ಅದರ ಆಗತ್ಯವಿದೆ ಎಂದು ನನಗೆ ತೋರುತ್ತಿಲ್ಲ. ನನಗೀಗ ಹೆಚ್ಚು ಕಾಲವಿಲ್ಲ. ನೀನು ಈಗ ಕೇಳುವುದಾದರೆ ನಾನು ನಿನ್ನನ್ನು ಹೆಚ್ಚು ಸಮಯ ತಡೆಯುವುದಿಲ್ಲ.'

ದಿಗ್ಭ್ರಾಂತನಾಗಿ ಅಗಸ್ಟಸ್ ತನ್ನ ಧರ್ಮೀಯ ತಂದೆಯ ಹೊಳಪು ಕಣ್ಣುಗಳನ್ನು ಭಯದಿಂದ, ಯಾವುದೇ ಕ್ಷಣದಲ್ಲಾದರೂ ಕಳಚಿ ಬೀಳುವನೆಂಬ ಆತಂಕದಿಂದ ದೃಷ್ಟಿಸಿದ.

ಆದರೆ ಹೆರ್‌ಬಿನ್ಸ್‌ವಾಂಗ್ ಕುರ್ಚಿಯಲ್ಲಿ ಆರಾಮವಾಗಿ ಕುಳಿತು ತರುಣ ಗೆಳೆಯನತ್ತ ಕರುಣೆಯಿಂದ ತಲೆಯಾಡಿಸಿದ.

'ಈ ದ್ರಾಕ್ಷಾರಸ ನನಗೆ ಆಘಾತವನ್ನುಂಟು ಮಾಡುತ್ತದೆಂದೂ ನೀನು ಭಯದಿಂದ ಚಿಂತಿಸುವೆಯಾ ? ಈಗ ಸುಧಾರಿಸಿಕೋ. ನೀನು ನನ್ನ ಬಗ್ಗೆ ಚಿಂತಿಸುವುದನ್ನು ಕಂಡು ಸಂತಸವಾಗಿದೆ. ನಾನು ಇದನ್ನು ನಿರೀಕ್ಷಿಸಿರಲಿಲ್ಲ. ನಾವೀಗ ಬಹಳ ಕಾಲದ ಹಿಂದೆ ಮಾತನಾಡುತಿದ್ದಂತೆ ಮಾತಾಡೋಣ. ನನಗನ್ನಿಸುತ್ತದೆ. ನೀನು ಹುಡುಗಾಟಿಕೆಯಲ್ಲಿ ತೃಪ್ತಿ ಕಾಣುತ್ತಿದ್ದೀಯೇ? ನಾನು ಆದನ್ನು ಅರ್ಥ ಮಾಡಿಕೊಳ್ಳಬಲ್ಲೆ. ನಾನು ಇಲ್ಲಿಂದ ಹೋದ ಮೇಲೆ ನೀನು ಮತ್ತೆ ಲೋಟಕ್ಕೆ ತುಂಬಿ ಕುಡಿಯಬಹುದು. ಆದರೆ ಅದಕ್ಕೆ ಮೊದಲು ನಾನು ಸ್ವಲ್ಪ ಹೇಳಲೇಬೇಕಾಗಿದೆ.'

ಅಗಸ್ಟಸ್ ಗೋಡೆಗೊರಗಿ ಕುಳ್ಳ ವೃದ್ಧನ ಒಳ್ಳೆಯ ಕರುಣೆತುಂಬಿದ ಧ್ವನಿಯನ್ನು ಕೇಳಿದ. ಆ ಧ್ವನಿ ಆತನಿಗೆ ಬಾಲ್ಯದಿಂದಲೂ ಚಿರಪರಿಚಿತವಾಗಿತ್ತು. ಅದು ಅವನ ಹೃದಯದಲ್ಲಿ ಗತಕಾಲದ ಪ್ರತಿಧ್ವನಿಗಳನ್ನು ಎಚ್ಚರಿಸಿತು. ತನ್ನ ಗತಿಸಿದ ಮುಗ್ಧ ಬಾಲ್ಯವನ್ನು ಜ್ಞಾಪಿಸಿಕೊಂಡು ತೀವ್ರ ನಾಚಿಕೆ ಹಾಗೂ ದುಃಖವೂ ಆವರಿಸಿಕೊಂಡಿತು.

'ನಾನು ನಿನ್ನ ವಿಷವನ್ನು ಕುಡಿದಿದ್ದೇನೆ.' ವೃದ್ಧ ಹೇಳುತ್ತ ಹೋದ. 'ಏಕೆಂದರೆ ನಿನ್ನೆಲ್ಲ ಸಂಕಟಕ್ಕೆ ತೊಂದರೆಗೆ ನಾನೇ ಜವಾಬ್ದಾರ. ನಿನಗೆ ಪವಿತ್ರ ಸ್ನಾನ ಮಾಡಿಸುವಾಗ ನಿನಗಾಗಿ ನಿನ್ನ ತಾಯಿ ಹಾರೈಸಿದಳು. ಅದು ಒಂದು ಕ್ಷುದ್ರ ಬಯಕೆ ಎಂದು ತಿಳಿದಿದ್ದರೂ, ನಾನು ಆಕೆಗಾಗಿ ಅದನ್ನು ಆಗುಮಾಡಿದೆ. ಅದು ಏನೆಂದು ನಾನು ನಿನಗೆ ಹೇಳುವ ಅಗತ್ಯವಿಲ್ಲ; ನೀನೇ ಅರಿತು ಕೊಂಡಿರುವಂತೆ ಅದು ಶಾಪವಾಗಿ ಪರಿಣಮಿಸಿತು. ಅದು ಈ ರೀತಿ ಪರಿಣಮಿಸಿದ್ದಕ್ಕೆ ಪಶ್ಚಾತ್ತಾಪ ಪಡುತ್ತೇನೆ. ನಿನ್ನೊಡನೆ ಮತ್ತೊಮ್ಮೆ ಬೆಂಕಿಯ ಮುಂದೆ ಕುಳಿತು ಪುಟ್ಟ ದೇವತೆಗಳು ಹಾಡುವುದನ್ನು ಕೇಳುವುದಕ್ಕೆ ಅವಕಾಶವಾಗುತ್ತದೆ ಎನ್ನುವುದಾದಲ್ಲಿ, ನಾನು ಬದುಕಿದರೆ ಸಂತೋಷವಾಗುತ್ತದೆ. ಆದರೆ ಅದು ಅಷ್ಟು ಸುಲಭವಲ್ಲ, ಈ ಕ್ಷಣದಲ್ಲಿ ಅದು ಅಸಾಧ್ಯ ಎಂದು ನಿನಗೆ ತೋರುತ್ತಿದೆ. ಏಕೆಂದರೆ ನಿನ್ನ ಹೃದಯ ಮತ್ತೊಮ್ಮೆ ಸದೃಢವಾಗಿ, ಪವಿತ್ರವಾಗಿ ಸಂತೊಷದಿಂದ ಇರದು. ಆದರೆ ಅದು ಸಾಧ್ಯವಿದೆ, ಪ್ರಯತ್ನಿಸು ಎಂದು ನಾನು ನಿನ್ನನ್ನು ಬೇಡಿಕೊಳ್ಳುತ್ತೇನೆ. ನಿನ್ನ ಬಡತಾಯಿಯ ಬಯಕೆ ನಿನಗೆ ಸರಿಹೊಂದುವುದಿಲ್ಲ. ಅಗಸ್ಟಸ್, ಈಗ ನೀನು ನನಗೆ ಬಯಕೆಯನ್ನು ಈಡೇರಿಸಲು ಅವಕಾಶವಿತ್ತರೆ ಯಾವುದೇ ಬಯಕೆ ಹೇಗೆ ಸಾಧ್ಯ? ಈಗ ನಿನ್ನ ಅರಿವಿಗೆ ಬಂದಿರುವಂತೆ ನಿನಗೆ ಹಣ ಬೇಕಿಲ್ಲ, ಆಸ್ತಿ ಬೇಕಿಲ್ಲ, ಅಧಿಕಾರ ಬೇಕಿಲ್ಲ, ಹೆಂಗಸರ ಪ್ರೀತಿ ಬೇಕಿಲ್ಲ; ಈ ಎಲ್ಲವನ್ನು ನೀನು ಸಾಕಷ್ಟು ಅನುಭವಿಸಿದ್ದೀಯೆ. ಎಚ್ಚರಿಕೆಯಿಂದ ಯೋಚಿಸು. ಯಾವುದೇ ಮಾಂತ್ರಿಕ ಶಕ್ತಿಯಿಂದ ನೀನು ಅನುಭವಿಸಿದ ಜೀವನ ಉತ್ತಮವಾದದ್ದೂ, ಸುಂದರವಾದದ್ದೂ; ಅದು ನಿನ್ನನ್ನು ಮತ್ತೊಮ್ಮೆ ಸಂತಸಗೊಳಿಸುತ್ತದೆ ಎನ್ನುವುದಾದರೆ ನಿನಗಾಗಿ ಹಾರೈಸಿಕೋ.'

ಅಗಸ್ಟಸ್ ಚಿಂತನೆಯ ಆಳಕ್ಕೆ ಮುಳುಗಿ ಮೌನಿಯಾದ. ಅವನಾಗಲೆ ಆಯಾಸಗೊಂಡಿದ್ದ. ಭರವಸೆ ಇಂಗಿ ಹೋಗಿತ್ತು. ಕ್ಷಣಕಾಲದ ನಂತರ ಹೇಳಿದ,

'ಧರ್ಮೀಯ ತಂದೆ ಹೆರ್ ಬಿನ್ಸ್‌ವಾಂಗ್ ರವರೆ ನಿಮಗೆ ಧನ್ಯವಾದಗಳು. ನನ್ನ ಬದುಕಿನ ಸಿಕ್ಕು ಬಿಡಿಸುವ ಯಾವ ಸಾಧನವೂ ಇಲ್ಲ ಎಂಬುದು ನನಗೆ ಗೊತ್ತು. ನೀವು ಬಂದಾಗ ನಾನು ಏನು ಮಾಡಬೇಕೆಂದು ತೀರ್ಮಾನಿಸಿದ್ದೆನೋ ಅದನ್ನು ಮಾಡುವುದು ಉತ್ತಮ. ಆದರೆ ನೀವು ಬಂದದಕ್ಕೆ ನನ್ನ ಕೃತಜ್ಞತೆಗಳು.'

'ಹೌದು,' ವೃದ್ಧ ಆಲೋಚಿಸಿ ಹೇಳಿದ. 'ಇದು ನಿನಗೆ ಅಷ್ಟು ಸುಲಭವಲ್ಲ ಎಂಬುದನ್ನು ನಾನು ಊಹಿಸಬಲ್ಲೆ. ಆದರೆ ನೀನು ಮತ್ತೊಮ್ಮೆ ಆಲೋಚಿಸು ಅಗಸ್ಟಸ್. ಸೈದ್ಧಾಂತಿಕ ಕೊರತೆಯನ್ನು ಬಹುಶಃ ನೀನು ಜ್ಞಾಪಿಸಿಕೊಳ್ಳಬಹುದು, ಅಥವಾ ನಿನ್ನ ತಾಯಿ ಬದುಕಿದ್ದ ಆ ಕಾಲವನ್ನ. ಆಗ ನೀನು ಆಗಾಗ್ಗೆ ಸಂಜೆಯ ಸಮಯ ಬಂದು ನನ್ನನ್ನು ನೋಡುತ್ತಿದ್ದುದನ್ನು, ಆಗ ನಿನಗೆ ಜ್ಞಾನೋದಯವಾಗಬಹುದು. ಬಹುಶಃ ಆಗ ನೀನು ಕೆಲವೊಮ್ಮೆ ಆನಂದಂದಿದ್ದೆ. ನೀನು ಇರಲಿಲ್ಲವೆ ?'

'ಹೌದು, ಆ ದಿನಗಳಲ್ಲಿ' ಒಪ್ಪಿಗೆಯನ್ನು ಸೂಚಿಸುತ್ತ ಅಗಸ್ಟಸ್ ಹೇಳಿದ. ಬಾಲ್ಯದಿನದ ಚಿತ್ರಣಗಳೆಲ್ಲ ಕಣ್ಣಮುಂದೆ ಮುಸುಕಾಗಿ ಗತಿಸಿದ ಕಾಲ ಕನ್ನಡಿಯಲ್ಲಿ ಪ್ರತಿಫಲಿಸಿದವು. 'ಆದರೆ ಆ ದಿನಗಳು ಮತ್ತೆ ಬರಲಾರವು. ನಾನು ಮತ್ತೊಮ್ಮೆ ಮಗು ವಾಗಲು ಇಚ್ಛಿಸುವುದಿಲ್ಲ. ಏಕೆ? ಹಾಗಾದರೆ ಮತ್ತೆ ಎಲ್ಲವೂ ಪುನರಾವತಾರ ವಾಗುತ್ತದೆ.'

'ಇಲ್ಲ, ನೀನು ಹೇಳುವುದು ಸರಿ. ಅದಕ್ಕೆ ಯಾವ ಅರ್ಥವೂ ಇಲ್ಲ. ನಾವು ಮನೆಯಲ್ಲಿದ್ದ ಕಾಲವನ್ನೊಮ್ಮೆ ಮತ್ತೆ ಸ್ಮರಿಸಿಕೋ. ನೀನು ಕಾಲೇಜಿನಲ್ಲಿ ಓದುವಾಗ ಆಕೆಯ ತಂದೆಯ ತೋಟದಲ್ಲಿ ಆಕೆಯನ್ನು ಭೇಟಿಯಾಗುತ್ತಿದ್ದುದನ್ನು ಸ್ಮರಿಸಿಕೋ. ಹಾಗೆಯೇ ಹಡಗಿನಲ್ಲಿ ಸುಂದರ ಕೇಶರಾಶಿಯ ಸೌಂದರ್ಯವತಿ ಹೆಣ್ಣಿನ ಜೊತೆ ಪಯಣಿಸಿದ್ದನ್ನು ಜ್ಞಾಪಿಸಿಕೋ. ಎಲ್ಲ ಘಟನೆಗಳು ನಿನ್ನನ್ನು ಸಂತೋಷಗೊಳಿಸಿರಲಿಲ್ಲವೆ ಎಂಬುದನ್ನು ಕುರಿತು ಯೋಚಿಸು. ಆ ಬದುಕು ಒಳ್ಳೆಯದು, ಪವಿತ್ರವಾದದ್ದೂ ಆಗಿತ್ತು ಎಂಬುದನ್ನು ನೆನಪಿಸಿಕೋ. ಬಹುಶಃ ಆ ಕಾಲದಲ್ಲಿ ಯಾವುದು ನಿನ್ನನ್ನು ಸಂತೋಷ ಗೊಳಿಸಿತ್ತು ಎಂಬುದನ್ನು ಗುರುತಿಸಿಕೋ. ಓ, ಬಾಲಕನೇ, ನನಗಾಗಿ ಹಾಗೆ ಮಾಡು !'

ಕತ್ತಲ ಓಣಿಯಲ್ಲಿ ನಿಂತು ದೂರದ ಬೆಳಕಿನೆಡೆಗೆ ನೋಡುವವನಂತೆ ಅಗಸ್ಟಸ್ ಕಣ್ಮುಚ್ಚಿ ಹಿಂದಕ್ಕೆ ನೋಡಿದ, ಎಲ್ಲವೂ ಮತ್ತೊಮ್ಮೆ ಹೊಳಪಿನಿಂದ ಸುಂದರವಾಗಿ ತನ್ನ ಸುತ್ತ ಆವರಿಸಿಕೊಂಡಿರುವುದನ್ನು ಕಂಡ, ನಂತರ ಮಬ್ಬುಮಬ್ಬಾಗಿ ಈಗ ಪೂರ್ಣ ಕತ್ತಲೆಯಲ್ಲಿ ನಿಂತ. ಇನ್ನು ಯಾವುದೂ ಅವನನ್ನು ಸಂತೋಷಗೊಳಿಸದಾದವು. ಅವನು ಹಿಂದಕ್ಕೆ ಆಲೋಚಿಸಿ ಜ್ಞಾಪಿಸಿಕೊಂಡಷ್ಟೂ ಅತ್ಯಂತ ಸುಂದರವಾದದ್ದೆಲ್ಲ, ಪ್ರೀತಿ ಪಾತ್ರವಾದದ್ದೆಲ್ಲ ಇಚ್ಛಿಸುವುದೆಲ್ಲ ಮಿಣುಕು ಬೆಳಕಾಗಿ, ಅಂತಿಮವಾಗಿ ಅದನ್ನು ಗುರುತಿಸಿದ ಅವನ ಕಣ್ಣುಗಳಿಂದ ನೀರು ಹರಿಯಲಾರಂಭಿಸಿತು.

'ನಾನು ಪ್ರಯತ್ನಿಸುತ್ತೇನೆ' ಆತನ ಧರ್ಮೀಯ ತಂದೆಗೆ ಹೇಳಿದ. ನನಗೆ ಸಹಕಾರಿಯಾಗದ ಹಳೆಯ ಮಾಂತ್ರಿಕ ಶಕ್ತಿಯನ್ನು ತೆಗೆದು ಬಿಡು, ಅದರ ಬದಲು ನನಗೆ ಜನರನ್ನು ಪ್ರೀತಿಸುವ ಶಕ್ತಿಕೊಡು !

ಕಂಬನಿಗೆರೆಯುತ್ತ ಹಿರಿಯ ಸ್ನೇಹಿತನ ಪಾದದಡಿ ಮಂಡಿಯೂರಿದ. ಹಾಗೆ ಬಿದ್ದಾಗ ತನ್ನೊಳಗೆ ವೃದ್ಧನೆಡೆಗೆ ಹರಿಯುತ್ತಿರುವ ಪ್ರೀತಿಯನ್ನು ಅನುಭವಿಸಿದ. ಆ ಭಾವವನ್ನು ಪದಗಳಲ್ಲಿ ಮೂಡಿಸಲಾಗದೆ, ಸಂಜ್ಞೆಯ ಮೂಲಕ ತಿಳಿಸಲಾರದೆ ಹೆಣಗಿದ. ಆತನ ಧರ್ಮೀಯ ತಂದೆ, ಕುಳ್ಳ ಮನುಷ್ಯ, ತನ್ನ ಕೈಗಳಲ್ಲಿ ಎತ್ತಿಕೊಂಡ. ಹಾಸಿಗೆ ಹತ್ತಿರ ಒಯ್ದು ಹಾಸಿಗೆಯ ಮೇಲೆ ಮಲಗಿಸಿದ. ಅವನ ಕೂದಲನ್ನು, ಬಿಸಿಯಾದ ಹುಬ್ಬು, ಹಣೆಯನ್ನು ನೇವರಿಸಿದ.

'ಅದು ಒಳ್ಳೆಯದು, ಅವನಿಗೆ ಮೃದುವಾಗಿ ಪಿಸು ಧ್ವನಿಯಲ್ಲಿ ಹೇಳಿದ. ಅದು ಒಳ್ಳೆಯದು ನನ್ನ ಮಗುವೆ, ಎಲ್ಲವೂ ಒಳ್ಳೆಯದಾಗುತ್ತದೆ.'

ಆನಂತರ ಅಗಸ್ಟಸ್ ಅತ್ಯುತ್ಸಾಹದಿಂದ ಹಲವು ವರ್ಷಗಳನ್ನು ಶೀಘ್ರವಾಗಿ ಕಳೆದಂತೆ ಜರ್ಜರಿತವಾಗಿ ಅನುಭವಿಸಿದ. ದೀರ್ಘನಿದ್ರೆಯಲ್ಲಿ ಮುಳುಗಿದ. ವೃದ್ಧ ಮನುಷ್ಯ ಮೌನವಾಗಿ ಮನೆಯಿಂದ ಹೊರನಡೆದ.

ಮನೆಯಲ್ಲಿ ಜೋರಾದ ಕಿರುಚಾಟ ಕೇಳಿ ಅಗಸ್ಟಸ್ ಎಚ್ಚರಗೊಂಡು ಮಲಗುವ ಕೋಣೆಯ ಕದ ತೆಗೆದು ನೋಡಿದಾಗ ಕೊಠಡಿಗಳಲ್ಲಿ, ನಡುಮನೆಯ

ತುಂಬ ಗೆಳೆಯರು ಊಟಕ್ಕಾಗಿ ತುಂಬಿ ನೆರೆದಿರುವುದನ್ನು ಕಂಡ. ಅವರು ಕೋಪ ಗೊಂಡಿದ್ದರು, ನಿರಾಶೆಗೊಂಡಿದ್ದರು. ಅವನು ಹಾಸ್ಯದಿಂದ, ನಗುವಿನಿಂದ ಅವರನ್ನು ಸಂತೈಸಿ ಗೆಲ್ಲಬೇಕೆಂದು ಅವರ ಹತ್ತಿರ ಹೋದಾಗ ತಕ್ಷಣವೆ ಆ ಶಕ್ತಿ ಅವನಲ್ಲಿ ಇಲ್ಲದುದನ್ನು ಅರಿತುಕೊಂಡ. ಅವರ ದೃಷ್ಟಿಗೆ ಅವನು ಬಿದ್ದ ತಕ್ಷಣ ಮುಚ್ಚುಮರೆ ಇಲ್ಲದೆ ಅವನ ಸುತ್ತ ಕಿರುಚಾಡಲು ಪ್ರಾರಂಭಿಸಿದರು. ಅವನು ಅಸಹಾಯಕ ನಗೆ ಬೀರಿದ . ಅಲ್ಲದೆ ಸ್ವರಕ್ಷಣೆಗಾಗಿ ಬೇಡುವವನಂತೆ ಕೈ ಚಾಚಿದ. ಆದರೆ ಅವರು ಛೀಮಾರಿ ಹಾಕುತ್ತ ಅವನ ಮೇಲೆರಗಿದರು.

''ನೀನೊಬ್ಬ ಮೋಸಗಾರ. ನನಗೆ ಕೊಡಬೇಕಾದ ಹಣ ಎಲ್ಲಿ?'' ಒಬ್ಬ ಕಿರುಚಿದ. ಮತ್ತೊಬ್ಬ ''ಸಾಲವಾಗಿ ನಾನು ಕೊಟ್ಟ ಕುದುರೆ''? ಎಂದ. ಆವೇಶದ ಒಬ್ಬ ಸುಂದರ ಹೆಂಗಸು, ''ಈಗ ಎಲ್ಲರೂ ನನ್ನ ರಹಸ್ಯವನ್ನು ತಿಳಿದಿದ್ದಾರೆ. ಏಕೆಂದರೆ ನೀನು ಎಲ್ಲ ಕಡೆಯೂ ನನ್ನ ಬಗ್ಗೆ ಮಾತನಾಡಿದ್ದೀಯೆ. ಓ ನಾನು ನಿನ್ನನ್ನು ದ್ವೇಷಿ ಸುತ್ತೇನೆ. ನೀನೊಬ್ಬ ರಾಕ್ಷಸ!'' ಗುಳಿಗಣ್ಣಿನ ತರುಣ ಮನುಷ್ಯನ ಮುಖ ಕೋಪದಿಂದ ವಿಕೃತವಾಗಿತ್ತು. ಅವನು, ''ನೀನು ನನ್ನನ್ನು ಏನು ಮಾಡಿದೆ ಎಂದು ನಿನಗೇ ಗೊತ್ತು. ನೀನು ದೆವ್ವ, ನೀನು ಯುವಕರನ್ನು ಭ್ರಷ್ಟಗೊಳಿಸಿದೆ'' ಎಂದು ಕಿರುಚಿದ.

ಹೀಗೆಯೇ ಮುಂದುವರೆಯಿತು. ಪ್ರತಿಯೊಬ್ಬರೂ ಅವನನ್ನು ನಿಂದಿಸಿ, ಶಿಕ್ಷಿಸಿದರು. ಎಲ್ಲರೂ ಸಮರ್ಥಿಸಿಕೊಂಡರು- ಬಹಳಷ್ಟು ಜನ ಹೊಡೆದರು. ನಂತರ ಹೊರಟರು. ಹೋಗುವಾಗ ಕನ್ನಡಿಗಳನ್ನು ಒಡೆದು ಹಾಕಿದರು. ಕೆಲವರು ಬೆಲೆ ಬಾಳುವ ವಸ್ತುಗಳನ್ನು ಹೊತ್ತುಕೊಂಡುಹೋದರು. ಅವಮಾನಗೊಂಡ, ಹೊಡೆತ ತಿಂದ ಅಗಸ್ಟಸ್ ಎದ್ದು ನಿಂತ. ತನ್ನ ಮಲಗುವ ಕೋಣೆಗೆ ಹೋಗಿ ಮುಖ ತೊಳೆವಾಗ, ಕನ್ನಡಿಯಲ್ಲಿ ನೋಡಿಕೊಂಡಾಗ ಅವನ ಪ್ರತಿಬಿಂಬ ತನ್ನತ್ತ ದೃಷ್ಟಿಸಿತು. ಸುಕ್ಕುಗಟ್ಟಿ ಅಸಹ್ಯ ವಾಗಿತ್ತು. ಕಣ್ಣುಗಳು ಕೆಂಪಾಗಿ ಹನಿ ತುಂಬಿದ್ದವು. ಹಣೆಯಿಂದ ರಕ್ತ ತೊಟ್ಟಿಕ್ಕುತ್ತಿತ್ತು.

'ಅದೆ ನನಗೆ ಸಿಕ್ಕಬೆಲೆ' ತನಗೆ ತಾನೆ ಹೇಳಿಕೊಂಡ. ಅವನ ಮುಖದ ಮೇಲಿನ ರಕ್ತ ತೊಳೆದಾಗ ಇನ್ನೂ ಕೊಂಚಕಾಲದೊಳಗಾಗಿ ಮನೆಯಲ್ಲಿ ಮತ್ತೆ ಗದ್ದಲ ಕಿರುಚಾಟ

ಕೇಳಿಬಂದವು. ಜನ ಬಿರುಗಾಳಿಯಂತೆ ಮೆಟ್ಟಲೇರಿ ಬರುತ್ತಿದ್ದರು. ಅವರು ಮನೆಯನ್ನು ಆಧಾರ ಮಾಡಿಸಿಕೊಂಡಿದ್ದ ಸಾಲಗಾರರಾಗಿದ್ದರು. ಯಾರ ಹೆಂಡತಿಯ ಶೀಲವನ್ನು ಕೆಡಿಸಿದ್ದನೋ ಆಕೆಯ ಗಂಡ, ಚಟಗಳನ್ನು ಕಲಿಸಿ ಯಾರ ಬದುಕನ್ನು ದುಃಖಮಯ ವಾಗಿಸಿದ್ದನೋ ಆ ತರುಣರ ಅಪ್ಪಂದಿರು, ಕೆಲಸದಿಂದ ತೆಗೆದು ಹಾಕಿದ ಹೆಣ್ಣು ಗಂಡು ಕೆಲಸಗಾರರು, ಪೋಲಿಸಿನವರು, ವಕೀಲರು. ಒಂದು ಘಂಟೆಯಲ್ಲಿ ಅವನ ಕೈಗೆ ಬೇಡಿ ತೊಡಿಸಿ ವ್ಯಾನಿನಲ್ಲಿ ಜೈಲಿಗೆ ಒಯ್ದರು. ಅವನ ಹಿಂದೆ ಜನ ಜಂಗುಳಿ ಕಿರುಚಿತು. ಅಣಕದ ಹಾಡುಗಳನ್ನು ಹಾಡಿತು. ಸೆರೆಯಾಳಿನ ಮುಖಕ್ಕೆ ಜಲಗಾರ ಕೈತುಂಬ ಕೊಳಚೆಯನ್ನು ರಪ್ಪನೆ ರಾಚಿದ.

ಇವನ ನಾಚಿಕೆಗೆಟ್ಟ ಕೃತ್ಯಗಳಿಗೆ ನಗರದ ತುಂಬ ಆತನನ್ನು ತಿಳಿದವರು, ಪ್ರೀತಿಸಿದವರು ಪ್ರತಿಧ್ವನಿಸಿದರು. ಆತನು ಮಾಡದ ಪಾಪವೆ ಇಲ್ಲ ಎಂದರು. ಆತ ಯಾವುದನ್ನೂ ವಿರೋಧಿಸಲಿಲ್ಲ. ಇವನು ಬಹಳ ಹಿಂದೆಯೆ ಮರೆತ ಜನಗಳು, ನ್ಯಾಯಾಧೀಶರ ಮುಂದೆ ನಿಂತು ಅವನು ಮಾಡಿದ ಕೃತ್ಯಗಳನ್ನು ತಿಳಿಸಿದರು. ಇವನು ಗೌರವಿಸಿದ ಸೇವಕರು, ಇವನನ್ನು ಸುಲಿದವರು ಅವನ ಗುಪ್ತ ಚಟಗಳ ಬಗ್ಗೆ ಮಾಹಿತಿ ಕೊಟ್ಟರು. ಎಲ್ಲ ಮುಖಗಳು ಕೋಪೋದ್ರಿಕ್ತವಾಗಿದ್ದವು. ದ್ವೇಷ ತುಂಬಿ ತುಳುಕುತ್ತಿತ್ತು. ಆತನ ಪರವಾಗಿ ಹೇಳುವವರು, ಹೊಗಳುವವರು, ದೋಷಮುಕ್ತ ಎನ್ನುವವರು, ಆತನ ಒಳ್ಳೆಯ ಗುಣವನ್ನು ಸ್ಮರಿಸುವವರು ಯಾರೂ ಇರಲಿಲ್ಲ.

ಈ ಯಾವುದರ ವಿರುದ್ಧವೂ ಆತ ಪ್ರತಿಭಟಿಸಲಿಲ್ಲ. ಆತ ಮೌನವಾಗಿ ಜೈಲಿಗೆ ಹೋಗಿ ಅಲ್ಲಿಂದ ನ್ಯಾಯಧೀಶರ ಮುಂದೆ ಸಾಕ್ಷಿಗಳ ಮುಂದೆ ಹಾಜರಾಗುತ್ತಿದ್ದ. ತನ್ನ ಕಳೆಗುಂದಿದ ಕಣ್ಣುಗಳಿಂದ ಕೆಟ್ಟ ಕೋಪದ ದ್ವೇಷತುಂಬಿದ ಮುಖಗಳನ್ನು ಅಚ್ಚರಿ ಯಿಂದ ನೋಡಿದ. ಆ ಎಲ್ಲ ಮುಖಗಳಲ್ಲಿದ್ದ ದ್ವೇಷದ ನಡುವೆಯೂ ಹುದುಗಿದ್ದ ಮೋಹಕತೆಯನ್ನ, ರಮಣೀಯತೆಯನ್ನು ಪ್ರೀತಿಯ ಕಿರಣವನ್ನು ಕಂಡ. ಈ ಎಲ್ಲ ಜನರೂ ಒಂದು ಕಾಲದಲ್ಲಿ ಅವನನ್ನು ಪ್ರೀತಿಸಿದ್ದರು. ಆದರೆ ಅವನು ಈ ಯಾರನ್ನೂ ಪ್ರೀತಿಸಿರಲಿಲ್ಲ. ಈಗ ಅವರ ಕ್ಷಮಾಪಣೆಯನ್ನು ಯಾಚಿಸಿದ ಹಾಗೂ ಅವರಲ್ಲಿದ್ದ ಒಳ್ಳೆಯದನ್ನು ನೆನೆಯಲು ತೊಡಗಿದ.

ಕೊನೆಗೆ, ಅವನನ್ನು ಜೈಲಿಗೆ ಹಾಕಲಾಯಿತು. ಅಲ್ಲಿ ಹೋಗಿ ಯಾರೂ ಆತನನ್ನು ಸಂದರ್ಶಿಸುವ ಸಾಹಸ ಮಾಡಲಿಲ್ಲ. ನಂತರ ಆತ ತನ್ನ ಜ್ವರದ ಕನಸಿನಲ್ಲಿ ತನ್ನ ತಾಯೊಂದಿಗೆ, ತನ್ನ ಮೊದಲ ಪ್ರೇಯಸಿಯೊಂದಿಗೆ, ತನ್ನ ಧರ್ಮಿಯ ತಂದೆಯೊಂದಿಗೆ, ಹಡಗಿನಲ್ಲಿ ಸಿಕ್ಕ ಉತ್ತರದ ಹೆಂಗಸಿನೊಂದಿಗೆ ಮಾತನಾಡಿದ. ಎಚ್ಚರವಾದಾಗ ಒಂಟಿಯಾಗಿ ಕುಳಿತು ಭಯದ ದಿನಗಳನ್ನು ಹಾಯ್ದು ಬಂದ, ಎಲ್ಲ ನೋವುಗಳನ್ನು ಅನುಭವಿಸಿದ, ಒಂಟಿತನದಿಂದ ಬೆಂದ ಜನರನ್ನ ನೋಡಬೇಕೆಂದು ಹಂಬಲಿಸಿದ, ಇಷ್ಟು ತೀವ್ರವಾಗಿ ಅವನು ಯಾವ ಸಂತೋಷವನ್ನೂ ಯಾವುದನ್ನೂ ಹಂಬಲಿಸಿರಲಿಲ್ಲ.

ಆತ ಜೈಲಿನಿಂದ ಬಿಡುಗಡೆಯಾದಾಗ, ರೋಗಗ್ರಸ್ತನಾಗಿದ್ದ, ವೃದ್ಧನಾಗಿದ್ದ. ಯಾರೂ ಅವನನ್ನು ಗುರುತಿಸಲಿಲ್ಲ. ಪ್ರಪಂಚ ತನ್ನ ದಾರಿಯಲ್ಲಿ ತಾನು ಸಾಗುತ್ತಿತ್ತು. ಜನರು ಗಾಡಿಗಳಲ್ಲಿ, ಕುದುರೆಗಳಲ್ಲಿ ಕುಳಿತು ರಸ್ತೆಯಲ್ಲಿ ವಿಹಾರ ಹೋಗುತ್ತಿದ್ದರು. ಹಣ್ಣುಗಳನ್ನು, ಹೂಗಳನ್ನು, ಗೊಂಬೆಗಳನ್ನು, ಸುದ್ಧಿಪತ್ರಿಕೆಗಳನ್ನು ಮಾರಲಾಗುತ್ತಿತ್ತು. ಯಾರೊಬ್ಬರೂ ಅಗಸ್ಟಸ್‌ನನ್ನು ಮಾತನಾಡಿಸಲು ಬರಲಿಲ್ಲ. ಸಂಗೀತ ಮತ್ತು ಮದ್ಯಗಳ ನಡುವೆ ಯಾವ ಸುಂದರ ಹೆಂಗಸರನ್ನು ತನ್ನ ತೋಳ್ತೆಕ್ಕೆಯಲ್ಲಿ ಸವಿದಿದ್ದನೋ ಅವರು ತಮ್ಮ ಸಾಮಾನುಗಳೊಂದಿಗೆ ಹೋಗುತ್ತಿದ್ದರು. ಅವರ ಧೂಳು ಅಗಸ್ಟಸ್‌ನ ಮೇಲೆ ಕವಿಯಿತು.

ಅವನ ಸಂತಸದ ನಡುವೆ ಕವಿದಿದ್ದ ಸಾವಿನಂತೆ ಶೂನ್ಯತೆ ಮತ್ತು ಏಕಾಂತತೆ ಈಗ ಪೂರ್ಣವಾಗಿ ಮರೆಯಾಯ್ತು. ದಾರಿಯಲ್ಲಿ ನಡೆಯುವಾಗ ಬಿಸಿಲಿನಿಂದ ಸುಧಾರಸಿಕೊಳ್ಳಲು ನೆರಳಿಗೆ ಹೋದಾಗ ಅಥವಾ ಬಾಯಾರಿಕೆಯಿಂದ ಕುಡಿಯಲು ನೀರು ಕೇಳಿ ಮನೆಯ ಮುಂದೆ ಕೈ ಚಾಚಿದಾಗ ಖಿನ್ನಮುಖದಿಂದ ಕೆಟ್ಟದೃಷ್ಟಿಯಿಂದ ಜನ ನೋಡಿದುದನ್ನು ಕಂಡು ಅಚ್ಚರಿಗೊಂಡ. ಅದೇ ಜನ ಈ ಮೊದಲು ಆತನ ಹೆಮ್ಮೆಗೆ ಬೈಗುಳಗಳಿಗೆ ಗೌರವದಿಂದ ಹೊಳಪುಕಣ್ಣುಗಳಿಂದ ವರ್ತಿಸುತ್ತಿದ್ದರು. ಆದಾಗ್ಯೂ ಆತ ಸಂತಸಗೊಂಡ, ಎಲ್ಲರ ದೃಷ್ಟಿಯಿಂದ ಪುಳಕಿತನಾಗಿ ಮುನ್ನಡೆದ. ಆಡುವ ಸ್ಕೂಲಿಗೆ ಹೋಗುವ ಮಕ್ಕಳನ್ನು ನೋಡಿ ಪ್ರೀತಿಸಿದ, ಅವರ ಮನೆಯ ಮುಂದಿನ ಬೆಂಚಿನ ಮೇಲೆ ಕುಳಿತು ಮೈಕಾಯಿಸುತ್ತಿದ್ದ ವೃದ್ಧರನ್ನು ಪ್ರೀತಿಸಿದ. ಕೆಲವು ಯುವಕರು

ಯುವತಿಯರನ್ನು ಕಂಡು ಅವರ ಕುಡಿನೋಟಕ್ಕೆ ಹಲುಬುವುದನ್ನು ಕಂಡರೆ ಅಥವಾ ನೌಕರ ರಜೆಯಲ್ಲಿ ಹಿಂದಿರುಗುವಾಗ ತೋಳುಗಳಲ್ಲಿ ತನ್ನ ಮಕ್ಕಳನ್ನು ಎತ್ತಿಕೊಂಡು ಬರುವುದನ್ನು ಕಂಡಾಗ ಅಥವಾ ಒಬ್ಬ ಬಡವ, ರೋಗಿ ಕಾಯ್ದು ಕುಳಿತಿರುವಾಗ ಆತನಿಗೆ ಸಮಾಜದಿಂದ ಬಹಿಷ್ಕೃತಳಾದವಳು ಪ್ರೀತಿ ತೋರಿಸುವುದನ್ನು ಈ ಎಲ್ಲರೂ ತನ್ನ ಸಹೋದರ ಸಹೋದರಿಯರಂತೆ ಕಂಡು, ತನ್ನ ಹೃದಯದಲ್ಲಿ ಅಚ್ಚೊತ್ತಿದ್ದ ತಾಯಿಯ ಸ್ಮರಣೆಯನ್ನು ತಂದು ಪವಿತ್ರವಾದ ಉನ್ನತವಾದ ಭಾವನೆಗಳನ್ನು ಮರುಕಳಿಸುವ ಮೂಲಕ ಅವನ ದೃಷ್ಟಿಯಲ್ಲಿ ಇವರೆಲ್ಲ ಪ್ರಿಯರಾಗಿದ್ದರು. ಅವನ ಆಲೋಚನೆಗೆ ವಸ್ತುವಾಗಿದ್ದರು. ಆಹಾರ ವಾಗಿದ್ದರು. ಆಗ ಅವನು ನನಗಿಂತ ಕೆಟ್ಟವರು ಯಾರೂ ಇಲ್ಲ ಎಂದು ತೀರ್ಮಾನಿಸಿದ.

ಅಗಸ್ಟಸ್ ಪ್ರಪಂಚವನ್ನು ಸುತ್ತಿ ಜನರ ಸೇವೆ ಮಾಡುವುದರ ಮೂಲಕ ತನ್ನ ಪ್ರೀತಿಯನ್ನು ತೋರಿಸಲು ಸರಿಯಾದ ಸ್ಥಳ ಯಾವುದೆಂದು ಹುಡುಕಾಡಿದ. ತನ್ನ ದರ್ಶನದಿಂದ ಯಾರೊಬ್ಬರಿಗೂ ಸಂತಸವಾಗುವುದಿಲ್ಲ ಎಂಬ ಸತ್ಯವನ್ನ ಅವನು ಅರಿತಿದ್ದ, ಕೆನ್ನೆ ಗುಳಿಬಿದ್ದಿದ್ದವು. ಆತನ ಬಟ್ಟೆ, ಶೂಗಳು ಭಿಕಾರಿಯಂತಾಗಿದ್ದವು. ಒಂದು ಕಾಲದಲ್ಲಿ ಜನರನ್ನು ಸಂತಸಗೊಳಿಸುತ್ತಿದ್ದ ಅವನ ನಡೆ, ನುಡಿ, ಸ್ವರ ಆಕರ್ಷಣೀಯ ವಾಗಿರಲಿಲ್ಲ. ಅವನ ಕೆದರಿಂದ ಕೂದಲಿನ, ಉದ್ದವಾದ ಬಿಳಿಯ ಗಡ್ಡವನ್ನು ಕಂಡು ಮಕ್ಕಳು ಬೆದರಿದವು. ಆತನ ಕೊಳಕು ಬಟ್ಟೆಗಳನ್ನು ನೋಡಿ ಮಡಿಬಟ್ಟೆ ಧರಿಸಿದವರು ದೂರಮಾಡಿದರು. ಬಡವರು ತಮ್ಮ ಆಹಾರವನ್ನು ಅವನು ಕದಿಯಬಹುದೆಂಬ ಅಪನಂಬಿಕೆಯಿಂದ ನೋಡಿದರು. ಹೀಗಾಗಿ ಯಾರೊಬ್ಬರಿಗೂ ಸೇವೆ ಮಾಡಲು ಅವನಿಗೆ ಕಷ್ಟಕರವಾಗಿ ತೋರಿತು. ಆದರೆ ಅವನು ಅವು ಯಾವುದರಿಂದಲೂ ಘಾಸಿಗೊಳ್ಳದಿರುವುದನ್ನು ಕಲಿತ. ಅಂಗಡಿಯ ಕೀಲಿಯನ್ನು ತೆರೆಯಲಾಗದೆ ಪುಟ್ಟ ಮಗುವಿಗೆ ಸಹಾಯಮಾಡಿದ, ಕೆಲವು ಸಮಯ ಅವನಿಗಿಂತ ದುಸ್ಥಿತಿಯಲ್ಲಿರು ವವರಿರಬಹುದು. ಕುಂಟನಿಗೆ, ಕುರುಡನಿಗೆ ಸಹಾಯ ಮಾಡಿ ದಾರಿಯಲ್ಲಿ ಸಂತಸ ಉಂಟುಮಾಡಿದ, ಈ ಯಾವುದನ್ನೂ ಮಾಡಲಾಗದಿದ್ದಾಗ ತಾನು ಪಡೆದುಕೊಂಡಿದ್ದನ್ನು ನಗುಮುಖದಿಂದ ಪ್ರೋತ್ಸಾಹಿತ ದೃಷ್ಟಿಯಿಂದ ಬೀರುತ್ತಿದ್ದ. ಸಹೋದರನಂತೆ ನಮಸ್ಕರಿಸುತ್ತಿದ್ದ. ಕರುಣೆ ಮತ್ತು ಸಾಮರಸ್ಯವನ್ನು ಬೀರುತ್ತಿದ್ದ. ಈ ಅಲೆಮಾರಿ

ಜೀವನದಿಂದ ಕೆಲವು ಜನರು ತನ್ನಿಂದ ಏನನ್ನು ಬಯಸುತ್ತಾರೆ. ಅವರಿಗೆ ಯಾವುದು ಸಂತೋಷಕೊಡುತ್ತದೆ ಎಂಬುದನ್ನು ಕಲಿತುಕೊಂಡ. ಕೆಲವರಿಗೆ ನಗುಮುಖದ ನಮಸ್ಕಾರ, ಕೆಲವರಿಗೆ ಮೌನದ ನೋಟ, ಕೆಲವರು ಏಕಾಂತವಾಗಿ ಇರಲು ಇಚ್ಛಿಸಿದರೆ ಅವರನ್ನು ತೊಂದರೆಗೊಳಿಸದಿರುವುದು. ಪ್ರತಿದಿನದ ಪ್ರಪಂಚದಲ್ಲಿ ಎಂಥ ನೋವಿದೆ ಹಾಗೂ ಜನರು ಅದರಲ್ಲೆ ತೃಪ್ತರಾಗಿರುವುದನ್ನು ಕಂಡು ಅಚ್ಚರಿಗೊಂಡ. ಪ್ರತಿ ದುಃಖವೂ ನಗುವನ್ನು ಅರಸಿಹೊಗುವುದನ್ನು, ಪ್ರತಿಸಾವಿನ ಘಂಟೆಯಲ್ಲಿ ಮಗುವಿನ ಹಾಡಿರುವುದನ್ನು, ಪ್ರತಿ ಆಶೆಯ ಅಸ್ತಿಭಾರದಲ್ಲೂ ಒಂದು ಕರುಣೆಯ, ಹಾಸ್ಯದ, ಸಂತೈಸುವ ಪದಗಳ ನಗು ಇರುವುದನ್ನು ಕಂಡು ಅವನ ಹೃದಯ ಹಿಗ್ಗಿತ್ತು.

ಮಾನವ ಜೀವನ ಸುಸೂತ್ರವಾಗಿ ಇರುವಂತೆ ಅವನಿಗೆ ತೋರಿತು. ಅವನು ಮೂಲೆಯಲ್ಲಿ ತಿರುಗಿದರೆ, ವಿದ್ಯಾರ್ಥಿಗಳ ಗುಂಪು ಅವನನ್ನು ಕಂಡು ಸುತ್ತುವರಿಯುತ್ತಿತ್ತು. ಅವರಲ್ಲಿರುವ ಧೈರ್ಯವನ್ನ, ಬದುಕಿನ ಸಂತಸವನ್ನ, ಯೌವನದ ಎಲ್ಲ ಸೌಂದರ್ಯವೂ ಕಣ್ಣಲ್ಲಿ ಹೊಳೆಯುವುದನ್ನ ಕಂಡ ಅವರು ಆತನನ್ನು ಸ್ವಲ್ಪ ರೇಗಿಸಿದರೆ, ಹಿಂಸಿಸಿದರೆ ಆತ ತಪ್ಪಾಗಿ ಭಾವಿಸುತ್ತಿರಲಿಲ್ಲ. ಅವು ಅರ್ಥಮಾಡಿಕೊಳ್ಳಬಲ್ಲವಾಗಿದ್ದವು. ಉಗ್ರಾಣದ ಕಿಟಕಿಯಲ್ಲಿ ಅಥವಾ ತಿಳಿವ ಕುಡಿವ ನೀರಿನ ಹೊಂಡದಲ್ಲಿ ತಾನು ಸುಕ್ಕುಗಟ್ಟಿರುವುದನ್ನು, ಅಸ್ತವ್ಯಸ್ತವಾಗಿರುವುದನ್ನು ನೋಡಿದ. ಇಲ್ಲ, ಅವನಿಗೆ ಜನರನ್ನು ಸಂತಸಗೊಳಿಸುವುದಾಗಲಿ, ಅಧಿಕಾರ ಹೊಂದುವುದಾಗಲಿ ಒಂದು ಪ್ರಶ್ನೆಯಾಗಿ ಈಗ ಉಳಿದಿಲ್ಲ. ಅವನು ಅದನ್ನು ಸಾಕಷ್ಟು ಮಾಡಿದ್ದಾನೆ. ಅವನಿಗೆ ಜ್ಞಾನ ಕೊಡುವ ನೋಟವೆಂದರೆ, ತಾನು ಈಗಾಗಾಲೆ ಕ್ರಮಿಸಿದ ದಾರಿಗಳಲ್ಲಿ ಇತರರು ಹೋರಾಡುವುದನ್ನು ಕಂಡಾಗ. ತಾನು ಮುಂದುವರಿಯುತ್ತಿರುವೆವೆಂದು ನಂಬಿದವರನ್ನು ಕಂಡಾಗ. ಅಲ್ಲದೆ ಪ್ರತಿಯೊಬ್ಬರೂ ಹೇಗೆ ತೀವ್ರವಾಗಿ ತಮ್ಮ ಗುರಿಯನ್ನು ಅರಸುತ್ತ ಎಷ್ಟೊಂದು ಉತ್ಸಾಹದಿಂದ, ಹೆಮ್ಮೆಯಿಂದ ಸಂತಸದಿಂದ ಮುನ್ನಡೆಯುತ್ತಿರುವರು ! - ಅವನ ಕಣ್ಣುಗಳಲ್ಲಿ ಇವೆಲ್ಲವು ಒಂದು ಸುಂದರ ನಾಟಕವಾಗಿದ್ದವು.

ಈಗ ಶಿಶಿರಋತು ಆಗಮಿಸಿತು. ನಂತರ ಮತ್ತೊಮ್ಮೆ ಗ್ರೀಷ್ಮ ಋತು. ಅಗಸ್ಟಸ್ ಬಹಳದಿನಗಳವರೆಗೆ ಪ್ರೀತಿಕರುಣೆ ತುಂಬಿದ ಆಸ್ಪತ್ರೆಯಲ್ಲಿ ಕಾಯಿಲೆ

ಮಲಗಿದ. ಅಲ್ಲಿ ಆತನ ನಿರ್ಭಾಗ್ಯ ಜನಪದರು ಜೀವನಕ್ಕೆ ಭದ್ರವಾಗಿ ನೇತುಹಾಕಿಕೊಂಡಿರುವುದನ್ನು, ಸಾವನ್ನು ಜಯಿಸುತ್ತಿರುವುದನ್ನು ಮೌನವಾಗಿ ಕೃತಜ್ಞತೆಯಿಂದ ನೋಡಿ ಸಂತಸಪಟ್ಟ. ಕಡು ಕಾಯಿಲೆಯಿಂದ ನರಳುತ್ತಿದ್ದವರ ಮುಖದಲ್ಲಿ ಮೂಡುವ ತಾಳ್ಮೆ ಆಶ್ಚರ್ಯಕರವಾಗಿತ್ತು. ಚೇತರಿಸಿಕೊಳ್ಳುತ್ತಿದ್ದವರ ಕಣ್ಗಳ ಕಾಂತಿಯಲ್ಲಿ ಜೀವನೋಲ್ಲಾಸ ಹೊಮ್ಮುತ್ತಿತ್ತು. ಜೀವರಹಿತ ಮುಖಗಳಲ್ಲಿ ಗಾಂಭೀರ್ಯ, ಪ್ರಶಾಂತತೆ ಸುಂದರವಾಗಿದ್ದವು. ಈ ಎಲ್ಲಕ್ಕಿಂತ ದಾದಿಯರ ಪ್ರೀತಿ ಮತ್ತು ತಾಳ್ಮೆ ಅತ್ಯಂತ ಸುಂದರವಾಗಿದ್ದವು. ಆದರೆ ಆ ಕಾಲವೂ ಕೊನೆಗೊಳ್ಳುತ್ತ ಬಂತು. ಶರತ್ಕಾಲದ ಗಾಳಿ ಬೀಸಿತು. ಅಗಸ್ಟಸ್ ಶಿಶಿರಋತುವಿನಲ್ಲಿ ಅಲೆದಾಡಿದ. ಒಂದು ವಿಚಿತ್ರ ಅಸಹನೆ ಅವನನ್ನು ಆಕ್ರಮಿಸಿತು. ಈಗ ಆತನ ಅನಂತಮುಖದ ಬೆಳವಣಿಗೆ ಮಂದಗತಿಯಲ್ಲಿರುವುದನ್ನು ಕಂಡ. ವಿವಿಧ ಜಾಗಗಳನ್ನು ದರ್ಶಿಸಿ ಬಹುಜನರ ಕಣ್ಗಳನ್ನು ಹೊಕ್ಕು ನೋಡಬೇಕೆಂದು ಆತ ಇಚ್ಛಿಸಿದ. ಅವನ ಕಣ್ಗುಡ್ಡೆಗಳು ಹೊಳಪನ್ನು ಕಳೆದುಕೊಂಡು ಪೇಲವವಾಗಿದ್ದವು. ತಲೆಗೂದಲು ಬೆಳ್ಳಗಾಗಿತ್ತು. ಆತನ ಜ್ಞಾಪಕಶಕ್ತಿಯೂ ಮಸುಕಾಗುತ್ತಾ ಬಂತು, ತಾನು ಪ್ರಪಂಚವನ್ನು ನೋಡಿಯೇ ಇಲ್ಲವೇನೋ ಎಂಬಂತೆ ಭಾಸವಾಯ್ತು. ಆದರೆ ಆತ ಅಷ್ಟರಿಂದಲೇ ಸಂತೃಪ್ತನಾಗಿದ್ದ. ಅಲ್ಲದೆ, ಪ್ರೀತಿಯಿಂದ ಒಟ್ಟಿಗೆ ತುಂಬಿರುವುದನ್ನು ಕಂಡುಕೊಂಡಿದ್ದ.

ಶಿಶಿರಋತುವಿನ ಪ್ರಾರಂಭದಲ್ಲಿ ನಗರಕ್ಕೆ ಬಂದ. ಕತ್ತಲದಾರಿಗಳನ್ನು ಮಂಜು ಮುಸುಕುತ್ತಿತ್ತು. ಸಂಜೆ ಮನೆಗೆ ಹೋಗಲು ತಡವಾದ ಪೋರರು ಅಲೆ ಮಾರಿಗಳ ಮೇಲೆ ಮಂಜುಗೆಡ್ಡೆಯನ್ನು ತೂರುತ್ತಾ ಸಾಗಿದ್ದರು. ಇನ್ನುಳಿದಂತೆ ಸಂಜೆಯ ಮಬ್ಬು ಎಲ್ಲವನ್ನು ಕವಿಯಿತು. ಅಗಸ್ಟಸ್ ಇಕ್ಕಟ್ಟಾದ ದಾರಿಗೆ ಬಂದಾಗ ಬಳಲಿದಂತಾಯಿತು. ಆ ದಾರಿಯ ಪರಿಚಯವಿದ್ದಂತೆನಿಸಿತು. ಹಾಗೆ ಮತ್ತೊಂದು. ಆತ ಬಂದು ನಿಂತದ್ದು ತನ್ನ ತಾಯಿಯ ಮನೆಯಾಗಿತ್ತು. ತನ್ನ ಧರ್ಮಿೀಯ ತಂದೆಯ ಮನೆಯಾಗಿತ್ತು. ಆ ಎರಡು ಪುಟ್ಟ ಮನೆಗಳೂ ಸುರಿವ ಚಳಿಯ ಮಂಜಿನಿಂದ ಅಸ್ತವ್ಯಸ್ತವಾಗಿದ್ದವು. ಆದರೆ ಅವನ ಧರ್ಮಿೀಯ ತಂದೆಯ ಮನೆಯ ಒಂದು ಕಿಟಕಿ ಆ ಶಿಶಿರಋತುವಿನ ರಾತ್ರಿಯಲ್ಲೂ ಕೆಂಪು ಬಣ್ಣದಿಂದ ಸ್ನೇಹವನ್ನು ಸೂಸಿ ಹೊಳೆಯುತ್ತಿತ್ತು.

ಅಗಸ್ಟಸ್ ಒಳಹೋಗಿ ವಾಸಿಸುವ ಕೋಣೆಯ ಬಾಗಿಲು ತಟ್ಟಿದ. ಕುಳ್ಳ ವೃದ್ಧ ಮನುಷ್ಯ ಹೊರಬಂದು, ಅವನನ್ನು ಕೊಠಡಿಯೊಳಗೆ ಕರೆದೊಯ್ದ. ಅಲ್ಲಿ ಉರಿಯುತ್ತಿದ್ದ ಕಿರು ಬೆಂಕಿಯಿಂದಾಗಿ ಶಾಖವಿತ್ತು, ಮೌನವಿತ್ತು.

'ನೀನು ಹಸಿದಿದ್ದೀಯಾ'? ಧರ್ಮೀಯ ತಂದೆ ಕೇಳಿದ. ಅಗಸ್ಟಸ್ ಹಸಿದಿರಲಿಲ್ಲ. ನಕ್ಕು, ಇಲ್ಲವೆಂದು ತಲೆಯಾಡಿಸಿದ.

'ಆದರೆ ನಿನಗೆ ಆಯಾಸವಾಗಿರಬೇಕು' ವೃದ್ಧ ಹೇಳಿದ. ಹಳೆಯ ಉಣ್ಣೆಯ ಕಂಬಳಿಯನ್ನು ನೆಲದ ಮೇಲೆ ಹಾಸಿದ. ಇಬ್ಬರೂ ಹತ್ತಿರ ಅಕ್ಕಪಕ್ಕ ಕುಳಿತು ಉರಿಯುತ್ತಿದ್ದ ಬೆಂಕಿಯತ್ತ ನೋಡಿದರು.

'ನೀನು ಬಹುದೂರದಿಂದ ಬಂದಿದ್ದೀಯೆ' ಧರ್ಮೀಯ ತಂದೆ ಹೇಳಿದ.

'ಓ ಸುಂದರವಾಗಿತ್ತು. ನಾನೀಗ ಬಳಲಿದ್ದೇನೆ. ನಾನಲ್ಲಿ ಮಲಗಲೆ? ನಾನು ನಾಳೆ ಮುಂದುವರೆಯುತ್ತೇನೆ.'

'ನಿಶ್ಚಯವಾಗಿ ನೀನು ಮಲಗಬಹುದು. ಆದರೆ ಪುಟ್ಟ ದೇವತೆಗಳು ನರ್ತಿಸುವುದನ್ನು ಮತ್ತೊಮ್ಮೆ ನೋಡುವುದಿಲ್ಲವೆ?'

'ಬಹಳ ಕಾಲದವರೆಗೆ ನಾವಿಬ್ಬರೂ ಭೇಟಿಯಾಗಲಿಲ್ಲ' ಧರ್ಮೀಯ ತಂದೆ ಮುಂದುವರೆಸಿದ. 'ನೀನೀಗ ಸುಂದರವಾಗಿ ಕಾಣುತ್ತಿದ್ದೀಯೆ, ನಿನ್ನ ಕಣ್ಣುಗಳು ಬಹಳ ಹಿಂದೆ ನಿನ್ನ ತಾಯಿ ಇದ್ದಾಗ ಇದ್ದಂತೆ ಸುಂದರವಾಗಿವೆ. ಕರುಣೆಯಿಂದ ತುಂಬಿವೆ. ನೀನು ನನ್ನಲ್ಲಿಗೆ ಬಂದುದು ಒಳ್ಳೆಯದಾಯಿತು !'

ಅಲೆಮಾರಿ ತನ್ನ ಹರಿದ ಬಟ್ಟೆಗಳಿಂದ ವೃದ್ಧ ಗೆಳೆಯನ ಪಕ್ಕ ಮೌನವಾಗಿ ಕುಳಿತ. ಈ ಹಿಂದೆ ಎಂದೂ ಅವನು ಇಷ್ಟು ಬಳಲಿರಲಿಲ್ಲ. ಉರಿಯುತ್ತಿದ್ದ ಬೆಂಕಿ ಅವನ ಮನಸ್ಸು ಚಲಿಸುವಂತೆ ಮಾಡಿತು. ಅವನಿಗೆ ಆ ದಿನದ ಹಾಗು ಹಿಂದಿನ ದಿನಗಳಿಗೆ ವ್ಯತ್ಯಾಸವೇ ಕಾಣಲಿಲ್ಲ.

'ಧರ್ಮೀಯ ತಂದೆ ಬಿನ್ಸ್‌ವಾಂಗ್' ಅವನು ಹೇಳಿದ. 'ನಾನು ತುಂಬಾ ತುಂಟ ಎಂದು ತಾಯಿ ಮನೆಯಲ್ಲಿ ಹೇಳುತ್ತಿದ್ದಳು. ನೀನು ಅವಳೊಂದಿಗೆ ಮಾತನಾಡಿ ನಾನು ಈಗಿನಿಂದಲೇ ಒಳ್ಳೆಯವನಾಗುತ್ತೇನೆ ಎಂದು ಹೇಳಬೇಕು, ಹೇಳುವೆಯಾ?'

ಉರಿವ ಬೆಂಕಿ ಇಳಿಯಿತು. ಅಗಸ್ಟಸ್ ಮಗುವಾಗಿದ್ದಾಗ ಮಾಡಿದಂತೆ ತೆರೆದ ನಿದ್ದೆಗಣ್ಣುಗಳಿಂದ ಮಂದವಾದ ಕೆಂಪು ಬೆಂಕಿಯನ್ನು ನೋಡುತ್ತಿದ್ದ. ನಿದ್ರೆ ಆವರಿಸಿತು. ಧರ್ಮೀಯ ತಂದೆ ಅವನ ತಲೆಯನ್ನು ತೊಡೆಯ ಮೇಲೆ ಇರಿಸಿಕೊಂಡ. ಕತ್ತಲೆಯ ಕೊಠಡಿಯಿಂದ ಉತ್ಸಾಹ ತುಂಬುವ ಸಂಗೀತಸುಧೆ ಮರುಳುಗೊಳಿಸುವಂತೆ ಹೊಂದಿಕೊಂಡು ಹರಿಯಿತು. ಸಾವಿರಾರು ಬೆಳಗುವ ಪುಟ್ಟ ಶಕ್ತಿ ಜೋಡಿಗಳು ಸುತ್ತು ವರಿದು ಸುಳಿದಾಡಿ ಗಾಳಿಯಲ್ಲಿ ನರ್ತಿಸಿದವು. ಅಗಸ್ಟಸ್ ಎಲ್ಲವನ್ನು ಗಮನಿಸಿದ, ಆಲಿಸಿದ, ಮಗುವಾಗಿದ್ದಾಗಿನ ಎಲ್ಲ ಗ್ರಹಿಕೆಯನ್ನು ವಿಸ್ತಾರವಾಗಿ ತೆರೆದು ಕಳೆದು ಹೋಗಿದ್ದ ಸ್ವರ್ಗವನ್ನು ಮತ್ತೆ ಪಡೆದ.

ಒಮ್ಮೆ ಅವನಿಗೆ ತನ್ನ ತಾಯಿ ಕರೆದಂತಾಯಿತು. ಆದರೆ ಆತ ತೀವ್ರವಾಗಿ ಬಳಲಿದ್ದ. ಅಲ್ಲದೆ ಆತನ ಧರ್ಮೀಯ ತಂದೆ ತನ್ನ ತಾಯಿಯೊಂದಿಗೆ ಮಾತನಾಡುವುದಾಗಿ ಭರವಸೆ ನೀಡಿದ್ದ. ಅಗಸ್ಟಸ್ ದೀರ್ಘ ನಿದ್ದೆಗೆ ಹೋದಾಗ ಆತನ ಧರ್ಮೀಯ ತಂದೆ ಅವನ ಕೈಗಳನ್ನು ಮಡಿಸಿದ. ಪೂರ್ಣ ಕತ್ತಲೆ ಕೊಠಡಿಯನ್ನು ಆವರಿಸುವವರೆಗೆ ಸ್ತಬ್ಧ ಹೃದಯದ ಪಕ್ಕ ಕುಳಿತು ಆಲಿಸಿದ.

ಹಂತಗಳು

ಎಲ್ಲ ಕುಸುಮಗಳು ಕಳೆಗುಂದುವಂತೆ, ಯೌವನವು
ಬಿಟ್ಟೋಡುವುದು; ಅಂತೆಲ್ಲ ಹಂತದಲಿ ಜೀವನವು.
ಅಂತೆ ಸದ್ಗುಣವು, ಅಂತೆಮ್ಮ ಸತ್ಯದ ಗ್ರಹಿಕೆ
ಬೆಳಗಿನಲಿ ಅರಳುವುವು ಸ್ಥಿರವಾಗಿರಲಸದಳವು
ಯಾವ ಕ್ಷಣದಲಾದರೂ ಕರೆಯಬಹುದು ಬದುಕು
ಸಿದ್ಧವಿರು ಹೃದಯವೇ ಹೊಸ ಸಾಹಸಕೆ ಹುಗಲು
ಪರಿತಪಿಸಬೇಡ ಬಿಡು, ನೀ ಹುಮ್ಮಸ್ಸಿನಲಿ ಮುಂದೆ ನಡೆ
ಹಳೆಯ ಕಂತೆಗಳು ನೀಡಲಾರದ ಹೊಸ ಹೊಂಬೆಳಕ ಪಡೆ
ಎಲ್ಲ ಬೆಳಗಿನಲಿ ಹೊರಚಿಮ್ಮುವುದು ಮಂತ್ರಶಕ್ತಿಯೊಂದು
ನಮ್ಮ ರಕ್ಷಿಸಲು ಸಹಕರಿಸೆ ಕೈಚಾಚಿ ಮುಂದೆ ಬಂದು

ಹರ್ಷಚಿತ್ತದಿಂ ಪಯಣಿಸೋಣ ಬಹುದೂರ ಬಾರೊ ತಮ್ಮ
ಸಂಪ್ರದಾಯ ರೀತಿನೀತಿಗಳು ತಡೆಹಿಡಿಯದಿರಲಿ ನಮ್ಮ
ಬ್ರಹ್ಮಾಂಡಶಕ್ತಿ ಬಂಧಿಸಲು ನಮ್ಮ ಯತ್ನಿಸದು ಎಂದೂ
ಹಂತಹಂತದಲಿ ವಿಶ್ವದಗಲಕ್ಕೆ ತಾನೆತ್ತಿಕೊಳ್ವುದೆಂದೂ
ನಾವ್ ಕಟ್ಟಿಕೊಂಡ ಮನೆಯೊಳಗೆ ಉಳಿದರದೇನು ಚೆನ್ನ
ಕಲಿತ ಅಭ್ಯಾಸಗಳು ತುಂಬಿ ತರುವುವು ಆಲಸ್ಯವನ್ನ
ಸಿದ್ಧರಿರಬೇಕು ಬೀಳ್ಕೊಳಲು ನಾವು ಹೊಸಬೆಳಕಿನೆಡೆಗೆ
ಇಲ್ಲದಿರೆ ಉಳಿಯಬೇಕು ಎಂದಿಗು ಗುಲಾಮರಾಗಿ ಕಡೆಗೆ

ನಮ್ಮ ಸಾವಿನ ಗಳಿಗೆ ಕೂಡ ಅತಿ ಶೀಘ್ರವಾಗಿ
ಕಳುಹಬಹುದು ಹೊಸತನಕೆ ಮೇಣ್ ವಿಸ್ತಾರಕೆ
ಹೊಸ ಜನಾಂಗವಾಗಿ ಕಾಲ ನಮ್ಮ ಕರೆಯಬಹುದು ಮುಂದೂ
ಅದಕ್ಕಾಗಿ ಹೃದಯವೇ ಬೀಳ್ಕೊಳಲು ಸಿದ್ಧನಿರು ಕೊನೆ ಇರದು ಎಂದೂ

ಒಂದು ಸಮಾಧಾನ

ಸಿದ್ಧಾಂತಗಳಿಗೊಲಿದ ಸರಳ ಜೀವಿಗಳು
ನಮ್ಮ ಗೂಢ ಸಂದೇಹಕ್ಕೆ ಎಡೆಗೊಡರು
'ಭೂಮಿ ಚಪ್ಪಟೆಯಾಗಿದೆ' ಎನ್ನುತ ಬೊಬ್ಬಿರಿವರು
'ಅಮೂರ್ತ' ವಾಗಿದೆ ಕಾಲ್ಪನಿಕತೆಯ ಆಳ!

ಮತ್ತಷ್ಟು ಆಯಾಮಗಳು ಇರಬಹುದಾದರೆ
ಪುರಾತನ ಒಳಿತಿನ ಜೊತೆಯಲಿ ಒಲಿವೆವು ನಾವದಕೆ
ಹೇಗೆ ಬದುಕಲು ಸಾಧ್ಯ ದುಗುಡಗಳಿಲ್ಲದೆ ಮನುಷ್ಯ ?
ಅಳಿವಿನ ನಿರೀಕ್ಷೆ ಇರದೆ ಉಸಿರಾಡುವುದೆಂತು ?

ಶಾಂತಿಯಿಂದ ಉಭಯತ್ರರು ಉಳಿಯಲು
ನಮ್ಮೆಣಿಕೆಯ ಆಯಾಮ ಒಂದನು ತೆಗೆಯೋಣ.
ಸಿದ್ಧಾಂತಗಳ ಆ ಜನರು ಸರಿ ಇದ್ದರೆ
ಬದುಕು ತನ್ನಾಳದಲಿ ಅಷ್ಟು ಹಗೆಯಾಗಿದ್ದರೆ
ತ್ಯಾಜ್ಯವಾಗಿದೆ ಮೂರನೆ ಆಯಾಮ

ಶೋಕ

ನಮಗಾವುದೂ ಸ್ಥಿರವಲ್ಲ, ನಾವು ಅಲೆಗಳು
ನಿರಂತರ ಹರಿವುದದು ಒದಗಿಬರುವ ರೂಪಕೆ
ಹಗಲಿರಲಿ ಇರುಳಿರಲಿ ಗುಡಿ ಇರಲಿ ಗುಹೆ ಇರಲಿ
ಅನವರತ ಚಲಿಸುವೆವು ಉತ್ಕಟೇಚ್ಛೆಯ ತಾಪಕೆ

ನಾನಾ ರೂಪವ ಪಡೆಯುವೆವು, ವಿರಮಿಸೆವು ನಾವು
ದುಃಖದುಮ್ಮಾನಗಳು ಹರಿಯುವುವು ನಮಗಿಲ್ಲ ಫಲ
ನಾವು ಪಯಣಿಸುವೆವು ಶಾಶ್ವತ ಅತಿಥಿಗಳು ನಾವು
ನಮ್ಮದೆನ್ನುವುದಾವುದು ಇಲ್ಲ, ನಮಗಿಲ್ಲ ನೆಲ

ಏನಗೈವನೋ ಅವನು ತಿಳಿಯದದು ನಮಗೆ
ಆಡಿಸುವವನವನು ಅವನಿಚ್ಛೆಯ ಕೈಗೊಂಬೆಗಳು
ಮೃದು ಮೂಕರು ನಾವು ನಗುವುದು ಇಲ್ಲ, ನರಳುವುದಿಲ್ಲ,
ನಾದುವನವನು, ತಗುವುದಿಲ್ಲ ನಮಗಾವ ತಪಗಳು

ಸಾಧಿಸಲೋಸುಗ ವಜ್ರಸಂಕಲ್ಪದಿಂದ
ಹಾರೈಸುವೆವು ಋಜುಮಾರ್ಗದಿ ನಿಲ್ಲಲು
ಆದರೇನ್ ಭೀತಿ ಆವರಿಸಿರುವುದು ಒಳಗೆ
ನಮ್ಮ ಹಾದಿಯಲಿರದೆಂದೂ ವಿಶ್ರಾಂತಿ ಗೆಲ್ಲಲು

ಸಿದ್ಧಾರ್ಥ

ಭಾಗ - ಒಂದು

---

೧. ಬ್ರಾಹ್ಮಣ ಪುತ್ರ

ವಂಶದ ಸಂಸ್ಕಾರ ಪಡೆದು ನದಿಯಲ್ಲಿ ತೇಲಾಡುವ ದೋಣಿಯಲ್ಲಿ, ಸೂರ್ಯನ ಮುಕ್ತರಶ್ಮಿಯಲ್ಲಿ ಮೀಯುತ್ತಾ, ಅಂಜೂರ ಮರಗಳ ನೆರಳಿನಲ್ಲಿ ಗೋವಿಂದನೊಂದಿಗೆ ಆಡುತ್ತಾ ಸುಂದರ ಸಿದ್ಧಾರ್ಥ ಬೆಳೆಯುತ್ತಿದ್ದ. ಕುಲದಲ್ಲಿ ತಂದೆ ಬ್ರಾಹ್ಮಣನಾದ್ದರಿಂದ ಅವನೂ ಬ್ರಾಹ್ಮಣಪುತ್ರ. ನದಿಯಲ್ಲಿ ಮಿಂದು ಸಂಧ್ಯಾವಂದನೆ ಮಾಡುವಾಗ ಸೂರ್ಯರಶ್ಮಿಗಳ ಝಳದಿಂದ ಅವನ ತೆಳುವಾದ ತೋಳು ಕಪಿಲ ವರ್ಣವಾಗಿತ್ತು. ತಾಯಿಯ ಹಾಡು ಆಲಿಸುವಾಗ, ತಂದೆಯ ವಿವೇಕ ಕೇಳುವಾಗ, ಅರಿತವರ ಸಂಗದಲ್ಲಿ ಅವರ ವಿಚಾರದೀಪ್ತಿ ಅರಿಯುತ್ತಿದ್ದಾಗ, ಮಾವಿನ ತೋಪಿನಲ್ಲಿ ಆಡುವಾಗ ಅವನ ಕಣ್ಣಮುಂದೆ ಯಾವುದೋ ಛಾಯೆ ಸುಳಿಯುತ್ತಿತ್ತು. ಮೊದಲಿನಿಂದಲೂ ಸತ್ಸಂಗ, ಧ್ಯಾನ, ಸಮಾಧಿಗಳ ಬಗ್ಗೆ ಚರ್ಚಿಸಿ, ಗೋವಿಂದನೊಂದಿಗೆ ಮಥಿಸಿ, ಅಭ್ಯಸಿಸುತ್ತಿದ್ದ. ತನ್ನೊಳಗಿನಾಳದಲ್ಲಿ ಅವಿನಾಶಿಯಾದ, ವಿಶ್ವದೊಳಗೊಂದಾದ ಆತ್ಮನನ್ನು ಗುರುತಿಸುವುದನ್ನೂ, 'ಸೋಹಂ' ಅಜಪ ಗಾಯಿತ್ರಿಯನ್ನೂ ಅಳವಡಿಸಿಕೊಂಡಿದ್ದ ಭ್ರೂಮಧ್ಯದ ಕಾಂತಿಯಿಂದ ಅವನ ಮುಖಮಂಡಲ ತೇಜಃಪೂರ್ಣವಾಗಿತ್ತು.

ಸೂಕ್ಷ್ಮಮತಿಯಾದ ಸಿದ್ಧಾರ್ಥ ಜ್ಞಾನದಾಹಿಯೂ ಆಗಿರುವುದನ್ನು ಕಂಡು ತಂದೆ ಆನಂದಗೊಂಡಿದ್ದ; ಜ್ಞಾನಸಂಪನ್ನನಾಗಿ, ಪವಿತ್ರವಾಗಿ, ಬ್ರಾಹ್ಮಣ ಕುಲತಿಲಕನಾಗಿ ಬೆಳೆಯುತ್ತಿರುವುದನ್ನೂ ಗುರುತಿಸಿ ಹಿಗ್ಗಿದ್ದ.

ಸಿದ್ಧಾರ್ಥನ ಸ್ಫುರದ್ರೂಪ, ಪುಷ್ಟ ಮೈಕಟ್ಟು, ನಡೆ, ನುಡಿಯ ಗಾಂಭೀರ್ಯ ಕಂಡು ತಾಯಿಯ ಹೃದಯ ಹಿಗ್ಗಿತ್ತು. ರಾಜಬೀದಿಯಲ್ಲಿ ಸಾಗಿದಾಗ ಅವನ ಹೂನಗೆಯ ಹುಬ್ಬು, ರಾಜನೇತ್ರ, ಬಳುಕುವ ಚಿನ್ನದ ಮೈ ಕಂಡ ಬ್ರಾಹ್ಮಣ ಕುವರಿಯರ ಹೃದಯದಲ್ಲಿ ಪ್ರೇಮ ಸಂಚಾರವಾಗುತ್ತಿತ್ತು.

ಗೆಳೆಯ ಗೋವಿಂದನೂ ಕುಲದಲ್ಲಿ ಬ್ರಾಹ್ಮಣ. ಅವನಿಗೆ ಸಿದ್ಧಾರ್ಥ ಎಂದರೆ ಅಮಿತ ಅಕ್ಕರೆ. ಅವನ ಸ್ಪಷ್ಟವಾದ ಧ್ವನಿ, ಜೀವಂತ ಕಣ್ಣುಗಳು ಎಂದರೆ ಅವನಿಗೆ ಇಷ್ಟ. ಅವನ ಗಾಂಭೀರ್ಯ, ಲಲಿತವಾದ ಆಕರ್ಷಕ ಚಲನೆ, ನುಡಿ, ಬುದ್ಧಿಚಾತುರ್ಯ, ದೃಢಚಿತ್ತ, ಬಲವತ್ತರವಾದ ಭಾವನೆಗಳು, ಮಹತ್ತರವೆನಿಸುವ ಕಾರ್ಯಗಳು ಗೋವಿಂದನಿಗೆ ಪ್ರಿಯ. ಸಿದ್ಧಾರ್ಥ ಸಾಮಾನ್ಯ ಬ್ರಾಹ್ಮಣನಾಗಿ, ಸೋಮಾರಿ ಋತ್ವಿಜನಾಗಿ, ಮಂತ್ರಶಾಸ್ತ್ರದ ಹೇಳಿಕೆಗಳ ಆಸೆಬುರುಕ ಮಾರಾಟಗಾರನಾಗಿ, ಯಾವ ಫಲವೂ ನೀಡದ ಮಾತಿನ ಮಾಯಾಜಾಲ ಹೆಣೆಯುವ ಕೇವಲ ಮಾತುಗಾರನಾಗಿ, ಕಪಟ ಪುರೋಹಿತನಾಗಿ, ಕುರಿಮಂದೆಯಲ್ಲಿ ಹೆಗ್ಗುರಿಯಾಗುವವನಲ್ಲ ಎಂದು ತಿಳಿದಿದ್ದ ಗೋವಿಂದ. ಸಾವಿರಾರು ಮಂದಿ ಬ್ರಾಹ್ಮಣರ ಗುಂಪಿನಲ್ಲಿ ತಾವೂ ಒಬ್ಬರೆನಿಸಿ ಹಾಗೆ ರೂಪುಗೊಳ್ಳುವುದು ಅವರಿಬ್ಬರಿಗೂ ಇಷ್ಟವಿರಲಿಲ್ಲ.

ಗೋವಿಂದನಿಗೆ ತನ್ನ ಅಚ್ಚುಮೆಚ್ಚಿನ, ಅಪೂರ್ವವೆಂದು ಭಾವಿಸಿದ್ದ ಸಿದ್ಧಾರ್ಥನನ್ನು ಅನುಸರಿಸಬೇಕೆಂಬ ಬಯಕೆ, ಅವನೇನಾದರೂ ದೈವತ್ವದ ಹಂತವನ್ನೇರಿ ತೇಜೋರೂಪಿ ಪರಮಾತ್ಮನೊಂದಿಗೆ ಮೇಳೈಸಿದಾಗ ಅವನ ಮಿತ್ರನಾಗಿ, ಸಹಚರನಾಗಿ, ಸೇವಕನಾಗಿ, ಪತಾಕಧಾರಿಯಾಗಿ, ಅವನ ನೆರಳಾಗಿ ಹಿಂಬಾಲಿಸಬೇಕೆಂದಿದ್ದ.

ಸಿದ್ಧಾರ್ಥ ಎಲ್ಲರ ಪ್ರೀತಿಪಾತ್ರನಾಗಿ, ಎಲ್ಲರನ್ನೂ ಮೆಚ್ಚಿಸಿ ಸಂತೋಷಗೊಳಿಸುತ್ತಿದ್ದರೂ ಅವನಲ್ಲಿಯೇ ಸಂತೋಷವಿರಲಿಲ್ಲ. ಅಂಜೂರ ತೋಟದ ಆಹ್ಲಾದಕರ ಮೆದುಹಾದಿಯಲ್ಲಿ ಅಡ್ಡಾಡಿದರೂ, ಸ್ನಾನ ಸಂಧ್ಯಾದಿ ಕರ್ಮಗಳಿಂದ ಶುದ್ಧನಾದರೂ, ಕಡುನೀಲ ಛಾಯೆಯಲ್ಲಿ ಧ್ಯಾನಾಸಕ್ತನಾಗಿ ಕುಳಿತರೂ ಮಾವಿನ ತೋಪಿನ ನೆರಳಲ್ಲಿ ಶ್ರದ್ಧೆಯಿಂದ ಕರ್ಮನಿಷ್ಠನಾಗಿದ್ದ ಅವನು ಆಕರ್ಷಿತನಾಗಿ ಪ್ರೀತಿಪಾತ್ರನಾಗಿ ಇತರರ ಆನಂದಕ್ಕೆ ಕಾರಣನಾಗಿದ್ದರೂ ಅವನ ಹೃದಯದಲ್ಲಿಯೇ ಆನಂದವಿರಲಿಲ್ಲ. ಹರಿವ ಹೊಳೆ, ಮಿನುಗುವ ನಕ್ಷತ್ರ, ಕರಗುವ ಸೂರ್ಯರಶ್ಮಿಗಳಿಂದ ನಾನಾ ಭಾವಗಳ ಚಿಲುಮೆ, ಕನಸುಗಳ ಕಣಜ ಅವನ ಮುಂದೆ ಹರಡಿಕೊಳ್ಳುತ್ತಿತ್ತು, ಹೋಮ ಕುಂಡದಿಂದ ಹೊಮ್ಮುವ ಹೊಗೆ, ಹರಿದು ಬರುವ ಋಗ್ವೇದ ಋಕ್ಕುಗಳು, ವೃದ್ಧಬ್ರಾಹ್ಮಣರ ಸತ್ಸಂಗ ಅವನಲ್ಲಿ ಸಂಶಯದ ಬೀಜಗಳನ್ನು ಬಿತ್ತಿ ಅಶಾಂತಿಯ ಮಹಾಪೂರವನ್ನೇ ತರುತ್ತಿದ್ದವು.

ಅವನಲ್ಲಿ ಅತೃಪ್ತಿಯ ಭಾವನೆ ಬಲವಾಯಿತು. ಅದರ ಅರಿವೂ ಸ್ಪಷ್ಟವಾಗುತ್ತಾ ಬಂತು. ತಾಯಿ ತಂದೆಯ ಮಮತೆ, ಗೆಳೆಯನ ಅಕ್ಕರೆ ಸದಾ ಸಂತಸವನ್ನು ನೀಡುತ್ತಾ ಶಾಂತಿ ತೃಪ್ತಿಗಳನ್ನು ಕೊಡಲಾರವು ಎಂಬುದನ್ನು ಮನವರಿಕೆ ಮಾಡಿಕೊಂಡ. ತಂದೆ, ಗುರು, ವಿದ್ವಾಂಸರು ತಮ್ಮ ಜ್ಞಾನದಾರಿ ಬಟ್ಟಲಿಗೆ ಸುರುವಿದ್ದರೂ ಅದು ಇನ್ನೂ ತುಂಬಿರಲಿಲ್ಲ. ಅವನ ಅತೃಪ್ತಿ ಹಾಗೇ ಇತ್ತು. ಕಾಲದೊಂದಿಗೆ ಅದೂ ಬೆಳೆಯುತ್ತಿದೆ ಎಂದೂ ಅನಿಸುತ್ತಿತ್ತು. ಜಪ-ತಪ, ಹೋಮ-ಹವನ, ಕರ್ಮಗಳು ಒಳ್ಳೆಯವೇ. ಆದರೆ ನೀರಿನಂತೆ ಅವು ಹೊರಮೈಯನ್ನು ಮಾತ್ರ ಶುಭ್ರಗೊಳಿಸುವ ಸಾಧನಗಳು; ಪಾಪವನ್ನು ತೊಳೆದು ಒಳಚೇತನಕ್ಕೆ ಹೊಸ ಚೈತನ್ಯ ತುಂಬುವುದರಲ್ಲಿ, ವಿಕಲ ಮನಕ್ಕೆ ಸಾಂತ್ವನ ಕೊಡುವುದರಲ್ಲಿ ಅವು ವಿಫಲಗೊಂಡಿವೆ ಎನಿಸುತ್ತಿತ್ತು. ಯಜ್ಞಕ್ರಮ, ದೇವಸ್ತುತಿಗಳು ಒಳ್ಳೆಯವೇ. ಆದರೆ ಅವೇ ಸರ್ವಸ್ವವೇ ? ಈ ಕರ್ಮಕಾಂಡವೇ ಸಂತೋಷ ಪ್ರದಾಯಿನಿಯೇ?

ಇನ್ನು ದೈವ ಎನ್ನುವುದೇನು? ಈ ಪ್ರಪಂಚ ಸೃಷ್ಟಿಸಿದವನು ಯಾರು? ಹಿರಣ್ಯಗರ್ಭನೇ? ವಿಶ್ವಕರ್ಮನೆ? ಪ್ರಜಾಪತಿಯೇ? ನಿಜವಾದ ಸೃಷ್ಟಿಕರ್ತ ಇವರೇನೇ? ಸೃಷ್ಟಿ ಕಾರ್ಯಕ್ಕೆ ಮೂಲವಾದುದು ಆತ್ಮವಲ್ಲವೇ ? ದೇವತೆಗಳ ರೂಪಕಲ್ಪನೆ ನಶ್ವರರಾಗಿ ಕಾಲಧರ್ಮಕ್ಕೊಳಪಟ್ಟ ಮಾನವರ ಪ್ರತಿರೂಪದಂತೆ ಇರುವುದಲ್ಲ ! ಈ ದೇವತೆಗಳಿಗೆ ಪೂಜೆ, ಹವಿಸ್ಸುಗಳ ಅರ್ಪಣೆ ಎಷ್ಟು ಮಾತ್ರ ಸರಿ? ಯಾವ ರೀತಿಯಲ್ಲಿ ಒಳ್ಳೆಯದು? ಸಮಂಜಸ? ವಿವೇಕ? ಸರಿಯಲ್ಲವಾದರೆ ಈ ಗೌರವ ಏಕೈಕವಾದ ಆತ್ಮನಿಗಲ್ಲದೆ ಮತ್ತಾರಿಗೆ ಸಲ್ಲಬೇಕು? ಅವನನ್ನು ಕಾಣುವುದು ಹೇಗೆ? ಅನಂತಾತ್ಮನ ಮಿಡಿತ ತನ್ನಲ್ಲಿ ಪ್ರತಿಯೊಬ್ಬನ ಅಂತರಾಳದಲ್ಲಲ್ಲದೆ ಬೇರೆಲ್ಲಿ ತಾನೇ ಇರಬಲ್ಲುದು? ಆತ್ಮವೇ? ಜೀವಾತ್ಮವೇ? ಅದು ಮೂಳೆಮಾಂಸದಲ್ಲಿ, ಸ್ಮೃತಿಯಲ್ಲಿ, ಭಾವದಲ್ಲಿಲ್ಲ ಎನ್ನುತ್ತಾರೆ ಮೇಧಾವಿ ದಾರ್ಶನೀಕರು. ಹಾಗಿದ್ದರೆ ಅದು ಇನ್ನೆಲ್ಲಿತ್ತು? ಆತ್ಮನನ್ನು ಅರಿಯಲು ಬೇರಾವುದಾದರೂ ಶ್ರೇಷ್ಠಮಾರ್ಗವಿದೆಯೇ? ಆ ಮಾರ್ಗವನ್ನು ಯಾರೂ ತೋರಲಿಲ್ಲ. ತಂದೆಯಾಗಲಿ, ಗುರುವಾಗಲಿ, ಮೇಧಾವಿಗಳಾಗಲಿ ಶ್ರುತಿ ಸ್ಮೃತಿಗಳಾಗಲಿ ಯಾವುದೂ ತೋರುವಂತಿರಲಿಲ್ಲ. ಆ ಪಥದ ಅರಿವು ಯಾರಿಗೂ ಇಲ್ಲ ಎನಿಸುತ್ತಿತ್ತು. ಬ್ರಹ್ಮಾಂಡದ ಸೂಕ್ಷ್ಮಾತಿಸೂಕ್ಷ್ಮವನ್ನು, ಪ್ರಪಂಚ ಸೃಷ್ಟಿಯನ್ನು, ವಾಕ್ಕಿನ ಉಗಮವನ್ನು, ಅನ್ನ, ಶ್ವಾಸ -ನಿಶ್ವಾಸವನ್ನು ಇಂದ್ರಿಯ ವ್ಯವಸ್ಥೆಯನ್ನು, ದೇವತೆಗಳ ಕಾರ್ಯಗಳನ್ನು ಪವಿತ್ರ

ಗ್ರಂಥಗಳು ವಿವರಿಸುತ್ತಿದ್ದವು; ಬ್ರಾಹ್ಮಣರು ಹೇಳುತ್ತಿದ್ದರು; ಜ್ಞಾನ ಸಾರಸತ್ವವೇ ಅವು ಎನಿಸುತ್ತಿತ್ತು . ಆದರೆ ಆತ್ಮನ ವಿಷಯದಲ್ಲಿ ಅವು ಸಂದೇಹ ನಿವಾರಿಸುವಂತೆ ತೋರಲಿಲ್ಲ. ಇದನ್ನುಳಿದು ಬೇರೆ ಎಷ್ಟು ಜ್ಞಾನವಿದ್ದರೇನು?

ಗೂಢವೂ, ಗಾಢವೂ ಆದ ಈ ವಿಚಾರವನ್ನೇ ವೇದೋಪನಿಷತ್ತುಗಳೂ ಹೇಳಿವೆ. ಸಾಮವೇದೋಪನಿಷತ್ತಿನಲ್ಲಿ ''ಆತ್ಮೈವೇದಂ ಸರ್ವಮಿತಿ''[೧] ಎಂದು ಹೇಳಲಾಗಿದೆ. ಮನುಷ್ಯನು ನಿದ್ರಿಸುವಾಗ ತನ್ನನ್ನೇ ಭೇದಿಸಿಕೊಂಡು ತುರೀಯಾವಸ್ಥೆಯಲ್ಲಿ[೨] ಆತ್ಮನನ್ನು ಸೇರುತ್ತಾನೆ ಎಂದು ಹೇಳುತ್ತದೆ. ಶೇಖರಿಸಿದ ಪರಿಶುದ್ಧ ಜೇನಿನಂತೆ ಋಷಿ ಶ್ರೇಷ್ಠರು ಸುಂದರವಾದ ಮೋಹಕ ರೀತಿಯಲ್ಲಿ ಅಖಂಡ ಜ್ಞಾನವನ್ನು ಜಗತ್ತಿಗೆ ನೀಡಿದರು. ಚತುರರು ಪಾರಂಪರ್ಯವಾಗಿ ಈ ಜ್ಞಾನಸಂಹಿತೆ ಯನ್ನು ಸಂರಕ್ಷಿಸಿಕೊಂಡು ಬಂದಿರುವುದನ್ನು ಲಘುವಾಗಿ ಗಣಿಸಿ ಉಪೇಕ್ಷಿಸಲಾಗದು. ಆದರೆ ಈ ಗೂಢತೆಯ ಜ್ಞಾನವನ್ನು ಗಳಿಸಿ ಅನುಭವಕ್ಕೆ ಅಳವಡಿಸಿಕೊಂಡ ಮೇಧಾವಿಗಳೆಲ್ಲಿ? ಸೃಷ್ಟಿಯಲ್ಲಿ ಪಡೆದ ಅನುಭೂತಿಯನ್ನು ಜಾಗ್ರತಾವಸ್ಥೆಯಲ್ಲಿ ಅನುಭವಿಸಬಲ್ಲರೇ? ನಿತ್ಯ ಬದುಕಿನಲ್ಲಿ, ನಡೆನುಡಿಯಲ್ಲಿ, ಎಲ್ಲಾ ಕಾಲದಲ್ಲಿ ಉಳಿಸಿ ಕೊಂಡವನು ಯಾರು? ಅವನೆಲ್ಲಿದ್ದಾನೆ? ಸಿದ್ಧಾರ್ಥನಿಗೆ ಬ್ರಾಹ್ಮಣ ಶ್ರೇಷ್ಠರ, ಅವರಿಗಿಂತಲೂ ಮಿಗಿಲಾಗಿ ಪವಿತ್ರನೂ, ಜ್ಞಾನಸಂಪನ್ನನೂ, ಸರ್ವರ ಆದರಕ್ಕೆ ಪಾತ್ರ ನಾದ ತಂದೆಯೇ ಅಲ್ಲದೆ ಅನೇಕ ವಿದ್ವಾಂಸರ ಪರಿಚಯವಿತ್ತು. ಸನ್ನಡತೆ, ಸದ್ವರ್ತ ನೆಯಿಂದ ಮೆಚ್ಚಿಗೆಗೆ ಪಾತ್ರನಾಗಿದ್ದ ತಂದೆ. ನಿರ್ಮಲವಾದ ಬದುಕು, ವಿವೇಕಯುಕ್ತ ಮಾತು, ಪುನೀತವಾದ ಭಾವನೆಗಳಿದ್ದರೂ, ಆತ ಸಚ್ಚಿದಾನಂದವನ್ನು ಅನುಭವಿಸಿದ್ದನೇ? ತೃಪ್ತಿ ಎಂಬುದಿತ್ತೆ? ಅತೃಪ್ತಿಯಿಂದ ಪೀಡಿತನಾಗಿ ಆತನೂ ತೃಪ್ತಿ ಅರಸುತ್ತಿರಲಿಲ್ಲವೇ? ಅದನ್ನು ಗಳಿಸಲೆಂದೇ ಅಲ್ಲವೇ ಹೋಮ-ಹವನ ಪಠನ, ಸತ್ಸಂಗ, ತೀರ್ಥಕ್ಷೇತ್ರ ದರ್ಶನಗಳಿಗೆ ಹೋಗುತ್ತಿದ್ದುದು? ಇಲ್ಲದಿದ್ದಲ್ಲಿ ಕಳಂಕರಹಿತನೂ, ಸಂಭಾವಿತನೂ ಆದ ಆತ ಯಾವ ಪಾಪವನ್ನು ತೊಡೆದು ಹಾಕುವುದಕ್ಕೆಂದು ನಿತ್ಯವೂ ಈ ಕರ್ಮ ಕ್ರಿಯೆಯಲ್ಲಿ

---

೧. ಆತ್ಮನೇ ಇದೆಲ್ಲವೂ ಆಗಿರುವನು (ಛಾಂದೋಗ್ಯೋಪನಿಷತ್ ೭-೨೫-೨)
೨. ಅವಸ್ಥೆಗಳು ನಾಲ್ಕು : ಜಾಗ್ರತ್, ಸ್ವಪ್ನ, ಸುಷುಪ್ತಿ ಹಾಗೂ ತುರೀಯ.

ತೊಡಗಬೇಕು? ಆತ್ಮ ಆತನಲ್ಲಿಲ್ಲವೇ? ಇದ್ದರೆ ಎಲ್ಲದರ ಮೂಲವೇ ಹೃದಯದಲ್ಲಿ ಅಡಗಿರುವಂತಾಗಲಿಲ್ಲವೇ ಅಂತಿದ್ದರೆ ತೃಪ್ತಿಯ ಕೀಲಿ ತನ್ನಲ್ಲಿಯೇ ಇದ್ದಂತಾಗಲಿಲ್ಲವೇ? ಅದನ್ನು ಕೊಂಡುಕೊಂಡು ತನ್ನದನ್ನಾಗಿಸಿಕೊಳ್ಳದೆ ಮತ್ತೇನನ್ನು ಅರಸಿದರೂ ಅದು ನಿರರ್ಥಕ. ಹಾದಿತಪ್ಪಿದ ಅಲೆದಾಟ, ತಪ್ಪು ಇದು ಸಿದ್ಧಾರ್ಥನ ಉತ್ಕಟೇಚ್ಛೆ ಅವನ ಅನ್ವೇಷಣೆ, ಮನದ ತುಡಿತ.

ಆಗಾಗ್ಗೆ ತನ್ನಲ್ಲಿಯೇ ಛಾಂದೋಗ್ಯ ಉಪನಿಷತ್ತಿನ ಸಾಲುಗಳನ್ನು ಮೆಲುಕು ಹಾಕಿಕೊಳ್ಳುತ್ತಿದ್ದ :

ತಾನಿ ಹ ವಾ ಏತಾನಿ ತ್ರೀಣ್ಯಕ್ಷರಾಣಿ ಸತೀಯಮಿತಿ ತದ್ಯತ್
ಸತ್ತದಮೃತಮಥ ಯತ್ತಿ ತನ್ಮರ್ತ್ಯಮಥ ಯದ್ಯಂ ತೇನೋಭೇ
ಯಚ್ಛತಿ ಯದನೇನೋಭೇ ಯಚ್ಛತಿ ತಸ್ಮಾದ್ಯಮಹರಹರ್ವಾ
ಏವಂ ವಿತ್ ಸ್ವರ್ಗಂ ಲೋಕಮೇತಿ ॥[1]

ನಿಜಕ್ಕೂ ಸತ್ಯ ಬ್ರಹ್ಮನ ಹೆಸರು. ಅರಿತವನು ಅನುದಿನವು ಸ್ವರ್ಗ ಪ್ರವೇಶಿಸುತ್ತಾನೆ. ಆ ಸ್ವರ್ಗಲೋಕ ಸನಿಹದಲ್ಲಿದ್ದಂತೆ ಕಂಡರೂ ಅವನು ಅದನ್ನು ತಲುಪಲಿಲ್ಲ ಆಸೆಯನ್ನು ತೃಪ್ತಿ ಪಡಿಸಲಿಲ್ಲ. ಅವನು ಬಲ್ಲ ವಿದ್ವಾಂಸರಲ್ಲಿ, ಕೇಳಿದ ಉಪದೇಶಕರಲ್ಲಿ ಯಾರೂ ಆ ಸ್ತರಕ್ಕೇರಿದವರು ಇರಲಿಲ್ಲ, ಅನಂತವಾದ ತೃಷ್ಣೆಯನ್ನು ಇಂಗಿಸಿದವರಿರಲಿಲ್ಲ.

''ಗೋವಿಂದಾ, ಆಲದ ಮರದ ಅಡಿಯಲ್ಲಿ ಸಾಧನೆಗೆ ತೊಡಗೋಣ ಬಾ'' ಎಂದು ಕರೆದ ಸಿದ್ಧಾರ್ಥ. ಇಪ್ಪತ್ತು ಹೆಜ್ಜೆಗಳ ಅಂತರದಲ್ಲಿ ಕುಳಿತು ಇಬ್ಬರೂ ಧ್ಯಾನಕ್ಕೆ ಸನ್ನದ್ಧರಾದರು. ಸಿದ್ಧಾರ್ಥ ಮೆಲುವಾಗಿ ಸ್ಥಿರ ಕಂಠದಲ್ಲಿ ಉಚ್ಚರಿಸಿದ:

---

೩. ಬ್ರಹ್ಮನ ಸತ್ಯವೆಂಬ ಹೆಸರು ಸ, ತೀ, ಯಮ್ ಎಂಬ ಮೂರು ಅಕ್ಷರಗಳನ್ನು ಒಳಗೊಂಡಿದೆ. ಅಲ್ಲಿ ಯಾವುದು 'ಸತ್' ಎಂಬುದೊ ಅದು ಅಮೃತವು, ಯಾವುದು 'ತಿ' ಎಂಬುದೋ ಅದು ಮರ್ತ್ಯವು, ಮತ್ತು ಯಾವುದು 'ಯಮ್' ಎಂಬುದೊ ಅದರಿಂದ ಎರಡನ್ನೂ ವಶದಲ್ಲಿಟ್ಟಿರುತ್ತಾನೆ. ಇದರಿಂದ ಎರಡನ್ನು ವಶದಲ್ಲಿಟ್ಟಿರುವುದರಿಂದ ಇದು 'ಯಮ್' ಎನಿಸಿದೆ. ಹೀಗೆ ಅರಿತುಕೊಂಡವನು ಪ್ರತಿದಿನವೂ ಸ್ವರ್ಗಲೋಕಕ್ಕೆ ಹೋಗುತ್ತಾನೆ. (ಛಾಂದೋಗ್ಯೋಪನಿಷತ್ ೮-೩-೫)

ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯ ಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥[೪]

ಧ್ಯಾನಾನಂತರ ಗೋವಿಂದ ಎಚ್ಚರಗೊಂಡಾಗ ಸಂಜೆಯಾಗಿತ್ತು. ಸಂಧ್ಯಾ ವಂದನೆಯ ಕಾಲ ಸಮೀಪಿಸಿತ್ತು. ಸಿದ್ಧಾರ್ಥನನ್ನು ಕರೆದರೂ ಎಚ್ಚರಗೊಳ್ಳಲಿಲ್ಲ, ಧ್ಯಾನ ಸಮಾಧಿಗೆ ಭಂಗಬರಲಿಲ್ಲ. ದಂತ ಪಂಕ್ತಿಗಳ ನಡುವೆ ತುಸುನಾಲಿಗೆ ಇಣುಕಿತ್ತು. ದೂರದ ಗುರಿಯಲ್ಲಿ ಕೇಂದ್ರೀಕೃತಗೊಂಡಂತೆ ತೋರಿತು ಕಣ್ಣು. ಉಸಿರಾಡುತ್ತಿರುವುದು ಕಾಣಿಸಲಿಲ್ಲ. ಆತ್ಮವನ್ನು ಬಾಣವಾಗಿಸಿ, ಬ್ರಹ್ಮನತ್ತ ಗುರಿಯಿಟ್ಟು ಓಂ ಅನ್ನು ಚಿಂತಿಸುತ್ತಾ ಧ್ಯಾನದಲ್ಲಿ ಲೀನನಾಗಿದ್ದ.

ಒಮ್ಮೆ ಕೆಲವು ಸಮಣರು ನಗರದಲ್ಲಿ ಹಾದು ಹೋದರು. ನಿತ್ರಾಣರಾಗಿದ್ದ ಆ ಮೂವರು ಮಧ್ಯವಯಸ್ಸಿನ ಸಂಚಾರಿ ಸನ್ಯಾಸಿಗಳು. ಕೌಪೀನ ಬಿಟ್ಟು ಪೂರ್ಣ ನಗ್ನರಾಗಿದ್ದು ಏಕಾಂಗಿಗಳಾಗಿ ಎಲ್ಲರಿಗಿಂತಲೂ ಭಿನ್ನರಾಗಿದ್ದ ಅವರು ಈ ಜನರ ಕಾಡಿನಲ್ಲಿ ಸೊರಗಿದ ಬಡ ನರಿಗಳಂತೆ ತೋರುತ್ತಿದ್ದರು. ಆಸೆಯನ್ನು ಮರಗಟ್ಟಿಸಿದ್ದ ಸೇವೆಗಳೆಲ್ಲ ನರರ್ಥಕವೆನಿಸುವ, ನಿಷ್ಕರುಣೆಯಿಂದ ದೇಹ ದಂಡಿಸುತ್ತಿದ್ದ ಅವರನ್ನು ವಿಶಿಷ್ಠ ವಾತಾವರಣವೊಂದು ಆವರಿಸಿದ್ದಂತೆ ಭಾಸವಾಗುತ್ತಿತ್ತು.

ಸಂಜೆ ಧ್ಯಾನಾನಂತರ ಸಿದ್ಧಾರ್ಥ : ''ನಾಳೆ ಮುಂಜಾನೆ ಸಿದ್ಧಾರ್ಥ ಸಮಣರನ್ನು ಸೇರಿ ಅವನೂ ಸಮಣನಾಗುತ್ತಾನೆ'' ಎಂದು ಗೋವಿಂದನಿಗೆ ಹೇಳಿದ.

ಬಿಲ್ಲಿನಿಂದ ಗುರಿತಪ್ಪದ ಬಾಣದಂತೆ ಹೊರಬಂದ ನುಡಿಗಳನ್ನು, ಅವನ ದೃಢನಿರ್ಧಾರವನ್ನು ಕೇಳಿದ ಗೋವಿಂದ ಗೆಳೆಯನ ಮುಖವನ್ನು ದಿಟ್ಟಿಸಿದ. ಮೊದಲ ನೋಟದಲ್ಲಿಯೇ ಇದು ಪ್ರಾರಂಭ ಎಂಬುದನ್ನು ಗುರುತಿಸಿದ್ದ. ಅವನ ಬಾಳಿನ ಹೆಗ್ಗುರಿ ತಾನೇ ತಾನಾಗಿ ಬಿಚ್ಚಿ ಹರಡಿಕೊಳ್ಳುತ್ತಿತ್ತು. ಅವನು ತನ್ನ ಗುರಿಯನ್ನು ಮುಟ್ಟಲೆಂದು ಸನ್ನದ್ಧನಾಗುತ್ತಿದ್ದ. ಗೋವಿಂದ ಏನು ತಾನೇ ಮಾಡಬಲ್ಲ? ಅವನ ಈ ಮಾತಿನ

---

೪. ಓಂಕಾರವು ಧನಸ್ಸು, ಆತ್ಮನೇ ಬಾಣ, ಬ್ರಹ್ಮವು ಅದರ ಲಕ್ಷ್ಯವೆಂದು ಹೇಳಲ್ಪಡುತ್ತದೆ. ಪ್ರಮತ್ತನಾಗದೆ ಹೊಡೆಯಬೇಕು, ಬಾಣದಂತೆ ತನ್ಮಯನಾಗಬೇಕು (ಮಾಂಡೂಕ್ಯೋಪನಿಷತ್-೨-೪)

ನಿರ್ಧಾರಕ್ಕೆ ಗೋವಿಂದನ ಮುಖ ಬಿಳಚಿಕೊಂಡಿತು. ''ಸಿದ್ಧಾರ್ಥ ನಿನ್ನ ತಂದೆ ಇದಕ್ಕೆ ಒಪ್ಪುವರೇ?'' ಎಂದು ಕೇಳಿದ.

ಆಗ ತಾನೇ ಎಚ್ಚರಗೊಂಡವನಂತೆ ಗೋವಿಂದನತ್ತ ದೃಷ್ಟಿಹರಿಸಿದ ಸಿದ್ಧಾರ್ಥನಿಗೆ ಮಿಂಚಿನ ವೇಗದಲ್ಲಿ ತನ್ನ ಮಿತ್ರ ಗೋವಿಂದನ ಅಂತರಂಗ, ಅವನಲ್ಲಿಯ ಕುಕ್ಕುಲತೆ, ಸಮರ್ಪಣಭಾವ ಸ್ಫುಟಗೊಂಡಿತು. ನಯವಾದರೂ ನಿರ್ಧಾರದ ಕಂಠದಲ್ಲಿ ನುಡಿದ, ''ಗೋವಿಂದ ನಿರರ್ಥಕ ತರ್ಕ ಬೇಡ - ನಾಳೆ ಬೆಳಗಾಗುತ್ತಲೇ ನಾನು ಸಮಣನಾಗುತ್ತೇನೆ''.

ದರ್ಭಾಸನದ ಮೇಲೆ ಮಂಡಿಸಿದ್ದ ತಂದೆಯ ಕೋಣೆ ಪ್ರವೇಶಿಸಿದ ಸಿದ್ಧಾರ್ಥ ತಂದೆಯ ಹಿಂದೆ ನಿಂತ. ಆತನೇ ಗಮನಿಸಿ ''ಯಾರು, ಸಿದ್ಧಾರ್ಥನೆ ಏಕೆ''? ಎಂದು ಕೇಳಿದ.

''ತಂದೆ, ನಾಳೆ ಮನೆ ಬಿಟ್ಟು ಸಮಣನಾಗಲು ನಿಶ್ಚಯಿಸಿ ನಿಮ್ಮ ಅನುಮತಿಗಾಗಿ ಬಂದಿದ್ದೇನೆ'' ನಿಶ್ಚಲನಾಗಿ ಕೈಕಟ್ಟಿ ನಿಂತಿದ್ದ ಸಿದ್ಧಾರ್ಥ. ತಂದೆಯೂ ಅಚಲನಾಗಿ ದರ್ಭಾಸನದಲ್ಲಿ ಕುಳಿತಿದ್ದ. ಆಕಾಶದಲ್ಲಿ ತಾರೆಗಳು ಮೂಡಿದ್ದವು. ದೀರ್ಘಮೌನದ ನಂತರ ''ಆವೇಶದಲ್ಲಿ ಕೋಪದಲ್ಲಿ ಏನೋ ಆಡುವುದು ಬ್ರಾಹ್ಮಣನಿಗೆ ತರವಲ್ಲ. ಈ ಮಾತು ನನಗೆ ಅಪ್ರಿಯವಾದುದು. ಪುನಃ ಈ ಕೋರಿಕೆ ಕೇಳಲು ನಾನು ಇಚ್ಛಿಸುವುದಿಲ್ಲ'' ಎಂದ ಸಿದ್ಧಾರ್ಥನ ತಂದೆ ಮೆಲ್ಲನೆ ಎದ್ದುನಿಂತ. ಕೈಕಟ್ಟಿ ಹಾಗೆಯೇ ಮೌನವಾಗಿ ಇನ್ನೂ ನಿಂತಿದ್ದ ಸಿದ್ಧಾರ್ಥನನ್ನು ಕಂಡು ''ಇನ್ನೂ ಕಾಯುತ್ತಿರುವೆ ಏಕೆ?'' ಎಂದು ಕೇಳಿದ. ''ಏಕೆ ಎಂಬುದರ ಉತ್ತರ ನಿಮಗೇ ಗೊತ್ತು''. ಕೋಣೆಯಿಂದ ಹೊರಬಂದು ಅತೃಪ್ತಿಯಿಂದ ಅವನ ತಂದೆ ಹಾಸಿಗೆಯ ಮೇಲೆ ಮಲಗಿದ. ಎಷ್ಟು ಹೊರಳಾಡಿದರೂ ನಿದ್ದೆ ಬರಲಿಲ್ಲ. ಹೊರಬಂದು ಅತ್ತಿತ್ತ ಅಡ್ಡಾಡಿದ, ಕೋಣೆಯಲ್ಲಿ ನಿಶ್ಚಲನಾಗಿ ಕೈಕಟ್ಟಿ ನಿಂತಿರುವ ಸಿದ್ಧಾರ್ಥ ಕಿಟಕಿಯಿಂದ ಕಂಡ. ಎದೆಯಲ್ಲಿ ಒಂದೇ ಚಳುಕು, ಮತ್ತೆ ಹಾಸಿಗೆಯಲ್ಲಿ ಮಲಗಿದ. ನಿದ್ದೆ ಹತ್ತಲಿಲ್ಲ. ಮತ್ತೆ ಎದ್ದು ಅಡ್ಡಾಡುತ್ತಾ ಹೊರಗೆ ಬಂದು ಮೂಡಿದ್ದ ಚಂದ್ರನನ್ನು ಕಂಡು ಕಿಟಕಿಯತ್ತ ದೃಷ್ಟಿಹಾಯಿಸಿದ. ಇನ್ನೂ ಸಿದ್ಧಾರ್ಥ ಕೈಕಟ್ಟಿ ನಿಶ್ಚಲನಾಗಿ ನಿಂತಿದ್ದ. ಈಗ ಚಂದ್ರಿಕೆಯಿಂದ ಆತನ ಕೆಳ ಮೀನಖಂಡಗಳು ಬೆಳಗಿದ್ದವು. ಮತ್ತೆ

ಎದೆಯ ಚಳುಕು ಯಮಯಾತನೆಯಿಂದ ನುಲುಗಿತು. ಅಲ್ಲಿಂದ ನೇರವಾಗಿ ಬಂದು ಹಾಸಿಗೆಯಲ್ಲಿ ಬಿದ್ದುಕೊಂಡ.

ಘಟಿಕಾಯಂತ್ರ ಕಾಲದ ಚಲನೆ ಗುರುತಿಸುತ್ತದ್ದಂತೆ ಮತ್ತೆ ಮತ್ತೆ ಕಿಟಕಿಯತ್ತ ನೋಟ ಹಾಯಿಸುತ್ತಿದ್ದ. ನಕ್ಷತ್ರಗಳ ಮಂದ ಬೆಳಕು. ಶುಭ್ರಜ್ಯೋತ್ಸ್ನ ಇವುಗಳ ಕಾಂತಿಯಲ್ಲಿ ಸಿದ್ಧಾರ್ಥ ಕೈಕಟ್ಟಿ ನಿಶ್ಚಲನಾಗಿಯೇ ನಿಂತಿದ್ದ. ಚಂದ್ರತಾರೆಗಳಿಗೆ ಚಲನೆಯಿದ್ದರೂ ಅವನಿಗೆ ಇರಲಿಲ್ಲ. ಅದೇ ಗಾಂಭೀರ್ಯ, ಸ್ಥಿರಚಿತ್ತ. ತಂದೆಯ ಹೃದಯ ವ್ಯಾಕುಲತೆ, ಭಯ, ಸಂಕಟ, ನೋವುಗಳಿಂದ ತುಂಬಿ ತೊಯ್ದಾಡುತ್ತಿತ್ತು.

ರಾತ್ರಿಯ ಕೊನೆಯ ಜಾವದಲ್ಲಿ ಕೋಣೆಗೆ ಬಂದ ಸಿದ್ಧಾರ್ಥ ನಿಂತಿದ್ದ. ಆದರೆ ಈಗ ಬೆಳೆದವನಂತೆ, ಅಪರಿಚಿತನಂತೆ ಭಾಸವಾದ. ತಂದೆ, ''ಸಿದ್ಧಾರ್ಥ ಇನ್ನೂ ಏಕೆ ಕಾಯುತ್ತಿರುವೆ?'' ಎಂದು ಕೇಳಿದ.

''ಏಕೆ ಎಂಬುದು ನಿಮಗೇ ಗೊತ್ತು.''

''ಹೀಗೇ ದಿನವೆಲ್ಲಾ, ರಾತ್ರಿಯೆಲ್ಲಾ ಕಾಯುತ್ತ ನಿಂತಿರುತ್ತೀಯಾ?''

''ಹೌದು.''

''ಆಗಲಿ.''

''ಹಾಗೇಯೇ ಸಾಯಬೇಕಾಗುತ್ತದೆ.''

''ಸಿದ್ಧನಾಗಿದ್ದೇನೆ''

''ನಿನಗೆ ತಂದೆಯ ಇಚ್ಛೆಗಿಂತ ಸಾವು ಹೆಚ್ಚಿನದೇ ?''

''ಸಿದ್ಧಾರ್ಥ ತಂದೆಯ ಇಚ್ಛೆಯ ವಿರುದ್ಧವಾಗಿ ಎಂದೂ ವರ್ತಿಸುವುದಿಲ್ಲ.''

''ಹಾಗಿದ್ದರೆ ನಿನ್ನ ಈ ಯೋಚನೆ ಬಿಡು.''

''ತಂದೆಯ ಮಾತನ್ನು ಸಿದ್ಧಾರ್ಥ ಉಲ್ಲಂಘಿಸುವುದಿಲ್ಲ.''

ಸೂರ್ಯೋದಯದ ಪ್ರಥಮ ಕಿರಣ ಕೋಣೆಯನ್ನು ಪ್ರವೇಶಿಸಿತು. ಸಿದ್ಧಾರ್ಥನ ಕಾಲು ಸ್ವಲ್ಪ ನಡುಗುತ್ತಿದ್ದರೂ ಮುಖದಲ್ಲಿ ಅದೇ ಸ್ಥೈರ್ಯ. ಕಣ್ಣು ದೂರದ ಶೂನ್ಯದಲ್ಲಿ ನೆಟ್ಟಿತ್ತು. ''ಇನ್ನು ಸಿದ್ಧಾರ್ಥ ಮನೆಯಲ್ಲಿರಲಾರ. ಈಗಾಗಲೇ ಮನೆಯನ್ನು ಬಿಟ್ಟಿದ್ದಾನೆ'' ಎಂದುಕೊಂಡ. ಅವನ ಹೆಗಲ ಮೇಲೆ ಕೈಹಾಕಿ ''ಕಾಡಿಗೆ ಹೋಗು, ಸಮಣನಾಗು, ಆನಂದವನ್ನು ಕಂಡುಕೊಂಡರೆ ಬಂದು ನನಗೂ ಉಪದೇಶ ಮಾಡು. ನಿರಸನ ಹೊಂದಿದರೆ ಹಿಂದಿರುಗಿ ಬಾ. ದೇವತೆಗಳಿಗೆ ಇಬ್ಬರೂ ಕೂಡಿ ಹವಿಸ್ಸನ್ನು ಅರ್ಪಿಸೋಣ.[೫] ಹೋಗು, ನಿನ್ನ ತಾಯಿಗೆ ನಮಸ್ಕರಿಸಿ ಎಲ್ಲಿಗೆ ಹೋಗುವೆ ಎಂಬುದನ್ನು ತಿಳಿಸು. ಪ್ರಾತಃರ್ಸ್ನಾಹ್ನಿಕಕ್ಕೆ ವೇಳೆಯಾಗಿದೆ, ನದಿಗೆ ಹೋಗಬೇಕು'' ಎಂದ.

ನಡೆಯಲು ಸಿದ್ಧಾರ್ಥ ತತ್ತರಿಸಿದ. ತನ್ನನ್ನು ಅಂಕೆಯಲ್ಲಿರಿಸಿಕೊಳ್ಳಲು ಪ್ರಯತ್ನಿಸುತ್ತಾ ತಂದೆಯ ಪಾದಾರವಿಂದಗಳಿಗೆ ಪೊಡಮಟ್ಟು ತಂದೆಯ ಆಜ್ಞೆಯಂತೆ ತಾಯಿಯ ಬಳಿಗೆ ಹೊರಟ. ತಂದೆ ನದಿಯತ್ತ ನಡೆದ.

ಅರುಣೋದಯವಾದರೂ ನಿದ್ರಿಸುತ್ತಿದ್ದ ನಗರವನ್ನು ಬಿಟ್ಟು ಜೋಮು ಹಿಡಿದು ಮರಗಟ್ಟಿದ್ದ ಕಾಲುಗಳನ್ನು ಎಳೆದುಕೊಂಡು ಹೆಜ್ಜೆಹಾಕಿದ ಸಿದ್ಧಾರ್ಥ. 'ಕೊನೆಯ ಗುಡಿಸಿಲಿನ ಛಾಯೆಯಲ್ಲಿ ಅಡಗಿ ನಿಂತಿದ್ದ ನೆರಳು ಈ ಯಾತ್ರಿಯನ್ನು ಕೂಡಿಕೊಂಡಿತು.

''ನೀನೂ ಬಂದೆಯಾ'' ಎಂದು ನಕ್ಕ ಸಿದ್ಧಾರ್ಥ.

ಗೋವಿಂದನೂ ಮೌನವಾಗಿ ನಕ್ಕ.

---

೫. ಬ್ರಾಹ್ಮಣ ಎಂದರೆ ಬ್ರಹ್ಮನನ್ನು ಅರಿತವ. ಆದಿಯಲ್ಲಿ ಜಾತಿ ನಿರ್ಣಯಕ್ಕೆ ವ್ಯಕ್ತಿಯ ಹುಟ್ಟು, ಜಾತಿ ಗೌಣ. ವ್ಯಕ್ತಿ ರೂಪುಗೊಳ್ಳಲು ಅದು ನೆರವಾದರೂ ಆಗಬಹುದು. ಅದಕ್ಕೆಂದೇ ಬ್ರಾಹ್ಮಣತ್ವದ ನಿರ್ಣಯಕ್ಕೆಂದು:

ಜನ್ಮನಾ ಜಾಯತೇ ಶೂದ್ರ ಕರ್ಮಣಾ ಜಾಯತೇ ದ್ವಿಜ
ವೇದಪಾಠೇಣ ವಿಪ್ರ ಬ್ರಹ್ಮಜ್ಞಾನಂತು ಬ್ರಾಹ್ಮಣ

ಹುಟ್ಟುತ್ತಲೇ ಶೂದ್ರನಾಗಿ ತನ್ನ ಕರ್ಮಾಧಿಕಾರದ ನಿರ್ವಹಣೆಯಿಂದ ದ್ವಿಜನಾಗಿ, ವೇದಾದಿಗಳ ಪಾಠಪಠನಗಳಿಂದ ವಿಪ್ರನಾಗಿ ಬ್ರಹ್ಮಜ್ಞಾನವನ್ನು ಪಡೆದ ನಂತರ ಬ್ರಾಹ್ಮಣನೆನಿಸುತ್ತಾನೆ.

ಈ ಗ್ರಂಥದಲ್ಲಿ ಬ್ರಾಹ್ಮಣ ಎಂಬ ಉಲ್ಲೇಖ ಹುಟ್ಟು ಜಾತಿಗೆ ನೀಡಿರುವ ಪ್ರಾಶಸ್ತ್ಯ ಎಂದು ಭಾವಿಸುವುದಕ್ಕಿಂತಲು ಶೂದ್ರನಾಗಿರುವವ ಬ್ರಹ್ಮಜ್ಞಾನ ಪಡೆದು ಬ್ರಾಹ್ಮಣನಾಗಲು ಅನವರತ ನಡೆಸುತ್ತಿರುವ ಪ್ರಯತ್ನದ ಸಂಕೇತ ಎಂದುಕೊಳ್ಳುವುದೇ ಹೆಚ್ಚು ಅರ್ಥಪೂರ್ಣ.

ಈ ನುಡಿಗೆ ಬಲ ನೀಡಲು ನಮ್ಮ ಪುರಾಣೇತಿಹಾಸಗಳಲ್ಲಿ ಉಲ್ಲೇಖವಾಗಿರುವ ಅನೇಕ ಬ್ರಹ್ಮಋಷಿಗಳು ಅಬ್ರಾಹ್ಮಣ ವರ್ಣಗಳಿಗೆ ಸೇರಿದವರಾದರು ಇಂದಿನ ಬ್ರಾಹ್ಮಣ ವರ್ಣದವರಿಗೆ ಗೋತ್ರಕರ್ತರಾಗಿರುವುದು ವಿಪುಲವಾಗಿ ದೊರೆಯುತ್ತವೆ. ಕೌಶಿಕ, ವಸಿಷ್ಠ, ವ್ಯಾಸ, ನಾರದ, ಕೌಂಡಿನ್ಯ, ಮತಂಗ, ಸಾಂಖ್ಯ, ಗಾರ್ಗೇಯ, ಶೌನ ಮುಂತಾದವರೂ ತಿತರೇಯ ಬ್ರಾಹ್ಮಣದ ಕರ್ತೃವಾದ 'ಇತರೆಯ ಪುತ್ರ'ನನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.

ಆದ್ದರಿಂದ ಕಾದಂಬರಿಯಲ್ಲಿ ಬ್ರಾಹ್ಮಣನಾಗಿ ಬಂದಿರುವ ಸಿದ್ಧಾರ್ಥನ ತಂದೆ ಶುದ್ಧ ಬ್ರಾಹ್ಮಣನಾಗಲು ಪ್ರಯತ್ನಿಸುತ್ತಾ ಊರ್ಧ್ವರೇತಸ್ಕನಾಗಿರುವುದನ್ನು ಸೂಚಿಸಲು ಈ ಪದ ಬಳಸಲಾಗಿದೆ. ಬ್ರಹ್ಮಜ್ಞಾನದ ಅನ್ವೇಷಣೆಯಲ್ಲಿ ತೊಡಗಿರುತ್ತಿದ್ದ ಬ್ರಾಹ್ಮನ ಸಂಕುಲಕ್ಕೆ ಸಮಾಜವೇ ಗೌರವಿಸುತ್ತಿತ್ತು ಎಂದು, ಹೈಂದವ ದರ್ಶನ ಶಾಸ್ತ್ರಕ್ಕೆ ಅಂದಿನ ಸಮಾಜ ತೋರುತ್ತಿದ್ದ ಆದರ ಗೌರವದ ಪ್ರತೀಕ ಎಂದು ಭಾವಿಸಿ ಈ ಕೃತಿಯನ್ನು ಅವಲೋಕಿಸಿದರೆ ಅರ್ಥಪೂರ್ಣವಾಗಿ ಹೆಚ್ಚು ಸುಂದರವಾಗಿ ಕಾಣಿಸುವುದು. ಆದ್ದರಿಂದ ಇಂದಿನ ಸಂಕೀರ್ಣ ಸಮಾಜದ ಸೀಮಿತ ಎಲ್ಲೆ ಕಟ್ಟಿನಲ್ಲಿ ಅಡಗಿ ಮೂಲ ಬ್ರಾಹ್ಮಣದ ಪವಿತ್ರ ಗುರಿಗಳಿಂದ ಬಹುದೂರ ಸಾಗಿ ಬಂದು ತೀರಾ ಲೌಕೀಕವಾಗಿರುವ ಜಾತಿಗಳ ಎಲ್ಲೆ ಕಟ್ಟಿನಲ್ಲಿ 'ಬ್ರಾಹ್ಮಣ' ಪದವನ್ನು ಅರ್ಥೈಸಲು ಪ್ರಯತ್ನಿಸಿದರೆ ಭಾರತೀಯ ಸಂಸ್ಕೃತಿಯ ವಿಶಾಲ ದಿವ್ಯದರ್ಶನಕ್ಕೆ ತಡೆಯುಂಟಾಗುವುದು. ಈ ಕೃತಿಯಲ್ಲಿ ಬ್ರಾಹ್ಮಣ ಎಂಬ ಪದವನ್ನು ವಿಶಾಲ ಅರ್ಥದಲ್ಲಿ ಗ್ರಹಿಸಬೇಕಿದೆ.

ಅನುವಾದಕ

೨. ಸಮಣರೊಂದಿಗೆ

ನಗರವನ್ನು ಹಾದು ಅವರಿಂದ ಮುಂದೆ ಬಂದಿದ್ದ ಸಮಣರನ್ನು[೧] ಆ ಸಂಜೆಯ ವೇಳೆಗೇ ಕೂಡಿಕೊಂಡು ಅವರ ಸಹಚರ್ಯ, ಮಾರ್ಗದರ್ಶನ ಕೋರಿದರು, ಅವರ ಒಪ್ಪಿಗೆಯೂ ದೊರೆಯಿತು.

ಮಣ್ಣಿನ ಬಣ್ಣದ ಅಂಗವಸ್ತ್ರವನ್ನು, ಕೌಪೀನವನ್ನು ಮಾತ್ರ ಉಳಿಸಿಕೊಂಡ ಸಿದ್ಧಾರ್ಥ ತೊಟ್ಟ ಬಟ್ಟೆಗಳನ್ನು ಸಿಕ್ಕ ಬಡ ಬ್ರಾಹ್ಮಣನಿಗೆ ಕೊಟ್ಟ. ದಿನಕ್ಕೊಂದು ಊಟ, ಅದೂ ಬೇಯಿಸದ ಆಹಾರ. ಒಮ್ಮೆ ಹದಿನಾಲ್ಕು, ಇನ್ನೊಮ್ಮೆ ಇಪ್ಪತ್ತೆಂಟು ದಿನಗಳ ಉಪವಾಸ. ಇದರಿಂದ ಕೆನ್ನೆ ಕಾಲುಗಳಲ್ಲಿ ಮಾಂಸ ಕರಗಿತು. ಅವನ ವಿಶಾಲ ನೇತ್ರಗಳಲ್ಲಿ ವಿಚಿತ್ರ ಕನಸುಗಳು ಬಿಂಬಿಸುತ್ತಿದ್ದವು. ಒಣಗಿದ ಬೆರಳುಗಳಲ್ಲಿ ಉಗುರು ಉದ್ದವಾಯಿತು, ಬರಟಾದ ಗಡ್ಡ ಕಾಣಿಸಿಕೊಂಡಿತು. ಸ್ತ್ರೀಯರು ಕಾಣಿಸಿದಾಗ ನೋಟ ಹೆಪ್ಪುಗಟ್ಟಿ ಅವನ ನಿರಾಸಕ್ತಿ ತೋರ್ಪಡುತ್ತಿತ್ತು. ಸಿಂಗಾರವನ್ನು ಕಂಡಾಗ ತುಟಿ ಮುದುಟಿ ತಿರಸ್ಕಾರ ವ್ಯಕ್ತ ಪಡಿಸುತ್ತಿದ್ದ. ವರ್ತಕರ ವ್ಯಾಪಾರವನ್ನ, ರಾಜರ ಬೇಟೆಯನ್ನ, ಸತ್ತವರ ಮುಂದೆ ಅಳುವವರನ್ನ, ಮೈ ಮಾರಿಕೊಳ್ಳುವ ವೇಶ್ಯೆಯರನ್ನ, ರೋಗಿಗಳನ್ನ, ಚಿಕಿತ್ಸೆ ಮಾಡುವ ವೈದ್ಯರನ್ನ, ಬಿತ್ತನೆಗೆ ಮುಹೂರ್ತ ಹೇಳುವ ಜೋಯಿಸರನ್ನ, ಪ್ರೇಮಿಗಳನ್ನ, ಮಕ್ಕಳನ್ನು ಸಂತೈಸುವ ಮಾತೆಯರನ್ನ ಕಂಡಾಗ ಅವರು ನೋಟಕ್ಕೆ ಅರ್ಹರೆಂದಿನಿಸಲಿಲ್ಲ. ಎಲ್ಲವೂ ಮಿಥ್ಯ, ಸುಳ್ಳಿನ ಕಂತೆ, ತೋರಿಕೆಯ ಸುಖ, ಸಂತೋಷ, ಸೌಂದರ್ಯ, ಅನುಭೂತಿಯ ಭ್ರಮೆ, ಜಗತ್ತಿನದೆಲ್ಲವೂ ಕ್ಷಯಿಸಲೇಬೇಕು. ನಿತ್ಯದ ಸಾವಿನಿಂದ ಜಗತ್ತು ಕಹಿ ಎನಿಸಿತು. ಬದುಕು ದುಃಖದ ಬವಣೆ ಎನಿಸಿತು.

ಎಲ್ಲವನ್ನೂ ಬಿಟ್ಟು ಬರಿದಾಗಬೇಕು. ಸುಖ ದುಃಖ, ಕನಸು ತೃಷ್ಣೆ ಆಸೆ ಆಕಾಂಕ್ಷೆ ಅಳಿದು 'ನಾನು' ಇಲ್ಲವಾಗಬೇಕೆಂಬ ಒಂದೇ ಗುರಿ ಸಿದ್ಧಾರ್ಥನಿಗೆ. ಇನ್ನು ನಾನೆಂಬುದಿರದ ಶುದ್ಧಚಿತ್ತದ, ನಿರ್ಲಿಪ್ತ ಹೃದಯದ ಗಂಭೀರ ಶಾಂತಿಯ ಅನುಭವವೇ ಅವನ ಗುರಿ. ತನ್ನನ್ನು ಗೆದ್ದು ಅದನ್ನು ಇಲ್ಲವಾಗಿಸಿ ಬಯಕೆ ಬವಣೆಗಳನ್ನೆಲ್ಲಾ ಬದಿಗೊತ್ತಿ

೧. ಆಶ್ರಮ ಧರ್ಮದ ಕರ್ಮಗಳಿಂದ ಹೊರತಾಗಿ ಸಾಧನೆ ಸಾಗಿಸುವವನು.

ಅವುಗಳಿಂದ ದೂರವಾಗಿ, ಬೇರೆಯಾಗಿ ಎಚ್ಚರಗೊಂಡಾಗ ತಾನಲ್ಲದ ತಾನಾಗಿರಬೇಕು. ಅಂತರಂಗದ ನಿಗೂಢ ರಹಸ್ಯವಿದು. ಅದನ್ನು ಅರಿಯಬೇಕು, ತಿಳಿಯಬೇಕು.

ಸುಡುವ ಬಿಸಿಲಲ್ಲಿ ನೋವು ನೀರಡಿಕೆಯ ಅನುಭೂತಿ ಅಣಗುವವರೆಗೂ ಅಂತೆಯೇ ನಿಂತಿದ್ದ ಸಿದ್ಧಾರ್ಥ ಮಳೆಯಲ್ಲಿ ಸ್ತೂಪದಂತೆ ನಿಂತ. ಗಂಟು ಕಟ್ಟಿದ ಒರಟಾದ ತಲೆಗೂದಲಿನಿಂದ ನೀರು ಸುರಿದು ಹೆಗಲು, ಸೊಂಟ, ಕಾಲುಗಳ ಮೇಲೆ ಹರಿಯುತ್ತಾ ಹೆಪ್ಪುಗಟ್ಟಿಸಿತು. ಛಳಿಗೆ ನಡುಗುವ ಶರೀರ ಸ್ಥಿರವಾಗಿ ನಿಲ್ಲುವವರೆಗೂ, ಛಳಿಯ ಅನುಭೂತಿ ಅವನ ಮೈಬಿಟ್ಟು ಹೋಗುವವರೆಗೂ, ಬಿರಿದ ಚರ್ಮದಿಂದ ರಕ್ತ ತೊಟ್ಟಿಕ್ಕಿ ವ್ರಣವಾದರೂ ನಿಶ್ಚಲನಾಗಿ ನಿಂತಿದ್ದ. ಅದನ್ನು ಲಕ್ಷಿಸದೆ ಅದರ ಬಾಧೆಯನ್ನು ಅಲಕ್ಷಿಸಿ ನಿಂತಿದ್ದ. ಇವೆಲ್ಲವೂ ಅವನ ಪಾಲಿಗೆ ಇಲ್ಲವಾಗುತ್ತಾ ಬಂದಿದ್ದವು.

ಸಿದ್ಧಾರ್ಥ ಪದ್ಮಾಸನದಲ್ಲಿ ಕುಳಿತು ಸೋಹಂ ಜಪದಿಂದ ಉಚ್ಛ್ವಾಸ ನಿಶ್ವಾಸಗಳ ನಿಯಂತ್ರಣವನ್ನು, ಎದೆಮಿಡಿತವನ್ನು ಇಳಿಸಿ ಇಲ್ಲವಾಗಿಸುವ ಹಠಯೋಗವನ್ನು ಅಭ್ಯಾಸ ಮಾಡಿದ. ಕುಂಡಲಿನಿ ಯೋಗ ಸಾಧನೆ ಪ್ರಾರಂಭಿಸಿದ.

ಹಿರಿಯ ಸಮಣನ ಬೋಧನೆಯಂತೆ ಸಮಣಾಶ್ರಮದ ನಿಯಮಕ್ಕನುಸಾರವಾಗಿ ಜಪ, ಸ್ವನಿರಸನಗಳನ್ನು ಅಭ್ಯಸಿಸಿದ. ಬಿದಿರು ಮಳೆಯ ಮೇಲೆ ಹಾರಿ ಹೋದ ಕ್ರೌಂಚವನ್ನು ತನ್ನ ಹೃದಯಕ್ಕೆ ತಂದುಕೊಂಡ ಸಿದ್ಧಾರ್ಥ ತಾನೇ ಕ್ರೌಂಚವಾಗಿ ಕಾಡು ಮಲೆಗಳ ಮೇಲೆ ಹಾರಿದ. ಹಸಿವು ನೀರಡಿಕೆಗಳಿಂದ ಕ್ರೌಂಚದಂತೆ ಕೂಗಿ, ಮೀನುಗಳನ್ನು ತಿಂದು ಕೊನೆಗೆ ಕ್ರೌಂಚದ ಸಾವನ್ನಪ್ಪಿದ. ಮರಳು ದಂಡೆಯ ಮೇಲೆ ಸತ್ತು ಬಿದ್ದಿದ್ದ ನರಿಯ ಶರೀರವನ್ನು ಸಿದ್ಧಾರ್ಥ ಹೊಕ್ಕು ಹೆಣವಾಗಿ, ಊದಿ, ರಣಹದ್ದುಗಳಿಂದ ಕಿತ್ತು ತಿನ್ನಲ್ಪಟ್ಟು ಕೊಳೆತು ನಾರುತ್ತ ಅಸ್ಥಿಪಂಜರವಾಗಿ, ಮಣ್ಣಾಗಿ ಕಣವಾಗಿ ಗಾಳಿಯಲ್ಲಿ ತಿರೋಗಮಿಸಿ[೧] ಮರಳಿಬಂದ. ದೇಹ ಬಂಧನದಲ್ಲಿರುವ ಆತ್ಮದ

೧. ಪಂಚಭೂತಗಳಿದೊಡಗೂಡಿರುವ ಸೃಷ್ಟಿಯಲ್ಲಿ ಪಂಚಕೃತ್ಯಗಳು ನಿರ್ವಹಿಸಲ್ಪಡುತ್ತವೆ. ಸೃಷ್ಟಿ-ಸ್ಥಿತಿ-ಲಯ-ತಿರೋಧಾನ-ಅನುಗ್ರಹಗಳೇ ಅವು. ಜಿವಾತ್ಮ ಹುಟ್ಟಿ, ಬೆಳೆದು, ಸತ್ತು, ಗಾಳಿಯಲ್ಲೇರಿ (ತಿರೋಗಮಿಸಿ) ಮತ್ತೆ ಹುಟ್ಟಿಗೆ ಬರುತ್ತದೆ. ಮುಕ್ತನಾಗುವವನು ತಿರೊಗಮನದಿಂದ ಮುಂದಿನ ಸ್ಥಿಯಾದ ಅನುಗ್ರಹವನ್ನು ಸೇರುತ್ತಾನೆ - ಎಂದರೆ ಪರಮಾತ್ಮನಲ್ಲಿ ಒಂದಾಗುತ್ತಾನೆ. ಇದೇ ಪರಿಪೂರ್ಣಾವಸ್ಥೆ - ನಿರ್ವಾಣ.

ಬದುಕಿನ ಚಕ್ರೀಯ ಕ್ರಿಯೆಯಲ್ಲಿ ಹುಟ್ಟಿ, ಬೆಳೆದು, ಸತ್ತು, ಕೊಳೆತು, ಮಣ್ಣಾಗಿ, ಗಾಳಿಯಲ್ಲಿ ಸೇರುವ ಗಡಸು ಹಾದಿಯನ್ನು ಸಿದ್ಧಾರ್ಥ ಅನುಭವದಿಂದ ಅರಿತ. ಈ ಚಕ್ರೀಯ ಕ್ರಿಯೆಯ ಕೊನೆಯನ್ನು, ಕಾರಣವನ್ನು, ದುಃಖರಹಿತ ಅನಂತತೆಯ ಸವಿಯನ್ನು ಸವಿಯುವ ತೃಷ್ಣೆಯಲ್ಲಿ ಕಾಯ್ದು ಇಂದ್ರಿಯ ವ್ಯಾಪಾರವನ್ನು ಸ್ಮರಣ ಶಕ್ತಿಯನ್ನು ಕೊಂದ. ವಿವಿಧರೂಪಗಳಿಂದ ತನ್ನಿಂದ ಬೇರ್ಪಟ್ಟು ಹೊರಬಂದ. ಮೃಗವಾಗಿ, ಶವವಾಗಿ, ಕಲ್ಲಾಗಿ ಮರವಾಗಿ, ನೀರಾಗಿ ಎಲ್ಲದರಿಂದಲೂ ಜಾಗೃತಿಯ ಪಾಠವನ್ನು ಪಡೆದ, ಸೂರ್ಯ ಅಥವಾ ಚಂದ್ರನ ಕಿರಣ ಸೋಂಕುತ್ತಲೇ ಮತ್ತೆ ತಾನಾಗಿ ಬದುಕಿನ ಪರಿಭ್ರಮಣೆಗೆ ಸಿಕ್ಕ ತೃಷ್ಣಗೆ ಬಲಿಯಾದಂತಾಗಿ ಗೆದ್ದು ನಿಂತಾಗ ಮತ್ತೊಂದು ಹೊಸ ತೃಷ್ಣೆ ಎದುರಿಗಿದೆ ಎನಿಸುತ್ತಿತ್ತು.

ತನ್ನಿಂದ ಸಿಡಿದು ಬೇರೆಯಾಗುವ ನಾನಾ ಮಾರ್ಗಗಳನ್ನು ಸಮಣರಿಂದ ಕಲಿತ; ಸ್ವಶ್ರಮದಿಂದ, ಹಸಿವು, ನೋವು, ನೀರಡಿಕೆ ಬಳಲಿಕೆಗಳನ್ನು ಗೆದ್ದು ಆತ್ಮನಿಗ್ರಹವನ್ನು ಗಳಿಸಿದ. ಧ್ಯಾನದಿಂದ, ಮನಸ್ಸಿನಲ್ಲಿ ಮನೆ ಮಾಡುವ ಪ್ರತಿಮೆಗಳನ್ನು ಇಲ್ಲಗೈಯುವುದರಿಂದ ಸ್ವನಿರಸನದ ಹಾದಿಯಲ್ಲಿ ಬಹಳ ದೂರ ನಡೆದು ಬಂದ. ಸಾವಿರಾರು ಬಾರಿ ತನ್ನನ್ನು ಬಿಟ್ಟು ಇಲ್ಲವಾದ. ಆಕಾಶದಲ್ಲಿದ್ದ. ಕಲ್ಲಿನಲ್ಲಿದ್ದ ಪ್ರಾಣಿಯಲ್ಲಿದ್ದ. ಆದರೆ ಮತ್ತೆ ಅದೇ ಹಾದಿಯಲ್ಲಿ ಹಿಂತಿರುಗಿ ತನ್ನತನಕ್ಕೆ ಬರಬೇಕಾಗಿತ್ತು. ಆ ತಿರುಗು ಹಾದಿಯ ಪಯಣ ಅನಿವಾರ್ಯವಾಗಿತ್ತು. ಅದನ್ನು ತಪ್ಪಿಸಿಕೊಳ್ಳುವುದು ಅಸಾಧ್ಯವಾಗಿತ್ತು. ಮತ್ತೆ ಸೂರ್ಯಚಂದ್ರರ ಬೆಳಕಿನಲ್ಲಿ ಮಳೆ, ಗಾಳಿ, ನೆರಳುಗಳಲ್ಲಿ ಹೆಜ್ಜೆ ಇಡಬೇಕಾಗಿತ್ತು. ನಾನು ಎಂಬುದು ಬಿಡದೆ ಅಂಟಿಕೊಂಡು ನಿತ್ಯಜೀವನ ಚಕ್ರಕ್ಕೆ ಬೆಸುಗೆ ಹಾಕಲು ಪ್ರಯತ್ನಿಸುತ್ತಿತ್ತು.

ಅದೇ ದಾರಿಯಲ್ಲಿ ಅವನ ನೆರಳಾಗಿ ನಡೆದ ಗೋವಿಂದನೂ ಅದೇ ಸಾಹಸಗಳನ್ನು ಮಾಡಿದ. ಅಭ್ಯಾಸ, ಸೇವೆಯಲ್ಲುಳಿದು ಮಿಕ್ಕ ವೇಳೆ ಹೆಚ್ಚು ಮಾತಾಡಿದವರಲ್ಲ. ಗುರುಗಳಿಗಾಗಿ, ತಮಗಾಗಿ ಭಿಕ್ಷೆ ಬೇಡಲು ಹಳ್ಳಿಗಳಿಗೆ ಕೆಲವು ಸಲ ಒಟ್ಟಿಗೆ ಹೋಗುತ್ತಿದ್ದರು.

ಭಿಕ್ಷೆಗೆ ಹೋಗುತ್ತಿರುವಾಗ ಒಮ್ಮೆ ಸಿದ್ಧಾರ್ಥ ಕೇಳಿದ: ''ಗೋವಿಂದ ನಾವು ಪ್ರಗತಿಪಥದಲ್ಲಿ ಸಾಗುತ್ತಿದ್ದೇವೆಯೇ? ನಮ್ಮ ಗುರಿ ಮುಟ್ಟುವ ಸಾಧ್ಯತೆ ಇದೆಯೇ?''

"ನಾವು ಸಾಧಕರು, ಸಾಧಿಸುತ್ತಿದ್ದೇವೆ. ನೀನು ಸಮಣಶ್ರೇಷ್ಠ. ತುಂಬ ಬೇಗ ಹಂತಗಳನ್ನೇರುತ್ತಿರುವೆ. ವೃದ್ಧರೂ ಸಾಧಕ ಶ್ರೇಷ್ಠರಾದ ಸಮಣರೂ ನಿನ್ನ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತಾರೆ. ಖಂಡಿತವಾಗಿಯೂ ನೀನು ಪರಿಪೂರ್ಣನಾಗುತ್ತೀಯೆ"

"ನೀನು ಹೇಳುತ್ತಿರುವ ಮಹತ್ಸಾಧನೆ ನನ್ನದು ಎನಿಸುತ್ತಿಲ್ಲ. ಇಷ್ಟು ಕಾಲ ತುಂಬಾ ಶ್ರಮವಹಿಸಿ ಸಮಣರೊಂದಿಗೆ ಕಲಿತದ್ದನ್ನು ಇಷ್ಟು ತೊಂದರೆ, ಹಿಂಸೆ ಅನುಭವಿಸದೆ ಚದುರಂಗದ ಜೂಜಾಡುವವರಿಂದ, ತಮ್ಮ ತೂಕಕ್ಕಿಂತಲು ಹೆಚ್ಚಾದ ಹೊರೆ ಹೊರುವ ಆಳುಗಳಿಂದ, ಸುರಾಪಾನ ಮಂದಿರಗಳಲ್ಲಿ, ವೇಶ್ಯಾವಾಟಿಕೆಯಲ್ಲಿ ಸುಲಭವಾಗಿ ಕಲಿಯಬಹುದಾಗಿತ್ತು ಎನಿಸುತ್ತದೆ......"

"ಸಿದ್ಧಾರ್ಥ ಇದೇನು ಹಾಸ್ಯ ಮಾಡುತ್ತಿದ್ದೀಯಾ? ಆ ನಿರ್ಭಾಗ್ಯರ ಮಧ್ಯೆ ಇದ್ದು ಹಸಿವು, ಸಂಕಟಗಳ ಉಪಶಮನವನ್ನು ಪ್ರಾಣಾಯಾಮವನ್ನು ಏಕಾಗ್ರತೆಯನ್ನು ಹೇಗೆ ಕಲಿಯಲು ಸಾಧ್ಯ?" ಗೋವಿಂದ ಆಶ್ಚರ್ಯದಿಂದ ಸಿದ್ಧಾರ್ಥನನ್ನು ನೋಡುತ್ತಿದ್ದ. ತನ್ನಲ್ಲಿಯೇ ಆಡಿಕೊಳ್ಳುತ್ತಿರುವಂತೆ ಸಿದ್ಧಾರ್ಥ ಮೇಲುದನಿಯಲ್ಲಿ ಹೇಳಿದ: "ಧ್ಯಾನ ವಿರಕ್ತಿ, ಉಪವಾಸ, ಪ್ರಾಣಾಯಾಮ ಇವೆಲ್ಲಾ ಏಕೆ? ಕೆಲವು ಕಾಲ ತನ್ನಿಂದ ಬೇರೆಯಾಗಿ ಅನುಭವಿಸಬೇಕಾದ ಹಿಂಸೆ, ಅಸಂತುಷ್ಟಿಗಳಿಂದ ತಪ್ಪಿಸಿಕೊಳ್ಳುವಿಕೆ. ಸಂಕಟಕ್ಕೆ ಇದು ತಾತ್ಕಾಲಿಕ ಉಪಶಮನ; ಬದುಕಿನ ಮೌಢ್ಯ. ಎತ್ತಿನಗಾಡಿ ಹೊಡೆಯುವವನೂ ಗಂಜಿಯನ್ನೋ, ಭಂಗಿಯಸೊಪ್ಪನ್ನೋ, ಮದ್ಯವನ್ನೋ ಇಲ್ಲ ಮತ್ತೇನನ್ನೋ ಸೇವಿಸಿಯೇ ಇದನ್ನು ಸಾಧಿಸಬಲ್ಲ! ನೋವಿನ ಅರಿವಿಲ್ಲದೆ ಸ್ವನಿರಸನಗೊಳಿಸಿಕೊಂಡು ತನ್ನ ಬದುಕಿನಿಂದ ತಾತ್ಕಾಲಿಕ ಉಪಶಮನ ಹೊಂದಬಲ್ಲ ಅವಿರತ ಅಭ್ಯಾಸದಿಂದ ಈ ಸಿದ್ಧಾರ್ಥ, ಗೋವಿಂದ ಸಾಧಿಸಿದ ಸ್ವನಿರಸನವನ್ನು ಅವನು ಮತ್ತೊಂದು ಸುಲಭದ ಹಾದಿಯಿಂದ ಸಾಧಿಸಬಲ್ಲ.!"

" ಇದೇನೋ ವಿಚಿತ್ರವೆನಿಸುತ್ತಿದೆ. ನನ್ನ ಮಿತ್ರ ಸಮಣ ಸಿದ್ಧಾರ್ಥ ಎತ್ತಿನ ಗಾಡಿಯವನಲ್ಲ. ಕುಡಿದ ಅಮಲಿನಲ್ಲಿ ಸ್ವನಿರಸನ ಸಾಧಿಸಿರುವ ಕ್ಷುಲ್ಲಕ ಲಂಪಟನಲ್ಲ. ಪ್ರಾಣಾಯಾಮದಲ್ಲಿ ಪಾರಂಗತನಾಗಿ ದೊಂಬನಂತೆ ಪ್ರಾಣಾಯಾಮದಲ್ಲಿ ಪರಿಣತಿಯನ್ನೂ, ತಪಸ್ಸಿಯ ಏಕಾಗ್ರತೆಯನ್ನೂ, ಸಿದ್ಧಿಸಿಕೊಂಡಿರುವವನು. ಕುಡುಕ

ಕ್ಷಣಕಾಲ ತನ್ನಿಂದ, ಯಾತನೆಯಿಂದ ತಪ್ಪಿಸಿಕೊಳ್ಳಬಲ್ಲ. ಅವನು ಎಚ್ಚರವಾದಾಗ ಮತ್ತೆ ಅದೇ ಮಾಯೆಯಲ್ಲಿ, ಯಥಾವತ್ತಾಗಿರುತ್ತಾನೆ. ಅವನಿಗೆ ಜ್ಞಾನವಾಗಲಿ, ಬೆಳವಣಿಗೆಯಾಗಲಿ, ತಪೋಶಕ್ತಿಯಾಗಲಿ ಸಿದ್ಧಿಸದು'' ಗೋವಿಂದ ವಾದಿಸಿದ.

''ನಾನು ಮದ್ಯ ಸೇವಿಸಿಲ್ಲ. ಆದ್ದರಿಂದ ಅದರ ಅನುಭವ ನನಗಿಲ್ಲ. ನನ್ನ ಸಾಧನೆಯ ಬಳಲಿಕೆ, ಧ್ಯಾನದ ಏಕಾಗ್ರತೆಯ ಫಲವಾಗಿ ನಿರಸನ ಪಡೆದರೂ ಜ್ಞಾನವನ್ನಾಗಲೀ, ಆನಂದವನ್ನಾಗಲೀ, ಮುಕ್ತಿಯನ್ನಾಗಲಿ ಸಮೀಪಿಸಿದೆ ಎಂದು ಅನಿಸದ ಅದಕ್ಕೂ ಗರ್ಭಸ್ಥ ಶಿಶುವಿಗು ಇರುವ ಅಂತರವೇ ನನಗೂ ಅದಕ್ಕೂ ಇದೆ ಎಂದೇ ಭಾಸವಾಗುತ್ತದೆ. ಏಕೆ, ಏನು ಎಂಬುದು ನನಗೆ ತಿಳಿಯದು'' ಎಂದು ನುಡಿದ ಸಿದ್ಧಾರ್ಥನ ಮುಖದಲ್ಲಿ ಕಿರುನಗೆ ಬೆಳಗಿತ್ತು.

ಸಮಣ ಗುರುಗಳಿಗೆ, ಸೋದರ ಭಿಕ್ಷುಗಳಿಗೆ ಭಿಕ್ಷೆ ಬೇಡಲು ಹೊರಟ ಮತ್ತೊಂದು ಸಂದರ್ಭದಲ್ಲಿ ಸಿದ್ಧಾರ್ಥ: ನಾವು ಸರಿಯಾದ ಹಾದಿಯಲ್ಲಿ ಹೋಗುತ್ತಿದ್ದೇವೆಯೆ? ಮುಕ್ತಿಯನ್ನು ಸಮೀಪಿಸುತ್ತಿದ್ದೇವೆಯೆ? ಮುಕ್ತಿ ಗಳಿಸಲು ಅವಶ್ಯಕವಾದ ಜ್ಞಾನ ಗಳಿಸುತ್ತಿದ್ದೇವೆಯೆ? ಚಕ್ರೀಯ ಕ್ರಿಯೆಯಿಂದ ಪಾರಾಗಲು ಬಯಸಿದ ನಾವು ಅದಕ್ಕೆ ತುತ್ತಾಗಿ ಅದರಲ್ಲಿಯೇ ಪರಿಭ್ರಮಿಸುತ್ತಿಲ್ಲ ತಾನೇ? ಎಂದು ಗೋವಿಂದನನ್ನು ಕೇಳಿದ.

'' ಈಗಾಗಲೇ ಸಾಕಷ್ಟು ಕಲಿತಿದ್ದೇವೆ, ಆದರೂ ಕಲಿಯುವುದಿನ್ನೂ ಅಗಾಧವಾಗಿದೆ. ಪರಿಭ್ರಮಣೆಗೆ ತುತ್ತಾಗಿಲ್ಲ. ಊರ್ಧ್ವಮುಖವಾಗಿ ಗಮಿಸುತ್ತಿದ್ದೇವೆ. ಸುತ್ತಾದ ಬಳಸು ಹಾದಿಯಲ್ಲಿ ಈಗಾಗಲೇ ಬಹಳಷ್ಟು ಏರಿದ್ದೇವೆ.''

''ಗೋವಿಂದ, ನಮ್ಮ ಹಿರಿಯನೂ, ಪೂಜ್ಯನೂ ಆಗಿರುವ ಸಮಣನ ವಯಸ್ಸು ಬಲ್ಲೆಯಾ''

''ಅರವತ್ತು ವರುಷಗಳಿರಬಹುದು.''

''ಅರವತ್ತು ವರುಷಗಳಾದರೂ ನಿರ್ವಾಣ ಹೊಂದಿಲ್ಲ. ಅವನಂತೆ ನನಗೂ ನಿನಗೂ ಮುಂದೆ ಎಪ್ಪತ್ತು-ಎಂಭತ್ತು ವರ್ಷಗಳಾಗುತ್ತವೆ. ಅವರಂತೆ ನಾನೂ ನೀನೂ

ವೃದ್ಧರಾಗುತ್ತೇವೆ. ಉಪವಾಸ ಧ್ಯಾನಾದಿಗಳ ಕಸರತ್ತು ಮಾತ್ರ ಸಾಗಿಸುತ್ತಿರುತ್ತೇವೆ. ಆದರೂ ಅವನಾಗಲೀ ನಾನಾಗಲೀ ನಿರ್ವಾಣ ಪಡೆಯುವುದಿಲ್ಲ. ಸಮಣರಲ್ಲಿ ಒಬ್ಬನಾದರೂ ನಿರ್ವಾಣ ಪಡೆಯುವುದಿಲ್ಲವೇನೋ ಎನಿಸುತ್ತದೆ. ವಂಚಿಸಲು ನಾವೇ ಅವಶ್ಯ ತಂತ್ರಗಳನ್ನು ಅಭ್ಯಸಿಸಿ, ಸಮಾಧಾನಕ್ಕೆ ಬೇಕಾದದ್ದನ್ನು ಕಲ್ಪಿಸಿಕೊಳ್ಳುತ್ತಿದ್ದೇವೆ. ಅತ್ಯಂತ ಮುಖ್ಯವಾದ ಬಾಳಿನ ಗುರಿ ಎನಿಸಿಕೊಂಡಿರುವುದನ್ನೇ ಮರೆತು ಅದಕ್ಕೆ ಹಾದಿ ಕಾಣದೆ ಅತ್ತಿತ್ತ ಅಲೆಯುತ್ತಲೇ ಇರುತ್ತೇವೆ.''

''ಸಿದ್ಧಾರ್ಥ ಇಂತಹ ಭಯಂಕರ ನುಡಿಗಳನ್ನು ಬಿಡು. ಇಷ್ಟೊಂದು ಮಂದಿ ಜ್ಞಾನಿಗಳಲ್ಲಿ, ಕಠಿಣ ಸಾಧಕರಾದ ಸಮಣರಲ್ಲಿ, ಅನ್ವೇಷಕರಲ್ಲಿ, ಅಧ್ಯಾತ್ಮಕ ಚಿಂತಕರಲ್ಲಿ, ಸತ್ಪುರುಷರಲ್ಲಿ ಯಾರೊಬ್ಬರೂ ಸತ್ಪಥವನ್ನು ಅರಿಯಲಾರರೇ?'' ಎಂದ ಗೋವಿಂದ.

ಅತೃಪ್ತಿಯ, ಅಪಹಾಸ್ಯದ ದುಃಖದಲ್ಲಿ ಮಿಂದ ಕುಚೋದ್ಯದ ಧ್ವನಿಯಲ್ಲಿ ಸಿದ್ಧಾರ್ಥ ಹೇಳಿದ. ''ಗೋವಿಂದ, ಇಷ್ಟು ದಿವಸ ನಿನ್ನೊಂದಿಗೆ ಸಮಣ ಮಾರ್ಗದಲ್ಲಿ ನಡೆದ ನಿನ್ನ ಗೆಳೆಯ ಸದ್ಯದಲ್ಲಿಯೆ ಅದನ್ನು ಬಿಡಲಿದ್ದಾನೆ. ನಾನು ತೃಷ್ಣೆಯಿಂದ ನರಳುತ್ತಿದ್ದೇನೆ. ಅದನ್ನು ಈ ದೀರ್ಘ ಸಮಣ ಮಾರ್ಗ ಶಮನಗೊಳಿಸಲಿಲ್ಲ. ಸದಾ ಜ್ಞಾನಾಕಾಂಕ್ಷಿಯಾದ ನನ್ನನ್ನು ಅನೇಕ ಪ್ರಶ್ನೆಗಳು ಕಾಡುತ್ತಿವೆ. ವರ್ಷಗಳುರುಳಿದಂತೆ ಬ್ರಾಹ್ಮಣಗಳನ್ನು, ವೇದಗಳನ್ನು ನೂರಾರು ಪ್ರಶ್ನೆ ಕೇಳುತ್ತಿದ್ದೇನೆ. ಬಹುಶಃ ಅದೇ ಪ್ರಶ್ನೆಗಳನ್ನು ಘೆಂಡಾವನ್ನೋ, ಚಿಂಪಾಂಜಿಯನ್ನೋ ಕೇಳಿದ್ದರೂ ಇದೇ ಫಲ ದೊರೆಯುತ್ತಿತ್ತೇನೋ? ಗೋವಿಂದ, ಈ ಸಾಧನಾಪಥದಲ್ಲಿ ಇನ್ನೂ ಬಹುದೂರ ಸಾಗಬೇಕಾಗಿದೆ - ನಿಜ; ಆದರೆ ಕಲಿಯಲು ಏನೂ ಇಲ್ಲ. ಪ್ರತಿಯೊಂದರಲ್ಲೂ ಸತ್ವವಿದೆ. ಅದನ್ನು ಗುರುತಿಸಬಲ್ಲೆವು. ಆದರೆ ಅದು ತಿಳಿವು, ಜ್ಞಾನವಲ್ಲ. ಜ್ಞಾನ ಒಂದೇ, ಅದು ಸರ್ವವ್ಯಾಪ್ತಿ. ಅದೇ ಅವ್ಯಕ್ತಶಕ್ತಿ. ಅದು ನಿನ್ನಲ್ಲಿ, ನನ್ನಲ್ಲಿ ಸೃಷ್ಟಿಯ ಕಣಕಣದಲ್ಲಿ ವ್ಯಾಪಿಸಿದೆ. ಅದನ್ನು ಅರಿತುಕೊಳ್ಳುವುದು, ಗುರುತಿಸುವುದು ಈ ಸಾಧನೆಗಳನ್ನು ಸಾಧಕರನ್ನು ಮೇಧಾವಿಗಳನ್ನು ಅರಿತುಕೊಳ್ಳುವುದಕ್ಕಿಂತಲೂ ಗಹನವಾದುದು; ಮುಖ್ಯವಾದುದು. ಈ ಜ್ಞಾನಕ್ಕೆ ಪರಮಶತ್ರುವೆಂದರೆ ಪ್ರೌಢ ಪಂಡಿತ . ತಿಳಿವಳಿಕೆ ಗಳಿಸುವ ಮಾರ್ಗಗಳು ಎಂದು ನಂಬತೊಡಗುತ್ತಿದ್ದೇನೆ.''

ಈ ಮಾತು ಕೇಳಿದ ಗೋವಿಂದನಿಗೆ ಸಿಡಿಲು ಬಡಿದಂತಾಯಿತು. ''ಸಿದ್ಧಾರ್ಥ, ಈ ರೀತಿಯ ಮಾತುಗಳಿಂದ ನಿನ್ನ ಗೆಳೆಯನನ್ನು ಸಂಕಟಕ್ಕೆ ಈಡು ಮಾಡಬೇಡ. ವಿದ್ವತ್ತು, ವಿದ್ಯೆಯೇ ಅವ್ಯಕ್ತಶಕ್ತಿಯ ಶತ್ರುವಾದರೆ ನಮ್ಮ ಎಲ್ಲಾ ಪ್ರಾರ್ಥನೆಗಳಿಗೆ ಅರ್ಥವೇನು? ಶ್ರೇಷ್ಠತೆಗೆ ಇರುವ ಸ್ಥಾನವೇನು? ಸಮಣರ ಪೂಜ್ಯತೆಯ ಔಚಿತ್ಯವೆಲ್ಲಿ? ಈ ಮಾರ್ಗಗಳಲ್ಲಿ ಮನುಷ್ಯ ಕಲಿಯಬೇಕಾದುದೇನೂ ಇಲ್ಲವೆ? ನಿನ್ನ ಮಾತೇ ಸತ್ಯವಾದರೆ ಜಗತ್ತೇನಾಗುತ್ತೆ. ಈಗ ಇಲ್ಲಿ ಪಾವನವಾದುದು ಯಾವುದು? ಯಾವುದರ ಗಳಿಕೆಗಾಗಿ ಮಾನವನ ಬಾಳು ಎಂದು ಬಡಬಡಿಸುತ್ತ ತನಗೆ ತಾನೇ ಸಂತೈಸಿಕೊಳ್ಳುವವನಂತೆ ''ಸರ್ವಾಂಶ್ಚ ಲೋಕಾನಾಪ್ನೋತಿ ಸರ್ವಾಂಶ್ಚ ಕಾಮಾನ್ ಯಸ್ತಮಾತ್ಮಾನ ಮನುವಿದ್ಯ ವಿಜಾನಾತಿ''[೩] ಎಂದು ಉಪನಿಷತ್ತಿನ ವಾಕ್ಯವನ್ನು ಉಚ್ಛರಿಸಿದ.

ಸಿದ್ಧಾರ್ಥ ಮೌನವಾಗಿ ಈ ಮಂತ್ರದ ಬಗ್ಗೆ ಬಹಳ ಹೊತ್ತು ಚಿಂತಿಸಿದ. ''ನಮಗೆ ಪವಿತ್ರ ಎನಿಸಿರುವ ಎಲ್ಲದರಿಂದ ಕೊನೆಗೆ ಉಳಿಯುವುದೇನು ಮನುಷ್ಯ ಭದ್ರಪಡಿಸಬೇಕಾದುದೇನು?'' ಉತ್ತರ ದೊರೆಯದೆ ಅತೃಪ್ತಿಯಿಂದ ತಲೆಯಲುಗಿಸಿದ.

ಸಮಣ ಸಾದನೆಯಲ್ಲಿ ಮೂರುವರ್ಷ ಕಳೆದರು. ಒಮ್ಮೆ ಯಾರೋ ಗೌತಮ ಎಂಬುವ ಬುದ್ಧತ್ವವನ್ನು ಗಳಿಸಿ ಜಗತ್ತಿನ ದುಃಖವನ್ನು ಜಯಿಸಿ ಹುಟ್ಟುಸಾವಿನ ಚಕ್ರವನ್ನು ಮುರಿದಿದ್ದಾನೆ ಎಂಬ ಸುದ್ದಿ ಕೇಳಿದರು. ಅದನ್ನೇ ಅನೇಕರು ನಿಜವೆಂದು, ತಾವು ಕಂಡಿರುವೆವೆಂದೂ ಹೇಳಿದರು. ಸತಿ-ಸುತರನ್ನು ಬಿಟ್ಟು, ತನ್ನದು ಎನ್ನುವುದೇ ಇಲ್ಲದಂತೆ, ಮನೆ ಮಠಗಳನ್ನೂ ತೊರೆದು, ಹಳದಿಯ ಬಟ್ಟೆಯನ್ನು ಧರಿಸಿ, ಊರಿಂದೂರಿಗೆ ಅಲೆಯುತ್ತಾ ಶಿಷ್ಯರಿಂದ ಸುತ್ತುವರಿಯಲ್ಪಟ್ಟು, ಜನಸಾಮಾನ್ಯಕ್ಕೆ ಜ್ಞಾನೋಪದೇಶ ಮಾಡುತ್ತಾ ಇರುವನು ಎಂದೂ ಹೇಳಿದರು. ವಿಶಾಲವಾದ ಕಣ್ಣನಗಳು ಮಹಾಶಾಂತಿಯ ಸಾಗರದಂತಿದ್ದು. ಅರಸರೂ, ಅರಿತವರೂ, ಬ್ರಾಹ್ಮಣರೂ ಆತನ ಅಡಿಗೆರಗಿ ಶಿಷ್ಯರಾಗುತ್ತಿದ್ದಾರೆ ಎಂದೂ ಹೇಳಿದರು.

---

೩. ಯಾವನೂ ಈ ಬಳಗನ್ನು ಅರಿತುಕೊಳ್ಳುವನೋ ಅವನು ಸರ್ವಲೋಕಗಳನ್ನು, ಸರ್ವಕಾಮಗಳನ್ನು ಹೊಂದುತ್ತಾನೆ (ಛಂದೋಗ್ಯೋಪನಿಷತ್ ೮.೧೨.೬)

ಇದು ಕಿವಿಮಾತಾಗಿ, ಕಿಂವದಂತಿಯಾಗಿ, ಅಪೂರ್ವಕಥೆಯಾಗಿ ಕೇಳಿಬರುತ್ತಾ ಸುತ್ತ ಮುತ್ತಲೂ ಹರಡುತ್ತಿತ್ತು. ಈ ಬಗ್ಗೆ ನಗರವಾಸಿಗಳು ನಗರಗಳಲ್ಲಿ ಮಾತನಾಡುತ್ತಿದ್ದರೆ, ಸಮಣರು ಕಾಡಿನಲ್ಲಿ ಮಾತನಾಡುತ್ತಿದ್ದರು. ಗೌತಮನ ಹೆಸರು ಎಲೆಲ್ಲೂ ಕೇಳಿಬರುತ್ತಿತ್ತು. ಆತನ ಬಗ್ಗೆ ಒಳ್ಳೆಯ ಮಾತು ಕೇಳಿಬರುತ್ತಿರುವಂತೆಯೇ ತಿರಸ್ಕಾರ, ಖಂಡನೆಗಳು ಕೂಡ ಕೇಳಿ ಬರುತ್ತಿತ್ತು.

ಪ್ಲೇಗು ಮಾರಿ ಮಹಾಮಹಿಮನೊಬ್ಬನ ಉಸಿರಿನಿಂದಲೇ ದೂರವಾಗುತ್ತದೆ ಎಂಬ ಸುದ್ದಿ ಹರಡಿದಾಗ ಅದನ್ನು ನಂಬುವವರು ಕೆಲವರು, ಹಾಸ್ಯ ಮಾಡಿ ನಗುವವರು ಹಲವರು. ಆದರೂ ಸುದ್ದಿ ಮಿಂಚಿನ ವೇಗದಲ್ಲಿ ಹರಡುತ್ತದೆ. ಅನೇಕರು ಕುತೂಹಲಕ್ಕಾದರೂ ಆತನನ್ನು ಕಾಣಲು ಹೋಗುತ್ತಾರೆ. ಕೆಲವರು ಭಕ್ತಿಯಿಂದ ಆ ಸಂತನಿಂದ ಫಲಪ್ರಾಪ್ತಿಯನ್ನು ಬೇಡಲು ಹೋಗಿ ಆತನನ್ನು ಕಾಡುತ್ತಾರೆ. ಗೌತಮನ ಬಗ್ಗೆಯೂ ಇದೇ ರೀತಿಯ ಪ್ರತಿಕ್ರಿಯೆ ವ್ಯಕ್ತವಾಯಿತು. ಶಾಕ್ಯವಂಶ ತಿಲಕನಾದ ಗೌತಮ ಬುದ್ಧ ದೇಶವೆಲ್ಲಾ ಸುತ್ತಾಡಿ ತಾನು ಗಳಿಸಿದ ಅಪಾರ ಜ್ಞಾನವನ್ನು ಜನರಲ್ಲಿ ಹಂಚುತ್ತಿದ್ದಾನೆ ಎನ್ನುತ್ತಿದ್ದರು. ತನ್ನ ಹಿಂದಿನ ಜನ್ಮಗಳ ನೆನಪು ಆತನಿಗಿತ್ತು. ಹುಟ್ಟು - ಸಾವುಗಳ ಚಕ್ರವನ್ನು ಭೇಧಿಸಿ ನಿರ್ವಾಣಾವಸ್ಥೆ ಕಂಡಿದ್ದ. ಆತನ ಪಾಲಿಗೆ ರೂಪರಾಶಿಯ ಸಂತೆಯಾದ ಈ ಜೀವಸಾಗರದ ನರಳಾಟದ ಕೋಟಲೆ ಇಲ್ಲ. ನಾನಾ ರೀತಿಯ ಮಹತ್ತುಗಳನ್ನು ಆತನಿಗೆ ಆರೋಪಿಸಿ ಹೇಳಲಾಗುತ್ತಿತ್ತು. ಅನೇಕ ಅದ್ಭುತ ಕ್ರಿಯೆಗಳನ್ನು ನಡೆಸಿದ್ದ. ಮಾರನನ್ನು ಜಯಿಸಿದ್ದು ಮಾತ್ರವಲ್ಲ, ಆತನಿಗೆ ಎದುರಾಗಿ ನಿಲ್ಲಬಲ್ಲ ಯಾವ ಶಕ್ತಿಯೂ ಇಲ್ಲ ಎಂದು ಎಲ್ಲರೂ ಹೇಳುತ್ತಿದ್ದರು. ದೇವತೆಗಳೊಂದಿಗೆ ನೇರವಾಗಿ ಮಾತನಾಡಿದ್ದಾನೆ ಎಂದು ನಾನಾ ರೀತಿಯಲ್ಲಿ ಆತನ ಶಿಷ್ಯರು ಹೊಗಳುತ್ತಿದ್ದರೆ, ವಿರೋಧಿಗಳು ಸೋಮಾರಿ, ಭೋಗಿ, ಯಜ್ಞಯಾಗಾದಿಗಳನ್ನು ತುಚ್ಛೀಕರಿಸಿದ ವೇದ ವಿರೋಧಿ, ಇಂದ್ರಿಯಗಳನ್ನು ನಿಗ್ರಹಿಸದ, ದೇಹ ದಂಡಿಸದ ಕಪಟಿ, ಇತರರನ್ನು ವಂಚಿಸುತ್ತಿರುವ ಪಾಪಿ ಎಂದು ಹಳಿಯುತ್ತಿದ್ದರು.

ಈ ವಿರೋಧದ ಅತಿರೇಕದ ಸುದ್ದಿಗಳು ಎಲ್ಲರಲ್ಲೂ ಗೌತಮ ಬುದ್ಧನ ಬಗ್ಗೆ ಕುತೂಹಲವನ್ನು ಕೆರಳಿಸಿದ್ದವು. ದುಃಖಸಾಗರದಿಂದ ಆವೃತ್ತವಾದ ಈ ಜಗತ್ತಿನಲ್ಲಿ, ರೋಗ-ರುಜಿನ, ಕಷ್ಟಗಳಿಂದ ಕ್ಲಿಷ್ಟವಾದ ಬದುಕು ಭಾರವಾಗಿ ಸಾಗಲು ಸಾಧ್ಯ

ವಿಲ್ಲ ಎಂದು ಸೋಲೊಪ್ಪಬೇಕಾಗಿದ್ದ ಬಾಳಿನಲ್ಲಿ ಹೊಸ ಆಶಾಕಿರಣ, ಚೇತನ ದಾಯಕ ಸಂದೇಶ, ಸಂತೈಸುವ ಮೃದುನುಡಿ, ಬಾಳನ್ನು ಮುಂದುವರಿಸಲು ಅಭಯ ಕಾಣಿಸಿಕೊಂಡಿತು. ಭಾರತದ ತರುಣ ಪೀಳಿಗೆ ಹುಟ್ಟಿನಿಂದಲೇ ಆ ಉಪದೇಶಕ್ಕಾಗಿ ಕಾತುರರಾಗಿ ಕಾಯುತ್ತಿದ್ದರೇನೊ ಎನಿಸುವಂತೆ ಬುದ್ಧನ ನುಡಿಯನ್ನು ಆಲಿಸಿತು. ಹಳ್ಳಿ ಪಟ್ಟಣಗಳೆನ್ನದೆ ಗೌತಮ ಬುದ್ಧನ ಸುದ್ದಿಯನ್ನು, ಸಂದೇಶವನ್ನು ಹೊತ್ತು ತರುವ ಯಾತ್ರಿಕರನ್ನು, ಅಪರಿಚಿತರನ್ನು ಅಕ್ಕರೆಯಿಂದ ಸ್ವಾಗತಿಸಿ ಗೌರವಿಸುತ್ತಿದ್ದರು.

ಈ ವದಂತಿ ಕಾಡಿನಲ್ಲಿದ ಸಮಣರಿಗೆ, ಸಿದ್ಧಾರ್ಥ, ಗೋವಿಂದರಿಗೆ ಸ್ವಲ್ಪ ಸ್ವಲ್ಪವಾಗಿ ತಲುಪುತ್ತಿದ್ದರೂ ಪ್ರತಿಬಾರಿಯೂ ಹಿರಿದಾದ ಭರವಸೆ, ಅದರೊಂದಿಗೆ ಬಲವಾದ ಸಂದೇಹವನ್ನು ಕೆರಳಿಸುತ್ತಿತ್ತು. ಈ ಸುದ್ದಿ ಪೂಜ್ಯ ಸಮಣನಿಗೆ ಅಪ್ರಿಯ ವಾದ್ದರಿಂದ ಈ ಬಗ್ಗೆ ಅವರು ಹೆಚ್ಚು ಮಾತನಾಡಲಾಗಲಿಲ್ಲ. ಬುದ್ಧತ್ವವನ್ನು ಪಡೆದಿರು ವುದಾಗಿ ಸಾರುತ್ತಿರುವ ಗೌತಮ ಈ ಮೊದಲೇ ಕಾಡಿನಲ್ಲಿ ಸಮಣನಾಗಿದ್ದು ಅದನ್ನು ಧಿಕ್ಕರಿಸಿ ಪ್ರಾಪಂಚಿಕ ಸುಖಕ್ಕೆ ಬಲಿಯಾದವನೆಂದು ಕೇಳಿದ್ದ ಸಮಣನ ಪಾಲಿಗೆ ಗೌತಮ ಮಹಾಮಹಿಮ ಎಂದೆನಿಸಲಿಲ್ಲ.

''ಸಿದ್ಧಾರ್ಥ, ಇಂದು ಹಳ್ಳಿಯಲ್ಲಿ ಬ್ರಾಹ್ಮಣನೊಬ್ಬ ನನ್ನನ್ನು ಸ್ವಾಗತಿಸಿದ. ಅಲ್ಲಿ ಬುದ್ಧನನ್ನು ಕಂಡು ಅವನ ಉಪದೇಶವನ್ನು ಕೇಳಿದ ಮಗಧ ದೇಶದ ಬ್ರಾಹ್ಮಣ ಯುವಕನೊಬ್ಬನಿದ್ದ. ಆತನನ್ನು ನೋಡಿ ನನ್ನ ಎದೆ ಹಂಬಲಿಸಿತು. ನನಗೂ, ನಿನಗೂ ಆ ಪರಿಪೂರ್ಣನ ಉಪದೇಶವನ್ನು ಆಲಿಸುವ ಭಾಗ್ಯವಿದೆಯೇ? ....ನಾವೇಕೆ ಹೋಗಿ ಆ ಉಪದೇಶ ಕೇಳಬಾರದು?'' ಗೋವಿಂದ ಒಮ್ಮೆ ಕೇಳಿದ.

''ಗೋವಿಂದ ಸಮಣರೊಂದಿಗೇ ಉಳಿಯುವನೆಂದುಕೊಂಡಿದ್ದೆ. ಎಪ್ಪತ್ತು ಎಂಭತ್ತು ವರ್ಷ ತುಂಬಿದರೂ ಸಮಣಾಶ್ರಮದ ಸಾಧನೆಯೇ ಗುರಿ ಎಂದು ತಿಳಿದಿರು ವನೆಂದು ಕೊಂಡಿದ್ದೆ. ಆದರೆ ನೀನು ವಿಶಾಲ ಹೃದಯಿ. ಗೋವಿಂದ ನೀನು ಹೊಸ ಮಾರ್ಗ ಹಿಡಿದು ಬುದ್ಧನ ಉಪದೇಶ ಕೇಳಲು ಬಯಸುತ್ತಿರುವೆ!''

''ನನ್ನನ್ನು ಮೂದಲಿಸಿ ನಗಬೇಕೆಂಬುದು ನಿನ್ನ ಬಯಕೆಯೇ? ನಕ್ಕರೆ ನನ್ನ ಗೆಳೆಯ ತಾನೇ! ಬುದ್ಧನ ಉಪದೇಶ ಕೇಳಬೇಕೆಂಬ ಬಯಕೆ ನಿನ್ನಲ್ಲಿಲ್ಲವೇ? ಹೇಳು.

ಸಮಣಪಥದಲ್ಲಿ ಹೆಚ್ಚುಕಾಲ ನಿಲ್ಲಲಾರೆ ಎಂದು ನೀನೇ ಹೇಳಿರಲಿಲ್ಲವೇ ?''

ಸಿದ್ಧಾರ್ಥ ನಕ್ಕ. ಆ ನಗುವಿನಲ್ಲಿ ಬಾಳಿನ ದುಃಖದ ರೇಖೆ, ಕರುಣೆಯ ಆರ್ದ್ರತೆ ಮಿಳಿತವಾಗಿತ್ತು. ''ಜಾಣನಂತೆ ಮಾತನಾಡಿದೆ. ನಿನ್ನ ನೆನಪು ಚೆನ್ನಾಗಿದೆ. ನನ್ನ ಮಾತಿನ ಉಳಿದ ಮಾತುಗಳನ್ನೂ ನೆನಪು ಮಾಡಿಕೋ. ಉಪದೇಶದಲ್ಲಿ, ತಿಳಿವಿನಲ್ಲಿ, ಉಪದೇಶಕರಲ್ಲಿ ನನ್ನ ನಂಬಿಕೆ ಕುಸಿದಿದೆ. ಈ ಹೊಸ ಉಪದೇಶದ ಫಲವೇನು ಎಂಬುದು ತಿಳಿದಿದ್ದರೂ ಕೇಳಲು ಸಿದ್ಧನಾಗಿದ್ದೇನೆ.

''ಬುದ್ಧನ ಉಪದೇಶ ಕೇಳಲು ಒಪ್ಪಿದ್ದಕ್ಕಾಗಿ ನನಗೆ ತುಂಬಾ ಸಂತೋಷ ವಾಗಿದೆ. ಗೌತಮನ ಉಪದೇಶವನ್ನು, ಅದು ನಮಗೆ ತೋರಬಹುದಾದ ಅಪೂರ್ವ ಫಲವನ್ನು ಕಾಣುವುದಕ್ಕೂ ಮೊದಲೇ ಅದನ್ನು ಊಹಿಸುವುದಾದರೂ ಹೇಗೆ ?'' ಎಂದ ಗೋವಿಂದ.

''ಗೋವಿಂದ, ಪ್ರಸ್ತುತ ಫಲವನ್ನು ಅನುಭವಿಸೋಣ. ಮುಂಬರಲಿರು ವುದಕ್ಕಾಗಿ ಕಾಯೋಣ. ಅದು ನಮ್ಮನ್ನು ಸಮಣಮಾರ್ಗದಿಂದ ಬೇರ್ಪಡಿಸಿ ಗೌತಮನ ಬಳಿಗೊಯ್ದಿದೆ. ಇದಕ್ಕಿಂತ ಉತ್ತಮ ಫಲವಿದ್ದರೆ ತಾಳ್ಮೆಯಿಂದ ಕಾಯೋಣ.

ವಿದ್ಯಾರ್ಥಿಗೊಪ್ಪುವ ವಿನಯ, ಗಾಂಭೀರ್ಯಗಳಿಂದ ಪೂಜ್ಯ ಸಮಣನಿಗೆ ಸಿದ್ಧಾರ್ಥ ಆ ದಿನವೇ ಸಮಣ ಮಾರ್ಗವನ್ನು ಬಿಡುವುದಾಗಿ ಹೇಳಿದ. ಕಿರಿಯ ಸಾಧಕ ರಿಬ್ಬರು ಬಿಟ್ಟುಹೋಗುವುದನ್ನು ಕೇಳಿ ವೃದ್ಧ ಸಮಣ ಕೋಪಿಸಿಕೊಂಡು ಉದ್ರೇಕ ದಿಂದ ದೂಷಿಸಿದ.

ಮೌನವಾಗಿ ನಿಂತಿದ್ದ ಗೋವಿಂದನ ಕಿವಿಯಲ್ಲಿ ಸಿದ್ಧಾರ್ಥ ''ನಾನು ಈ ವೃದ್ಧನಿಂದ ಕಲಿತದ್ದನ್ನು ಈಗ ಅವನಿಗೇ ತೋರಿಸುತ್ತೇನೆ'' ಎಂದು ಹೇಳಿ ಏಕಾಗ್ರ ಚಿತ್ತದಿಂದ ಸಮಣನ ಮುಂದೆ ನಿಂತು ಆತನ ಕಣ್ಣಲ್ಲಿ ತನ್ನ ದೃಷ್ಟಿ ನೆಟ್ಟು ಆತನನ್ನು ವಶೀಕರಿಸಿಕೊಂಡ. ಆತನನ್ನು ಮೂಕನನ್ನಾಗಿಸಿ, ಆತನ ಮನಗೆದ್ದು, ತನ್ನ ಬಯಕೆ ಗನುಸಾರವಾಗಿ ವರ್ತಿಸುವಂತೆ ಮಾಡಿದ. ವೃದ್ಧ ಸ್ತಬ್ಧನಾದ. ಕಣ್ಣುಕೋರೈಸಿ ಸಂಕಲ್ಪ ಸಡಿಲಿ, ಕೈಗಳು ತತ್ತರಿಸಿ, ಶಕ್ತಿಗುಂದಿ ಸಿದ್ಧಾರ್ಥನ ವಶನಾದ; ಅವನ ಭಾವಗಳ ಗೊಂಬೆ

ಯಾದ. ಸಮಣ ಅವನ ಆಜ್ಞೆಯನ್ನೇ ಅನುಸರಿಸಬೇಕಾಗಿತ್ತು. ಪೂಜ್ಯ ಸಮಣ ವಿನಮ್ರ ನಾಗಿ ಆಶೀರ್ವದಿಸಿ ಸುಖ ಪ್ರಯಾಣವನ್ನು ತೊದಲು ನುಡಿಯಿಂದಲೇ ಕೋರಿದ. ಇಬ್ಬರೂ ನಮಸ್ಕರಿಸಿ, ಕೃತಜ್ಞತೆಯನ್ನು ಸೂಚಿಸಿ ಅಲ್ಲಿಂದ ಹೊರಟರು.

ದಾರಿಯಲ್ಲಿ ''ಸಿದ್ಧಾರ್ಥ, ಸಮಣರಲ್ಲಿ ನಾನು ಅರಿತಿದ್ದಕ್ಕಿಂತಲೂ ನೀನು ಹೆಚ್ಚು ಕಲಿತಿದ್ದೀಯ. ವಶೀಕರಣ ಕಠಿಣವಾದುದು. ಅದರಲ್ಲೂ ಹಿರಿಯ ಸಮಣನನ್ನು ವಶೀಕರಿಸಿಕೊಳ್ಳುವುದೆಂದರೆ ಸಾಹಸವೆ ಸರಿ. ನೀನು ಅಲ್ಲೇ ಇದ್ದಿದ್ದರೆ ಬಹುಬೇಗ ನೀರಿನ ಮೇಲೆ ನಡೆಯುವುದನ್ನು ಕಲಿಯುತ್ತಿದ್ದೆ'' ಎಂದ ಗೋವಿಂದ.

''ನೀರಿನ ಮೇಲೆ ನಡೆವ ಇಚ್ಛೆ ನನಗಿಲ್ಲ. ಅಂತಹ ಮೋಡಿಗಳಿಂದ ಆ ಸಮಣರೇ ತೃಪ್ತಿಗೊಳ್ಳಲಿ''.

೩. ಗೌತಮ

ಸಾವತ್ಥೀ ನಗರದಲ್ಲಿ ಭಗವಾನ್ ಬುದ್ಧನ ಹೆಸರನ್ನು ಕೇಳರಿಯದ ಚಿಕ್ಕ ಮಗುವೂ ಇಲ್ಲ. ಆತನ ಶಿಷ್ಯರು ಮೌನವಾಗಿ ಭಿಕ್ಷೆಗಾಗಿ ಊರಲ್ಲಿ ಅಡಿ ಇರಿಸುತ್ತಲೇ ಅವರ ಭಿಕ್ಷಾಪಾತ್ರೆಗಳನ್ನು ತುಂಬಲು ಎಲ್ಲಾ ಮನೆಯವರೂ ಕಾತುರರಾಗಿದ್ದರು. ಅನಾಥ ಪಿಂಡಕನೆಂಬ ಶ್ರೀಮಂತ ವರ್ತಕ ಬುದ್ಧನ ಶಿಷ್ಯ ಕೋಟಿಯಲ್ಲೊಬ್ಬ. ಆತ ಸಾವತ್ಥೀ ನಗರದ ಹೊರಭಾಗದಲ್ಲಿದ್ದ ತನ್ನ ವಿಶಾಲವಾದ ಜೇತವನವನ್ನು ಬುದ್ಧ ಹಾಗೂ ಆತನ ಪರಿವಾರದವರಿಗಾಗಿ ಬಿಟ್ಟುಕೊಟ್ಟಿದ್ದ.

ಗೌತಮನನ್ನು ಅರಸುತ್ತಾ ಅವನ ಬಗ್ಗೆ ಹೇಳುತ್ತಿದ್ದ ಕತೆಗಳನ್ನು ಆಲಿಸಿ ಅವರಿಂದ ವಿಷಯ ಸಂಗ್ರಹಿಸಿ ಆ ಇಬ್ಬರು ತರುಣ ಸನ್ಯಾಸಿಗಳು ಸಾವತ್ಥೀ ನಗರಕ್ಕೆ ಬಂದರು. ನಗರದ ಮೊದಲನೆಯ ಮನೆ ಮುಂದೆ ಭಿಕ್ಷೆಗಾಗಿ ಮೌನವಾಗಿ ನಿಂತೊಡನೆಯೆ ಭಿಕ್ಷೆ ದೊರೆಯಿತು. ಭಿಕ್ಷೆಯನ್ನು ನೀಡಿದ ಗೃಹಿಣಿಯನ್ನು ಸಿದ್ಧಾರ್ಥ "ಆರ್ಯೆ, ಬುದ್ಧ ಭಗವಾನ್ ಇರುವುದೆಲ್ಲಿ ತಿಳಿಸಬಲ್ಲೆಯಾ ? ಆ ಪರಿಪೂರ್ಣ ಆದರ್ಶ ಮೂರ್ತಿಯನ್ನು ದರ್ಶಿಸಿ ಆತನ ಉಪದೇಶಾಮೃತದಿಂದ ಪುನೀತರಾಗ ಬೇಕೆಂದು ಸಮಣರಾಗಿರುವ ನಾವು ಕಾಡಿನಿಂದ ಬಂದಿದ್ದೇವೆ." ಎಂದು ಕೇಳಿದ.

"ಪೂಜ್ಯ ಸಮಣರೇ, ಅರಣ್ಯದಿಂದ ತಾವು ಬುದ್ಧದೇವನ ದರ್ಶನಕ್ಕೆ ಬಂದಿರುವುದು ತಂಬಾ ಸೂಕ್ತವೇ ಆಗಿದೆ. ಪರಪೂರ್ಣ ಅದರ್ಶಚೇತಸನು ಅನಾಥ ಪಿಂಡಿಕನು ಜೇತವನದಲ್ಲಿ ತಂಗಿದ್ದಾನೆ. ಅನೇಕ ಮಂದಿ ಯಾತ್ರಾರ್ಥಿಗಳು ಈಗಾಗಲೆ ಅಲ್ಲಿ ಸೇರಿದ್ದಾರೆ. ನೀವೂ ಅವರೊಂದಿಗೆ ಸೇರಿ ಬುದ್ಧ ಭಗವಾನನ ಅಮೃತವಾಣಿಯನ್ನು ಕೇಳುತ್ತಾ ರಾತ್ರಿಯನ್ನು ಕಳೆಯಲು ಸಾಧ್ಯ. ಆ ವನವೂ ವಿಶಾಲವಾಗಿದೆ."

ಈ ಉತ್ತರದಿಂದ ಆನಂದಗೊಂಡ ಗೋವಿಂದ ಉತ್ಸಾಹದಿಂದ, "ನಾವು ಗುರಿ ತಲುಪಿದಂತಾಯಿತು ! ನಮ್ಮ ಯಾತ್ರೆ ಗುರಿ ಮುಟ್ಟಿತು ! ತಾಯಿ, ಬುದ್ಧದೇವನನ್ನು ನೀವು ನೋಡಿದ್ದೀರಾ? ಆತನ ಅಮೃತವಾಣಿಯನ್ನು ಆಲಿಸಿದ್ದೀರಾ" ಎಂದು ಕೇಳಿದ.

''ನೋಡಿದ್ದೇನೆ, ಹಳದಿಯ ವಸ್ತ್ರ ತೊಟ್ಟು ಭಗವಾನ್ ಮೌನವಾಗಿ ಭಿಕ್ಷಾ ಪಾತ್ರೆಯನ್ನು ಹಿಡಿದು ಇದೇ ಬೀದಿಯಲ್ಲಿ ಅಡಿ ಇರಿಸಿ ತುಂಬಿದ ಪಾತ್ರೆಯೊಂದಿಗೆ ಹೋಗುವುದನ್ನು ಅನೇಕ ಬಾರಿ ನೋಡಿದ್ದೇನೆ''.

ಮಂತ್ರಮುಗ್ಧನಾಗಿ ಆ ಮಾತುಗಳನ್ನು ಕೇಳಿದ ಗೋವಿಂದ. ಬುದ್ಧನ ಬಗ್ಗೆ ಇನ್ನೂ ಅನೇಕ ಸಂಗತಿಯನ್ನು ಕೇಳಬೇಕೆಂದು ಮನ ತವಕಿಸಿತು. ಪ್ರಶ್ನೆಗಳ ಸರಮಾಲೆ ನಾಲಿಗೆಯ ತುದಿಯತನಕ ಬಂತು. ಆದರೆ ಸಿದ್ಧಾರ್ಥ ಹೊರಡಲು ವೇಳೆಯಾಯಿತೆಂದು ಎಚ್ಚರಿಸಿದ್ದರಿಂದ ಮೌನವಹಿಸಬೇಕಾಯಿತು. ಕೃತಜ್ಞತೆಯನ್ನರ್ಪಿಸಿ ಅಲ್ಲಿಂದ ಇಬ್ಬರು ಬೀಳ್ಕೊಂಡರು. ಅನೇಕ ಯಾತ್ರಿಕರು, ದರ್ಶನಾಕಾಂಕ್ಷಿಗಳು, ಬುದ್ಧದೇವನ ಶಿಷ್ಯರು ತಂಡ ತಂಡಗಳಾಗಿ ಜೇತವನದತ್ತ ಸಾಗುತ್ತಿದ್ದುದರಿಂದ ದಾರಿಯನ್ನು ಕೇಳುವ ಅಗತ್ಯತೆ ಕಾಣಲಿಲ್ಲ. ಅವರು ವನ ಸೇರಿದ ನಂತರವೂ, ಕತ್ತಲಾದರೂ ಯಾತ್ರಿಕರು ಸತತವಾಗಿ ಬರುತ್ತಲೇ ಇದ್ದರು. ಅವರು ಇಳಿದುಕೊಳ್ಳಲು ಸ್ಥಳಕ್ಕೆ ಗಡಿಬಿಡಿ ಯಾಗುತ್ತಿತ್ತು. ಕಾಡಿನ ಜೀವನದ ಅನುಭವವಿದ್ದ ಸಮಣರು ಸದ್ದಿಲ್ಲದೆ ಬೆಳಗಿನವರೆಗೂ ಕಾಲಕಳೆಯಲು ತಾಣ ಕಂಡುಕೊಂಡರು.

ಬೆಳಗಾಯಿತು. ನಂಬಿಕೆಯಿಂದ, ಭಕ್ತಿಯಿಂದ, ಆಸೆಯಿಂದ, ಕುತೂಹಲದಿಂದ ಬಂದಿದ್ದ ಜನಸಾಗರವೇ ಆ ವನದಲ್ಲಿ ಸೇರಿತ್ತು. ಆ ಜನಸ್ತೋಮವನ್ನು ಕಂಡು ಅವರು ಚಕಿತರಾದರು. ಎತ್ತ ನೋಡಿದರೂ ಹಳದಿ ವಸ್ತ್ರತೊಟ್ಟು ಮರದಡಿಯಲ್ಲಿ ಕುಳಿತು ಧ್ಯಾನಿಸುವ, ಚರ್ಚೆಯಲ್ಲಿ ತೊಡಗಿರುವ ಭಿಕ್ಷುಗಳಿಂದ ವೃಕ್ಷಾಚ್ಛಾದಿತ ವನ ಪುಟ್ಟ ನಗರವಾಗಿತ್ತು. ಜೇನುಗೂಡನ್ನು ಮುತ್ತಿದ ಜೇನು ನೊಣಗಳಂತೆ ಜನರಿಂದ ಆವೃತ್ತವಾಗಿತ್ತು. ಸ್ವಲ್ಪಕಾಲದ ನಂತರ ಭಿಕ್ಷುಗಳಲ್ಲಿ ಬಹುಮಂದಿ ಭಿಕ್ಷಾಪಾತ್ರೆ ಹಿಡಿದು ಅಪರಾಹ್ನದ ಊಟ- ದಿನದ ಒಂದೇ ಊಟ ಪಡೆಯಲು ಹೊರಟರು. ಅವರೊಂದಿಗೆ ಬುದ್ಧನೂ ಹೊರಟಿದ್ದ.

ಸಿದ್ಧಾರ್ಥ ಬುದ್ಧನನ್ನು ಆ ಭಿಕ್ಷುಗಳ ಗುಂಪಿನಲ್ಲೂ ಒಮ್ಮೆಗೆ ಗುರುತಿಸಿದ. ಹಳದಿಯ ವಸ್ತ್ರ ತೊಟ್ಟು, ಭಿಕ್ಷಾ ಪಾತ್ರೆ ಹಿಡಿದು ಪ್ರಶಾಂತ ಗಂಭೀರ ವದನದ ಬುದ್ಧ

ಯಾವ ರೀತಿಯ ಡಾಂಭಿಕ ವರ್ತನೆಗೂ ಅವಕಾಶ ನೀಡದವನಂತೆ ಹೆಜ್ಜೆ ಹಾಕುತ್ತಿದ್ದ. ''ಗೋವಿಂದ ಅದೋ ಬುದ್ಧದೇವ'' ಎಂದು ಮೆಲ್ಲನೆ ಬೊಟ್ಟು ಮಾಡಿ ತೋರಿಸಿದ.

ಹಳದಿ ವಸ್ತ್ರದ ಬುದ್ಧನನ್ನು ತದೇಕಚಿತ್ತನಾಗಿ ಗುರುತಿಸಿದ ಗೋವಿಂದ. ನಿಜ, ಅವನೇ ಬುದ್ಧ, ಆತನನ್ನು ನೂರಾರು ಭಿಕ್ಷುಗಳ ಮಧ್ಯೆ ಗುರುತಿಸುವುದು ಕಷ್ಟವಾದರೂ ಗೋವಿಂದನಿಗೆ ತ್ರಾಸವೆನಿಸಲಿಲ್ಲ. ಅವರು ಆತನನ್ನು ಅನುಸರಿಸಿದರೂ ಅವರ ಕಣ್ಣು ಮಾತ್ರ ಬುದ್ಧನನ್ನೇ ಗಮಸುತ್ತಿತ್ತು.

ಸ್ಥಿರ ನಡಿಗೆ, ಸಮಾಧಿಯಲ್ಲಿರುವಂತೆ ದೃಷ್ಟಿ, ಶಾಂತ ಮುಖ ಮುದ್ರೆ, ಸುಖ - ದುಃಖಗಳನ್ನು ಮೀರಿ ನಿಂತಿತ್ತು. ಮಗುವಿನ ಆಮಾಯಕ ನಗೆಯಂತೆ ತನ್ನೊಳಗೇ ಮುಗುಳ್ನಗು ಸೂಸುವ ಸ್ವಲ್ಪಬಿರಿದ ತುಟಿಗಳು ಎಲ್ಲರಂತೆಯೇ ಎಲ್ಲರೊಂದಿಗೂ ಬೆರೆತು ಒಂದಾಗಿದ್ದರೂ, ಎಲ್ಲ ಭಿಕ್ಷುಗಳಂತೆ ಹಳದಿಯ ವಸ್ತ್ರ ತೊಟ್ಟಿದ್ದರೂ, ಮುಖಕಾಂತಿಯಲ್ಲಿ ಸ್ಥಿರ ಹೆಜ್ಜೆಯಲ್ಲಿ , ಶಾಂತತೆ ತುಂಬಿದ ನೆಲವನ್ನೇ ನಿರುಕಿಸುವ ನೋಟದಲ್ಲಿ, ವಿಶಾಲವಾದ ಬಾಹುಗಳಲ್ಲಿ, ನೀಳವಾದ ಬೆರಳುಗಳಲ್ಲಿ ಮೂಲ ಭೂತವಾದ ಅಂತರ ತೋರುತ್ತಿತ್ತು. ಅವನ ದೇಹ, ನೋಟ, ನಡೆ ಎಲ್ಲವೂ ಪರಿಪೂರ್ಣ ವ್ಯಕ್ತಿತ್ವವನ್ನು ಹೊರಸೂಸುತ್ತಾ ತೇಜೋಮಯವಾಗಿತ್ತು. ಯಾವುದರ ಬಯಕೆಯಾಗಲಿ, ಅನುಕರಣೆಯಾಗಲಿ ಇಲ್ಲದೆ, ಆದಿ ಅಂತ್ಯಗಳಿಲ್ಲದ ಕಾಂತಿಪುಂಜ ವಾಗಿರುವವನಂತೆ, ಪ್ರಶಾಂತತೆಯ ಸಾಗರವಾಗಿರುವಂತೆ ಚಪಲ, ಬಯಕೆ, ನಟನೆ, ಪ್ರಯತ್ನಗಳಿಂದ ತುಂಬಾ ದೂರದಲ್ಲಿ ಸಾಗಿ, ಸಾಮಾನ್ಯನಿಂದ ಅಸಾಮಾನ್ಯನಾಗಿ, ಪರಿಪೂರ್ಣಾವತಾರಿಯಾಗಿ ಮೂರ್ತಿ ಭವಿಸಿದ್ದ ಬುದ್ಧ ಭಗವಾನನನ್ನು ಕಂಡವರು ತಲೆಬಾಗಿಸಿ ನಮಸ್ಕರಿಸುವಂತಾಗುತ್ತಿತ್ತು. ಸಿದ್ಧಾರ್ಥ ಅದುವರೆವಿಗೂ ಅಷ್ಟೊಂದು ಗೌರವ ಭಕ್ತಿ ಮಮತೆಗಳ ಸ್ರವಂತಿಯನೇ ಹರಸಿದಂತಹ ಅಪೂರ್ವ ವ್ಯಕ್ತಿಯನ್ನು ಕಂಡಿರಲಿಲ್ಲ.

''ಇಂದು ಬುದ್ಧದೇವನಿಂದಲೇ ಉಪದೇಶವಾಣಿ ಕೇಳೋಣ'' ಎಂದ ಗೋವಿಂದನಿಗೆ ಸಿದ್ಧಾರ್ಥನ ಮೌನವೇ ಉತ್ತರವಾಯಿತು. ಉಪದೇಶವೆಂದರೆ ಅವನಿಗೆ ಕುತೂಹಲವಿರಲಿಲ್ಲ. ಹೊಸದಾಗಿ ಯಾರು ಏನು ಹೇಳಲೂ ಸಾಧ್ಯವಿಲ್ಲ ಎನಿಸಿತು.

ಬುದ್ಧದೇವನ ಬೋಧನೆಯ ಸಾರವನ್ನು ಆಗಲೇ ಅವರಿವರ ಬಾಯಿಂದ ತಿಳಿದಿದ್ದರು. ಬುದ್ಧದೇವನೇ ಅದನ್ನು ಹೇಳಿದರೂ ಅದರಲ್ಲಿ ಹೊಸತನ ಏನು ತಾನೇ ಇದ್ದೀತು.

ಬುದ್ಧದೇವನ ಹಿಂದೆಯೇ ನಗರದಲ್ಲೆಲ್ಲಾ ಅವರು ಸುತ್ತಾಡಿದರು. ಜೇತ ವನಕ್ಕೆ ಹಿಂದಿರುಗಿದ ಬುದ್ಧ ತನ್ನ ಶಿಷ್ಯರೊಂದಿಗೆ ವೃತ್ತದಲ್ಲಿ ಕುಳಿತು ಊಟಮಾಡಿದ. ಆತನ ಉಟ ಹಕ್ಕಿಗೂ ಸಾಲದು ಎನಿಸಿತು ಅವರಿಗೆ. ಅಂದು ಉಪವಾಸವಿರಬೇಕೆಂದು ನಿರ್ಧರಿಸಿದ್ದರಿಂದ ಅವರು ಊಟದ ಬಗ್ಗೆ ಹೆಚ್ಚು ಚಿಂತಿಸಲಿಲ್ಲ. ಎಲ್ಲರ ಊಟ ಮುಗಿಯಿತು. ಬುದ್ಧದೇವ ಮಾವಿನ ಮರದಡಿಯ ತನ್ನ ಸ್ಥಾನಕ್ಕೆ ನಡೆದ.

ಬಿಸಿಲಿನ ಝಳ ಇಳಿದು ಸಂಜೆಯ ತಂಪು ಪಸರಿಸುತ್ತಿದ್ದಂತೆ ಜೇತವನ ದಲ್ಲಿ ಸೇರಿದ್ದವರು ಚುರುಕಾಗಿ ತುಂಬಾ ಲವಲವಿಕೆಯಿಂದ ಓಡಾಡುತ್ತಾ ಒಂದೆಡೆ ಸೇರಲುಪಕ್ರಮಿಸಿದರು. ಬುದ್ಧದೇವನ ಉಪದೇಶ ಕೇಳಿದರು. ಆತನ ಧ್ವನಿಯಲ್ಲೂ ಪರಿಪೂರ್ಣತೆ, ಶಾಂತಿ, ಸ್ಥಿರತೆ ಸ್ಪಷ್ಟವಾಗಿ ತೋರಿಬರುತ್ತಿತ್ತು. ಗೌತಮ ದುಃಖ, ದುಃಖದ ಮೂಲ ಮತ್ತು ಅದರಿಂದ ಮುಕ್ತಿಯ ಮಾರ್ಗವನ್ನು ಕುರಿತು ಉಪದೇಶಿಸಿದ. ಬಾಳು ನೋವಿನ ಬುತ್ತಿ, ಜಗತ್ತು ಕಣ್ಣೀರ ಕಂದರ. ಆದರೆ ಇದರಿಂದ ಬಿಡುಗಡೆಯ ಹಾದಿಯನ್ನು ಕಂಡುಹಿಡಿಯಲಾಗಿದೆ. ಬುದ್ಧದೇವನ ಬೋಧನೆ ಕೇಳಿ ಅದೇ ಹಾದಿಯಲ್ಲಿ ಸಾಗುವವರಿಗೆ ಈ ನೋವು ದುಃಖಗಳ ಸೋಂಕಿರದು.

ತಾಳ್ಮೆಯಿಂದ ಸಹಜ ಮೃದುಸ್ವಷ್ಟನುಡಿಗಳಲ್ಲಿ ಅನೇಕ ಉದಾಹರಣೆ ಗಳೊಂದಿಗೆ ಆರ್ಯ ಸತ್ಯ[೧] ಅರಿಯೋ ಅಟ್ಠಾಂಗಿಕೋ ಮಗ್ಗೋಗಳನ್ನು ವಿವರಿಸಿದ. ಆತನ ಉಪದೇಶ ದೂರದ ತಾರೆಯ ಸ್ವಯಂ ಪ್ರಭೆಯಂತೆ, ಕಾಂತಿಪುಂಜದಂತೆ ಶ್ರೋತೃಗಳನ್ನು ಆವರಿಸುತ್ತಿತ್ತು.

---

೧. **ಆರ್ಯ ಸತ್ಯಗಳು ನಾಲ್ಕು**

ಒಂದು: **ದುಕ್ಖ**:- ಹುಟ್ಟು, ಮುಪ್ಪು, ರೋಗ, ಸಾವು ದುಃಖಮಯ, ರೂಪ, ವಿಜ್ಞಾನ, ವೇದನೆ, ಸಂಜ್ಞಾ, ಸಂಸ್ಕಾರಗಳೆಂಬ ಪಂಚಸ್ಕಂದಗಳು ದುಃಖಮಯ.

ಎರಡು: **ದುಕ್ಖಸಮುದಾಯೊ**:- ಇದರ ಮೂಲ ತೃಷ್ಣೆ, ಇದರ ಫಲವೇ ಮರುಹುಟ್ಟು ವಿಷಯ ತೃಷ್ಣೆ ಮೂಡಿಸುತ್ತದೆ.

ಉಪದೇಶ ಮುಗಿಯುವ ಹೊತ್ತಿಗೆ ಕತ್ತಲಾಗಿತ್ತು. ಅನೇಕ ಯಾತ್ರಿಕರು ದೀಕ್ಷೆಬೇಡಿ ಬಂದರು. ''ನನ್ನ ಬೋಧನೆಗೆ ಕಿವಿಗೊಟ್ಟಿರಿ, ಈ ಮಾರ್ಗ ಅನುಸರಿಸಿ ಆನಂದವನ್ನು ಕಂಡುಕೊಳ್ಳಿ. ನೋವು ಸಂಕಟಗಳಿಗೆ ಮಂಗಳ ಹಾಡಿ'' ಎಂದು ಆಶೀರ್ವದಿಸಿದ.

ಎಲ್ಲದರಲ್ಲೂ ಹಿಂಬದಿಯವನಾಗಿದ್ದ ಗೋವಿಂದನೂ ನಾಚಿಕೆಯಿಂದ ಬುದ್ಧದೇವನ ಮುಂದೆ ನಿಂತು ತನಗೂ ದೀಕ್ಷೆ ನೀಡಬೇಕೆಂದು ಬೇಡಿದ, ಅವನ ಬೇಡಿಕೆ ಈಡೇರಿಸಿದ. ಕರುಣಾಮಯ ಅಲ್ಲಿಂದ ನಿರ್ಗಮಿಸಿದ. ಗೋವಿಂದ ಕಾತರದಿಂದ ತನ್ನ ವರ್ತನೆಯನ್ನು ವಿವರಿಸಲೆಂದೇನೋ ''ನಿನಗೆ ತಿಳಿಯಹೇಳಲು ನಾನು ಸಮರ್ಥನಲ್ಲ. ಸಿದ್ಧಾರ್ಥ, ಇಬ್ಬರೂ ಬುದ್ಧ ಭಗವಾನನ ಬೋಧನೆ ಕೇಳಿದ್ದೇವೆ. ಭಗವಾನನು ತೋರುತ್ತಿರುವ ಪಥವನ್ನು ಅನುಸರಿಸಲು ಗೋವಿಂದ ಸಿದ್ಧನಾಗಿದ್ದಾನೆ. ನೀನಿನ್ನೂ ಮುಕ್ತಿ ಪಥವನ್ನು ತುಳಿಯಲು ಕಾಯುತ್ತಿರುವುದೇಕೆ ? ಈ ತಡ ಏತಕ್ಕಾಗಿ ?''

ಗೋವಿಂದನ ನುಡಿಗಳಿಗೆ ನಿದ್ರೆಯಿಂದ ಎಚ್ಚೆತ್ತವನಂತೆ ಅವನತ್ತ ಸಿದ್ಧಾರ್ಥ ದಿಟ್ಟಿಸಿದ. ಮೆಲುದನಿಯಲ್ಲಿ ''ಮಿತ್ರ, ನಿನ್ನ ಹಾದಿ ನೀನು ಆರಿಸಿಕೊಂಡಿದ್ದೀಯೆ.'' ಇದುವರೆವಿಗೂ ನನಗಿಂತ ಒಂದು ಹೆಜ್ಜೆ ಹಿಂದಿದ್ದು ನನ್ನನ್ನೇ ಅನುಸರಿಸುತ್ತಿದ್ದೆ. ನನ್ನ ಗೆಳೆಯನಾಗಿ ನನ್ನೊಂದಿಗೇ ಇರುತ್ತಿದ್ದೆ. ಗೋವಿಂದ ನನ್ನ ನೆರವಿಲ್ಲದೆ ತಾನೆ ತಾನಾಗಿ ಸ್ವತಂತ್ರ ವಿವೇಚನೆಯಿಂದ ಅಡಿ ಇರಿಸಬಲ್ಲನೇ ಎಂದು ಅನೇಕ ಬಾರಿ ಚಿಂತಿಸಿದ್ದೆ.

ಮೂರು: **ದುಕ್ಖನಿರೋಧೋ**:- ತೃಷ್ಣೆಯನ್ನು ತಡೆಯುವುದು. ಅದು ಪರಿಪೂರ್ಣವಾಗಿ ಹೋಗುವಂತೆ ಮಾಡುವುದು. ಆಗ ಮುಕ್ತಿ ಲಭಿಸುತ್ತದೆ.
ನಾಲ್ಕು: **ಪಟಿಪದಾ**:- ಮೇಲಿನ ಮೂರು ಸತ್ಯಗಳನ್ನು ಅರಿತವನು ಅರ್ಹಂತನಾಗುತ್ತಾನೆ. ನಾಲ್ಕನೆಯದಾದ ದುಃಖನಿರೋಧಗಾಮಿನೀ ಪಟಿಪದಾ ಎಂಬುದನ್ನು ತಿಳಿದವನು ಬುದ್ಧನಾಗುತ್ತಾನೆ. ಇದಕ್ಕೆ ಎಂಟು ಮಾರ್ಗಗಳುಂಟು. ಅದೇ 'ಅರಿಯೋ ಅಟ್ಠಂಗಿಕೋ ಮಗ್ಗೋ'

೧. ಸಮ್ಯಕ್ ದೃಷ್ಟಿ	೨. ಸಮ್ಯಕ್ ಸಂಕಲ್ಪ
೩. ಸಮ್ಯಕ್ ವಾಕ್	೪. ಸಮ್ಯಕ್ ಕರ್ಮಾಂತ
೫. ಸಮ್ಯಕ್ ಆಜೀವ	೬. ಸಮ್ಯಕ್ ವ್ಯಾಯಾಮ
೭. ಸಮ್ಯಕ್ ಸ್ಮೃತಿ	೮. ಸಮ್ಯಕ್ ಸಮಾಧಿ

ಇವು ಗೌತಮ ಬುದ್ಧ ಬೋಧಿಸಿದ ಮೂಲ ತತ್ವಗಳು.

ಇಂದು ಮನುಷ್ಯನಾಗಿ ನಿನ್ನ ಹಾದಿ ನೀನು ಕಂಡುಕೊಂಡಿರುವೆ. ಇದೇ ಪಥವಲ್ಲಿ ಕೊನೆಯ ತನಕ ಸಾಗು, ಮುಕ್ತಿಯನ್ನು ಕಂಡುಕೊ'' ಎಂದ.

ಸಿದ್ಧಾರ್ಥನ ಮಾತಿನ ಸರಣಿಯನ್ನು ಅರ್ಥ ಮಾಡಿಕೊಳ್ಳಲಾರದ ಗೋವಿಂದ ''ಮಿತ್ರ, ಬುದ್ಧ ಭಗವಾನನ ಹಾದಿ ಅನುಸರಿಸುವುದರ ವಿನಃ ಬೇರಾವ ಮಾರ್ಗ ತಾನೇ ಉಳಿದಿದೆ, ನೀನೂ ಇದೇ ಹಾದಿಗೇ ತಾನೇ ಬರಬೇಕು'' ಎಂದು ಮತ್ತೆ ಕೇಳಿದ.

ಅವನ ಹೆಗಲ ಮೇಲೆ ಸ್ನೇಹಪೂರ್ವಕವಾಗಿ ಕೈಯಿರಿಸಿ ಸ್ನೇಹಾರ್ದ್ರ ಕಂಠದಲ್ಲಿ ''ನಾನು ಶುಭಕೋರಿದ್ದನ್ನು ಕೇಳಿಸಿಕೊಂಡೆಯಾ? ಮತ್ತೆ ಅದನ್ನೇ ಹಾರೈಸುತ್ತೇನೆ, ಇದೇ ಪಥದಲ್ಲಿ ಕೊನೆಯ ತನಕ ಸಾಗು, ಮುಕ್ತಿ ಕಂಡುಕೋ.''

ಸಿದ್ಧಾರ್ಥ ತನ್ನನ್ನು ಬಿಟ್ಟು ಬೇರೆಯಾಗುತ್ತಿದ್ದಾನೆ ಎಂದು ಆಗ ಅನ್ನಿಸಿತು. ಆ ಅನಿಸಿಕೆಯಿಂದಲೇ ಕಣ್ಣೀರು ಉಕ್ಕಿತು. ''ಸಿದ್ಧಾರ್ಥ'' ಎಂದು ದುಃಖಿಸಿದ ಗೋವಿಂದ.

ಸಿದ್ಧಾರ್ಥ ಅದೇ ಸ್ಥಾಯೀ ಕಂಠದಲ್ಲಿ, ಅಕ್ಕರೆಯ ಧ್ವನಿಯಲ್ಲಿ ''ಗೋವಿಂದಾ, ನೀನು ತಾಯಿ-ತಂದೆ, ಮನೆ-ಮಾರು, ಆಸ್ತಿ-ಪಾಸ್ತಿ, ಸ್ನೇಹ-ವೈರ ಎಲ್ಲವನ್ನೂ, ಕೊನೆಗೆ ನಿನ್ನನ್ನೂ ಬಿಟ್ಟಿದ್ದೀಯೆ ಎಂಬುದನ್ನು ನೆನಪಿಡು. ಬೋಧನೆಗಳು ಹೇಳುವುದೆಲ್ಲಾ ಇದನ್ನೇ. ಬುದ್ಧ ಭಗವಾನನೂ ಹೇಳುತ್ತಿರುವುದು ಇದೇ. ನೀನು ಬಯಸಿ ಆರಿಸಿಕೊಂಡ ಪಥವೂ ಇದೇ. ''ಗೋವಿಂದ, ನಾಳೆ ನಿನ್ನನ್ನು ಬಿಟ್ಟು ಇಲ್ಲಿಂದ ಹೊರಡುತ್ತೇನೆ'' ಎಂದ.

ಗೆಳೆಯರಿಬ್ಬರೂ ಬಹಳ ಹೊತ್ತಿನವರೆವಿಗೂ ಜೇತವನದಲ್ಲಿ ಸುತ್ತಾಡಿದರು. ಅಕ್ಕಪಕ್ಕದಲ್ಲಿಯೆ ಮಲಗಿದ್ದರು - ನಿದ್ರಿಸಲಿಲ್ಲ. ಬುದ್ಧದೇವನ ಉಪದೇಶವನ್ನು ಕೇಳಿ ಅನುಸರಿಸಲು ಹಿಂತೆಗೆಯುತ್ತಿರುವುದೇಕೆ? ಆ ಪಥದಲ್ಲಿ ಸಿದ್ಧಾರ್ಥ ಕಂಡ ದೋಷವೇನು ಎಂಬುದನ್ನು ತಿಳಿಯಲು ಗೋವಿಂದ ತುಂಬಾ ಪ್ರಯತ್ನಿಸಿ ಅನೇಕ ಬಾರಿ ಕೇಳಿದ. ಅದಕ್ಕೆ ಒಂದೇ ಉತ್ತರ; ''ಶಾಂತ ಚಿತ್ತನಾಗು. ಬುದ್ಧ ಭಗವಾನನ ಬೋಧನೆ ಉತ್ತಮವಾದುದೇ, ಅದರಲ್ಲಿ ದೋಷ ಕಾಣುವುದಾದರೂ ಹೇಗೆ ?''

ಹಳದಿ ವಸ್ತ್ರ ಕೊಟ್ಟು ಅವರ ದಿನಚರಿ, ನಿಯಮಗಳನ್ನು ತಿಳಿಸಲು ಬುದ್ಧನ ಶಿಷ್ಯರಲ್ಲಿ ಹಿರಿಯನಾದ ಭಿಕ್ಷು ಜೇತವನದಲ್ಲಿ ಭಗವಾನನ ಉಪದೇಶವನ್ನು ಅಂಗೀಕರಿಸಿದ್ದ. ಹೊಸಬರನ್ನು ಕರೆದ. ಬಾಲ್ಯ ಗೆಳೆಯನನ್ನು ಬರಸೆಳೆದು ಅಪ್ಪಿ ಅವನನ್ನೇ ನೋಡುತ್ತ ತನ್ನ ಹಾದಿಯಲ್ಲಿ ಅಡಿಯಿರಿಸಿದ. ಗೋವಿಂದ ಭಿಕ್ಷುಗಳ ಗುಂಪಿನಲ್ಲಿ ಸೇರಿದ.

ದೀರ್ಘಾಲೋಚನೆಯಲ್ಲಿ ಸಿದ್ಧಾರ್ಥ ವನವನ್ನೆಲ್ಲಾ ಸುತ್ತಾಡುತ್ತಿದ್ದ. ಆಗ ಒಮ್ಮೆ ಬುದ್ಧ ಭಗವಾನ್ ಎದುರಾದ. ಗೌರವದಿಂದ ಶಿರಬಾಗಿ ವಂದಿಸಿದ. ವಿನಯ ದಿಂದ ವಂದನೆ ಸ್ವೀಕರಿಸಿದ ಬುದ್ಧ ದೇವನನ್ನು ಕಂಡು ಧೈರ್ಯಗೊಂಡು ಸಿದ್ಧಾರ್ಥ ಮಾತನಾಡಲು ಅನುಮತಿಯನ್ನು ಬೇಡಿದ. ಗೌತಮ ತಲೆದೂಗಿ ಒಪ್ಪಿಗೆ ವ್ಯಕ್ತಪಡಿಸಿದ.

''ಭಗವಾನ್, ನಿಮ್ಮ ಉಪದೇಶವನ್ನು ಕೇಳಲೆಂದೇ ನಾನು, ನನ್ನ ಮಿತ್ರ ದೂರದಿಂದ ಬಂದೆವು. ನಿನ್ನೆ ನಮ್ಮ ಆಸೆ ನೆರವೇರಿತು. ತತ್ಫಲವಾಗಿ ನನ್ನ ಮಿತ್ರ ನಿಮ್ಮೊಂದಿಗೆ ಉಳಿಯುತ್ತಾನೆ. ನಿಮ್ಮಿಂದ ದೀಕ್ಷೆ ಪಡೆದಿದ್ದಾನೆ. ನಾನು ಮಾತ್ರ, ಹೊಸದಾಗಿ ನನ್ನ ಯಾತ್ರಾ ಪಥದಲ್ಲಿ ಮುಂದುವರಿಯಬೇಕೆಂದುಕೊಂಡಿದ್ದೇನೆ.''

ಸಿದ್ಧಾರ್ಥನ ಈ ಮಾತಿಗೆ ತಲೆದೂಗಿ ''ಅದು ನಿನ್ನಿಚ್ಛೆ'' ಎಂದ.

''ನನ್ನ ಮಾತು ತುಂಬ ಒರಟು. ಆದರೆ ಮನದ ಅನಿಸಿಕೆಯನ್ನು ಭಗವಾನರ ಮುಂದಿರಿಸಬೇಕೆಂಬ ನನ್ನ ಬಯಕೆ ಈಡೇರಸಲು ಸ್ವಲ್ಪ ಕಾಲಾವಕಾಶ ಕೊಡುವರೇ?''

ಮೌನವಾಗಿ ತಲೆದೂಗಿದ್ದ ಗೌತಮ ಬುದ್ಧನಿಗೆ ಸಿದ್ಧಾರ್ಥ ಹೇಳಿದ: ''ಕಾರ್ಯ ಕಾರಣಗಳಿಂದ ಸಂಬಂಧ ಸ್ಥಾಪಿಸಿ ಪೂರ್ಣವೂ, ಚಿರಂತನವೂ ಆದುದೇ ಈ ಜಗತ್ತು ಎಂದು ನಿಮ್ಮಂತೆ ಸ್ಪಷ್ಟವಾಗಿ ನೇರವಾಗಿ, ಯಾರೂ ವಿರೋಧಿಸದ ರೀತಿಯಲ್ಲಿ ಸಾಧಿಸಿ ತೋರಿರುವವರು ಯಾರು ಇಲ್ಲ. ನಿಮ್ಮ ಉಪದೇಶದಿಂದ ಕಣ್ತೆರೆದು ಕಂಡಲ್ಲಿ ಈ ಜಗತ್ತು ಜ್ಞಾನವಂತನ ಪಾಲಿಗೆ ಸಕಾರಣವಾಗಿ, ಸಿದ್ಧಿ ಸಾಧನ ವಾಗಿ, ಯಾವ ಒಡಕೂ ಇಲ್ಲದಂತೆ, ದೇವರ ಆಶ್ರಯವಿಲ್ಲದೆ, ಅದೃಷ್ಟದ ನೆಟ್ಟಿಗೆಯಿಲ್ಲದೆ ಶುದ್ಧ ಸ್ಫಟಿಕದ ಮಣಿಯಂತೆ ಕಾಣುತ್ತದೆ. ಒಳಿತೋ-ಕೆಡಕೋ, ಬಾಳು ಕಣ್ಣೀರ

ಕಡಲೋ ಆನಂದದ ಸಾಗರವೋ ಅದರ ನಿರ್ಣಯ ಅನಿಶ್ಚಿತ. ಆ ನಿರ್ಣಯ ಅನಾವಶ್ಯಕ. ಜಗತ್ತಿನ ಐಕ್ಯತಾ ಸೂತ್ರ, ಘಟನೆಗಳ ಕಾರ್ಯ - ಕಾರಣ ಸಂಬಂಧ ಸೂತ್ರ, ಹಿರಿದು ಕಿರಿದು ಎಲ್ಲವೂ ಹೊಮ್ಮಿ ಬರುವ ಒಂದೇ ಪ್ರವಾಹ, ಒಂದೇ ಸೂತ್ರವನ್ನು ಅನುಸರಿಸಿ ಹುಟ್ಟಿ-ಸಾಯುತ್ತಾ ಇರುವುದರ ಸ್ಥಿತಿಯ ಚಿತ್ರಣ ನಿಮ್ಮ ಬೋಧನೆಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ. ಆದರೆ ಈ ಐಕ್ಯತೆ, ತರ್ಕ ಸೂತ್ರ ಒಂದೆಡೆ ಬಿರುಕು ಬಿಟ್ಟಿದೆ ಎನಿಸುತ್ತಿದೆ. ಆ ಸಣ್ಣ ಬಿರುಕಿನಿಂದ ಜಗದ ಐಕ್ಯದಲ್ಲಿ ಅಪರಿಚಿತವಾದ, ನೂತನವಾದ, ಸೈದ್ಧಾಂತಿಕವಾಗಿ ಖಚಿತ ಪಡಿಸ ಲಾಗದ ಪ್ರವಾಹ ಒಳಕ್ಕೆ ನುಗ್ಗುತ್ತಿದೆ. ನಿರ್ವಾಣ ಹೊಂದಿ ಮುಕ್ತಿಗೇರುವ ನಿಮ್ಮ ತತ್ವದಲ್ಲಿ ವಿಶ್ವದ ಐಕ್ಯತೆ ಒಡೆದಂತೆ ಕಾಣುತ್ತದೆ ಎಂದು ನನ್ನ ಅನಿಸಿಕೆ. ಈ ಆಕ್ಷೇಪಣೆಗೆ ಕ್ಷಮೆ ಇರಲಿ.''

ನಿಶ್ಚಲನಾಗಿ, ಶಾಂತನಾಗಿ ಕೇಳಿದ ಗೌತಮ ವಿನಯ ಕರುಣೆಗಳು ತುಂಬಿ ಸ್ಪಷ್ಟವಾದ ಸ್ವರದಲ್ಲಿ ಹೇಳಿದ: ''ಉಪದೇಶವನ್ನು ಆಲಿಸಿ ಆ ಬಗ್ಗೆ ಇಷ್ಟು ಗಹನವಾಗಿ ಚಿಂತಿಸಿರುವುದು ಪ್ರಶಂಸಾರ್ಹ. ಉಪದೇಶದಲ್ಲಿ ನೀನು ನ್ಯೂನತೆ ಎಂದು ಹೇಳುತ್ತಿರು ವುದರ ಬಗ್ಗೆಯೇ ಮತ್ತೊಮ್ಮೆ ಚಿಂತಿಸು. ಜ್ಞಾನಾರ್ಥಿಯಾದವನು ಅಭಿಪ್ರಾಯಗಳ ಗೊಂದಲ, ಮತಿಗೆಡಿಸುವ ಪದಗಳ ಸಂಘರ್ಷದಿಂದ ಜಾಗೃತ ನಾಗಿರುವುದು ಅತ್ಯಾವಶ್ಯಕವೆಂಬುದನ್ನು ನೆನಪು ಮಾಡಿ ಕೊಡುತ್ತಿದ್ದೇನೆ. ಅಭಿಪ್ರಾಯಗಳು ಎಷ್ಟೆ ಸುಂದರವೆನಿಸಲಿ, ಅಸಹ್ಯವೆನಿಸಲಿ ಜಾಣತನ ಇಲ್ಲ.

ಮೂರ್ಖವೆನಿಸಲಿ, ಅದನ್ನು ಒಪ್ಪುವುದು ಬಿಡುವುದು ವ್ಯಕ್ತಿಗೆ ಸೇರಿದ್ದು. ಆದರೆ ನೀನು ಹೇಳಿದ ಉಪದೇಶ ಆ ರೀತಿಯ ಅಭಿಪ್ರಾಯವಲ್ಲ. ಅದರ ಗುರಿಯೂ ಜ್ಞಾನದಾಹಿಯಾಗಿರುವವನಿಗೆ ಜಗತ್ತಿನ ಬಗ್ಗೆ ವಿವರಿಸುವುದಲ್ಲ. ನನ್ನ ಉಪದೇಶದ ಗುರಿ ದುಃಖದಿಂದ ನರಳುವಿಕೆಯಿಂದ ಮುಕ್ತಿ, ಗೌತಮ ಬೋಧಿಸುವುದು ಇದೇ. ಇವರ ವಿನಃ ಬೇರೇನೂ ಅಲ್ಲ.''

''ಭಗವಾನ್ ನನ್ನ ಮಾತಿಗೆ ಮುನಿಯಬೇಡಿ. ಪದಗಳಿಗಾಗಿ ಮಾತು ಬೆಳೆಸುವುದು ನನ್ನ ಉದ್ದೇಶವಲ್ಲ. ಅಭಿಪ್ರಾಯಗಳು ಮಹತ್ವವಾದುದಲ್ಲ. ಎಂಬ

ನಿಮ್ಮ ಮಾತು ಒಪ್ಪುತ್ತೇನೆ. ಆದರೆ ಮತ್ತೊಂದು ವಿಚಾರವನ್ನು ಕೇಳಲು ಇಚ್ಛಿಸುತ್ತೇನೆ. ಒಮ್ಮೆಯೂ ನಿಮ್ಮ ಬಗ್ಗೆ ನಾನು ಸಂದೇಹಿಸಿಲ್ಲ. ಸಹಸ್ರಾರು ಜ್ಞಾನಿಗಳು ಮುಟ್ಟಲು ಹೋಗುತ್ತಿರುವ ಪರಮ ಗುರಿಯನ್ನು ಮುಟ್ಟಿ ಬುದ್ಧತ್ವ ಪಡೆದಿರುವಿರಿ ಎಂಬುದನ್ನು ಶಂಕಿಸಿಲ್ಲ. ಧ್ಯಾನದಿಂದ, ಚಿಂತನೆಯಿಂದ, ತಿಳುವಳಿಕೆಯಿಂದ, ಜ್ಞಾನದಿಂದ ನಿಮ್ಮದೇ ಆದ ಮಾರ್ಗದಲ್ಲಿ ಸಾಗಿ ಅನ್ವೇಷಿಸುತ್ತ ಆ ಗುರಿಯನ್ನು ಮುಟ್ಟಿದ್ದೀರಿ. ಉಪದೇಶಗಳಿಂದ ನೀವು ಕಲಿತಿರುವುದು ಏನೂ ಇಲ್ಲ, ಯಾರೂ ಅದರಿಂದ ಕಲಿಯುವುದು ಸಾಧ್ಯವಿಲ್ಲ. ದೇವ, ಜ್ಞಾನೋದಯವಾದ ಸಮಯದಲ್ಲಿ ಆದ ನಿಮ್ಮ ಅನುಭೂತಿ ಪದಗಳಿಗೆ ನಿಲುಕಲಾರದ್ದು ಎಂಬುದನ್ನು ಬಲ್ಲೆ. ಪಾಪ ದೂರವಾದ ಧರ್ಮದ ಬದುಕನ್ನು ಬುದ್ಧನ ಬೋಧನೆ ತಿಳಿಸುತ್ತದೆ, ನಿಜ. ಆದರೆ ಕೋಟ್ಯಂತರ ಮಂದಿಯಲ್ಲಿ ಒಬ್ಬ ಬುದ್ಧ ಮೂಡಿ ಆತನಿಗಾದ ಜ್ಞಾನೋದಯದ ಕಾಲದ ಅನುಭೂತಿಯ ರಹಸ್ಯವನ್ನು ಆತನ ಯಾವ ಬೋಧನೆಯೂ ತಿಳಿಸುತ್ತಿಲ್ಲ. ನಿಮ್ಮ ಉಪದೇಶವನ್ನು ಕೇಳಿದಾಗ ನನ್ನಲ್ಲಿ ಎದುರಾದ ಪ್ರಶ್ನೆ ಇದು. ಆದ್ದರಿಂದಲೇ ನಾನು ಎಲ್ಲಾ ಬೋಧಕರನ್ನು ಸಿದ್ಧಾಂತಗಳನ್ನು ಬಿಟ್ಟು ನನ್ನದೇ ಆದ ದಾರಿಯಲ್ಲಿ ಕಡೆಯ ವರೆವಿಗೂ ಹೋಗಲು ಇಚ್ಛಿಸುತ್ತೇನೆ. ಆದರೆ ಪವಿತ್ರರೂ ಭಗವತ್ತುಲ್ಯರು ಆದ ನಿಮ್ಮೊಂದಿಗೆ ಕಳೆದ ಈ ಕಾಲವನ್ನು ಮಾತ್ರ ಸದಾ ಸ್ಮರಿಸುತ್ತೇನೆ'' ಎಂದ ಸಿದ್ಧಾರ್ಥ.

ಬುದ್ಧನ ದೃಷ್ಟಿ ಅಂತರ್ಮುಖವಾಯಿತು. ಮುಖದಲ್ಲಿ ಆಳತೆಗೆಟುಕದ ಗಾಂಭೀರ್ಯ ಮೂಡಿತು. ಸಾವಧಾನವಾಗಿ ಹೇಳಿದ: ''ನಿನ್ನ ವಿಚಾರ ಸರಣಿಯಲ್ಲಿ ನೀನು ಎಡವಿಲ್ಲ. ನಿನ್ನ ಗುರಿಯ ಸಾಧನೆಯಲ್ಲಿ ನಿನಗೆ ಯಶಸ್ಸು ದೊರೆಯಲಿ. ಬಹು ದೂರದಿಂದ ಬಂದಿರುವ ಸಮಣನೆ ಹೇಳು, ನನ್ನ ಉಪದೇಶವನ್ನು ಕೇಳಿ ನನ್ನ ಶಿಷ್ಯರಾಗಿರುವ ಬಹುಮಂದಿ ಪ್ರವ್ರಾತ್ಮರನ್ನು ನೀನು ನೋಡಿರುವೆಯಲ್ಲ? ಅವರೆಲ್ಲರೂ ನನ್ನ ಉಪದೇಶವನ್ನು ಬಿಟ್ಟು ಪ್ರಾಪಂಚಿಕ ಆಸೆಗಳಿಗೆ ಹಿಂದಿರುಗುವುದು ಉತ್ತಮವೆಂದು ಭಾವಿಸುವೆಯಾ?''

''ಈ ವಿಚಾರ ನನಗೆ ಹೊಳೆಯಲಿಲ್ಲ: ಅವರು ನಿಮ್ಮ ಉಪದೇಶವನ್ನನುಸರಿಸಿ ಗುರಿಯನ್ನು ತಲುಪಲಿ, ಅದು ಅವರ ಮಾರ್ಗ. ಅದನ್ನು ವಿಮರ್ಶಿಸುವುದು ನನಗೆ ಸೇರಿದ್ದಲ್ಲ. ನಿಮ್ಮ ಮಾರ್ಗವನ್ನು ಅನುಸರಿಸುವುದು, ಇಲ್ಲ ಬಿಡುವುದು ನಮ್ಮ

ವಿವೇಕಕ್ಕೆ ಸೇರಿದ್ದು. ಜ್ಞಾನಿಯೇ ಸಮಣರಾದವರು ಜೀವಾತ್ಮನಿಂದ ಬಿಡುಗಡೆ ಕೋರುತ್ತಾರೆ. ನಾನೂ ನಿಮ್ಮ ಶಿಷ್ಯರಲ್ಲಿ ಒಬ್ಬನಾದರೆ ಹೊರನೋಟಕ್ಕೆ ಶಾಂತಿಯಲ್ಲಿರುವಂತೆ, ಮುಕ್ತಿಪಥದಲ್ಲಿರುವಂತೆ, ನಿರ್ವಾಣ ಹೊಂದಿದಂತೆ ಕಂಡರೂ ನಿಮ್ಮಲ್ಲಿ, ನಿಮ್ಮ ಅನುಯಾಯಿಗಳಲ್ಲಿ ಪ್ರೀತಿ ವಿನಯಗಳಿದ್ದಂತೆ ತೋರಿದರೂ ನಿಜವಾಗಿ ಅಂತರಂಗದಲ್ಲಿ ಜೀವಂತ ತಾನೇ ತಾನಾಗಿ ವರ್ಧಿಸುತ್ತಾ, ಮೇಲ್ನೋಟಕ್ಕೆ ನಿಮ್ಮ ಬೋಧನೆಗೆ ಒಳಪಟ್ಟಿದ್ದಂತೆ, ನಿಮ್ಮ ಶಿಷ್ಯತ್ವ ಭಿಕ್ಷುಗಳು, ಸಂಘ ಇವುಗಳ ಪ್ರತಿಪ್ರೇಮವಾಗಿ ರೂಪಗೊಂಡು ಬಲಗೊಳ್ಳುತ್ತದೆ. ಇದರ ಫಲವಾಗಿ ನನ್ನ ಪರಿವರ್ತನೆ ಕೇವಲ ಬಾಹ್ಯರೂಪಿಗೆ ಸಂಬಂಧಿಸಿದ್ದು ಎನಿಸುತ್ತದೆ. ಅದು ಪ್ರಸ್ತುತ ''ನಾನು'' ಎಂಬುದಕ್ಕೆ ಮತ್ತೊಂದು ವೇಷ''

ಮಂದಹಾಸದಿಂದ ಬುದ್ಧದೇವ ಸಿದ್ಧಾರ್ಥನನ್ನು ನೋಟದಿಂದಲೇ ಬಹಳಷ್ಟು ಹೇಳುವವನಂತೆ ಕ್ಷಣಕಾಲ ನಿರುಕಿಸಿ ''ನೀನು ಬುದ್ಧಿವಂತ. ಬುದ್ಧಿವಂತಿಕೆಯಿಂದ ಮಾತನಾಡಬಲ್ಲೆ. ಈ ಅತಿ ಬುದ್ಧಿವಂತಿಕೆಯ ಬಗ್ಗೆ ಜಾಗೃತನಾಗಿರು'' ಎಂದು ಹೊರಟು ಹೋದ. ಆದರೆ ಮುಗುಳ್ನಕ್ಕ ಬುದ್ಧನ ಮಂದಹಾಸಮುಖ ಸಿದ್ಧಾರ್ಥನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯಿತು. ಇದುವರೆವಿಗೂ ಅಂತಹ ತೇಜಸ್ವಿಯನ್ನು ನಾನು ಕಂಡಿರಲಿಲ್ಲ. ಅಷ್ಟೇ ಸ್ವತಂತ್ರವಾಗಿ, ಸಂಯಮದಲ್ಲಿ, ಘನತೆಯಲ್ಲಿ, ಗಾಂಭೀರ್ಯದಲ್ಲಿ, ನಡೆಯಲ್ಲಿ, ನುಡಿಯಲ್ಲಿ, ನೋಟದಲ್ಲಿ, ನಿಲುವಿನಲ್ಲಿ ನಾನೂ ಅವನಂತೆ ಆಗಬೇಕು. ಯಾರು ತನ್ನನ್ನು ತಾನೆ ಗೆದ್ದಿರುವನೋ ಅವನು ಮಾತ್ರ ಹಾಗಿರಲು ಸಾಧ್ಯ. ನಾನೂ ನನ್ನನ್ನು ಗೆಲ್ಲುತ್ತೇನೆ. ನಾನು ಕಂಡವರಲ್ಲಿ ಇವನೊಬ್ಬನಿಗೆ ಮಾತ್ರ ಮಣಿಯುತ್ತೇನೆ. ಆದರೆ ಇಂತಹ ತೇಜೋವಂತನ, ಜ್ಞಾನವಂತನ ಉಪದೇಶವೇ ನನ್ನನ್ನು ಆಕರ್ಷಿಸಲಿಲ್ಲವೆಂದರೆ ಮತ್ತಾವುದು ತಾನೇ ಆಕರ್ಷಿಸೀತು.

ಬುದ್ಧ ತನ್ನನ್ನು ಸೂರೆಗೊಂಡಿದ್ದರೂ ನನಗೆ ಮಹತ್ವದ್ದನ್ನೆ ಕೊಟ್ಟಿದ್ದಾನೆ. ಆತ ನನ್ನ ಗೆಳೆಯನನ್ನು ಅಪಹರಿಸಿದ. ನನ್ನನ್ನೇ ನಂಬಿ, ನನ್ನ ನೆರಳಾಗಿದ್ದ ಗೋವಿಂದ ಈಗ ಗೌತಮನನ್ನು ನಂಬಿ ಆತನ ನೆರಳಾಗಿದ್ದಾನೆ. ಆದರೆ ಸಿದ್ಧಾರ್ಥನನ್ನು ನನಗೇ ಬಿಟ್ಟಿದ್ದಾನೆ.

೪. ಜಾಗೃತಿ

ಗೌತಮ ಬುದ್ಧನೂ, ಗೋವಿಂದನೂ ಇದ್ದ ಜೇತವನವನ್ನು ಬಿಟ್ಟು ಬಂದಾಗ ಸಿದ್ಧಾರ್ಥನಿಗೆ ತನ್ನ ಹಿಂದಿನ ಬದುಕನ್ನೂ ಬಿಟ್ಟು ಬಂದಂತೆನಿಸಿತು. ಅದೇ ಚಿಂತೆ. ದಾರಿ ನಿಧಾನವಾಗಿ ಸಾಗುತ್ತಿತ್ತು. ಕಾರಣಗಳ ಅನ್ವೇಷಣೆಯೇ ಚಿಂತನೆಯ ಗುರಿ. ಆ ರೀತಿಯ ಚಿಂತನೆಯಿಂದ ಮಥಿತವಾಗಿ ಹೊರಬಂದ ಭಾವಗಳು ಹುರಿಗೊಂಡು ಅಕ್ಷಯವಾಗಿ ಪರಿಣಮಿಸಿ ಸತ್ಯದತ್ತ ಸಾಗಿ ಪರಿಪಕ್ವಗೊಳ್ಳುತ್ತವೆ.

ಇದನ್ನೇ ಗಹನವಾಗಿ ಚಿಂತಿಸುತ್ತಾ ನಡೆದ. ಈಗ ಯುವಕರಲ್ಲಿ ಈ ಪ್ರೌಢನಾಗಿರುವುದನ್ನು ಕಂಡುಕೊಂಡ. ಪೊರೆ ಕಳೆದುಕೊಂಡ ಹಾವಿನಂತೆ ತಾನು ಏನನ್ನೋ ಕಳೆದುಕೊಂಡಿರುವೆ ಎನಿಸಿತು. ಹಳೆಯ ಹೊದಿಕೆ ಕಳೆದುಕೊಂಡು ಹೊಸದನ್ನು ಪಡೆದಿರುವೆನೆಂಬ ಅನಿಸಿಕೆ. ಬಾಲ್ಯದಿಂದಲೂ ಇದ್ದ ದಾರ್ಶನಿಕರನ್ನೂ, ಜ್ಞಾನಿಗಳನ್ನು ಕಂಡು ಅವರ ಉಪದೇಶವನ್ನು ಕೇಳುವ ತೃಷ್ಣೆ, ಗುರುವನ್ನು ಅರಸುವ ಚಪಲ ಈಗ ಅವನಲ್ಲಿಲ್ಲವೆನಿಸಿತು. ಪುನೀತನೂ, ಪಾವನ ಜನ್ಮನೂ ಬುದ್ಧತ್ವವನ್ನು ಮೆಟ್ಟಿನಿಂತ ಭಗವತ್‌ಸ್ವರೂಪನೂ ಆಗಿರುವ ದಾರ್ಶನಿಕ ಬುದ್ಧದೇವನೇ ಅವನ ಪಾಲಿನ ಗುರುವಾಗಿ ಸಂಧಿಸಿದ್ದರೂ, ಆ ಅರಿತಗುರು ಕೂಡ ಅವನನ್ನು ತನ್ನ ದಾರಿಗೆ ಸೆಳೆದುಕೊಳ್ಳದಾದ. ಆ ಗುರುವನ್ನು ಬಿಟ್ಟು ಮುಂದೆ ಹೆಜ್ಜೆ ಇರಿಸಿದ್ದ. ಆತನ ಬೋಧನೆಯನ್ನು ಅಂಗೀಕರಿಸಲಾರದೆ ಬಿಡಬೇಕಾಯಿತು.

ದಾರಿ ಸವೆಸುತ್ತ ಚಿಂತಿಸುತ್ತಿದ್ದ ಸಿದ್ಧಾರ್ಥ: ದಾರ್ಶನಿಕ ಜ್ಞಾನಿಗಳ, ಗುರುಗಳ ಉಪದೇಶದಿಂದ ಕಲಿಯಬೇಕಾಗಿರುವುದೇನು? ಅವರು ಬೋಧಿಸಲಾರದುದೇನು? ಅಂತರತಮನ ಜ್ಞಾನ, ಅದರ ಗುಣ, ಸ್ವರೂಪ ಸ್ವಭಾವ ತಿಳಿಯುವ ಆಕಾಂಕ್ಷೆ. ಅದನ್ನು ಅರಿತು ಅದನ್ನೇ ಜಯಿಸಬೇಕೆಂಬುದು ಗುರಿ. ಆದರೆ ಅದು ಅಜೇಯವಾಗಿದೆ. ಅದರಿಂದ ದೂರ ಸಾಗಿ ಹೋಗಿ, ಮರೆಯಾಗಿ ಇರುವುದನ್ನು ಮಾತ್ರ ಕಲಿತಿರುವೆ. ಜಗತ್ತಿನ ವಸ್ತುಗಳಲ್ಲಿ ಅಂತರಂಗದಷ್ಟು ನನ್ನ ಚಿಂತನೆಗೀಡಾಗಿರುವ ವಸ್ತು ಬೇರಾವುದೂ ಇಲ್ಲ. ಇದೇ ಸಮಸ್ಯೆಯಾಗಿ, ಬದುಕು, ನಾನು ಒಂದು ಎಂಬ ಅನಿಸಿಕೆ. ಅದರಲ್ಲಿ ಭಿನ್ನತೆಯ ಭಾವ, ಬೇರೆಯವರಿಗಿಂತ ನಾನೇ ಬೇರೆಯೆನಿಸಿ, ನಾನು ಸಿದ್ಧಾರ್ಥ ಎಂಬ

ಭಾವ ತಂದು, ಸಿದ್ಧಾರ್ಥನ ಬಗ್ಗೆ ನನ್ನ ಬಗ್ಗೆ ಈ ಜಗತ್ತಿನಲ್ಲಿ ಅರಿತಿರುವುದೇ ತುಂಬಾ ಕಡಿಮೆ.

ಸಾಗುತ್ತಿದ್ದ ಸಿದ್ಧಾರ್ಥ ಈ ಯೋಚನೆ ಕೊನರಿ ಮತ್ತೊಂದಕ್ಕೆ ಎಡೆಮಾಡಿ ಕೊಟ್ಟಾಗ ಥಟ್ಟನೆ ನಿಂತ. ಹೌದು, ನಾನು ನನ್ನ ಬಗ್ಗೆಯೇ ತಿಳಿಯದೆ ನನಗೇ ಅಪರಿಚಿತನಾಗಿರುವುದೇಕೆ ? ಅದು ಎಂದರೆ ನನಗೆ ಹೆದರಿಕೆ, ಸಿದ್ಧಾರ್ಥನಿಂದ ನಾನು ದೂರ ಓಡುತ್ತಿದ್ದೇನೆ. ನನ್ನನ್ನು ಕೊಂಡು ಬ್ರಹ್ಮನನ್ನು ಆತ್ಮನನ್ನು ಅರಸುತ್ತಾ ಸಾಗುತ್ತಿದ್ದೇನೆ. ನನ್ನಿಂದ ನಾನು ದೂರ ಹಾರುತ್ತಿದ್ದೇನೆ. ಇದರಿಂದ ಅಜ್ಞಾತವಾಗಿರುವ ಅಂತರಂಗ, ಎಲ್ಲದರ ಗರ್ಭದಲ್ಲಿ ಅಡಗಿರುವ ಅಂತರಾತ್ಮ, ಜೀವ, ದೈವ, ಪರಿಪೂರ್ಣ ವಾದುದನ್ನು ಅರಿಯುವ ಬಯಕೆ - ಆದರೆ ದಾರಿಯಲ್ಲೇ ಸೋತೆ.

ಸುತ್ತಲೂ ದಿಟ್ಟಿಸಿ ನೋಡಿದ ಅವನ ಮುಖದಲ್ಲಿ ಮುಗುಳುನಗೆ ಕಾಣಿಸಿತು. ಅವನನ್ನೇ ಆವರಿಸಿದ್ದ ಕನಸಿನಿಂದ ಎಚ್ಚೆತ್ತವನಂತೆ ತಾನೇನು ಮಾಡಬೇಕೆಂಬುದು ಅರಿತ ಮನುಷ್ಯನಂತೆ ಬೇಗ ಬೇಗ ನಡೆದ. ದೀರ್ಘ ಉಸಿರೆಳೆದು ''ಹೌದು, ಇನ್ನು ಸಿದ್ಧಾರ್ಥನಿಂದ ತಪ್ಪಿಸಿಕೊಳ್ಳಲು ಯತ್ನಿಸುವುದಿಲ್ಲ. ಆತ್ಮನ ಬಗ್ಗೆಯಾಗಲಿ, ಜಗತ್ತಿನ ದುಃಖ ನೋವುಗಳ ಬಗ್ಗೆಯಾಗಲಿ ಇನ್ನು ಯೋಚಿಸುವುದಿಲ್ಲ. ನನ್ನನ್ನು ಛಿದ್ರ ಗೊಳಿಸಿಕೊಂಡು ನನ್ನತನವನ್ನು ನಾಶಗೊಳಿಸಿ, ಅದರ ಅವಶೇಷದಲ್ಲಿ ಆತ್ಮನ ರಹಸ್ಯ ಅರಿಯುವುದು ನನಗೆ ಬೇಕಿಲ್ಲ. ನನಗೆ ಯಾವ ವೇದ, ಯೋಗ ಅಥವಾ ತಪಸ್ಸು, ಮತ್ತಾರ ಬೋಧನೆ ಬೇಡ. ಸಿದ್ಧಾರ್ಥನ ರಹಸ್ಯವನ್ನು ನನ್ನಲ್ಲಿಯೇ ನಾನು ನನ್ನಿಂದಲೇ ಅರಿಯುತ್ತೇನೆ.''

ತನ್ನ ಸುತ್ತಲಿನ ಪ್ರಪಂಚವನ್ನು ಮೊದಲಬಾರಿಗೆ ಕಾಣುತ್ತಿರುವಂತೆ ನೋಡಿದ. ಸುಂದರವಾಗಿ, ಅಪರಿಚಿತವಾಗಿ, ರಹಸ್ಯಗರ್ಭಿತವಾಗಿ ಕಂಡಿತು ಜಗತ್ತು. ನೀಲಿ, ಹಳದಿ, ಹಸಿರು, ಆಕಾಶ, ನದಿ, ವನ, ಬೆಟ್ಟ ಗುಡ್ಡಗಳು ಎಲ್ಲಾ ಸುಂದರವಾಗಿ ಗಹನವಾಗಿ ಕಂಡು ಆನಂದವನ್ನುಂಟು ಮಾಡುತ್ತಿತ್ತು. ಅದರ ನಡುವೆ ಜಾಗೃತಿಗೊಂಡ ಸಿದ್ಧಾರ್ಥ ತನ್ನನ್ನು ಅರಿವ ಮಾರ್ಗದಲ್ಲಿದ್ದಾನೆ. ಇವೆಲ್ಲವೂ ಅವನ ಕಣ್ಣಮುಂದೆ ಹಾದು ಹೋದವು. ಅವನಿಗೀಗ ಅದು ಮಾರನ ಮಾಯಾ ಜಾಲವಾಗಲಿ,

ಮಾಯೆಯ ಮುಸುಕಾಗಲಿ ಆಗಿರಲಿಲ್ಲ. ಅವು ಹಿಂದಿನ ಪ್ರಪಂಚದ ವೈವಿಧ್ಯತೆಯಿಂದ ಕೂಡಿ, ಆಕಸ್ಮಾತ್ತಾಗಿ ಕಣ್ಣಿಗೆ ಬೀಳುವ ಅರ್ಥರಹಿತ ದೃಶ್ಯಗಳಾಗಿರಲಿಲ್ಲ. ವೈವಿಧ್ಯತೆಯನ್ನು ಖಂಡಿಸಿ ಐಕ್ಯತೆಯನ್ನು ಅರಸುವ ಅಪಾರ ವಿದ್ಯಾಪಾರಂಗತರಿಂದ ತಿರಸ್ಕೃತವಾದ ರಹಸ್ಯಮಯ ದೃಶ್ಯಗಳಂತೆ ಈಗವನಿಗೆ ಭಾಸವಾಗಲಿಲ್ಲ. ಸಿದ್ಧಾರ್ಥನಿಗೀಗ ನದಿ ನದಿಯೇ ಆಗಿತ್ತು. ಅವನೊಳಗೆ ರಹಸ್ಯವಾಗಿ ಪರಮಾತ್ಮನ ಅಂಶವು ಆತ್ಮರೂಪದಲ್ಲಿರುವುದಾದರೆ ಆ ಸುಜ್ಞಾನ ಕಲೆಯ ಪ್ರತೀಕವಾಗಿ ಆಕಾಶದಲ್ಲಿ, ನದಿಯಲ್ಲಿ ಫಲಪುಷ್ಪಗಳಲ್ಲಿ, ಕಾಡುಗುಡ್ಡಗಳಲ್ಲಿಯೂ ಅದೇ ಆತ್ಮನು ಅಭಿನ್ನನಾಗಿ ಆವಿರ್ಭವಿಸಿ ಪೋಷಣೆಗೊಳ್ಳುತ್ತಿರಬೇಕು. ಸತ್ಯ ಮತ್ತು ಅರ್ಥ ಎಲ್ಲೋ ವಸ್ತುವಿನ ಹಿಂದೆ ಗೌಪ್ಯವಾಗಿರದೆ ಅದು ಅವುಗಳಲ್ಲಿಯೇ ಅಂತರ್ನಿಹಿತವಾಗಿ ಪ್ರಕಾಶಿಸುತ್ತಿರಲೇಬೇಕು.

ವೇಗವಾಗಿ ಹೋಗುತ್ತಿದ್ದ ಸಿದ್ಧಾರ್ಥನಿಗೆ 'ನಾನೆಷ್ಟು ಕಿವುಡನಾಗಿ, ಮೂರ್ಖನಾಗಿದ್ದೆ !' ಎನಿಸಿತು. ಬಯಸಿ ಓದುವವನು ಓದುವ ಪದಗಳನ್ನು ಅರ್ಥ ಕೊಡುವ ಚಿಹ್ನೆಗಳನ್ನು ಎಂದೂ ಉಪೇಕ್ಷಿಸದೆ, ಅವೆಲ್ಲ ಭ್ರಮೆ, ಅನುಪಯುಕ್ತವಾದುವುಗಳು ಎಂದು ತಿಳಿಯದೆ ಪದ ಪದವನ್ನೂ ಅಕ್ಕರೆಯಿಂದ ಓದಿ ತಿಳಿಯುತ್ತಾನೆ. ಈ ಪ್ರಪಂಚ ಎಂಬ ಪುಸ್ತಕವನ್ನು ಓದಲು ಬಯಸಿ ತನ್ನ ಸ್ವಭಾವವನ್ನು ತಿಳಿಯಲಿಚ್ಛಿಸಿ ಪದಗಳನ್ನು, ಚಿಹ್ನೆಗಳನ್ನು ಉಪೇಕ್ಷಿಸಿದೆ. ಈ ಪ್ರಪಂಚವನ್ನು ಮಾಯೆ ಎಂದು ಭಾವಿಸಿದೆ. ಕಾರಣಗಳು ಅನಿರೀಕ್ಷಿತ ದೈವ ಸೃಷ್ಟಿ ಎಂದು ತಿಳಿದೆ. ಈಗ ಜಾಗೃತಿಗೊಂಡು ಮರುಹುಟ್ಟು ಪಡೆದೆ.

ಈ ಯೋಚನೆ ಅವನ ಮನಸ್ಸಿನಲ್ಲಿ ಸುಳಿದಾಗ ಹಾವು ಕಂಡವನಂತೆ ಒಡನೆಯೇ ಸಿದ್ಧಾರ್ಥ ಸ್ಥಂಭಿತನಾಗಿ ನಿಂತ.

ಜಾಗೃತಿಗೊಂಡಿರುವವನು ಅಥವಾ ಮರುಹುಟ್ಟು ಪಡೆದಿರುವವನು ತನ್ನ ಜೀವನವನ್ನು ಪೂರ್ಣವಾಗಿ ಹೊಸದಾಗಿ ಪ್ರಾರಂಭಿಸಬೇಕು ಎಂಬುದು ಅವನಿಗೆ ಸ್ಪಷ್ಟವಾಯಿತು. ಅಂದು ಬೆಳಿಗ್ಗೆ ಗೌತಮನಿದ್ದ ಜೇತವನವನ್ನು ಬಿಟ್ಟು ಬಂದಾಗಲೇ ಜಾಗೃತಿ ಹೊಂದಿ ತನ್ನ ದಾರಿಯನ್ನು ಕಂಡಿದ್ದ ಅವನಿಗೆ ಹಲವು ವರ್ಷಗಳ ತಪಸ್ಸು ಸಾಧನೆಗಳ ನಂತರ ತಂದೆಯಿದ್ದ ಮನೆಗೆ ಹೋಗುವುದು ಸ್ವಾಭಾವಿಕವಾಗಿತ್ತು. ಇನ್ನು ನಾನು ಸಂನ್ಯಾಸಿಯಲ್ಲ, ದಾರ್ಶನಿಕನಲ್ಲ, ಬ್ರಾಹ್ಮಣಪುತ್ರನಲ್ಲ, ಮೊದಲಿನ ಯಾವುದೂ

ಅಲ್ಲ ಎನಿಸಿ ಹಾವು ಕಂಡಂತೆ ಭಾಸವಾಗಿ ಸ್ಥಂಭಿತನಾದ. ಆ ಕ್ಷಣದಲ್ಲಿ ಅನಿಸಿತು, 'ತಂದೆಯಲ್ಲಿಗೆ ಹೋಗಿ ಏನು ಮಾಡಲಿ? ನನ್ನಲ್ಲಿ ಈ ಎಲ್ಲವೂ ಕೊನೆಗೊಂಡಿದೆ.'

ಹಾಗೆ ನಿಂತಿದ್ದ ಸಿದ್ಧಾರ್ಥನ ಮೈ ಛಳಿಯಿಂದ ಕೊರೆಯಿತು. ನಾನು ಒಂಟಿ ಎಂದು ಮನವರಿಕೆಯಾದಾಗ ನಿರಾಶ್ರಿತ ಹಕ್ಕಿಯಂತೆ ನಡುಗಿದೆ. ಮನೆಯಿಂದ ಅನೇಕ ವರ್ಷಗಳು ದೂರವಿದ್ದಾಗಲೂ ಈ ರೀತಿಯ ಅನುಭವವಾಗಿರಲಿಲ್ಲ. ಈಗ ಅನಿಸುತ್ತಿದೆ. ಧ್ಯಾನದಲ್ಲಿ ಮುಳುಗಿದ್ದಾಗಲೂ ತಾನು ಗೌರವಾನ್ವಿತ ಬ್ರಾಹ್ಮಣಪುತ್ರ, ವೇದಾಧ್ಯಯನ ಸಂಪನ್ನ ಸ್ವಧರ್ಮ ನಿರತ ಸುಜ್ಞಾನಿ ಎಂಬ ಭಾವನೆ ಇತ್ತು. ಆದರೆ ಈಗಿನ ಸಿದ್ಧಾರ್ಥ ಎಚ್ಚೆತ್ತವನು. ಇದನ್ನು ವಿಸ್ಮರಿಸಿದರೆ ಏನು ಅಲ್ಲ. ಮತ್ತಾರು ಅವನಂತೆ ಎಲ್ಲದರಿಂದ ಕಳಚಿಕೊಂಡು ಏಕಾಂಗಿಯಾಗಿರಲಿಲ್ಲ. ಯಾರೂ ಇಲ್ಲ ಎನಿಸಿದಾಗ ಮೈ ನಡುಗಿತು. ಅವನೀಗ ಶ್ರೀಮಂತ, ಸತ್ಕುಲಪ್ರಸೂತ ಎನ್ನುವಂತಿರಲಿಲ್ಲ. ಶಿಲ್ಪಿಯಾಗಿ, ಕಲಾವಿದನಾಗಿ, ಜೀವನದಲ್ಲಿ ಪಾಲ್ಗೊಳ್ಳುವವನಾಗಿರಲಿಲ್ಲ; ಬ್ರಾಹ್ಮಣರೊಂದಿಗಿರಲು ಬ್ರಾಹ್ಮಣನಾಗಿರಲಿಲ್ಲ. ಸಮಣರೊಂದಿಗಿರಲು ಸಂನ್ಯಾಸಿಯಾಗಿರಲಿಲ್ಲ. ಎಲ್ಲವನ್ನೂ ತ್ಯಜಿಸಿ ಕಾಡಿನಲ್ಲಿರುವ ಸಂನ್ಯಾಸಿ ಕೂಡ ಏಕಾಂಗಿಯಾಗಿರದೆ ಸಹ ಸಂನ್ಯಾಸಿಗಳೊಂದಿಗಿರುತ್ತಾನೆ. ಗೋವಿಂದನು ಸಹ ತಾನು ನಂಬಿದ ದಾರಿಯಲ್ಲಿ ಅವನಂತೆ ಬಟ್ಟೆ ತೊಟ್ಟು, ಅವನ ಭಾಷೆ ಆಡುವ, ಅವನೊಂದಿಗೇ ಅಡಿಯಿರಿಸುವ ಸಾವಿರಾರು ಸಂನ್ಯಾಸಿಗಳೊಂದಿಗಿದ್ದಾನೆ. ಆದರೆ ಒಂಟಿಯಾದ ಸಿದ್ಧಾರ್ಥ ಯಾರಿಗೆ ಸೇರಿದವ ? ಯಾರ ಬದುಕನ್ನು ಹಂಚಿಕೊಳ್ಳಬೇಕು ? ಯಾರ ಭಾಷೆ ಮಾತನಾಡಬೇಕು ?

ಆ ಕ್ಷಣದಲ್ಲಿ ಸುತ್ತಿನ ಪ್ರಪಂಚ ಕರಗಿ ತಾನು ಆಕಾಶದಲ್ಲಿರುವ ಒಂದು ನಕ್ಷತ್ರದಂತೆನಿಸಿ ಹೆದರಿ ನಡುಗಿದರೂ, ಒಂಟಿ ಎಂಬ ಕೊರತೆ ಪ್ರಖರವಾಗಿದ್ದರು ಅವನಲ್ಲಿ ತನ್ನತನ ಎಂದಿಗಿಂತಲೂ ಈಗ ಪ್ರಬಲವಾಗಿ ಬೇರೂರಿತ್ತು, ಅದು ಅವನ ಜೀವನ ಜಾಗೃತಿಯ ಅಂತಿಮ ಕಂಪನ, ಮರುಜನ್ಮದ ಚಳುಕು. ಮನೆ, ತಂದೆ, ತಾಯಿ, ಗೋವಿಂದ, ಗೌತಮ ಹಿಂದಿನ ಎಲ್ಲದರಿಂದ ಇಲ್ಲವಾಗಿ ತಕ್ಷಣ ಬೇಗ ಬೇಗ ಹೆಜ್ಜೆ ಇಟ್ಟು ಮುಂದೆ ನಡೆದ.

●

ಭಾಗ - ಎರಡು

೧. ಕಮಲ

ಪ್ರಜ್ಞಾಪೂರ್ಣನಾಗಿದ್ದ ಸಿದ್ಧಾರ್ಥ ಸುಂದರವಾದ ಪ್ರಪಂಚದಲ್ಲಿ ಅಡಿಗಡಿಗೂ ಹೊಸದನ್ನು ಕಲಿಯುತ್ತಿದ್ದ. ಗರಿಗಳ ಮೇಲೆ ಪ್ರತಿಫಲಿಸುತ್ತಾ, ಮಲೆಗಳ ಹಿಂಬದಿಯಲ್ಲಿ ಮೂಡಿ ಬರುತ್ತಿದ್ದ ಸೂರ್ಯೋದಯವನ್ನು, ತಾಳೆ ಮರಗಳಿಂದ ನಿಬಿಡವಾದ ತೀರದ ಅಂಚಿನಲ್ಲಿ ಮುಳುಗಿ ರಕ್ತರಂಜಿತವಾಗಿ ಮರೆಯಾಗುವ ಸೂರ್ಯಾಸ್ತಮವನ್ನು ಕಂಡ. ರಾತ್ರಿ ಆಕಾಶದಲ್ಲಿ ಮಿನುಗುವ ನಕ್ಷತ್ರಗಳ ಮಧ್ಯೆ ದೋಣಿಯಂತೆ ತೇಲುವ ಬಿದಿಗೆ ಚಂದ್ರನನ್ನು ಕಂಡ. ಮರ, ಪ್ರಾಣಿ, ಕೋಡುಗಲ್ಲು, ಬಂಡೆ, ತೊರೆ, ಹೊಳೆ, ಸೂರ್ಯನ ಕಿರಣಗಳಿಂದ ನಾನಾ ಬಣ್ಣಗಳನ್ನು ಪ್ರತಿಫಲಿಸುವ ಹಿಮಮಣಿ, ಪುಷ್ಪ, ದುಂಬಿಯ ಝೇಂಕಾರ, ಹಕ್ಕಿಗಳ ಇಂಚರ, ಬತ್ತದ ಗದ್ದೆಯ ಮೇಲೆ ವೈಯಾರದಿಂದ ಬಳುಕುತ್ತಾ ಅಡಿ ಇರಿಸಿ ಪೈರನ್ನು ಲಘುವಾಗಿ ಮೆಟ್ಟಿಬರುವ ಗಾಳಿ, ದೂರದಲ್ಲಿ ನೀಲಿಯಾಗಿ ಕಾಣಿಸುವ ಗುಡ್ಡ, ಬೆಳ್ಳಿ ಅಂಚಿನಿಂದ ಕಾಂತಿಪೂರ್ಣವಾಗಿ ಕಾಣುವ ಮೋಡ, ಚೇತೋಹಾರಿ ಕಾಮನಬಿಲ್ಲು. ಅಬ್ಬ! ಒಂದೇ ಎರಡೇ, ಅದೆಷ್ಟು ಬಗೆಯ ಸೌಂದರ್ಯ ತುಂಬಿದೆ. ಕಣ್ಣಿಗೆ ಆಹ್ಲಾದಕರ ಇದಾದರೆ, ಕಿವಿಗೆ ಇಂಪಾದ ದುಂಬಿಯ ಝೇಂಕಾರ, ಹಕ್ಕಿಯ ಇಂಚರ, ಗಾಳಿಯ ಸುಯ್‌ನಾದ, ನೀರಿನ ಮಂಜುಳ ಜುಳ ಜುಳ ಗಾನ, ಮರಗಳ ಮರ್ಮರ ಧ್ವನಿ, ವೈವಿಧ್ಯಮಯವಾದ ಈ ಎಲ್ಲವು ಮೊದಲಿನಿಂದಲೂ ಇವೆ; ಸಿದ್ಧಾರ್ಥನ ಪಾಲಿಗೆ ಆಗ ಇವೆಲ್ಲಾ ಅರ್ಥಶೂನ್ಯ. ಇದೆಲ್ಲಾ ಮಾಯೆಯ ಬಲೆ. ವಾಸ್ತವವೇ ಬೇರೆ. ಅದೇ ಸತ್ಯ. ಸತ್ಯವಾದುದನ್ನು ಸ್ಥಿರವಾದುದನ್ನು ಬಯಸಿ ಅಸ್ಥಿರ, ಅಸತ್ಯವೆನಿಸಿದ್ದನ್ನು ತುಚ್ಛವೆಂದು ಪರಿಗಣಿಸಿದ್ದ. ಈಗ ಅವನ ನೋಟ ಬದಲಾಗಿತ್ತು. ಪರದ ಸತ್ಯವನ್ನು ಅರಿಯಲು ನೆಟ್ಟಿದ್ದ ನೋಟ ಈಗ ಇಹದತ್ತ ಹೊರಳಿ ಅದುವರೆವಿಗು ಕಣ್ಣಿಗೆ ಕಾಣುತ್ತಿದ್ದುದನ್ನು ಕಾಣದೆ, ಕಾಣದುದನ್ನು ಕಾಣಲು ಸಿದ್ಧತೆ ನಡೆಸುತ್ತಿದ್ದ. ಆದ್ದರಿಂದಲೇ ಕಾಣುವುದನ್ನು ಕಂಡಿರಲಿಲ್ಲ. ಕಾಣುವ ಪ್ರಪಂಚದಲ್ಲಿ ಸ್ಥಳಕ್ಕಾಗಿ ಅವನು ಈಗ ಪ್ರಯತ್ನಿಸಿ; ಅವುಗಳೊಂದಿಗೆ ಸಂಬಂಧ ಸ್ಥಾಪಿಸಿಕೊಳ್ಳಲು ಪ್ರಯತ್ನಿಸಿದ. ಅವನಿಗೆ ಈಗ ಪರದ ಸತ್ಯ ಬೇಕಿರಲಿಲ್ಲ. ಅದು ಅನಿಸಿಕೆ. ಅವನ

ಗುರಿ ಬೇರೆಲ್ಲಿಯೂ ಇರಲಿಲ್ಲ. ಇಹವೇ ಅವನ ಗುರಿ. ವೈಶಿಷ್ಟ್ಯದ ಅನ್ವೇಷಣೆ ಇಲ್ಲದೆ ಈ ಜಗತ್ತಿನತ್ತ ಮಗುವಿನ ಮನದೊಂದಿಗೆ ನೋಡಿದರೆ ಅದೆಷ್ಟು ಸರಳ - ಸುಂದರವೆನಿಸುತ್ತದೆ. ಈ ವಾಸ್ತವ ಪ್ರಪಂಚದಲ್ಲಿ ಅಪನಂಬಿಕೆಯೇ ಇಲ್ಲದೆ ಮಗುವಿನಂತೆ ಎಲ್ಲವನ್ನೂ ಕಾಣುತ್ತಾ ವರ್ತಮಾನಕ್ಕೆ ಬಂಧಿತನಾಗಿ, ಅಪನಂಬಿಕೆ ತಿಳಿಯದೆ, ಸರಳವಾಗಿ ನಡೆದರೆ ಜಗತ್ತು ಎಷ್ಟು ರಮ್ಯ! ಎಷ್ಟು ಆನಂದ ಪ್ರದಾಯಿನಿ! ಒಂದೆಡೆ ಸೂರ್ಯನ ತಾಪ, ಮತ್ತೊಂದೆಡೆ ಹೊಂಗೆಯ ತಂಪು. ಫಲಭರಿತ ಮರ ಗಿಡಗಳು, ಸಂಪದ್ಭರಿತವಾದ ಮುತ್ತು ರತ್ನಗಳನ್ನು ಗರ್ಭದಲ್ಲಿ ಅಡಗಿಸಿಕೊಂಡಿರುವ ಸಮುದ್ರದ ಮೇಲೆ ಹಾಯುವ ನಾವೆಯಲ್ಲಿರುವಂತೆ ಸಂತೋಷದಿಂದ ಘಂಟೆಗಳು ಕ್ಷಣಗಳಾಗಿ ಹಗಲು ರಾತ್ರಿಗಳಾದವು. ದಟ್ಟವಾದ ಕಾಡಿನಲ್ಲಿ ಎತ್ತರವಾದ ಮರಗಳಲ್ಲಿ ನಿರಂಕುಶವಾಗಿ ಕೊಂಬೆಯಿಂದ ಕೊಂಬೆಗೆ ಜಿಗಿದು ಕಿರುಚಾಡುವ ಕೋತಿಗಳನ್ನು ಕಂಡ. ಟಗರು ಕುರಿಗಳನ್ನು ಸರಿಸಿ ರಮಿಸುವುದನ್ನು ನೋಡಿದ. ಸರೋವರದಲ್ಲಿ ಹಸಿವಿನಿಂದ ದೊಡ್ಡಮೀನು ಸಣ್ಣ ಮೀನುಗಳನ್ನು ತಿನ್ನುವುದನ್ನು, ಮಿರಮಿರನೆ ಮಿರುಗುವ ಎಳೆ ಮೀನುಗಳ ಗುಂಪು ತಪ್ಪಿಸಿಕೊಂಡು ಹೋಗುವುದನ್ನು ಗಮನಿಸಿದ. ನೀರಿನ ನೆರೆಗಳಲ್ಲಿ ಹಿಂಬಾಲಿಸುವ ಈ ಮೀನುಗಳ ತೃಷ್ಣೆ, ಹೋರಾಟ ಅವನ ಬುದ್ಧಿಗೆ ತಾಗಿತು.

ದಾರಿಯಲ್ಲಿ ಬರುವಾಗ ಜೇತವನದಲ್ಲಿ ಕೇಳಿದ ಉಪದೇಶ, ಗೋವಿಂದನ ಅಗಲಿಕೆ, ಬುದ್ಧನೊಂದಿಗೆ ನಡೆಸಿದ ಮಾತುಗಳನ್ನು ನೆನಪು ಮಾಡಿಕೊಂಡ. ಜ್ಞಾನೋದಯದ ಸಂದರ್ಭದಲ್ಲಿ ಆದ ಅನುಭವ ಬೋಧಿಸಿ ತಿಳಿಸಲು ಅಸಾಧ್ಯವೆಂದು ಹೇಳಿದ್ದು ಎಲ್ಲಾ ನೆನಪಾದವು. 'ಸಮ್ಯಕ್ ಸಂಬುದ್ಧನೊಂದಿಗೆ ಮಾತನಾಡುತ್ತಾ ತನಗೇ ಅರಿವಿಲ್ಲದ ಎಂತಹ ಮಾತುಗಳನ್ನಾಡಿದೆ ?' ಎಂದು ತನ್ನಲ್ಲಿಯೇ ನಾಚಿಕೊಂಡ. ಬುದ್ಧನ ಅರಿವು ಬೋಧಿಸಲು ಸಾಧ್ಯವಿಲ್ಲ ಎಂದು ಆತನಿಗೇ ಹೇಳಿದ್ದ! ಜ್ಞಾನೋದಯದ ಕ್ಷಣದ ಅನುಭೂತಿ ಉಪದೇಶದ ಹಿಡಿಗೆ ಸಿಕ್ಕುವುದಲ್ಲ ಎಂದು, ಅದನ್ನೇ ತನ್ನ ಅನುಭೂತಿಯನ್ನಾಗಿಸಿಕೊಳ್ಳಲು ಹೊರಟಿದ್ದ. ನಾನು ಎಂಬುದೇ ಆತ್ಮ. ಅದು ಅವ್ಯಕ್ತಶಕ್ತಿಯ ಅಂಶ. ಅದನ್ನು ಭಾವನೆಯ ಬಲೆಯಲ್ಲಿ ಹಿಡಿಯಲು ಬಯಸಿದ್ದರಿಂದ ಆತ್ಮನನ್ನು ಕಾಣಲು ಸಾಧ್ಯವಾಗಿರಲಿಲ್ಲ. ನಾನು ಎನ್ನುವುದು ಶರೀರವಲ್ಲ; ಭಾವನೆಯಲ್ಲ; ಜ್ಞಾನೇಂದ್ರಿಯಗಳ

ಆಟವಲ್ಲ ಅಥವಾ ಇರುವ ಭಾವನೆಗಳಿಂದ ಹೊಸ ಭಾವನೆಗಳನ್ನು ಹೊಸೆಯುವುದಲ್ಲ. ಈ ಗುರಿ ಇರದ ಭಾವನೆಗಳು ನಾನು ಎಂಬ ಪ್ರಜ್ಞೆಯನ್ನು ಅಳಿಸಿ ಭಾವನೆಗಳನ್ನು, ವಿದ್ವತ್ತನ್ನು ತುಂಬುತ್ತದೆ. ಈ ಭಾವನೆ ಮತ್ತು ಪ್ರಜ್ಞೆಗಳಲ್ಲಿ ಅತಿ ಮುಖ್ಯವಾದ ಅರ್ಥ ಅಡಗಿದೆ. ಅವುಗಳನ್ನು ಕಡೆಗಣಿಸದೆ ಕಿವಿಗೊಟ್ಟು ಕೇಳಬೇಕು. ಅಂತರ್ವಾಣಿಯ ಆಜ್ಞೆಯನ್ನು ತಡಮಾಡದೆ ಸತತವಾಗಿ ಅನುಸರಿಸಬೇಕು. ಗೌತಮಬುದ್ಧನು ತನಗೆ ಜ್ಞಾನೋದಯವಾದಾಗ ಮರದ ಕೆಳಗೆ ಏಕೆ ಕುಳಿತಿದ್ದ ? ಅವನ ಅಂತರ್ವಾಣಿ ಬೋಧಿವೃಕ್ಷದ ಕೆಳಗೆ ಶಾಂತಿ ಪಡೆಯಲು ಆಜ್ಞೆಮಾಡಿತ್ತು. ಬಲಿಕೊಡುವುದನ್ನು, ಹವಿಸ್ಸಿನ ಅರ್ಪಣೆಯನ್ನು ಸ್ನಾನ-ಸಂಧ್ಯಾದಿಗಳನ್ನು, ಊಟ- ಉಪಚಾರಗಳನ್ನು, ನಿದ್ರೆ - ಕನಸುಗಳನ್ನು ಗಣಿಸದೆ ಅಂತರ್ವಾಣಿಯ ಆಜ್ಞೆಯಂತೆ ಆತ ನಡೆದ. ಮತ್ತಾವುದಕ್ಕೂ ಮನ್ನಣೆ ಕೊಡದೆ ಅಂತರ್ವಾಣಿಗೆ ಓಗೊಡುವುದು ಅಗತ್ಯ. ಅದೇ ಅತ್ಯುತ್ತಮ ಮಾರ್ಗ, ಮತ್ತಾವುದರ ಅಗತ್ಯತೆಯೂ ಇಲ್ಲ.

ರಾತ್ರಿ ಅಂಬಿಗನ ಗುಡಿಸಲಿನಲ್ಲಿ ಮಲಗಿದ್ದಾಗ ಸಿದ್ಧಾರ್ಥನಿಗೆ ಒಂದು ಕನಸು ಬಿತ್ತು. ಸನ್ಯಾಸಿ ಗೋವಿಂದ ಹಳದಿ ನಿಲುವಂಗಿ ತೊಟ್ಟು ಅವನ ಮುಂದೆ ನಿಂತು ದುಃಖದಿಂದ 'ನನ್ನಿಂದ ಏಕೆ ಅಗಲಿದೆ?' ಎಂದು ಕೇಳಿದ. ಎದ್ದು ಅವನನ್ನು ಆಲಂಗಿಸಿ ಎದೆಗವಚಿ ಮುತ್ತಿಟ್ಟ. ಗೋವಿಂದ ಅಪ್ಪುಗೆಯಲ್ಲಿ ಕರಗಿದ. ಅವನ ತೋಳ್ತೆಕ್ಕೆಯಲ್ಲಿ ಹೆಣ್ಣು ! ನಿಲುವಂಗಿಯಿಂದ ತುಂಬಿದ ಮೊಲೆಗಳು ಇಣುಕಿದವು. ಅಲ್ಲೇ ಮಲಗಿ ಸಿದ್ಧಾರ್ಥ ಆ ಮೊಲೆಗಳಿಂದ ರುಚಿಯಾದ, ಸತ್ವಯುತವಾದ ಹಾಲನ್ನು ಕುಡಿದ. ಅದರಲ್ಲಿ ಗಂಡು ಹೆಣ್ಣು, ಸೂರ್ಯ, ಕಾಡು, ಪ್ರಾಣಿ, ಹೂವು, ಎಲ್ಲ ಹಣ್ಣುಗಳ ರುಚಿ ಯನ್ನು ಸವಿದು ಆನಂದಗೊಂಡ. ಅದು ಮತ್ತು ಬರಿಸುವಂತಿತ್ತು. ಸಿದ್ಧಾರ್ಥ ಕನಸಿನಿಂದ ಎಚ್ಚೆತ್ತಾಗ ಗುಡಿಸಲಿನ ಮುಂದೆ ಹರಿಯುವ ನದಿ ಕಾಣಿಸಿತು. ಕಾಡಿನ ಗರ್ಭದಲ್ಲಿ ಗೂಬೆಯೊಂದು ಕೂಗಿತು.

ಬೆಳಗಾಗುತ್ತಿದ್ದಂತೆ ಸಿದ್ಧಾರ್ಥ ನದಿಯ ಆಚೆ ದಡಕ್ಕೆ ಕರೆದೊಯ್ಯುವಂತೆ ಅಂಬಿಗನಿಗೆ ಹೇಳಿದ. ಬಿದಿರಿನಿಂದ ಮಾಡಿದ ದೋಣಿಯಲ್ಲಿ ಕರೆದೊಯ್ಯುವಾಗ ನದಿಯಲ್ಲಿ ಸೂರ್ಯನ ಕಿರಣಗಳು ಪ್ರತಿಫಲಿಸುತ್ತಿದ್ದವು. ಅಂಬಿಗನಿಗೆ ಸಿದ್ಧಾರ್ಥ ಹೇಳಿದ 'ನದಿ ಬಹಳ ಸುಂದರವಾಗಿದೆ.'

"ಈ ನದಿ ಎಂದರೆ ನನಗೆ ಪ್ರಾಣ. ಇದರ ಸಂಗೀತವನ್ನು ಆಲಿಸಿದ್ದೇನೆ. ಇದರ ಸೌಂದರ್ಯ ನೋಡುತ್ತಾ ಮೈಮರೆಯುತ್ತೇನೆ. ನಿತ್ಯವೂ ಇದರಿಂದ ಹೊಸ ಹೊಸದನ್ನು ಕಲಿಯುತ್ತೇನೆ. ನದಿಯಿಂದ ಕಲಿಯಬೇಕಾದುದು ತುಂಬಾ ಇದೆ."

"ಆಚೆಯ ದಡ ಸೇರುತ್ತಿದ್ದಂತೆ" ಸಿದ್ಧಾರ್ಥ ಹೇಳಿದ: "ನಿನಗೆ ಧನ್ಯವಾದಗಳು. ಕೊಡಲು ನನ್ನಲ್ಲಿ ಕೊಡುಗೆಯಾಗಲಿ, ಹಣವಾಗಲಿ ಇಲ್ಲ. ನಾನು ಸಮಣ."

"ನನಗೆ ಗೊತ್ತು. ಅದಾವುದನ್ನೂ ನಾನು ನಿರೀಕ್ಷಿಸಿಲ್ಲ. ಮತ್ತೆಂದಾದರೂ ನನ್ನ ಸಾಲ ಹಿಂತಿರುಗಿಸುತ್ತೀ ಬಿಡು. ಆ ಬಗ್ಗೆ ಚಿಂತೆ ಬೇಡ".

"ಹಾಗೆ ನಂಬುವೆಯಾ?"

"ಹೌದು, ಎಲ್ಲವೂ ಹಿಂದಿರುಗಿ ಬರುತ್ತದೆ ಎಂಬುದನ್ನು ಈ ನದಿಯಿಂದ ಕಲಿತಿದ್ದೇನೆ. ಸಮಣನಾದ ನೀನೂ ಸಹ ಹಿಂದಿರುಗಿ ಬರುವೆ. ಈಗ ನಿನ್ನ ಸ್ನೇಹವೇ ಕೊಡುಗೆಯಾಗಿರಲಿ. ದೇವರಿಗೆ ನಿನ್ನನ್ನು ಅರ್ಪಿಸಿಕೊಳ್ಳುವಾಗ ನನ್ನನ್ನು ಜ್ಞಾಪಿಸಿಕೋ."

ನಕ್ಕು ಇಬ್ಬರೂ ತಮ್ಮ ಹಾದಿ ಹಿಡಿದರು. ಅಂಬಿಗನ ಸ್ನೇಹದಿಂದ ಸಿದ್ಧಾರ್ಥ ಸಂತೋಷಗೊಂಡ. ಇವನೂ ಗೋವಿಂದನಂತೆ. ದಾರಿಯಲ್ಲಿ ಸಿಗುವವರೆಲ್ಲರೂ ಗೋವಿಂದನ ರೀತಿ. ಅವರು ಕೃತಜ್ಞತೆಗೆ ಪಾತ್ರರಾದರೂ ದೊಡ್ಡವರಾಗಿ ನಡೆದುಕೊಳ್ಳುತ್ತಾರೆ. ಈ ಜನರು ಮಕ್ಕಳಂತೆ.

ಮಧ್ಯಾಹ್ನ ಒಂದು ಹಳ್ಳಿಯನ್ನು ಹಾದು ಹೋದ. ದಾರಿಯಲ್ಲಿದ್ದ ಮಣ್ಣಿನ ಗುಡಿಸಲ ಮುಂದೆ ಮಕ್ಕಳು ಕುಣಿಯುತ್ತಿದ್ದರು. ಒಬ್ಬರಿಗೊಬ್ಬರು ಗುದ್ದಾಡಿ ಕಿರುಚುತ್ತಿದ್ದವರು ಅಪರಿಚಿತ ಸಮಣನನ್ನು ಕಂಡು ಬೆದರಿ ಓಡಿದರು. ಆ ದಾರಿ ಊರಿನಿಂದ ಹೊರಗೆ ತೊರೆಯ ಹತ್ತಿರ ಹಾದು ಹೋಗಿತ್ತು. ದಡದಲ್ಲಿ ಯುವತಿಯೊಬ್ಬಳು ಬಟ್ಟೆ ಒಗೆಯುತ್ತಿದ್ದಳು. ದಾರಿಯಲ್ಲಿ ಬಂದ ಸಿದ್ಧಾರ್ಥ ಅವಳನ್ನು ಎದುರುಗೊಂಡ. ಕತ್ತೆತ್ತಿ ನೋಡಿದ. ಅವಳ ಕಣ್ಣುಗಳಲ್ಲಿ ಕಾಂತಿ ಕಂಡಿತು. ತುಟಿ ನಗೆಯಿಂದ ಬಿರಿಯಿತು. ಯಾತ್ರಿಗಳ ವಾಡಿಕೆಯಂತೆ ಅಭಿನಂದಿಸಿ ದೊಡ್ಡನಗರಕ್ಕೆ ಇನ್ನು ಎಷ್ಟು

ದೂರವಿದೆ ಎಂದು ಕೇಳಿದಾಗ ಅವನಲ್ಲಿಗೆ ಬಂದಳು. ಅವಳದು ಎಳೆಯ ಮುಖ, ತೀವವಾದ ತುಟಿಗಳು, ಆಕರ್ಷಕ ರೂಪು. ''ಊಟವಾಯಿತೇ? ಸಮಣರು ಕಾಡಿನಲ್ಲಿ ರಾತ್ರಿ ಹೆಂಗಸರಿಂದ ತುಂಬಾ ದೂರವಾಗಿ ಅವರನ್ನು ನೋಡಿದೆ, ನೆನೆಯದೇ, ಒಂಟಿಯಾಗಿ ಮಲಗುತ್ತಾರಂತೆ ನಿಜವೇ ?'' ಎಂದು ನಗೆಯಾಡಿ, ತನ್ನ ಎಡಗಾಲಿನ ಹೆಬ್ಬೆರಳಿನಿಂದ ಸಮಣನ ಬಲಗಾಲಿನ ಹೆಬ್ಬೆರಳನ್ನು ಒತ್ತಿ ತನ್ನ ಪ್ರೇಮಾಕಾಂಕ್ಷೆಯನ್ನು ವ್ಯಕ್ತಪಡಿಸಿದಳು. ಸಿದ್ಧಾರ್ಥನ ರಕ್ತ ಬಿಸಿಯಾಯಿತು. ರಾತ್ರಿ ಕಂಡ ಕನಸನ್ನು ಜ್ಞಾಪಿಸಿ ಕೊಂಡು ಮುಂದೆ ಬಾಗಿ ಯುವತಿಯ ಕಂದುಬಣ್ಣದ ಮೊಲೆಯ ತೊಟ್ಟಿಗೆ ಮುತ್ತಿಟ್ಟು ಕತ್ತೆತ್ತಿ ನೋಡಿದ. ಅವಳ ನಗುಮೊಗದಲ್ಲಿ ಅರೆ ಮುಚ್ಚಿದ ಕಣ್ಣುಗಳು ಅವಳ ಬಯಕೆ ಯನ್ನು ವ್ಯಕ್ತಪಡಿಸುತ್ತಿದ್ದುವು.

ಸಿದ್ಧಾರ್ಥನಲ್ಲಿಯೂ ಕಾಮಸಂಚಾರವಾಯಿತು. ಅವಳನ್ನು ಆಲಂಗಿಸಲು ಮುಂದುವರಿದ, ಸಿದ್ಧಾರ್ಥ ಅದುವರೆವಿಗೂ ಹೆಂಗಸನ್ನು ಮುಟ್ಟದ್ದರಿಂದ ಹಿಂದೆಗೆದ. ಅಂತರಂಗ 'ಬೇಡ' ಎಂದಿತು. ಆಗ ಅವಳ ನಗುಮೊಗದಲ್ಲಿ ಮಾಂತ್ರಿಕ ಸೌಂದರ್ಯ ಕಾಣಲಿಲ್ಲ. ಸಾಮಾನ್ಯ ಯುವತಿಯ ಕಾತುರ ಮುಖಮುದ್ರೆ; ನೆಟ್ಟ ನೋಟ. ಅವಳ ಕೆನ್ನೆಯ ಮೇಲೆ ಮೆದುವಾಗಿ ಬೆರಳಾಡಿಸಿ ನೇರವಾಗಿ ಬಿದುರು ಮೆಳೆಯತ್ತ ನಡೆದು ಕಾಣದಾದ.

ಜನಗಳೊಂದಿಗೆ ಇರಬೇಕೆಂದು ಇಚ್ಛಿಸಿದ ಅವನು ಸಂಜೆಯ ಹೊತ್ತಿಗೆ ದೊಡ್ಡನಗರ ತಲುಪಿದಾಗ ಸಂತೋಷವಾಯಿತು. ಬಹಳ ಕಾಲ ಸಮಣನಾಗಿ ಕಾಡಿ ನಲ್ಲಿದ್ದ. ಸೂರಿನ ಕೆಳಗೆ ಮಲಗಿದ್ದುದು ಹಿಂದಿನ ರಾತ್ರಿ ಮಾತ್ರ, ಅಂಬಿಗನ ಗುಡಿಸಲಲ್ಲಿ.

ನಗರದ ಹೊರಭಾಗದಲ್ಲಿ ಬೇಲಿ ಹಾಕಿದ ಸುಂದರ ಉಪವನದಲ್ಲಿ ತುಂಬಿದ ಬುಟ್ಟಿಗಳನ್ನು ಹಿಡಿದಿದ್ದ ಕೆಲವು ಗಂಡಸರು, ಹೆಂಗಸರು ಸಾಲಾಗಿ ಬರುತ್ತಿರುವುದನ್ನು ಕಂಡ. ಮಧ್ಯದಲ್ಲಿ ನಾಲ್ಕು ಜನರು ಅಲಂಕೃತವಾದ ಪಲ್ಲಕ್ಕಿಯನ್ನು ಹೊತ್ತು ನಡೆಯು ತ್ತಿದ್ದರು. ಆಕರ್ಷಕವಾದ ಹೊದಿಕೆಯಿಂದ ಮರೆಮಾಡಿದ, ಬಣ್ಣಗಳಿಂದ ಕೂಡಿದ ಮೆತ್ತೆ ಗಳ ಮೇಲೆ ಹೆಂಗಸೊಬ್ಬಳು ಕುಳಿತಿದ್ದಳು. ತುಂಬಿದ ಬುಟ್ಟಿಗಳನ್ನು ಹಿಡಿದ ಪರಿವಾರ ದೊಂದಿಗೆ ದ್ವಾರದಲ್ಲಿ ನಿಂತು ನೋಡಿದ. ಅಲಂಕೃತವಾದ ಪಲ್ಲಕ್ಕಿಯಲ್ಲಿ ಕುಳಿತಿದ್ದ

ಹೆಂಗಸನ್ನು ದಿಟ್ಟಿಸಿದ. ಕೆಳಗಿಳಿಬಿದ್ದ ಕಪ್ಪುಕೂದಲು, ಹೊಳೆಯುವ ಆಕರ್ಷಕ ಮುಖದಲ್ಲಿದ್ದ ತೊಂಡೆ ಹಣ್ಣಿನ ತುಟಿಗಳು, ಬಿಲ್ಲಿನಂತೆ ಬಾಗಿರುವ ಹುಬ್ಬುಗಳು, ಕಾಂತಿಯುತ ಕಣ್ಣುಗಳು, ಬಂಗಾರದಲ್ಲಿ ಕುಶಲ ಚಿತ್ರಕಾರ ಬಿಡಿಸಿದ ಹಸಿರು ಬಣ್ಣದ ಶಾಲಿನ ಮೇಲೆ ಕಾಣುತ್ತಿದ್ದ ತೆಳುವಾದ ಕುತ್ತಿಗೆ, ಇವುಗಳಿಂದಾಗಿ ಅವಳಲ್ಲಿ ಅಪೂರ್ವ ಸೌಂದರ್ಯ ಪ್ರಸ್ಫುಟಿತವಾಗಿತ್ತು. ಅವಳ ನಯವಾದ, ಮೃದುವಾದ ಕೈಗಳಲ್ಲಿ ಚಿನ್ನದ ಬಳೆಗಳು ಕಂಗೊಳಿಸುತ್ತಿದ್ದುವು.

ಆ ಗಂಧರ್ವ ಸುಂದರಿಯನ್ನು ಕಂಡು ಸಿದ್ಧಾರ್ಥನ ಹೃದಯ ಆನಂದ ಗೊಂಡಿತು. ಪಲ್ಲಕ್ಕಿ ಹತ್ತಿರ ಬರುತ್ತಿದ್ದಂತೆ ವಿನಯದಿಂದ ಬಾಗಿ ಎದ್ದು ಅವಳ ಕಾಂತಿ ತುಂಬಿದ ಸುಂದರ ಮುಖವನ್ನು, ಹೊಳೆವ ಕಣ್ಣುಗಳನ್ನು ಒಂದುಕ್ಷಣ ದಿಟ್ಟಿಸಿದ. ಗುರುತಿಸಲಾಗದ ಸುಗಂಧ ಪರಿಮಳ ಅವನನ್ನು ಮುತ್ತಿತು.

ಆ ಅಪೂರ್ವ ಸುಂದರಿ ಕ್ಷಣ ಸಿದ್ಧಾರ್ಥನನ್ನು ದಿಟ್ಟಿಸಿ, ನಕ್ಕು ಪರಿವಾರ ದೊಂದಿಗೆ ತನ್ನ ಉಪವನದೊಳಕ್ಕೆ ಹೋದಳು.

'ಅದೃಷ್ಟವಶಾತ್ ಈ ನಗರವನ್ನು ಪ್ರವೇಶಿಸಿದ್ದೇನೆ.' ಎಂದುಕೊಂಡ ಸಿದ್ಧಾರ್ಥ. ತಕ್ಷಣ ಉಪವನವನ್ನು ಪ್ರವೇಶಿಸಬೇಕೆನಿಸಿತು. ದ್ವಾರದಲ್ಲಿ ನಿಂತಿದ್ದ ಪರಿ ವಾರದವರು ಅವನನ್ನು ಅಪನಂಬಿಕೆಯ ತಿರಸ್ಕಾರದ ದೃಷ್ಟಿಯಿಂದ ಕಂಡುದನ್ನು ನೆನೆದು ಸುಮ್ಮನಾದ. 'ನಾನಿನ್ನೂ ಸಮಣ, ಈ ಸ್ಥಿತಿಯಲ್ಲಿ ನಾನು ಉಪವನವನ್ನು ಪ್ರವೇಶಿ ಸಲಾಗದು' ಎಂಬುದು ನೆನಪಾಗಿ ತನ್ನಲ್ಲಿ ತಾನೇ ನಕ್ಕ.

ಉಪವನದ ಹತ್ತಿರ ಸಿಕ್ಕವರಲ್ಲಿ ಆ ಸುಂದರಿಯ ಬಗ್ಗೆ ಉಪವನದ ಬಗ್ಗೆ ವಿಚಾರಿಸಿದ. ಅವಳು ಹೆಸರಾಂತ ಗಣಿಕೆ ಕಮಲ. ಅದು ಅವಳ ಉಪವನ. ಅಲ್ಲದೆ ಅವಳಿಗೆ ನಗರದಲ್ಲಿ ಸ್ವಂತ ಮನೆಯೂ ಇದೆ ಎಂದು ತಿಳಿದ.

ನಗರಕ್ಕೆ ಪ್ರವೇಶಿಸಿದ ಅವನಿಗೆ ಒಂದೇ ಗುರಿ. ನಗರದ ರಸ್ತೆಗಳನ್ನು ಅನುಸರಿಸಿ ಸುತ್ತಿ ಸ್ಥಳಗಳನ್ನು ಪರಿಚಯ ಮಾಡಿಕೊಂಡ. ನದಿಯ ಹತ್ತಿರ ಒಂದು ಕಲ್ಲಿನ ಮೆಟ್ಟಲ ಮೇಲೆ ವಿಶ್ರಾಂತಿ ಪಡೆದ.

ಸಂಜೆಯ ಹೊತ್ತಿಗೆ ನಗರದ ಹೊರಾಂಗಣದಲ್ಲಿ ಕುಳಿತು ಕೆಲಸ ಮಾಡುತ್ತಿದ್ದ ಕ್ಷೌರಿಕನನ್ನು ಗೆಳೆಯನನ್ನಾಗಿ ಮಾಡಿಕೊಂಡ. ವಿಷ್ಣುಮಂದಿರದಲ್ಲಿ ವಿಷ್ಣು ಲಕ್ಷ್ಮಿಯನ್ನು ಕುರಿತ ಕಥೆಗಳನ್ನು ಕೇಳಿದ. ನದಿಯ ದಡದಲ್ಲಿದ್ದ ದೋಣಿಯಲ್ಲಿ ರಾತ್ರಿಕಳೆದು ಬೆಳಗಾಗುತ್ತಲೇ ಮೊದಲ ಗಿರಾಕಿ ಬರುವ ಮುನ್ನವೇ ಆಯುಷ್ಕರ್ಮ ಶಾಲೆಗೆ ಹೋಗಿ ಗಡ್ಡವನ್ನು ತೆಗೆಸಿದ. ತಲೆಯ ಕೂದಲಿಗೆ ಸುವಾಸನೆಯ ಎಣ್ಣೆ ಹಚ್ಚಿ ಬಾಚಿಕೊಂಡು ಸ್ನಾನಕ್ಕೆಂದು ನದಿಗೆ ಹೋದ.

ಮಧ್ಯಾಹ್ನ ಸುಂದರಿ ಕಮಲ ಪಲ್ಲಕ್ಕಿಯಲ್ಲಿ ತನ್ನ ಉಪವನಕ್ಕೆ ಹೋಗುವಾಗ ದ್ವಾರದಲ್ಲಿ ನಿಂತಿದ್ದ ಸಿದ್ಧಾರ್ಥ ಅವಳು ಬರುತ್ತಲೆ ವಂದಿಸಿ, ಅವಳ ಪ್ರತ್ಯಾಭಿವಂದನೆ ಸ್ವೀಕರಿಸಿದ. ಸಾಲಿನಲ್ಲಿ ಹೋಗುತ್ತಿದ್ದ ಕಡೆಯ ಸೇವಕನನ್ನು ಕರೆದು ''ಬ್ರಾಹ್ಮಣ ಯುವಕ ನಿನ್ನೊಂದಿಗೆ ಮಾತನಾಡಲಿಚ್ಛಿಸುತ್ತಾನೆ ಎಂದು ನಿನ್ನ ಒಡತಿಗೆ ತಿಳಿಸು'' ಎಂದು ಹೇಳಿ ಕಳುಹಿಸಿದ. ಸ್ವಲ್ಪ ಹೊತ್ತಿನ ಮೇಲೆ ಬಂದ ಸೇವಕ ಸಿದ್ಧಾರ್ಥನನ್ನು ಕರೆದು ತಂದು ಮಂಚದ ಮೇಲೆ ಒರಗುದಿಂಬುಗಳಲ್ಲಿ ಮಂಡಿಸಿದ್ದ ಕಮಲೆಯ ಕೊಠಡಿಯಲ್ಲಿ ಬಿಟ್ಟ. ಸಮಣ ನನ್ನು ಕೇಳಿದಳು ಕಮಲೆ :

''ನಿನ್ನೆ ದ್ವಾರದಲ್ಲಿ ನಿಂತು ನನಗೆ ವಂದಿಸಿದೆಯಲ್ಲವೆ ?''

''ಹೌದು.''

''ನಿನ್ನೆ ಧೂಳು ತುಂಬಿದ ಉದ್ದನೆಯ ತಲೆಗೂದಲು, ಗಡ್ಡ ಇತ್ತಲ್ಲವೆ ?''

''ನಿಜ, ನೀನು ಸೂಕ್ಷ್ಮವಾಗಿ ಗಮನಿಸಿ ಎಲ್ಲವನ್ನೂ ನೋಡಿದ್ದೀಯ. ಸಮಣನಾಗಬೇಕೆಂದು ಮನೆ ಬಿಟ್ಟು, ಮೂರುವರ್ಷಗಳು ಸಮಣನಾಗಿದ್ದ ಬ್ರಾಹ್ಮಣ ಪುತ್ರ ಸಿದ್ಧಾರ್ಥನನ್ನು ನೀನು ನೋಡಿದ್ದೀಯ. ಆ ಮಾರ್ಗವನ್ನು ಬಿಟ್ಟು ಈ ನಗರಕ್ಕೆ ಬಂದೆ. ಬರುವ ಮುನ್ನವೆ ಮೊದಲು ನಿನ್ನನ್ನು ಭೇಟಿ ಮಾಡಿದೆ. ನಿಸ್ಸಂಕೋಚವಾಗಿ ಸಿದ್ಧಾರ್ಥ ಮೊಟ್ಟಮೊದಲಿಗೆ ಮಾತನಾಡುತ್ತಿರುವ ಹೆಣ್ಣು ಎಂದರೆ ನೀನೇ ಕಮಲ. ನಿನ್ನಂತಹ ಸುಂದರಿಯು ಸಿಕ್ಕರೆ ಹೊಸ ಅನುಭವ ಸವಿಯಲು ನಾನೆಂದಿಗೂ ಹಿಂದೆಗೆಯುವುದಿಲ್ಲ.'' ನವಿಲುಗರಿಯ ಬೀಸಣಿಗೆಯಿಂದ ಗಾಳಿ ಹಾಕಿಕೊಳ್ಳುತ್ತ ನಕ್ಕು ಹೇಳಿದಳು ಕಮಲ. ''ಸಿದ್ಧಾರ್ಥ ನನಗೆ ಹೇಳಲು ಬಂದದ್ದು ಇಷ್ಟೆಯೇ ?''

'' ಇಷ್ಟು ಹೇಳಿ ಸುಂದರಿಯಾದ ನಿನ್ನನ್ನು ಅಭಿನಂದಿಸಲು ಬಂದೆ. ಕಮಲ ನಿನಗೆ ಅಸಂತೋಷವಾಗದಿದ್ದರೆ, ನೀನು ಕಲಿತಿರುವ ವಿದ್ಯೆ ನನಗೆ ತಿಳಿಯದುದರಿಂದ ನೀನು ನನ್ನ ಗೆಳತಿಯಾಗಿ ಗುರುವಾಗಬೇಕೆಂದು ಕೇಳಿಕೊಳ್ಳುತ್ತೇನೆ.''

ಈ ಮಾತು ಕೇಳಿ ಕಮಲ ಜೋರಾಗಿ ನಕ್ಕಳು. ''ಕಾಡಿನಿಂದ ಬಂದ ಸಮಣನು ನನ್ನಲ್ಲಿ ಕಲಿಯುವ ಬಯಕೆಯಿಂದಿರುತ್ತಾನೆಂದು ನನ್ನ ಅನುಭವಕ್ಕೆ ಬಂದಿರಲಿಲ್ಲ. ಉದ್ದವಾದ ಕೂದಲು ಬಿಟ್ಟು, ಹರಿದ ಬಟ್ಟೆತೊಟ್ಟ ಸಮಣ ನನ್ನಲ್ಲಿ ಎಂದೂ ಬಂದಿರಲಿಲ್ಲ. ಬ್ರಾಹ್ಮಣ ಪುತ್ರರನ್ನೊಳಗೊಂಡು ಬಹಳ ಮಂದಿ ಯುವಕರು ನನ್ನಲ್ಲಿ ಬಂದಿದ್ದಾರೆ. ಅವರೆಲ್ಲರೂ ಉತ್ತಮವಾದ ಬಟ್ಟೆಗಳನ್ನು ತೊಟ್ಟು ಒಳ್ಳೆಯ ಪಾದರಕ್ಷೆಗಳನ್ನು ಮೆಟ್ಟಿ ಮೈಗೆ ಸುಗಂಧವನ್ನು ಲೇಪಿಸಿ ಜೇಬಿನಲ್ಲಿ ಹಣ ತುಂಬಿ ತರುತ್ತಿದ್ದರು. ಸಮಣನೆ, ನನ್ನಲ್ಲಿಗೆ ಬರುವವರೆಲ್ಲರೂ ಈ ರೀತಿಯೇ ಬರುತ್ತಾರೆ.''

'' ಈಗಾಗಲೇ ನಿನ್ನಿಂದ ಕಲಿಯಲು ಪ್ರಾರಂಭಿಸಿದ್ದೇನೆ. ಗಡ್ಡವನ್ನು ತೆಗೆದು ಎಣ್ಣೆಹಚ್ಚಿ ತಲೆಬಾಚಿದ್ದೇನೆ. ಸೊಗಸಾದ ಬಟ್ಟೆ, ಒಳ್ಳೆಯ ಪಾದರಕ್ಷೆ, ಹಣವನ್ನುಳಿದು ಮತ್ತಾವುದಕ್ಕೂ ಕೊರತೆಯಿಲ್ಲ. ಸಿದ್ಧಾರ್ಥ ಇದಕ್ಕಿಂತಲೂ ದುಸ್ತರವಾದ ಕೆಲಸಗಳನ್ನು ಕೈಗೊಂಡು ಸಾಧಿಸಿದ್ದಾನೆ. ನಿನ್ನ ಪ್ರಿಯನಾಗಿದ್ದು ನಿನ್ನಿಂದ ಪ್ರೇಮಕಲೆಯನ್ನು ಕಲಿಯಬೇಕೆಂದು ನಿನ್ನೆ ತೀರ್ಮಾನಿಸಿದುದನ್ನೂ ಏಕೆ ಸಾಧಿಸಬಾರದು ? ಕಮಲ, ಅದಕ್ಕೆ ನಾನು ತಕ್ಕವನಾದವನು. ನೀನು ಹೇಳಿಕೊಡುವುದಕ್ಕಿಂತ ಕಷ್ಟವಾದ ಕೆಲಸಗಳನ್ನು ಕಲಿತಿದ್ದೇನೆ. ಮೈ ತುಂಬ ಬಟ್ಟೆ ಇಲ್ಲದ, ಪಾದರಕ್ಷೆ ಗಳಿಲ್ಲದ, ಹಣವಿಲ್ಲದ, ತಲೆಗೆ ಎಣ್ಣೆಯನ್ನಷ್ಟೇ ಹಾಕಿರುವ ಸಿದ್ಧಾರ್ಥ ನಿನಗೆ ಸೂಕ್ತನಾದವನಲ್ಲ''.

ಕಮಲ ನಕ್ಕು ಹೇಳಿದಳು: ''ಹೌದು, ಅವನು ನನಗೆ ಸೂಕ್ತನಾದವನಲ್ಲ. ಅವನು ಸೊಗಸಾದ ಬಟ್ಟೆಗಳನ್ನು ತೊಟ್ಟು, ಉತ್ತಮವಾದ ಪಾದರಕ್ಷೆಗಳನ್ನು ಮೆಟ್ಟಿ ಕಮಲೆಗೆ ಕೈತುಂಬ ಕೊಡುಗೆಗಳನ್ನು ತರಬೇಕು. ಕಾಡಿನಿಂದ ಬಂದಿರುವ ಸಮಣನೇ, ಈಗ ನಿನಗೆ ಮನವರಿಕೆಯಾಯಿತೇ ?''

''ಮನವರಿಕೆಯಾಯಿತು. ಅಪೂರ್ವ ಸುಂದರಿಯ ಬಾಯಿಂದ ಬಂದ ಮೇಲೂ ಅರ್ಥ ಮಾಡಿಕೊಳ್ಳದಿರಲು ಹೇಗೆ ಸಾಧ್ಯ? ನಿನ್ನ ಬಾಯಿ ಈಗ ತಾನೆ ಬಿಡಿಸಿದ

ಅಂಜೂರದಂತಿದೆ. ನನ್ನ ತುಟಿಗಳೂ ಕೆಂಪಗಿದ್ದು ನಿನ್ನ ತುಟಿಗಳಿಗೆ ಸೊಗಸಾಗಿ ಹೊಂದುವುದು. ಪ್ರೇಮಕಲೆಯನ್ನು ಕಲಿಯಲು ಕಾಡಿನಿಂದ ಬಂದಿರುವ ಈ ಸಮಣನನ್ನು ಕಂಡರೆ ನಿನಗೆ ಭಯವಾಗುವುದಿಲ್ಲವೆ, ಹೇಳು ?''

''ಹೂ ಹೆಂಗಸಿನ ಬಗ್ಗೆ ಏನೂ ಗೊತ್ತಿರದ ಕಾಡಿನಿಂದ ಬಂದಿರುವ ಸಮಣನನ್ನು ಕಂಡು ನಾನೇಕೆ ಭಯಗೊಳ್ಳಬೇಕು ?''

''ಯಾವುದಕ್ಕೂ ಲೆಕ್ಕಿಸದೆ ದಷ್ಟ - ಪುಷ್ಟವಾಗಿರುವ ಈ ಸಮಣ ನಿನ್ನನ್ನು ತನ್ನ ಶಕ್ತಿಯಿಂದ ಸೆರೆಹಿಡಿದು, ದೋಚಿ ಗಾಯಗೊಳಿಸಬಲ್ಲ.''

''ನಾನು ಭಯಗೊಳ್ಳುವವಳಲ್ಲ. ಎಂದಾದರೂ ಸಮಣ ಅಥವಾ ಬ್ರಾಹ್ಮಣ ಪುತ್ರ ತನ್ನಲ್ಲಿರುವ ಧರ್ಮವನ್ನು, ಜ್ಞಾನವನ್ನು, ಭಾವನೆಯ ಆಳಕ್ಕಿಳಿಯುವ ಶಕ್ತಿಯನ್ನು ಯಾರಾದರೂ ಕೊಳ್ಳೆಹೊಡೆಯುವರೆಂದು ಭಯಗೊಂಡಿರುವನೇ ? ಎಂದಿಗೂ ಇಲ್ಲ. ಏಕೆಂದರೆ ಅವು ಅವನಿಗಷ್ಟೇ ಸೇರಿದುದು. ಇಚ್ಛಿಸಿದರೆ ಮಾತ್ರ ಅವನು ಅವನ್ನು ಕೊಡ ಬಲ್ಲ. ಹಾಗೆಯೇ ಈ ಕಮಲ ಹಾಗು ಅವಳ ಪ್ರೇಮ. ಕಮಲೆಯ ತುಟಿಗಳು ಬಹು ಸುಂದರವಾಗಿ ಚುಂಬನದ ಸವಿಯನ್ನು ಕೊಡಬಲ್ಲವು, ನಿಜ. ಆದರೆ ಕಮಲೆಯ ಇಚ್ಛೆಯಿಲ್ಲದೆ ವಿರುದ್ಧವಾಗಿ ನಡೆವರೆ ಅವುಗಳಿಂದ ನೀನು ಒಂದಿನಿತೂ ಸವಿಯನ್ನು ಕಾಣಲಾರೆ. ನೀನು ತಕ್ಕವನಾದ್ದರಿಂದ ಇದನ್ನೂ ಕಲಿ. ಪ್ರೇಮವನ್ನು ಬೇಕಾದರೆ ಬೇಡಿ, ಕೊಂಡು ಇಲ್ಲ ಕೊಡುಗೆಯಾಗಿ ಪಡೆಯಬಹುದು, ಎಂದಿಗೂ ಅದನ್ನು ಕದಿಯಲು ಸಾಧ್ಯವಿಲ್ಲ. ನೀನು ತಪ್ಪು ತಿಳಿದಿದ್ದೀಯೆ, ನಿನ್ನಂತಹ ಸುಂದರ ಯುವಕನೂ ತಪ್ಪಾಗಿ ತಿಳಿದಿರುವುದು ನಿಜಕ್ಕೂ ವಿಷಾಧದ ಸಂಗತಿ.''

''ನಿಜ, ಇದು ವಿಷಾದದ ಸಂಗತಿಯೇ. ನಿನ್ನ ತುಟಿಗಳಿಂದ ಒಂದಿನಿತು ಸವಿಯನ್ನೂ ಕಳೆದುಕೊಳ್ಳಬಾರದು. ನಿನಗೆ ಬೇಕಾಗಿರುವ, ಈಗ ನನ್ನಲ್ಲಿಲ್ಲದ ವಸ್ತುಗಳನ್ನು ಈ ಸಿದ್ಧಾರ್ಥ ಪಡೆದು ಬರುತ್ತಾನೆ. ಅದಕ್ಕಾಗಿ ನೀನು ಮಾರ್ಗ ತೋರಿಸಲಾರೆಯಾ ?''

"ಮಾರ್ಗವೇ !? ಕಾಡಿನಿಂದ ಬಂದಿರುವ ಅಜ್ಞಾನಿ ಸಮಣನಿಗೆ ಮಾರ್ಗ ತೋರಲು ಯಾರು ತಾನೇ ಇಚ್ಛಿಸುವಿದಿಲ್ಲ ?"

"ಕಮಲ, ಅತಿಶೀಘ್ರವಾಗಿ ಆ ಮೂರು ವಸ್ತುಗಳನ್ನು ನಾನು ಎಲ್ಲಿ ಪಡೆಯ ಬಹುದು ?"

"ಪ್ರಿಯನೇ, ಇದನ್ನು ತಿಳಿಯಲು ಬಹಳ ಮಂದಿ ಹೋಗಿದ್ದಾರೆ. ಅವುಗಳನ್ನು ನೀನು ಕಲಿತಿರುವ ವಿದ್ಯೆಯಿಂದ ಗಳಿಸಬೇಕು. ಏನು ಇಲ್ಲದವನು ಹಣ ಗಳಿಸಲು ಸಾಧ್ಯವಿಲ್ಲ."

"ನಾನು ಆಲೋಚಿಸಬಲ್ಲೆ, ತಾಳ್ಮೆಯಿಂದಿರಬಲ್ಲೆ, ಉಪವಾಸ ಮಾಡಬಲ್ಲೆ"

"ಮತ್ತೇನೂ ಇಲ್ಲವೆ ?"

" ಇಲ್ಲ, ... ಹೌದು, ನಾನು ಕವನ ರಚಿಸಬಲ್ಲೆ, ನಾನೊಂದು ಕವನ ರಚಿಸಿದರೆ ನನ್ನನ್ನು ಚುಂಬಿಸುವೆಯಾ ?"

"ನಿನ್ನ ಕವನ ನನ್ನನ್ನು ಸಂತೋಷಗೊಳಿಸಿದರೆ ಆಗಲಿ. ಯಾವುದು ಆ ಕವನ?"

ಕ್ಷಣ ಆಲೋಚಿಸಿ ಹೇಳಿದ ಸಿದ್ಧಾರ್ಥ :

ನಡೆದಳು ತನ್ನ ಉಪವನಕೆ ಅಪ್ರತಿಮ ಸುಂದರಿ ಕಮಲ
ಉಪವನದ ದ್ವಾರದಲಿ ನಿಂತನು ಮಗ್ನ ಸಂನ್ಯಾಸಿ ಸಮಣ
ಕಮಲಮುಖಿಯನು ಕಂಡು ಬಾಗಿ ॥೧॥
ಸಮ್ಮತಿಸಿ ನಕ್ಕಳು ಕಮಲ ನಿಂತು ಯೋಚಿಸಿದ ಸಮಣ
ದೇವತೆಗಿಂ ಮಿಗಿಲು ಸುಂದರಿಗೆ ತನ್ನನರ್ಪಿಸುವೆನೆಂದ
- ಅವಳ ಹೂನಗೆಯು ಎದೆಗೆ ತಾಗಿ" ॥೨॥

ಕಮಲ ಜೋರಾಗಿ ಚಪ್ಪಾಳೆ ತಟ್ಟಿದಳು. ಕೈಯಲ್ಲಿದ್ದ ಚಿನ್ನದ ಕಡಗಗಳು ಕಿಲಕಿಲನೆ ನಕ್ಕವು. ''ಸಮಣನೇ ನಿನ್ನ ಕವನ ಬಲು ಸೊಗಸಾಗಿದೆ. ಅದಕ್ಕಾಗಿ ನಾನು ನಿನ್ನನ್ನು ಚುಂಬಿಸಿದರೆ ವ್ಯರ್ಥವಾಗುವುದಿಲ್ಲ.''

ಕಣ್ಣುಗಳಿಂದ ಅವನನ್ನು ತನ್ನೆಡೆಗೆ ಸೆಳೆದಳು. ಅವಳ ಮುಖಕ್ಕೆ ಮುಖವಿಟ್ಟು ತುಟಿಗಳ ಮೇಲೆ ತುಟಿಗಳನ್ನಿರಿಸಿದ, ಕಮಲ ಆಳವಾಗಿ ಚುಂಬಿಸಿದಳು. ಚುಂಬನದಿಂದ ಪ್ರೇರಿತನಾದ ಅವನಿಗೆ ಚತುರೆಯಾದ ಅವಳು ತನಗೆ ಎಷ್ಟೊಂದು ಕಲಿಸಿ ಪ್ರವೀಣನನ್ನಾಗಿ ಮಾಡಿ ಆಕರ್ಷಿಸಿದಳೆನಿಸಿತು. ಈ ದೀರ್ಘ ಚುಂಬನದಂತೆ ಇನ್ನೆಷ್ಟು ವಿವಿಧ ಚುಂಬನಗಳು ತನಗಾಗಿ ಕಾದಿವೆ ! ಆಳವಾಗಿ ಉಸಿರೆಳೆದು ಅಲ್ಲೆ ನಿಂತ. ತನ್ನ ಕಣ್ಣಮುಂದೆ ತೆರೆದಿರುವ, ತಾನು ಕಲಿಯಬೇಕಾಗಿರುವ ಆ ವಿದ್ಯೆಯ ಪೂರ್ಣತೆಯನ್ನು ಕಂಡು ಮಗುವಿನಂತೆ ಆಶ್ಚರ್ಯಗೊಂಡ.

''ಬಲು ಸೊಗಸಾಗಿದೆ ನಿನ್ನ ಕವನ'' ಕಮಲ ಹೇಳಿದಳು. ''ನಾನು ಶ್ರೀಮಂತಳಾಗಿದ್ದಿದ್ದರೆ ಹಣವನ್ನು ಕೊಡುತ್ತಿದ್ದೆ. ಕವನಗಳಿಂದ ನೀನು ನನ್ನಲ್ಲಿ ಬೇಕಾದಷ್ಟು ಹಣ ಗಳಿಸಲಾರೆ. ನೀನು ಕಮಲೆಯ ಪ್ರಿಯನಾಗಬೇಕಾದರೆ ಸಾಕಷ್ಟು ಹಣ ಬೇಕಾಗುತ್ತದೆ.''

''ಎಷ್ಟು ಸವಿಯಾಗಿ ಚುಂಬಿಸಬಲ್ಲೆ ಕಮಲ !''

'' ಅದಕ್ಕಾಗಿಯೇ ನನಗೆ ಒಡವೆ - ವಸ್ತ್ರ ಮತ್ತಿತರ ವಸ್ತುಗಳಿಗೆ ಕೊರತೆ ಇಲ್ಲ. ನೀನು ಏನು ಮಾಡಬೇಕೆಂದು ಯೋಚಿಸಿದ್ದೀಯಾ ! ಆಲೋಚನೆ, ಉಪವಾಸ, ಕವನ ರಚನೆಯನ್ನುಳಿದು ನಿನಗೆ ಮತ್ತೇನೂ ಬರುವುದಿಲ್ಲವೇ ?''

''ಮಂತ್ರೋಚ್ಚಾರಣೆಯನ್ನು ಬಲ್ಲೆನಾದರೂ ಇನ್ನು ಅವನ್ನು ಉಚ್ಚರಿಸುವುದಿಲ್ಲ. ಮೋಡಿ ಮಾಡಬಲ್ಲೆನಾದರೂ ಮಾಡುವುದಿಲ್ಲ. ನಾನು ಗ್ರಂಥಗಳನ್ನು ಓದಿದ್ದೇನೆ......''

''ತಡೆ'' ಮಧ್ಯೆ ಕೇಳಿದಳು ಕಮಲ. ''ನಿನಗೆ ಓದಲು ಬರೆಯಲು ಬರುತ್ತದೆಯೇ ?''

''ಖಂಡಿತವಾಗಿ, ಇದನ್ನು ಬಹಳ ಜನ ಬಲ್ಲರು.''

''ಬಹಳ ಜನಕ್ಕೆ ಬಾರದು. ನನಗೂ ಬಾರದು. ಹೇಗೆ ಓದಿ ಬರೆಯ ಬೇಕೆಂದು ನಿನಗೆ ತಿಳಿದಿರುವುದರ ಜೊತೆಗೆ ಮೋಡಿ ಮಾಡುವುದು ಬೇಕಾಗ ಬಹುದು.'' ಸೇವಕ ಬಂದು ಕಮಲೆಯ ಕಿವಿಯಲ್ಲಿ ಏನೋ ಪಿಸು ಗುಟ್ಟಿದ. ''ನನ್ನನ್ನು ಕಾಣಲು ಅತಿಥಿಗಳು ಬಂದಿದ್ದಾರೆ. ಬೇಗ ಮರೆಯಾಗು, ಸಿದ್ಧಾರ್ಥ ನಿನ್ನನ್ನು ಇಲ್ಲಿ ಯಾರೂ ಕಾಣಬಾರದು. ಪುನಃ ನಿನ್ನನ್ನು ನಾಳೆ ನೋಡುತ್ತೇನೆ.''

ಬ್ರಾಹ್ಮಣನಿಗೆ ಬಿಳಿಯ ನಿಲುವಂಗಿಯನ್ನು ಕೊಡುವಂತೆ ಸೇವಕನಿಗೆ ಆಜ್ಞಾಪಿಸಿದಳು. 'ಏನು ?' ಎಂದು ಸಿದ್ಧಾರ್ಥ ತಿಳಿಯುವುದರೊಳಗೆ ನಿಲುವಂಗಿಯನ್ನು ತೊಟ್ಟು ಬಳಸುದಾರಿಯಲ್ಲಿ ಅವನನ್ನು ಕರೆತಂದು ದಟ್ಟವಾದ ಮರಗಳ ತಾವಿನಲ್ಲಿ ಬಿಟ್ಟು ಆದಷ್ಟು ಜಾಗ್ರತೆ ಉಪವನದಿಂದ ಮರೆಯಾಗುವಂತೆ ಬೇಡಿದಳು.

ಕಾಡಿನ ಅನುಭವವಿದ್ದ ಅವನು ಗೋಪ್ಯವಾಗಿ ಉಪವನದ ಬೇಲಿಯನ್ನು ದಾಟಿ ಹೊರಬಂದ. ಬಿಳಿಯ ನಿಲುವಂಗಿಯನ್ನು ಸುತ್ತಿ ಕಂಕುಳಲ್ಲಿ ಇಟ್ಟು ತೃಪ್ತಿಯಿಂದ ನಗರಕ್ಕೆ ಬಂದ. ಪ್ರವಾಸಿಮಂದಿರದ ಮುಂದೆ ನಿಂತು ಭಿಕ್ಷೆ ಬೇಡಿ, ಕೊಟ್ಟ ರೊಟ್ಟಿಯ ಚೂರನ್ನು ತಿನ್ನಲು ಕುಳಿತಾಗ 'ಬಹುಶಃ ನಾಳೆ ನಾನು ಭಿಕ್ಷೆ ಬೇಡ ಬೇಕಾಗಿಲ್ಲ' ಎಂದುಕೊಂಡ.

ಹೆಮ್ಮೆಯ ನಗು ಮುಖದಲ್ಲಿ ಕಾಣಿಸಿತು. ತಾನಿನ್ನು ಭಿಕ್ಷೆಯಿಂದ ಬೇಡುವ ಸಮಣನಲ್ಲ ಎಂದುಕೊಂಡು ರೊಟ್ಟಿಯ ಚೂರನ್ನು ನಾಯಿಗೆ ಹಾಕಿ ಉಪವಾಸ ಮಾಡಿದ.

ಇಲ್ಲಿ ಬದುಕು ಶ್ರಮವಿಲ್ಲದೆ ಸರಳವಾಗಿದೆ ಎನಿಸಿತು. ಸಮಣನ ಬದುಕು ಕಠಿಣವಾದ, ಶ್ರಮವಾದ, ಗುರಿನಿಲುಕದ ಬದುಕು. ಇಲ್ಲಿ ಎಲ್ಲವೂ ಕಮಲೆ ಚುಂಬಿಸುವಾಗ ಕೊಡುವ ಸಲಹೆಯಷ್ಟೇ ಸುಲಭ. ಈಗ ಬೇಕಾಗಿರುವುದು ಬಟ್ಟೆ ಹಾಗೂ ಹಣ. ಇವು ನಿದ್ರೆಗೆಟ್ಟು ಚಿಂತಿಸುವ ವಿಷಯಗಳಲ್ಲ.

ನಗರದಲ್ಲಿದ್ದ ಕಮಲೆಯ ಮನೆಯನ್ನು ಕೇಳಿ ತಿಳಿದುಕೊಂಡ. ಮಾರನೆಯ ದಿನ ಕಮಲ ಅವನನ್ನು ಕರೆಸಿಕೊಂಡು ಕೇಳಿದಳು. ''ಕ್ಷೇಮವಾಗಿರುವೆಯಾ ? ನಗರದ ಶ್ರೀಮಂತ ವರ್ತಕನಾದ ಕಾಮಸ್ವಾಮಿ ನಿನ್ನನ್ನು ಭೇಟಿಮಾಡಲು ತಿಳಿಸಿದ್ದಾನೆ. ಅವನಿಗೆ ನೀನು ಸೂಕ್ತವೆನಿಸಿದರೆ ಕೆಲಸಕ್ಕೆ ತೆಗೆದುಕೊಳ್ಳುತ್ತಾನೆ. ನೀನೂ ಚತುರನಾಗಿರಬೇಕು. ಬೇರೆಯವರ ಮೂಲಕ ಆತನಿಗೆ ನಿನ್ನ ಹೆಸರನ್ನು ತಿಳಿಸಿದ್ದೇನೆ. ಆತನು ಪ್ರಭಾವಶಾಲಿ ವ್ಯಕ್ತಿ. ಆದ್ದರಿಂದ ಆತನೊಂದಿಗೆ ಸ್ನೇಹದಿಂದಿರು; ಅತಿ ವಿನಯ ಬೇಡ. ಸೇವಕನಾಗಿರದೆ ಸರಿ ಸಮಾನನಾಗಿರಬೇಕೆಂಬುದು ನನ್ನ ಬಯಕೆ. ಕಾಮಸ್ವಾಮಿ ವೃದ್ಧಾಪ್ಯದ ತುದಿಯಲ್ಲಿದ್ದಾನೆ. ಅವನಿಗೆ ನೀನು ಸೂಕ್ತವಾದ ವ್ಯಕ್ತಿ ಎನಿಸಿದರೆ ನಿನ್ನಲ್ಲಿ ಪೂರ್ಣ ನಂಬಿಕೆ ಇಡುವನು.''

ಸಿದ್ಧಾರ್ಥ ಕೃತಜ್ಞತೆಯನ್ನರ್ಪಿಸಿದ. ಅವನು ಎರಡು ದಿನಗಳಿಂದ ಊಟ ಮಾಡದೆ ಇರುವುದನ್ನು ತಿಳಿದು ಉಪಹಾರ, ಹಣ್ಣುಗಳನ್ನು ತರಲು ಹೇಳಿದಳು. ನೀನು ಅದೃಷ್ಟವಂತ. ಹತ್ತಾರು ದಾರಿಗಳು ನಿನಗಾಗಿ ತೆರೆದಿದೆ. ಈಗ ಏನನ್ನಿಸುತ್ತದೆ! ನಿನ್ನಲ್ಲಿ ಸಂತೋಷವಿದೆಯೇ ?''

'' ಆಲೋಚಿಸಬಲ್ಲೆ, ತಾಳ್ಮೆಯಿಂದರಬಲ್ಲೆ, ಉಪವಾಸ ಮಾಡಬಲ್ಲೆ ಎಂದು ನಿನ್ನೆ ನಿನಗೆ ಹೇಳಿದಾಗ ನಾನು ಅಪ್ರಯೋಜಕನೆಂದು ತೀರ್ಮಾನಿಸಿದೆ. ಕಮಲ, ಈಗ ಅವುಗಳ ಪೂರ್ಣ ಪ್ರಯೋಜನವನ್ನು ನೋಡುವೆ. ಕಾಡಿನ ದಡ್ಡ ಸಮಣರು ಉಪಯುಕ್ತವಾದ ಎಷ್ಟೋ ವಿಷಯಗಳನ್ನು ತಿಳಿದಿರುವರು ಎಂಬುದನ್ನು ಕಾಣುವೆ. ಎರಡು ದಿವಸಕ್ಕೆ ಮೊದಲು ಗುರುತಿಸಲಾಗದ ಒಬ್ಬ ಸಮಣನಾಗಿದ್ದ ನಾನು ನಿನ್ನೆ ಕಮಲೆಯನ್ನು ಚುಂಬಿಸಿದೆ. ಸದ್ಯದಲ್ಲಿಯೇ ವ್ಯಾಪಾರಿಯಾಗಿ ನೀನು ಬಯಸುವ ಹಣವನ್ನೂ ಗಳಿಸುವೆ.''

''ನಿಜವೇ ಇರಬಹುದು. ಆದರೆ ಇದಕ್ಕೆ ಮೂಲಕಾರಣಗಳಾಗಿ ನಾನಲ್ಲದೆ ಇದ್ದರೆ ? ....ಕಮಲೆಯೂ ಸಹಾಯ ಮಾಡದಿದ್ದರೆ ನೀನೆಲ್ಲಿರುತ್ತಿದ್ದೆ ?''

''ಪ್ರಿಯ ಕಮಲ, ನಿನ್ನ ಉಪವನಕ್ಕೆ ಬಂದಾಗ ಮೊದಲ ಪ್ರಯತ್ನ ಮಾಡಿದವನು ನಾನು. ಅಪೂರ್ವ ಸುಂದರಿಯಿಂದ ಪ್ರೇಮಪಾಠ ಕಲಿಯ ಬೇಕೆಂಬುದು ನನ್ನ ಇಚ್ಛೆಯಾಗಿತ್ತು. ಹಾಗೆ ಇಚ್ಛಿಸಿದಾಗಲೇ ಅದನ್ನು ಸಾಧಿಸುವ ಬಗೆಯನ್ನು ಅರಿತಿದ್ದೆ. ಉಪವನದ ದ್ವಾರದಲ್ಲಿ ನಿನ್ನನ್ನು ಕಂಡ ಮೊದಲ ನೋಟ ದಲ್ಲಿಯೇ ನಿನ್ನ ಸಹಾಯ ದೊರೆಯುವುದು ಎಂಬುದನ್ನು ಅರಿತಿದ್ದೆ.''

''ನಾನು ಇಚ್ಛಿಸದಿದ್ದರೆ ?''

''ಸಾಧ್ಯವಿಲ್ಲ. ನೀನು ಇಚ್ಛಿಸುತ್ತೀ, ಅನ್ಯಮಾರ್ಗವಿಲ್ಲ. ಕಲ್ಲನ್ನು ನೀರಿಗೆ ಎಸೆದಾಗ ಅದು ಶೀಘ್ರವಾಗಿ ನೀರಿನ ತಳ ಸೇರುವ ಮಾರ್ಗವನ್ನು ಹಿಡಿಯುತ್ತದೆ. ಸಿದ್ಧಾರ್ಥನೂ ತನ್ನ ಗುರಿಯಲ್ಲಿ ಹಾಗೆಯೇ. ಸಾಧನೆಯಲ್ಲಿ ನಿಖರನಾದವನು, ಆಲೋಚನೆ, ತಾಳ್ಮೆ, ಉಪವಾಸ, ಮತ್ತೇನನ್ನೂ ಸಿದ್ಧಾರ್ಥ ಮಾಡುವುದಿಲ್ಲ. ಆದರೆ ವಿಷಯಗಳಲ್ಲಿ ಅವನು ನೀರಿನಲ್ಲಿ ಇಳಿವ ಕಲ್ಲಿನಂತೆ ಇಳಿಯುತ್ತಾನೆ. ಸಾಧನಾ ಪಥವನ್ನು ಕದಡುವ, ಗುರಿಯನ್ನು ಕುಲಗೆಡಿಸುವ ಯಾವುದನ್ನೂ ಮನಸ್ಸಿನೊಳಗೆ ಬಿಡದೆ ಗುರಿಮುಟ್ಟುತ್ತಾನೆ. ಸಿದ್ಧಾರ್ಥ ಸಮಣರಿಂದ ಕಲಿತದ್ದು ಇದೇ. ಇದನ್ನೇ ಮೂರ್ಖರು ಭೂತಗಳಿಂದಾಗುವ ತಂತ್ರ ಎಂದು ತಿಳಿಯುತ್ತಾರೆ. ಭೂತಗಳಿಂದೇನೂ ಆಗುವುದಿಲ್ಲ. ಭೂತಗಳೆನ್ನುವುದೇ ಭ್ರಮೆ, ಚಿಂತನೆ, ತಾಳ್ಮೆ, ಉಪವಾಸ ಮಾಡಬಲ್ಲ ಯಾರಾದರೂ ತಂತ್ರ ಮಾಡಬಹುದು. ಗುರಿಯನ್ನು ಮುಟ್ಟಬಹುದು.''

ಅವನ ಕಣ್ಣಿನ ನೋಟಕ್ಕೆ, ಸುಮಧುರ ಧ್ವನಿಗೆ ಮಾರುಹೋದ ಕಮಲೆ ಕೋಮಲ ಧ್ವನಿಯಲ್ಲಿ ಹೇಳಿದಳು. ನಿನ್ನ ಮಾತೇ ದಿಟವಿರಬಹುದು. ಅಥವಾ ಸಿದ್ಧಾರ್ಥ ರೂಪವಂತನಾಗಿರುವುದೇ ಕಾರಣವಿರಬಹುದು. ಅವನ ನೋಟವೇ ಹೆಂಗಸಿನ ಪಾಲಿಗೆ ಆಹ್ಲಾದಕರ. ನಿಜವಾಗಿಯೂ ಸಿದ್ಧಾರ್ಥ ನೀನು ಭಾಗ್ಯಶಾಲಿ.''

ಹಾಗಿದ್ದರೆ ನನ್ನ ನೋಟ ನಿನ್ನನ್ನು ಸದಾ ಸಂತೋಷಗೊಳಿಸಲಿ! ಅದೃಷ್ಟ ಸದಾ ನಿನ್ನಿಂದ ನನ್ನೆಡೆಗೆ ಬರಲಿ!'' ಎಂದು ಅವಳನ್ನು ಅಪ್ಪಿ ಮುತ್ತಿಟ್ಟು ಅಲ್ಲಿಂದ ಹೊರಬಂದ.

೨. ಜನರೊಂದಿಗೆ

ವರ್ತಕ ಕಾಮಸ್ವಾಮಿಯನ್ನು ನೋಡಲು ಹೋದ ಸಿದ್ಧಾರ್ಥನಿಗೆ ದೊಡ್ಡ ಉಪ್ಪರಿಗೆಯನ್ನು ತೋರಿಸಿದರು. ರತ್ನಗಂಬಳಿ ಹಾಸಿದ್ದ ಮಾರ್ಗವಾಗಿ ಸೇವಕರು ಕರೆದೊಯ್ದ ಕೊಠಡಿಯಲ್ಲಿ ಕಾಮಸ್ವಾಮಿಗಾಗಿ ಕಾದ ಸಿದ್ಧಾರ್ಥ.

ಕಾಮಸ್ವಾಮಿ ಬಂದ. ಅಂದವಾದ ನಯ ನಾಜೂಕಿನ ಚಿತ್ತಾರದಂತಿದ್ದ ಆಳು, ಕೂದಲು ನೆರೆತಿತ್ತು. ಕುಶಲತೆಯ ದೂರ ದೃಷ್ಟಿಯ ಕಣ್ಣುಗಳು. ವಿಷಯಾ ಸಕ್ತ ತುಟಿಗಳು. ಉಲ್ಲಾಸ ಆವರಿಸಿದ್ದ ಮುಖ. ಒಬ್ಬರಿಗೊಬ್ಬರು ಸ್ನೇಹದಿಂದ ವಂದಿಸಿದರು.

''ನೀನು ವರ್ತಕನಲ್ಲಿ ವೃತ್ತಿಯನ್ನರಸಿ ಬಂದಿರುವ ವಿದ್ಯಾವಂತ ಬ್ರಾಹ್ಮಣ ಪುತ್ರನೆಂದು ಕೇಳಿದೆ. ಬ್ರಾಹ್ಮಣನೇ, ಹಣದ ಅವಶ್ಯಕತೆಯಿಂದ ವೃತ್ತಿಯನ್ನು ಹುಡುಕುತ್ತಿರುವೆಯಾ ?''

'' ಇಲ್ಲ ಅದರ ಅಗತ್ಯವಿಲ್ಲ. ನನಗೆ ಯಾವುದರ ಅವಶ್ಯಕತೆಯೂ ಇಲ್ಲ. ಬಹಳ ಕಾಲ ಸಮಣನಾಗಿದ್ದು ಬಂದಿದ್ದೇನೆ ''

''ಸಮಣರಿಂದ ಬಂದಿರುವ ನಿನಗೆ ಯಾವುದರ ಅವಶ್ಯಕತೆ ಇಲ್ಲವೆಂದು ಹೇಗೆ ಹೇಳುವೆ ? ಸಮಣರು ಯಾವುದರ ಬಯಕೆಗೂ ಒಳ ಪಟ್ಟಿರುವುದಿಲ್ಲ ಅಲ್ಲವೆ''

''ನೀನು ಹಾಗೆ ಭಾವಿಸುವುದಾದರೆ ನನ್ನಲ್ಲಿ ಏನೂ ಇಲ್ಲ. ಪೂರ್ಣ ಸ್ವಾತಂತ್ರ್ಯವನ್ನು ಬಿಟ್ಟರೆ ನಾನು ಏನನ್ನು ಒಳಗೊಂಡಿಲ್ಲ, ನನಗೆ ಯಾವುದರ ಅಗತ್ಯವೂ ಇಲ್ಲ''

''ಏನೂ ಇಲ್ಲದೆ ಹೇಗೆ ಜೀವಿಸಬಲ್ಲೆ ?''

''ಇದುವರೆವಿಗೂ ಅದನ್ನು ಕುರಿತು ನಾನು ಚಿಂತಿಸಿಲ್ಲ. ಯಾವುದರಿಂದ ಬದುಕಬೇಕು ಎಂಬ ಯೋಚನೆ ಇಲ್ಲದೆ ಮೂರು ವರ್ಷ ಇದ್ದೆ.''

''ಹಾಗಾದರೆ ಬೇರೆಯವರನ್ನು ಅವಲಂಬಿಸಿ ಬದುಕಿದ್ದೆಯಾ ?''

''ಸ್ಪಷ್ಟವಾಗಿ ವರ್ತಕನೂ ಸಹ ಇತರರನ್ನು ಅವಲಂಬಿಸಿಯೇ ಬದುಕುತ್ತಾನೆ.''

''ನಿಜ, ಆದರೆ ಅದಕ್ಕೆ ಪ್ರತಿಯಾಗಿ ಕೊಡದೆ ಅವನೆಂದಿಗೂ ತೆಗೆದು ಕೊಳ್ಳುವುದಿಲ್ಲ.''

''ಅದು ಪ್ರಕೃತಿಯ ನಿಯಮ. ಪ್ರತಿಯೊಬ್ಬರೂ ಕೊಟ್ಟು ತೆಗೆದು ಕೊಳ್ಳುತ್ತಾರೆ. ಕೊಡುಕೊಳುವಿಕೆಯೇ ಜೀವನದ ಉಸಿರು.''

''ಓ ನಿನ್ನಲ್ಲಿ ಏನೂ ಇಲ್ಲದೆ ನೀನು ಏನನ್ನು ಕೊಡಬಲ್ಲೆ ?''

''ಪ್ರತಿಯೊಬ್ಬರೂ ತಮ್ಮಲ್ಲಿರುವುದನ್ನು ಕೊಡುತ್ತಾರೆ. ಸೈನಿಕನು ಶಕ್ತಿಯನ್ನು, ವರ್ತಕನು ವಸ್ತುಗಳನ್ನು, ಉಪಾಧ್ಯಾಯರು ವಿದ್ಯೆಯನ್ನು, ರೈತ ಧಾನ್ಯವನ್ನು, ಬೆಸ್ತ ಮೀನನ್ನು ಹೀಗೆ ತಮ್ಮಲ್ಲಿ ಇಲ್ಲದಿರುವುದನ್ನು ಗಳಿಸಲೆಂದು ಇರುವುದನ್ನು ಕೊಡುತ್ತಾರೆ.''

''ಸರಿ ನೀನೇನು ಕೊಡಬಲ್ಲೆ. ಕೊಡುವಂತಹದೇನು ಬಲ್ಲೆ ?''

''ನಾನು ಆಲೋಚಿಸಬಲ್ಲೆ, ತಾಳ್ಮೆಯಿಂದಿರಬಲ್ಲೆ, ಉಪವಾಸ ಮಾಡಬಲ್ಲೆ.''

''ಅಷ್ಟೇಯೇ ?''

''ಅಷ್ಟೆ ?''

''ಅದರಿಂದೇನು ಪ್ರಯೋಜನ ? ಉದಾಹರಣೆಗೆ ಉಪವಾಸ. ಅದರಿಂದೇನು ಉಪಯೋಗ ?''

''ಅದಕ್ಕೆ ಹೆಚ್ಚಿನ ಅರ್ಥವಿದೆ. ತಿನ್ನಲು ಏನೂ ಇಲ್ಲದಿದ್ದಾಗ ಚತುರ ಕಾರ್ಯವೆಂದರೆ ಉಪವಾಸ. ಒಂದು ವೇಳೆ ಸಿದ್ಧಾರ್ಥನಿಗೆ ಉಪವಾಸ ಮಾಡುವುದು

ಗೊತ್ತಿರದಿದ್ದರೆ ಹಸಿವನ್ನು ತಾಳಲಾರದೆ ಇಂದು ನಿನ್ನಲ್ಲಿ ಅಥವಾ ಬೇರೆಲ್ಲಿ ಯಾದರೂ ಕೆಲಸ ಹುಡುಕಬೇಕಾಗುತ್ತಿತ್ತು. ಆದರೀಗ ಅವನು ತಾಳ್ಮೆಯಿಂದ ಕಾದಿರಬಹುದು. ಯಾವ ಅಗತ್ಯವೂ ಇಲ್ಲದಿರುವುದರಿಂದ ಅವನು ಸಹನೆಯಿಂದ ಹಸಿವನ್ನು ಬಹಳ ದೂರದಿಂದ ನೋಡಿ ನಗಬಹುದು. ಆದ್ದರಿಂದ ಉಪವಾಸವೂ ಉಪಯುಕ್ತ.''

''ಸಮಣನೇ ಸರಿಯಾಗಿ ಹೇಳಿದೆ. ಒಂದು ಕ್ಷಣ...'' ಕಾಮಸ್ವಾಮಿ ಒಳಗೆ ಹೋಗಿ ಒಂದು ಸುಳಿಯ ಕಟ್ಟನ್ನು ತಂದು ಸಿದ್ಧಾರ್ಥನ ಕೈಗಿತ್ತು ಹೇಳಿದ: ''ಇದನ್ನು ಓದಬಲ್ಲೆಯಾ ?''

ಸಿದ್ಧಾರ್ಥ ಬಿಡಿಸಿ ನೋಡಿದ. ಅದರಲ್ಲಿ ಬರೆದಿದ್ದ ವ್ಯಾಪಾರದ ಒಪ್ಪಂದವನ್ನು ಓದಲು ಮೊದಲು ಮಾಡಿದ.

''ಒಳ್ಳೆಯದು, ನನಗಾಗಿ ಈ ಕಾಗದದ ಮೇಲೆ ಏನನ್ನಾದರೂ ಬರೆಯುವೆಯಾ ?'' ಕಾಗದ ಹಾಗೂ ಲೇಖನಿಯನ್ನು ಕೊಟ್ಟ ಕಾಮಸ್ವಾಮಿ. ಸಿದ್ಧಾರ್ಥ ಬರೆದುಕೊಟ್ಟ. ಕಾಮಸ್ವಾಮಿ ಓದಿದ, ''ಬರೆಯುವುದು ಒಳ್ಳೆಯದು. ಯೋಚಿಸುವುದು ಉತ್ತಮ. ಚಾತುರ್ಯ ಇನ್ನೂ ಉತ್ತಮ, ತಾಳ್ಮೆ ಶ್ರೇಷ್ಠವಾದುದು.''

''ಸೊಗಸಾಗಿ ಬರೆಯುತ್ತೀಯ, ನಾವು ಚರ್ಚಿಸುವ ವಿಷಯ ಬಹಳಷ್ಟಿದೆ. ಇಂದು ನನ್ನ ಅತಿಥಿಯಾಗಿ ಇಲ್ಲಿಯೇ ಇರಬೇಕೆಂದು ಆಮಂತ್ರಿಸುತ್ತೇನೆ.''

ಕೃತಜ್ಞತೆಯನ್ನು ವ್ಯಕ್ತಪಡಿಸಿ ಆಹ್ವಾನ ಒಪ್ಪಿದ. ಅತಿಥಿಯಾಗಿ ಅವನು ವರ್ತಕನ ಮನೆಯಲ್ಲಿಯೇ ಉಳಿದುಕೊಂಡ. ಬಟ್ಟೆ ಬರೆ, ಪಾದರಕ್ಷೆಗಳನ್ನು ತಂದು ಕೊಟ್ಟ ಸೇವಕ ನಿತ್ಯ ಸ್ನಾನಕ್ಕೆ ವ್ಯವಸ್ಥೆಮಾಡಿದ. ಎರಡು ಹೊತ್ತು ರುಚಿಕರ ವಾದ ಊಟಕೊಟ್ಟರೂ ಸಿದ್ಧಾರ್ಥ ಮಾಡುವುದು ಒಂದೇ ಊಟ. ಮದ್ಯವನ್ನಾಗಲಿ, ಮಾಂಸವನ್ನಾಗಲೀ ಸೇವಿಸಿಲ್ಲ. ಕಾಮಸ್ವಾಮಿ ತನ್ನ ವ್ಯಾಪಾರ ವನ್ನು ವಿವರಿಸಿದ. ಕಡಿಮೆ ಮಾತನಾಡಿ, ಹೆಚ್ಚು ಕೇಳಿ ಸಾಕಷ್ಟು ಹೊಸ ವಿಷಯವನ್ನು ಕಲಿತ ಸಿದ್ಧಾರ್ಥ.

ಕಮಲ ಹೇಳಿದಂತೆ ದಾಸನಾಗಿರದೆ ಸರಿಸಮಾನವಾಗಿ ಅಥವಾ ಅದಕ್ಕಿಂತ ಹೆಚ್ಚಾಗಿಯೇ ನಡೆದುಕೊಂಡ. ಕಾಮಸ್ವಾಮಿಯ ವ್ಯಾಪಾರವನ್ನು ಜಾಗರೂಕತೆಯಿಂದ ಮಾಡುತ್ತಿದ್ದ. ಆದರೆ ಅದರ ಮರ್ಮವನ್ನು ಕಲಿಯ ಬೇಕಾಗಿದ್ದ ಸಿದ್ಧಾರ್ಥ ಅದನ್ನು ಒಂದು ಆಟವೆಂದೇ ಗಣಿಸಿದ. ಅವನ ಹೃದಯ ವನ್ನು ಅದು ತಾಕಲಿಲ್ಲ.

ವ್ಯಾಪಾರದಲ್ಲಿ ಪಾತ್ರ ವಹಿಸುತ್ತಿದ್ದಂತೆ ಸಿದ್ಧಾರ್ಥ ಕಾಮಸ್ವಾಮಿಯ ಮನೆ ಯಲ್ಲಿ ಹೆಚ್ಚು ದಿವಸ ಇರಲಿಲ್ಲ. ದಿನವೂ ಸುಂದರಿ ಕಮಲ ಕರೆದ ವೇಳೆಗಳಲ್ಲಿ ಮನೋಹರ ಉಡುಗೆ - ತೊಡುಗೆಗಳಿಂದ ಕೊಡುಗೆಗಳನ್ನು ಹಿಡಿದು ಹೋಗುತ್ತಿದ್ದ. ಅವಳ ಚತುರ ಕೆಂಪು ತುಟಿಗಳಿಂದ ಬಹಳಷ್ಟು ಕಲಿತ. ಅವಳ ನಯವಾದ, ಮೃದು ವಾದ ಕೈಗಳು ಹೆಚ್ಚಿನ ವಿಷಯಗಳನ್ನು ಹೇಳಿಕೊಟ್ಟವು. ಪ್ರೇಮದ ಬಗ್ಗೆ ಏನೂ ತಿಳಿಯದ, ಅದರ ಆಳಕ್ಕಿಳಿಯಬೇಕೆಂದು ಬಯಸಿದ ಸಿದ್ಧಾರ್ಥ ಸುಖವನ್ನು ತಾನು ಕೊಡದೆ ಅನುಭವಿಸಲು ಸಾಧ್ಯವಿಲ್ಲ ಎಂಬುದನ್ನು ಅವಳಿಂದ ಕಲಿತ. ಪ್ರತಿ ಸನ್ನೆ, ಆಲಿಂಗನ, ಸ್ಪರ್ಶ, ನೋಟ, ಹಾಗೂ ಶರೀರದ ಪ್ರತಿಯೊಂದು ಅಂಗಗಳ ರಹಸ್ಯವನ್ನು ಅರಿತರೆ ಸುಖದ ಅಂತರಂಗಕ್ಕಿಳಿಯ ಬಹುದೆಂಬುದನ್ನು ಕಲಿಸಿದಳು ಕಮಲ.

ಪ್ರೇಮಿಗಳು ಸಂಭೋಗದ ನಂತರ ಒಬ್ಬರಿಂದೊಬ್ಬರು ಸೂರೆಗೊಳ್ಳದೆ, ಮೆಚ್ಚಿಗೆಯಾಗದೆ, ಸಂಪೂರ್ಣ ತೃಪ್ತಿಯಾಗದೆ ಬೇರೆಯಾದರೆ ಸದುಪಯೋಗವಾದ ಭೀಕರ ಅತೃಪ್ತಿಯುಂಟಾಗುವುದನ್ನು ವಿವರಿಸಿದಳು. ಶಿಷ್ಯನಾಗಿ, ಪ್ರಿಯಸಖನಾಗಿ, ಪ್ರೇಮಿಯಾಗಿ, ಚತುರೆಯಾದ ಅಪ್ರತಿಮ ಸುಂದರಿಯಾದ ಕಮಲೆಯೊಂದಿಗೆ ಸುಂದರ ರಸಮಯ ಕ್ಷಣಗಳನ್ನು ಕಳೆದ. ಅವನ ಪ್ರಸ್ತುತ ಜೀವನದ ಅರ್ಥ ಹಾಗೂ ಮೌಲ್ಯ ಕಾಮಸ್ವಾಮಿಯೊಂದಿಗೆ ಮಾಡುವ ವ್ಯಾಪಾರಕ್ಕಿಂತ ಕಮಲೆಯೊಂದಿಗೆ ಕಲೆವ ಕಾಲದಲ್ಲಿ ಹೆಚ್ಚು ನೆಮ್ಮದಿ ಕಾಣಿಸಿತು.

ಕಾಮಸ್ವಾಮಿ ಮುಖ್ಯವಾದ ಹಾಗೂ ಬೇಡಿಕೆಯ ಪತ್ರಗಳನ್ನು ಬರೆಯು ವುದಕ್ಕೆ ಸಿದ್ಧಾರ್ಥನಿಗೆ ಕೊಟ್ಟ. ಗಹನವಾದ ವಿಷಯಗಳನ್ನು ಚರ್ಚಿಸುತ್ತ ಅವನೊಂದಿಗೆ ಹೊಂದಿಕೊಂಡ. ಧಾನ್ಯಗಳ ಬಗ್ಗೆ, ಉಣ್ಣೆಯ ಬಗ್ಗೆ, ರಫ್ತಿನ ಬಗ್ಗೆ ಸಿದ್ಧಾರ್ಥ ಹೆಚ್ಚು ತಿಳಿದಿರಲಿಲ್ಲವಾದರೂ ಅಪರಿಚಿತರನ್ನು ಆದರಿಸು ವುದರಲ್ಲಿ ತಾಳ್ಮೆಯಿಂದ

ವ್ಯಾಪಾರಿಗಳ ಮನಸೂರೆಗೊಳ್ಳುವುದರಲ್ಲಿ ನಿಪುಣ ನಾಗಿದ್ದ. ಅವನ ಈ ವರ್ತನೆಯಿಂದ ಕಾಮಸ್ವಾಮಿ ಸಂತೋಷಗೊಂಡಿದ್ದ. ಒಮ್ಮೆ ಅವನ ಗೆಳೆಯನಿಗೆ ಹೇಳಿದ, ''ಬ್ರಾಹ್ಮಣ ನಿಜವಾದ ವ್ಯಾಪಾರಿಯಲ್ಲ ! ಆಗಲೂ ಆರ. ವ್ಯಾಪಾರಿಯ ಗುಣ ಒಳಗೊಂಡವನೂ ಅಲ್ಲ. ಆದರೆ ಅವನಿಗೆ ವ್ಯಾಪಾರದಲ್ಲಿ ವಿಜಯ ಸಾಧಿಸುವ ಗುಟ್ಟುಗೊತ್ತು. ಅದು ಅವನ ಹುಟ್ಟಿನಿಂದಲೇ ಬಂದ ವಿದ್ಯೆಯೋ ಅಥವಾ ತಂತ್ರವೋ ಇಲ್ಲ ಸ್ಸಮಣರಿಂದ ಕಲಿತ ವಿದ್ಯೆಯೋ ಇರಬೇಕು. ವ್ಯಾಪಾರ ಅವನ ಮೇಲೆ ಯಾವ ಪರಿಣಾಮವನ್ನೂ ಮಾಡಿಲ್ಲ. ನಿಪುಣನಾಗದೆ ಅದರೊಂದಿಗೆ ಅವನು ಆತ ಆಡುತ್ತಿರುವಂತೆ ಕಾಣುತ್ತದೆ. ಸೋಲಿಗೆ ಹೆದರಿ, ನಷ್ಟಕ್ಕೆ ಎಂದೂ ಚಿಂತಿಸಿದವನಲ್ಲ.''

''ನಿನಗಾಗಿ ಅವನು ಮಾಡುವ ವ್ಯಾಪಾರದಲ್ಲಿ ಬರುವ ಲಾಭಾಂಶ ದಲ್ಲಿ ಮೂರನೆ ಒಂದು ಭಾಗವನ್ನು ಕೊಡು. ಹಾಗೇ ನಷ್ಟದಲ್ಲೂ ಪಾಲ್ಗೊಳ್ಳಲಿ. ಆಗ ಅವನು ಹೆಚ್ಚು ಉತ್ಸಾಹಿಯಾಗುತ್ತಾನೆ.'' ಅವನ ಗೆಳೆಯ ವಿವೇಕ ಹೇಳಿದ. ಕಾಮಸ್ವಾಮಿ ಹಾಗೇ ಮಾಡಿದ. ಸಿದ್ಧಾರ್ಥ ಅದಕ್ಕೆ ಹೆಚ್ಚು ಗಮನ ಕೊಡದೆ, ಲಾಭ ಬಂದಾಗ ತೆಗೆದುಕೊಳ್ಳುತ್ತಿದ್ದ; ನಷ್ಟವಾದಾಗ ನಕ್ಕು 'ಈ ವ್ಯವಹಾರ ತಪ್ಪಾಗಿ ಹೋಯಿತು' ಎಂದು ಸುಮ್ಮನಾಗುತ್ತಿದ್ದ.

ಸಿದ್ಧಾರ್ಥ ವ್ಯಾಪಾರದಲ್ಲಿ ನಿರಾಸಕ್ತನಾಗಿಯೇ ಇದ್ದ. ಸುಗ್ಗಿಯ ಕಾಲದಲ್ಲಿ ಭತ್ತ ಕೊಳ್ಳಲು ಒಮ್ಮೆ ಹಳ್ಳಿಗೆ ಹೋದ. ಅವನು ಹೋಗುವ ವೇಳೆಗಾಗಲೇ ಆ ರೈತ ಮತ್ತೊಬ್ಬ ವರ್ತಕನಿಗೆ ಭತ್ತ ಮಾರಿಯಾಗಿತ್ತು. ಸಿದ್ಧಾರ್ಥ ಕೆಲವು ದಿವಸಗಳು ಅಲ್ಲೆ ಇದ್ದು ರೈತರನ್ನು ರಂಜಿಸುತ್ತ, ಮದುವೆಗಳಲ್ಲಿ ಭಾಗಿಯಾಗಿ ಮಕ್ಕಳಿಗೆ ಹಣಕೊಟ್ಟು ತೃಪ್ತಿಯಿಂದ ಹಿಂದಿರುಗಿದ್ದ. ಬೇಗ ಬರದೆ ಕಾಲ ಕಳೆದು ಹಣ ವ್ಯಯಮಾಡಿ ಬಂದದ್ದರಿಂದ ಕಾಮಸ್ವಾಮಿ ನಿಂದಿಸಿದ. ''ನಿಂದಿಸಬೇಡ. ನಿಂದನೆಯಿಂದ ಯಾರೂ ಎಂದೂ ಏನನ್ನೂ ಸಾಧಿಸಿಲ್ಲ. ನಷ್ಟವಾಗಿದ್ದರೆ ಭರಿಸುತ್ತೇನೆ. ಈ ಪ್ರವಾಸದಿಂದ ನಾನು ತೃಪ್ತಿಗೊಂಡಿದ್ದೇನೆ. ಜನರೊಂದಿಗೆ ಬೆರೆತು ಅವರ ಸಖ್ಯ ಸಂಪಾದಿಸಿದ್ದೇನೆ. ರೈತರ ಮಕ್ಕಳು ನನ್ನ ತೊಡೆಯ ಮೆಲೆ ಆಡಿದರು. ರೈತರು ಅಕ್ಕರೆಯಿಂದ ಕರೆದು ತಮ್ಮ ಜಮೀನನ್ನು ತೋರಿಸಿದರು. ಬೇರೆ ವರ್ತಕರನ್ನು ಅಲ್ಲಿಗೆ ಯಾರೂ ಕರೆದುಕೊಂಡು ಹೋಗಲಿಲ್ಲ'' ಸಿದ್ಧಾರ್ಥ ಹೇಳಿದ.

''ಅವೆಲ್ಲವೂ ಒಳ್ಳೆಯವೇ; ಆದರೆ ನೀನು ವರ್ತಕ. ನಿನ್ನ ಈ ಪ್ರವಾಸ ಆನಂದಕ್ಕಾಗಿಯೋ ಅಥವಾ ವ್ಯಾಪಾರಕ್ಕಾಗಿಯೋ ?''

''ನಿಶ್ಚಯವಾಗಿ ನನ್ನ ಆನಂದಕ್ಕಾಗಿ'' ಸಿದ್ಧಾರ್ಥ ನಕ್ಕ. ''ಏಕಾಗಬಾರದು? ಹೊಸ ಜಿಲ್ಲೆಗಳಲ್ಲಿ ಈಗ ಪರಿಚಿತನಾಗಿದ್ದೇನೆ. ಅವರ ನಂಬಿಕೆ ಹಾಗೂ ಸ್ನೇಹದಿಂದ ಸಂತೊಷಗೊಂಡಿದ್ದೇನೆ. ನಾನೇನಾದರೂ ಈಗ ಕಾಮಸ್ವಾಮಿ ಯಾಗಿದ್ದರೆ, ಆಗಿ ಹೋಗಿದ್ದ ವ್ಯಾಪಾರಕ್ಕಾಗಿ ಕೋಪಗೊಂಡು ತಕ್ಷಣ ಹೊರಟು ಬರುತ್ತಿದ್ದೆ. ಆಗಲೂ ವೇಳೆ ಹಾಗೂ ಹಣ ವ್ಯಯವಾಗುತ್ತಿತ್ತು. ಕೋಪಗೊಂಡು ನನ್ನನ್ನು ಹಾಗೂ ಬೇರೆಯವನ್ನು ಘಾಸಿಗೊಳಿಸದೆ ನಾನು ಅಲ್ಲೇ ಕಾಲ ಕಳೆದು ಅವರೊಂದಿಗೆ ಆನಂದದಿಂದಿದ್ದು ಹೆಚ್ಚು ಕಲಿತೆ. ಮುಂದಿನ ಸುಗ್ಗಿಯಲ್ಲಿ ಅಥವಾ ಮತ್ತೆಂದಾದರೂ ಅಲ್ಲಿಗೆ ಹೋದರೆ ಪ್ರೀತಿಯಿಂದ ಜನರು ಸ್ವಾಗತಿ ಸುತ್ತಾರೆ. ಆಗ ಅವರನ್ನು ನಾನು ನನ್ನ ಅತೃಪ್ತಿಯಿಂದ ಘಾಸಿಗೊಳಿಸಿಲ್ಲ ಎನ್ನುವ ತೃಪ್ತಿಯಾಗುತ್ತದೆ. ಹೇಗಾದರಾಗಲಿ ನಿಂದಿಸುವುದರಿಂದ ನೀನು ನಿನ್ನನ್ನು ಘಾಸಿಗೊಳಿಸಿಕೊಳ್ಳಬೇಡ. ಎಂದಾದರೂ ನಿನಗೆ ಈ ಸಿದ್ಧಾರ್ಥ ತೊಂದರೆ ಕೊಡುತ್ತಿದ್ದಾನೆ ಎನಿಸಿದರೆ ಒಮ್ಮೆ ಹೇಳು, ಅವನ ದಾರಿ ಅವನು ಹಿಡಿಯುತ್ತಾನೆ. ಅದುವರೆವಿಗೂ ನಾವು ಗೆಳೆಯರಾಗಿರೋಣ.''

ಕಾಮಸ್ವಾಮಿಯ ಉಪ್ಪು ತಿನ್ನುತ್ತಿದ್ದೀಯೆ ಎಂದು ಸಿದ್ಧಾರ್ಥನಿಗೆ ತಿಳುವಳಿಕೆ ಹೇಳಲು ಪ್ರಯತ್ನಿಸಿದ ವರ್ತಕರು ವಿಫಲರಾದರು. ಸಿದ್ಧಾರ್ಥ ಅವನ ಗಳಿಕೆಯಲ್ಲಿ ತಿನ್ನುತ್ತಿದ್ದ. ಆ ರೀತಿ ಲೆಕ್ಕಿಸಿದರೆ ಎಲ್ಲರೂ ಪರರ ಉಪ್ಪು ತಿಂದೇ ಬೆಳೆಯುತ್ತಿರುವರು. ಕಾಮಸ್ವಾಮಿಯ ಯಾವ ತೊಂದರೆಗೂ ಸಿದ್ಧಾರ್ಥ ಚಿಂತಿಸಿದವನಲ್ಲ. ವ್ಯಾಪಾರದಲ್ಲಿ ನಷ್ಟ ಉಂಟಾದರೆ, ದಾಸ್ತಾನು ಮಾಡಿದ ಮಾಲು ಕಳುವಾದರೆ, ಸಾಲಗಾರರು ಬಂದಾಗ ಹಣ ಕೊಡಲಾಗದೆ ಕಾಮಸ್ವಾಮಿ ಅನೇಕ ತೊಂದರೆಗಳಲ್ಲಿರುತ್ತಿದ್ದ. ಯಾವ ಸಂದರ್ಭದಲ್ಲು ಸಿದ್ಧಾರ್ಥನನ್ನು ಕೇಳ ಲಾಗದೆ, ಕೋಪಿಸಿಕೊಳ್ಳಲಾಗದೆ ಅವನ ಹಣೆಯಲ್ಲಿ ಬರಿಯ ಗೆರೆಗಳು ಮೂಡು ತ್ತಿದ್ದುವು. ನಿದ್ರೆಯಿಲ್ಲದೆ ಚಿಂತೆಯಿಂದಿರುತ್ತಿದೆ. ಒಮ್ಮೆ ಕಾಮಸ್ವಾಮಿ ನನ್ನಿಂದ ಎಲ್ಲವನ್ನೂ ನೀನು ಕಲಿತೆ ಎಂದು ಹೇಳಿದಾಗ ಸಿದ್ಧಾರ್ಥ ಉತ್ತರಿಸಿದ. ''ಅಂತಹ ತಮಾಷೆಯನ್ನು ಮಾಡಬೇಡ. ಬುಟ್ಟಿಯಲ್ಲಿರುವ ಮೀನಿಗೆ

ಎಷ್ಟಾಗುತ್ತದೆ. ಸಾಲದ ಹಣಕ್ಕೆ ಎಷ್ಟು ಬಡ್ಡಿ ಪಡೆಯಬಹುದು ಎಂಬುದನ್ನು ನಿನ್ನಿಂದ ಕಲಿತೆ. ಅದು ನಿನ್ನ ವಿದ್ಯೆ. ಕಾಮಸ್ವಾಮಿ ಹೇಗೆ ಆಲೋಚಿಸಬೇಕು ಎಂಬುದನ್ನು ನನ್ನಿಂದ ಕಲಿತರೆ ಒಳ್ಳೆಯದು.''

ಸಿದ್ಧಾರ್ಥನಿಗೆ ವ್ಯಾಪಾರದಲ್ಲಿ ಆಸಕ್ತಿ ಇರಲಿಲ್ಲ. ಅದು ಕಮಲೆಗೆ ತರುವ ಹಣಕ್ಕಾಗಿ ಮಾತ್ರ ಬೇಕಾಗಿತ್ತು. ಅವನ ಅಗತ್ಯತೆಗಿಂತ ಅಲ್ಲಿ ಹೆಚ್ಚಾಗಿಯೇ ಸಿಗುತ್ತಿತ್ತು. ಅವನು ಹೆಚ್ಚಾಗಿ ತಿಳಿದಿದ್ದ ಚಂದ್ರ, ನಕ್ಷತ್ರಗಳಿಗಿಂತ ಅವನ ಅರಿವಿಗೆ ಬಾರದೆ ದೂರ ವಿರುವ ಜನರ ಶ್ರಮ, ತೊಂದರೆ, ಸುಖ ಸಂತೋಷಗಳನ್ನು ಕಂಡು ಅವನ ಸೌಜನ್ಯ ಹಾಗೂ ಕುತೂಹಲ ವ್ಯಕ್ತವಾಗುತ್ತಿತ್ತು. ಎಲ್ಲರೊಡನೆ ಮಾತನಾಡಿ, ಬೆರೆತು ಕಲಿಯುವುದು ಸುಲಭವೆನಿಸಿದರೂ ಅವರಿಂದ ಬೇರೆಯಾಗಿರುವ ಅಂಶವನ್ನು ಅರಿತಿದ್ದ - ಅದೇ ಕಾರಣಕ್ಕೆ ತಾನು ಸಮಣ ನಾಗಿದ್ದುದು. ಇಲ್ಲಿ ಮಕ್ಕಳಂತೆ ಮೃಗಗಳಂತೆ ಜೀವಿಸುತ್ತಿದ್ದ ಜನರನ್ನು ಕಂಡು ಪ್ರೀತಿ ತಿರಸ್ಕಾರಗಳುಂಟಾದುವು. ಅವರು ಶ್ರಮಪಡುವುದನ್ನು, ತೊಂದರೆ ಅನುಭವಿಸುವುದನ್ನು, ವಸ್ತುಗಳಿಗಾಗಿ ಕೊರಗುತ್ತ ಮುದುಕರಾಗುವುದನ್ನು ನೋಡಿದ, ಅಲ್ಲದೆ ಹಣ, ಅಲ್ಪ ಸುಖ ಹಾಗೂ ಕ್ಷುಲ್ಲಕ ಸನ್ಮಾನಗಳಿಗೆ ಯಾವ ಅರ್ಥವಾಗಲಿ, ಮೌಲ್ಯವಾಗಲಿ ಇಲ್ಲವೆನಿಸಿತು. ಒಬ್ಬರಿಗೊಬ್ಬರು ಬೈದು ಜಗಳವಾಡುವುದನ್ನು ನೊವಿನಿಂದ ನರಳುವುದನ್ನು, ಸಮಣನು ಲೆಕ್ಕಿಸದೆ ನಕ್ಕುಬಿಡುವ ಪದಚ್ಯುತರಾಗಿ ಕೊರಗುವುದನ್ನು ನೋಡಿದ.

ಜನರು ತಂದು ಕೊಟ್ಟದ್ದನ್ನೆಲ್ಲಾ ಸಿದ್ಧಾರ್ಥ ಸ್ವೀಕರಿಸಿದ. ಸಾಲ ಕೇಳು ವವರು, ಬಟ್ಟೆ ಮಾರುವವರು ಎಲ್ಲರನ್ನೂ ಸ್ವಾಗತಿಸಿದ. ಸಮಣನಷ್ಟು ನಿರ್ಗತಿಕನಲ್ಲದ ಭಿಕ್ಷುಕನನ್ನೂ ಆದರಿಸಿ ಅವನ ಕತೆಯನ್ನು ಕೇಳುತ್ತಿದ್ದ. ಹೊರದೇಶದ ಶ್ರೀಮಂತ ವರ್ತಕನನ್ನೂ, ತನ್ನ ಸೇವೆ ಮಾಡುವ ಸೇವಕನನ್ನೂ ಒಂದೇ ರೀತಿಯ ಗೌರವ ದಿಂದ ಕಾಣುತ್ತಿದ್ದ. ತಾನು ಬಾಳೆಹಣ್ಣು ಕೊಂಡು ಚಿಲ್ಲರೆ ಹಣವನ್ನು ಅವನಿಗೇ ಬಿಡುತ್ತಿದ್ದ. ವ್ಯಾಪಾರಿಗೂ ಸಹ ಅದೇ ಗೌರವ. ಕಾಮಸ್ವಾಮಿಯು ವ್ಯಾಪಾರದ ವ್ಯವಹಾರವನ್ನು ಇಲ್ಲ ಯಾವುದಾದರೂ ಒಂದು ತೊಂದರೆಯನ್ನು ಹೇಳಿಕೊಂಡರೆ

ಗಮನವಿಟ್ಟು ಕುತೂಹಲದಿಂದ ಕೇಳಿ, ವಿಸ್ಮಯದಿಂದ ಗ್ರಹಿಸಿ ಉಚಿತ ವೆನಿಸಿದಲ್ಲಿ ಒಪ್ಪಿ ಕಾದಿದ್ದ ಬೇರೆಯವರಿಗೆ ಗಮನ ಕೊಡುತ್ತಿದ್ದ. ವ್ಯಾಪಾರ ಮಾಡಲು, ಮೋಸ ಮಾಡಲು, ಕುತೂಹಲದಿಂದ ಕೇಳಲು, ಗಮನ ಸೆಳೆಯಲು, ಅವನಿಂದ ಮಾರ್ಗದರ್ಶನ ಪಡೆಯಲು ಅವನಲ್ಲಿಗೆ ಬಹಳ ಜನ ಬರುತ್ತಿದ್ದರು. ಅವರಿಗೆಲ್ಲ ಮಾರ್ಗದರ್ಶನ ಮಾಡಿದ. ಅವರಿಗೆ ಕನಿಕರ ತೋರಿಸಿದ. ಕೊಡುಗೆ ಗಳನ್ನು ಕೊಟ್ಟ. ಮೋಸ ಮಾಡುವವರಿಗೆ ಕಿಂಚಿತ್ತವಕಾಶವನ್ನೂ ಕೊಟ್ಟ. ಹಿಂದೆ ದೇವತೆಗಳು, ಬ್ರಹ್ಮ ಇವನ ಭಾವನೆಗಳನ್ನು ತುಂಬಿದಂತೆ ಈಗ ಇವರೆಲ್ಲರೂ ಅವನಲ್ಲಿ ತುಂಬಿಕೊಂಡರು.

ಸುಲಭವಾಗಿ ಅರ್ಥವಾಗುವಂತೆ ಮೃದು ಮಧುರವಾದ ಧ್ವನಿಯಲ್ಲಿ ಅವನ ಅಂತರಂಗ ಎಚ್ಚರಿಸಿತು. ಒಡನೆಯೇ ಅವನಿಗೆ ತಾನು ನಡೆಸುತ್ತಿರುವ ಅಪರಿಚಿತ ಜೀವನದ ಅರಿವಾಯಿತು. ಆನಂದದಿಂದ ತುಂಬಿದ ಕೆಲವು ಘಳಿಗೆಗಳು ಸಂತೋಷದ ಅನುಭವವನ್ನೀಯುವ ಬರಿಯ ಆಟವೆನಿಸಿತು. ಆದರೆ ನಿಜವಾದ ಬದುಕು ಅವನನ್ನು ತಟ್ಟದೆ ಅವನ ಹಿಂದೆಯೆ ನುಸುಳಿ ಹೋಗುತ್ತಿತ್ತು. ಚೆಂಡಿ ನೊಂದಿಗೆ ಆಡುವ ಆಟಗಾರನಂತೆ ಅವನು ವ್ಯಾಪಾರದಲ್ಲಿ, ಜನರೊಂದಿಗಿದ್ದು, ಅವರನ್ನು ಗಮನಿಸುತ್ತಾ, ಅವರನ್ನು ಅನುಕರಿಸುತ್ತಿದ್ದರೂ ತನ್ನ ಸ್ವಭಾವದಲ್ಲಿ, ಗುಣದಲ್ಲಿ ಅರಿವಿರಲಿಲ್ಲ. ಅವನ ಅಂತರಂಗ ಎಲ್ಲೋ ಬಹುದೂರದಲ್ಲಿ ಕಣ್ಣಿಗೆ ಕಾಣದೆ ಅವನ ಬದುಕಿಗೆ ಸಂಬಂಧ ವಿಲ್ಲದಂತೆ ವಿಹರಿಸುತ್ತಿತ್ತು.

ಈ ಭಾವನೆಯಿಂದ ಕೆಲವು ಸಮಯ ಭಯಗೊಂಡು, ಬರಿಯ ನೋಟಕ ನಾಗಿರದೆ ಅವರೊಂದಿಗೆ ಮಿಳಿತವಾಗಿ, ಸುಖ-ದುಃಖಗಳಲ್ಲಿ ಸೇರಿ, ದಿನನಿತ್ಯದ ಬದುಕಿ ನಲ್ಲಿ ಪಾಲ್ಗೊಂಡು ಒಂದಾಗಬೇಕೆನಿಸಿತು.

ಸುಂದರಿ ಕಮಲೆಯಲ್ಲಿಗೆ ನಿತ್ಯ ಹೊಗುತ್ತಿದ್ದ. ಕಲಿತ ಪ್ರೇಮಕಲೆಯಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಕೊಡುಕೊಳುವಿಕೆಗಳು ಒಂದಾಗಿದ್ದವು. ಅವಳೊಂದಿಗೆ ಮಾತನಾಡಿ, ಅವಳಿಂದ ಕಲಿತು ಹೇಳಿಸಿಕೊಳ್ಳುವುದಲ್ಲದೆ ತಾನೂ ಹೇಳಿಕೊಡುತ್ತಿದ್ದ. ಅವನನ್ನು ಗೋವಿಂದನಿಗಿಂತ ಹೆಚ್ಚಾಗಿ ಅರ್ಥಮಾಡಿಕೊಂಡ ಅವಳು ಹೆಚ್ಚು ಕಡಿಮೆ ಅವನಂತೆಯೇ ಇದ್ದಳು.

ಅವಳಿಗೆ ಒಮ್ಮೆ ಹೇಳಿದ, ''ಬೇರೆ ಜನರಿಗಿಂತ ಭಿನ್ನಳಾದ ನೀನೂ ನನ್ನಂತೆಯೇ. ನೀನು ಮತ್ತ್ಯಾರೂ ಆಗಿರದ ಕಮಲ. ನಿನ್ನಲ್ಲಿ ಶಾಂತಿ, ನೈರ್ಮಲ್ಯವಿದೆ. ನನ್ನಂತೆ ಎಂದಾದರೊಂದು ದಿನ ನಿವೃತ್ತಿಹೊಂದಿ ನೀನೂ ನೀನಾಗಿಯೇ ಉಳಿಯ ಬಹುದು. ಕೆಲವರಿಗೇ ಸೀಮಿತವಾಗಿರುವ ಈ ಸಾಮರ್ಥ್ಯವನ್ನು ಯಾರಾ ದರೂ ಪಡೆಯ ಬಹುದು.''

''ಎಲ್ಲ ಜನರು ಚತುರರಾಗಿಲ್ಲ'' ಕಮಲ ಹೇಳಿದಳು.

''ಅದಕ್ಕೆ ಯಾವ ಸಂಬಂಧವೂ ಇಲ್ಲ. ನನ್ನಂತೆ ಕಾಮಸ್ವಾಮಿ ನಿಜಕ್ಕೂ ಚತುರ. ಆದಾಗ್ಯೂ ಅವನಲ್ಲಿ ನೈರ್ಮಲ್ಯವಿಲ್ಲ. ಮಕ್ಕಳಂತೆ ಮುಗ್ಧರಾದವರು ಅದನ್ನು ಹೊಂದಬಹುದು. ಕಮಲ, ಬಹಳ ಜನ ಒಣಗಿದ ಎಲೆಯಂತೆ ಕಳಚಿ ಗಾಳಿಯಲ್ಲಿ ಸಿಕ್ಕಿ ತತ್ತರಿಸಿ ನೆಲಕ್ಕೆ ಬೀಳುತ್ತಾರೆ. ಎಲ್ಲೋ ಕೆಲವರು ನಕ್ಷತ್ರಗಳಂತೆ, ನಿಶ್ಚಿತದಾರಿಯಲ್ಲಿ ಸಾಗುತ್ತಾರೆ. ಅವರನ್ನು ಯಾವ ಗಾಳಿಯೂ ಅಲುಗಿಸದು. ಅವರೇ ಅವರ ಮಾರ್ಗದರ್ಶಕರಾಗಿ ದಾರಿ ಕಂಡು ಕೊಳ್ಳುತ್ತಾರೆ. ನಾನು ಕಂಡಿರುವ ಅನೇಕ ಬುದ್ಧಿವಂತರಲ್ಲಿ ಪರಿಪಕ್ವನಾದವನು ಒಬ್ಬನಿದ್ದಾನೆ. ಅವನನ್ನು ಎಂದಿಗೂ ಮರೆ ಯಲಾರೆ. ಅವನದೇ ಆದ ಸಿದ್ಧಾಂತವನ್ನು ಮುಕ್ತಿಪಥವನ್ನು ಬೋಧಿಸುವ ಪ್ರಖ್ಯಾತ ನಾದ ಗೌತಮಬುದ್ಧ. ಸಾವಿರಾರು ಯುವಕರು ಪ್ರತಿನಿತ್ಯ ಅವನ ಉಪದೇಶವನ್ನು ಕೇಳಿ, ಪ್ರತಿಕ್ಷಣವೂ ಅವನು ಹೇಳಿದಂತೆ ನಡೆಯುತ್ತಾರೆ. ಆದರೆ ಅವರೆಲ್ಲಾ ಬೀಳುವ ಎಲೆಗಳು ತಮ್ಮಲ್ಲಿಯೇ ಆನಂದ ಮಾರ್ಗವನ್ನು ಕಂಡು ಗುರುತಿಸಿಕೊಳ್ಳಲಾಗದವರು.''

ಕಮಲ ಅವನನ್ನು ನೋಡಿ ನಕ್ಕು ಹೇಳಿದಳು. ''ಅವನನ್ನು ಕುರಿತು ಮಾತ ನಾಡುತ್ತಿದ್ದೀಯೆ ಪುನಃ ಸಮಣನ ಆಲೋಚನೆಯಲ್ಲಿದ್ದೀಯೇನು?''

ಸಿದ್ಧಾರ್ಥ ಸುಮ್ಮನಾದ. ಇಬ್ಬರೂ ಪ್ರೇಮದಾಟದಲ್ಲಿ ತೊಡಗಿದರು. ಕಮಲೆ ತನಗೆ ತಿಳಿದಿದ್ದ ಮುವತ್ತರಿಂದ ನಲವತ್ತು ವಿವಿಧ ಆಟಗಳಲ್ಲಿ ತೊಡಗಿಸಿದಳು. ಅವಳ ಶರೀರ ಚಿರತೆಯಂತೆ ಆಕರ್ಷಕವಾಗಿ, ಬೇಡನ ಬಿಲ್ಲಿನಂತೆ ಬಾಗುತ್ತಿತ್ತು. ಅವಳಿಂದ ಪ್ರೇಮಕಲೆಯನ್ನು ಕಲಿತವರು ಆನಂದಾಸ್ವಾದನೆಯ ಬಹು ಮಾರ್ಗಗಳನ್ನು,

ರತಿಸಾನುಭೂತಿಯ ರಹಸ್ಯವನ್ನು ತಿಳಿದು ಸವಿಯುತ್ತಿದ್ದರು. ಅತಿ ಪ್ರೀತಿಯಿಂದ ಅವನನ್ನು ಗೆದ್ದು ತನ್ನಲ್ಲಿ ಕರಗತವಾದ ವಿದ್ಯೆಯಿಂದ ಅವನನ್ನು ರಂಜಿಸುತ್ತ, ತೃಪ್ತಿ ಪಡಿಸುತ್ತ ಬಹಳ ಹೊತ್ತು ಸಿದ್ಧಾರ್ಥನೊಂದಿಗೆ, ಅವನು ತನ್ನನ್ನು ಗೆಲ್ಲುವವರೆಗೆ ಅಷ್ಟಿ ಆಟವಾಡುತ್ತಿದ್ದಳು. ತೃಪ್ತಿಯಿಂದ ಆಯಾಸಗೊಂಡ ಸಿದ್ಧಾರ್ಥ ಅವಳ ಪಕ್ಕಕ್ಕೆ ಹೊರಳಿದ.

ಕಮಲ ಅವನ ಮೇಲೆ ಬಾಗಿ ಆಯಾಸಗೊಂಡ ಅವನ ಮುಖವನ್ನು ಕಣ್ಣುಗಳನ್ನು ಬಹಳ ಹೊತ್ತು ದಿಟ್ಟಿಸಿ ನೋಡಿ ಭಾವುಕತೆಯಿಂದ ಹೇಳಿದಳು. ಇದುವರೆವಿಗೂ ನಾನು ಅನುಭವಿಸಿದ ಪ್ರೇಮಿಗಳಲ್ಲಿ ನಿನ್ನಂಥವನಿಲ್ಲ. ಎಲ್ಲರಿಗಿಂತಲೂ ನೀನು ಬಲಶಾಲಿ. ಪ್ರೇಮ ಕ್ರೀಡಾಸಕ್ತಿ ಬಹು ಆಕರ್ಷಕ ವ್ಯಕ್ತಿ. ಈ ಕಲೆಯನ್ನು ಚೆನ್ನಾಗಿ ಅಭ್ಯಾಸ ಮಾಡಿರುವೆ. ಸಿದ್ಧಾರ್ಥ ಇನ್ನೂ ಸ್ವಲ್ಪ ವಯಸ್ಸಾದ ಮೇಲೆ ನಿನ್ನಿಂದ ಒಂದು ಮಗು ಪಡೆಯುತ್ತೇನೆ.... ಪ್ರಿಯತಮಾ, ಆದರೆ ನೀನಿನ್ನೂ ಸಮಣನಾಗಿಯೇ ಉಳಿದಿದ್ದೀಯೆ ! ನಿಜ ಹೇಳು, ನಾನು ಎಂದರೆ ನಿನಗೆ ಪ್ರೀತಿ ಇಲ್ಲವೇ ? ಯಾರನ್ನೂ ನೀನು ಪ್ರೇಮಿಸುವುದಿಲ್ಲ ಎಂಬುದು ನಿಜವೇ''

ಇರಬಹುದು, ನಾನೂ ನಿನ್ನಂತೆ. ಯಾರನ್ನೂ ನೀನೂ ಪ್ರೀತಿಸಲಾರೆ ! ಇಲ್ಲದಿದ್ದರೆ ಪ್ರೇಮವನ್ನು ಕಲೆ ಎಂದು ನೀನು ಹೇಗೆ ಕರೆಯಬಲ್ಲೆ ? ಬಹುಶಃ ನಮ್ಮಂತಹವರು ಪ್ರೇಮಿಸಲಾರರು. ಪ್ರೇಮ - ಪ್ರೀತಿ ಸಾಮಾನ್ಯ ಜನರಿಗೆ ಸೇರಿದ್ದೇನೋ ? ಅದು ಅವರ ಗುಟ್ಟು''.

೩. ಸಂಸಾರ

ಈ ಪ್ರಾಪಂಚಿಕ ಜೀವನಕ್ಕೆ ಅಂಟಿಕೊಳ್ಳದೆ ಸಿದ್ಧಾರ್ಥ ಬಹಳ ವರ್ಷ ಜೀವಿಸಿದ. ಸಮಣ ಜೀವನದಲ್ಲಿ ನಿಗ್ರಹಿಸಿ ಬರಡುಗೊಳಿಸಲ್ಪಟ್ಟಿದ್ದ ಅವನ ಇಂದ್ರಿಯಗಳು ಪುನಃ ಜಾಗೃತಿಗೊಂಡವು. ಶ್ರೀಮಂತನಾಗಿ ಅಧಿಕಾರ ವೈಭವಗಳನ್ನನುಭವಿಸಿದ್ದರೂ ತನ್ನ ಹೃದಯದಲ್ಲಿ ಅವನು ಸಮಣನಾಗಿಯೇ ಉಳಿದಿದ್ದ. ಅದನ್ನು ಚತುರೆ ಕಮಲ ಗುರುತಿಸಿದ್ದಳು. ಆಲೋಚನೆ, ತಾಳ್ಮೆ ಉಪವಾಸದ ಕಲೆಯಲ್ಲಿ ಅವನ ಬದುಕು ಸಾಗಿತ್ತು. ಅವನು ಅವರಿಂದ ಬೇರೆಯಾದುದರಿಂದ ಸಾಮಾನ್ಯ ಜನರು ಅವನಿಗೆ ಅಪರಿಚಿತರಾಗಿಯೇ ಉಳಿದಿದ್ದರು.

ವರ್ಷಗಳುರುಳಿದವು. ಸಂತೃಪ್ತಿಯಿಂದೊಡಗೂಡಿದ್ದ ಸಿದ್ಧಾರ್ಥನಿಗೆ ಕಾಲ ಉರುಳುತ್ತಿರುವುದರ ಅರಿವು ಬರಲಿಲ್ಲ. ಸಿದ್ಧಾರ್ಥ ಶ್ರೀಮಂತನಾಗಿದ್ದ. ನಗರದ ಹೊರಭಾಗದ ನದಿಯ ದಂಡೆಯಲ್ಲಿಯ ಉದ್ಯಾನವನವನ್ನು ಅದರಲ್ಲಿಯೇ ಒಂದು ಬೃಹತ್ ಅರಮನೆಯನ್ನು ಕೊಂಡು ಸೇವಕರನ್ನು ನೇಮಿಸಿದ್ದ. ಜನ ಅವನನ್ನು ಗೌರವಿಸುತ್ತಿದ್ದರು; ಅಕ್ಕರೆಯಿಂದ ಕಾಣುತ್ತಿದ್ದರು. ಅನೇಕರು ಅವನಲ್ಲಿಗೆ ಹಣಕ್ಕಾಗಿ, ಸಲಹೆಗಾಗಿ ಬರುತ್ತಿದ್ದರು. ಆದರೆ ಕಮಲೆಯ ವಿನಃ ಅವನಿಗೆ ಆತ್ಮೀಯರಾರೂ ಇರಲಿಲ್ಲ.

ಬಾಲ್ಯದಲ್ಲಿ ವೈಭವೋಪೇತವೂ, ಪರಮಶ್ರೇಷ್ಠವೂ ಆದ ಜಾಗೃತಿಯನ್ನು ಒಮ್ಮೆ ಅನುಭವಿಸಿದ್ದ. ಗೌತಮನ ಉಪದೇಶ ಕೇಳಿದ ನಂತರ, ಗೋವಿಂದನನ್ನು ಬಿಟ್ಟು ಬಂದನಂತರ, ಆ ತೀವ್ರ ನಿರೀಕ್ಷಣೆ, ಯಾವ ಸಿದ್ಧಾಂತ, ಗುರುಗಳಿಲ್ಲದೆ ನಿಲ್ಲುವ ಹೆಮ್ಮೆ ದೇವವಾಣಿಯನ್ನು ತನ್ನ ಹೃದಯಾಂತರಾಳದಲ್ಲೇ ಕೇಳುವ ತೀವ್ರತೆ, ಸ್ಮೃತಿಯಲ್ಲಿ ಉಳಿದಿದ್ದ ಬಯಕೆಗಳು ಎಲ್ಲವೂ ನಿಧಾನವಾಗಿ ಮರೆಯಾಗುತ್ತಾ ಬಂದವು. ಒಮ್ಮೆ ಸನಿಹದಲ್ಲಿದ್ದು ತನ್ನ ಹೃದಯಲ್ಲಿಯೇ ಧ್ವನಿಸಿದ್ದ ಆ ಪವಿತ್ರ ಚಿಲುಮೆ ಈಗ ಬಹುದೂರದಲ್ಲಿದ್ದು ಮೌನವಾಗಿದೆ. ತನ್ನ ತಂದೆಯಿಂದ, ಬ್ರಾಹ್ಮಣರಿಂದ, ಸಮಣರಿಂದ,

ಗೌತಮನಿಂದ ಕಲಿತಿದ್ದ ಸರಳ ಜೀವನ, ಚಿಂತನೆಯ ಸೊಗಸು, ಧ್ಯಾನ, 'ಸ್ವಯಂ' ಬಗೆಯ ರಹಸ್ಯ ಜ್ಞಾನ ಅನಂತಾತ್ಮ ಈ ಶರೀರ ಅಥವಾ ಸ್ಮೃತಿಯಾಗಿರದ ಎಷ್ಟೋ ವಿಷಯಗಳನ್ನು ತನ್ನಲ್ಲಿ ಬಹಳ ದಿವಸಗಳು ಉಳಿಸಿಕೊಂಡಿದ್ದ. ಬರಬರುತ್ತಾ ಎಲ್ಲವನ್ನುಳಿದು ಮಿಕ್ಕವು ಮಣ್ಣಲ್ಲಿ ಸೇರಿಹೋದವು. ಕುಂಬಾರ ಒಮ್ಮೆ ತಿರುಗಿಸಿದ ಚಕ್ರ ಬಹಳ ಹೊತ್ತು ಸುತ್ತಿ ನಂತರ ತನ್ನ ಗತಿ ಮಂದಗೊಳಿಸುತ್ತಾ ನಿಧಾನವಾಗಿ ನಿಲ್ಲುವಂತೆ ಬಹಳ ದಿನದಿಂದ ಸಿದ್ಧಾರ್ಥನ ಹೃದಯಲ್ಲಿದ್ದ ಸಂನ್ಯಾಸಿಯ ಬದುಕು, ಚಿಂತನೆ, ವಿವೇಚನೆಗಳು ನಿಧಾನವಾಗಿ ಸುತ್ತುತ್ತಾ ಸ್ತಬ್ಧವಾದವು. ಒಣಗಿದ ಮರಕ್ಕೆ ಗೆದ್ದಲು ಹತ್ತಿ ತೇವದಿಂದ ಕೊಳೆತು ಹೋಗುವಂತೆ ಈ ಪ್ರಪಂಚ ಹಾಗೂ ಜಡತ್ವ ಸಿದ್ಧಾರ್ಥನ ಹೃದಯವನ್ನು ಹೊಕ್ಕು ತುಂಬಿ, ಭಾರವಾಗಿ, ಆಯಾಸಗೊಳಿಸಿ, ನಿದ್ರಿಸುವಂತೆ ಮಾಡಿದರೆ ಅವನ ಇಂದ್ರಿಯಗಳು ಎಚ್ಚರಗೊಂಡು ಹೆಚ್ಚಿನ ವಿಚಾರಗಳನ್ನು ಕಲಿತು ಅನುಭವಿಸಿದವು.

ಸಿದ್ಧಾರ್ಥ ವ್ಯಾಪಾರದ ವ್ಯವಹಾರಗಳನ್ನು, ಜನರ ಮೇಲೆ ಅಧಿಕಾರ ಚಲಾಯಿಸುವುದನ್ನು, ಸೇವಕರಿಗೆ ಆಜ್ಞೆಮಾಡುವುದನ್ನು, ಪರಿಮಳ ಬೆರೆಸಿದ ನೀರಿನಲ್ಲಿ ಸ್ನಾನಮಾಡುವುದನ್ನು, ಉತ್ತಮ ಬಟ್ಟೆತೊಡುವುದನ್ನು ಹೆಂಗಸರನ್ನು ಉಲ್ಲಾಸಪಡಿಸುವುದನ್ನು ಕಲಿತ. ರುಚಿಕರ ಮಧುರ ಭಕ್ಷ್ಯಗಳನ್ನು ರುಚಿಸುತ್ತಾ ತಿನ್ನುವುದನ್ನು, ಮಸಾಲೆಯಲ್ಲಿ ಮಿಂದು ನಾಲಿಗೆಗೆ ಪ್ರಿಯವಾಗುವ ಕೋಳಿ, ಮಾಂಸ ಹಾಗೂ ಮೀನುಗಳನ್ನು ತಿಂದು ಮದ್ಯವನ್ನು ಸೇವಿಸಿ ಮೈಮರೆವುದನ್ನೂ ಕಲಿತ. ಪಗಡೆ, ಚದುರಂಗ ಆಡುವುದನ್ನು, ನೃತ್ಯ ನೋಡುವುದನ್ನು, ಪಲ್ಲಕ್ಕಿಯಲ್ಲಿ ಕುಳಿತು ಪಯಣಿಸುವುದನ್ನು, ಮೆತ್ತನೆಯ ಹಾಸಿಗೆಯಲ್ಲಿ ಮಲಗಿ ನಿದ್ರಿಸುವುದನ್ನು ಅಭ್ಯಸಿಸಿದ. ತಾನು ಇತರರಿಗಿಂತ ಭಿನ್ನ, ಉತ್ತಮ ಎಂದುಕೊಂಡ. ಸಾಮಾನ್ಯ ಪ್ರಾಪಂಚಿಕ ಜನರನ್ನು ನೋಡುವಂತೆ ಎಲ್ಲರನ್ನೂ ನಿಂದಾತ್ಮಕವಾಗಿ ಅಣಕಿಸುತ್ತಾ, ಉಪೇಕ್ಷೆಯ ದೃಷ್ಟಿಯಿಂದ ಕಂಡ. ಕಾಮಸ್ವಾಮಿ ವ್ಯಾಪಾರದ ವ್ಯವಹಾರದಲ್ಲಿ ತೊಂದರೆಯಾಗಿ, ಅವಮಾನವಾಗಿ ಉದ್ರೇಕಗೊಂಡರೆ ಅವನನ್ನು ನೋಡಿ ಸಿದ್ಧಾರ್ಥನ ಅಣಕ, ಶ್ರೇಷ್ಠತೆಯ ಭಾವನೆ ನಿಧಾನವಾಗಿ ಕರಗಿದವು. ಶ್ರೀಮಂತಿಕೆಯೊಂದಿಗೆ ಸಿದ್ಧಾರ್ಥ ಸಾಮಾನ್ಯ ಜನರ ಗುಣಗಳನ್ನು, ಅವರ

ಕುಬುದ್ಧಿ, ಸಣ್ಣತನ, ಅನ್ಯರ ರಹಸ್ಯಗಳನ್ನು ಕದ್ದು ತಿಳಿಯುವ ಕುತೂಹಲ ಇವುಗಳನ್ನೆಲ್ಲಾ ಒಳಗೊಂಡ. ಅವರನ್ನು ಅಸೂಯೆಯಿಂದ ದೂಷಿಸಿದ. ಹೀಗೆ ಬೆಳೆದಂತೆಲ್ಲಾ ಅಸೂಯೆಯೂ ಅವನಲ್ಲಿ ವೃದ್ಧಿಗೊಂಡಿತು. ಅವರು ಬದುಕಿಗೆ ಕೊಡುವ ಬೆಲೆಯನ್ನು, ಅವರ ಸುಖ-ದುಃಖಗಳ ಆಳವನ್ನು, ಅವರಲ್ಲಿ ಸದಾ ಇರುವ ಕುತೂಹಲ ಹಾಗೂ ಪ್ರೇಮದ ಶಕ್ತಿಯನ್ನು ಕಂಡು ಅದು ತನ್ನಲ್ಲಿ ಇಲ್ಲವಲ್ಲಾ ಎಂದು ಕಿರುಚಿದ. ಈ ಜನರು ತಮ್ಮ ಮಕ್ಕಳೊಂದಿಗೆ ಪ್ರೀತಿಯಿಂದಿರುತ್ತಾರೆ. ಮುಂದಿನ ಸೌಖ್ಯದ ಯೋಜನೆ, ಶ್ರೀಮಂತಿಕೆಯ ಭರವಸೆ, ಸನ್ಮಾನದ ನಿರೀಕ್ಷೆಗಳಲ್ಲಿರುತ್ತಾರೆ. ತಾವೆಂದರೆ ಎಲ್ಲಕ್ಕಿಂತ ಅತಿ ಅಕ್ಕರೆ, ಮುಗ್ಧ ಮಗುವಿನಂತೆ ಆನಂದ ಪಡುವುದನ್ನು ಕಲಿಯಲಿಲ್ಲ. ಬದಲಾಗಿ ಕುಬುದ್ಧಿ ದುರ್ಗುಣಗಳನ್ನು ಕಲಿತ. ಉಲ್ಲಾಸಭರಿತ ಸಂಜೆ ಕಳೆದು, ರಾತ್ರಿ ಹೊತ್ತಾಗಿ ಮಲಗಿ, ಬೆಳಿಗ್ಗೆ ಎದ್ದಾಗ ನಿರುತ್ಸಾಹ, ಜಿಗುಪ್ಸೆಯುಂಟಾಗಲು ಆರಂಭವಾಯಿತು. ಕಾಮಸ್ವಾಮಿ ತನ್ನ ಸಮಸ್ಯೆಗಳನ್ನು ಅವನಲ್ಲಿ ಹೇಳಿದಾಗ ತಾಳ್ಮೆಗೆಟ್ಟು ಸಿಡುಕುತ್ತಿದ್ದ. ಪಗಡೆಯಾಟದಲ್ಲಿ ಸೋತಾಗ ಜೋರಾಗಿ ನಕ್ಕು ಬಿಡುತ್ತಿದ್ದ. ಅವನ ಮುಖವಿನ್ನೂ ಬೇರೆಯವರಿಗಿಂತ ಸಾತ್ವಿಕ ಕಳೆಯಿಂದ, ಚತುರತೆಯಿಂದ ಕೂಡಿದ್ದರೂ, ಎಲ್ಲೋ ಒಮ್ಮೊಮ್ಮೆ ನಗುವಿನ ಎಳೆ ಕಂಡು ಮಾಯವಾಗುತ್ತಿತ್ತು. ಕ್ರಮೇಣ ಶ್ರೀಮಂತರ ಮುಖದಲ್ಲಿ ವ್ಯಕ್ತವಾಗುವ ಅತೃಪ್ತಿ, ಸೋಮಾರಿತನ, ಅಪನಂಬಿಕೆ, ಚಿಂತೆ ಕಾಣಲಾರಂಭಿಸಿತು. ದಿನಗಳೆದಂತೆ ಐಶ್ವರ್ಯದಾಹ ಅವನ ಹೃದಯವನ್ನು ಆಕ್ರಮಿಸಿತು.

ತೆಳುವಾದ ಪರದೆಯಂತೆ, ಮಸುಕಾದ ಇಬ್ಬನಿಯಂತೆ ಸಿದ್ಧಾರ್ಥನ ಮುಖದಲ್ಲಿ ಕಾಣಿಸಿಕೊಂಡ ಚಿಂತೆ ದಿನದಿನಕ್ಕೆ ಬೆಳೆದು, ತಿಂಗಳು ಕಳೆದಂತೆ ಹೆಚ್ಚಾಗಿ, ವರ್ಷಗಳುರುಳಿದಂತೆ ಪೂರ್ಣವಾಗಿ ಅವನನ್ನು ಆವರಿಸಿತು. ಹೊಸ ಬಟ್ಟೆ ಹಳೆಯದಾಗಿ, ಬಣ್ಣಕಳೆದು, ಸುಕ್ಕಾಗಿ, ಸವೆದಕಡೆ ದಾರಬಿಟ್ಟು ಜೂಲಾಗುವಂತೆ ಗೋವಿಂದನನ್ನು ಬಿಟ್ಟು ಬಂದ ನಂತರದ ಬದುಕು ಹಳೆಯದಾಯಿತು. ಬಟ್ಟೆಯಂತೆ ಬಣ್ಣಕಳೆದು, ಸವಕಲಾಗಿ, ಉತ್ಸಾಹ ಮುದುಡಿ ಅತೃಪ್ತಿ, ಉದ್ರೇಕಗಳು ಬಲಗೊಂಡು ಹೊರ ಇಣುಕಿದವು. ಇವು ಅವನ ಗಮನಕ್ಕೆ ಬರಲಿಲ್ಲ. ಒಮ್ಮೆ ಜಾಗೃತಿಗೊಂಡು ಎಲ್ಲಾ ಸಂಕೀರ್ಣ ಸಂದರ್ಭಗಳಲ್ಲೂ ನಡೆಯಿಸಿಕೊಂಡು ಬಂದ ಸತ್ವಯುತವೂ ಸ್ಪಷ್ಟವೂ ಆದ ಅಂತರ್ವಾಣಿಯ ಸೊಲ್ಲು ಈಗಿಲ್ಲ ಎಂಬುದನ್ನು ಮಾತ್ರ ಗುರುತಿಸಿದ್ದ.

ಸುಖದ ದುರಾಸೆ, ಸೋಮಾರಿತನ, ತಾನು ಉಪೇಕ್ಷಿಸಿದ್ದ ದರ್ಪ ಹಾಗೂ ಗಳಿಸಬೇಕೆಂಬ ಮೂರ್ಖತನ ಆವರಿಸಿದವು. ಆಸ್ತಿ, ಹಸಿವು, ಶ್ರೀಮಂತಿಕೆಗಳು ಅವನಲ್ಲಿ ಸೇರಿಕೊಂಡವು. ಅವು ಆಡುವ ಗೊಂಬೆಗಳಾಗಿರದೆ ಬಂಧನದ ಸರಪಳಿಗಳಾಗಿ ಹೊರೆಯಾದವು. ಪಗಡೆಯಾಟವಾಡುತ್ತ ಅಪರಿಚಿತವೂ, ಇಳಿಜಾರೂ ಆದ ಇದ್ದಾರಿಯಲ್ಲಿ ಸಿದ್ಧಾರ್ಥ ನಡೆದ. ಸಮಣನಾಗಿ ತನ್ನ ಹೃದಯದಿಂದ ಅದನ್ನು ತ್ಯಜಿಸಿ ಬಂದ ಮೇಲೆ ಪಗಡೆಯಾಟವನ್ನು ನೋಡಿ ನಕ್ಕು, ಸಾಮಾನ್ಯ ಜನರೊಂದಿಗೆ ಪದ್ಧತಿಯಂತೆ ಆಟವಾಡುತ್ತಿದ್ದ ಸಿದ್ಧಾರ್ಥ, ಹಣಕ್ಕಾಗಿ, ಒಡವೆಗಾಗಿ ತುಂಬಿದ ಹುರುಪಿನಿಂದ ಆಡಲು ಆರಂಭಿಸಿದ. ಸೋಲರಿಯದ ಅಪ್ರತಿಮ ಆಟಗಾರನಾದ ಅವನೊಂದಿಗೆ ಆಡಲು ಇತರರಿಗೆ ಧೈರ್ಯವಾಗುತ್ತಿರಲಿಲ್ಲ. ಬಯಕೆಗಾಗಿ ಎಲ್ಲ ಆಟ ಸಾಗಿಸುತ್ತಿದ್ದ. ಹೆಮ್ಮೆಯಿಂದ ಜೂಜಾಡುತ್ತಾ ಹಣವನ್ನು ತುಚ್ಛವಾಗಿ ಚೆಲ್ಲಿದ. ತಾನು ಶ್ರೀಮಂತ ವರ್ತಕನೆಂದು ತೋರಿಸಿಕೊಳ್ಳಲು, ಅಣಕವಾಡಲು ಅದು ತಕ್ಕ ಸ್ಥಳವಾಗಿತ್ತು. ತನ್ನನ್ನೇ ದ್ವೇಷಿಸಿಕೊಳ್ಳುತ್ತ, ಅಣಕವಾಡಿಕೊಳ್ಳುತ್ತ, ಹೆಚ್ಚು ಪಣಕಟ್ಟುತ್ತಿದ್ದ. ಸಾವಿರಾರು ರೂಪಾಯಿಗಳನ್ನು ಕಳಿಸಿ ಎಸೆದ. ಹಣ, ಒಡವೆ, ಮನೆಯನ್ನು ಕಳೆದುಕೊಂಡ, ಪುನಃ ಗಳಿಸಿ ಮತ್ತೆ ಕಳೆದುಕೊಂಡ. ಹೆಚ್ಚಿನ ಪಣ ಕಟ್ಟಿದ್ದರಿಂದ ಉದ್ಭವಿಸುವ ಕುತೂಹಲ, ಪಣದ ಹಣ ತನ್ನದಾಗಿಸಿಕೊಳ್ಳುವ ಆಸೆ, ಸಾಮಾನ್ಯನಂತೆ ಈ ಅನುಭವವನ್ನು ಹೆಚ್ಚು ಹೆಚ್ಚಾಗಿ ಬಯಸಿದ. ಎಲ್ಲವನ್ನೂ ಬಯಸಿ ಕಳೆದುಕೊಳ್ಳುವುದು ಒಂದು ಬಗೆಯ ಸಂತೋಷ. ಸೋತಾಗಲೂ ಮತ್ತೆ ಗಳಿಸುವ ಮಾರ್ಗದಲ್ಲಿ ಮಗ್ನನಾಗುತ್ತಿದ್ದ. ಪುನಃ ಆಡಿ ಹೆಚ್ಚು ಹಣ ಗಳಿಸಿ ಶ್ರೀಮಂತನಾಗಿ ಮೆರೆಯುವ ಬಯಕೆಯಿಂದ ಸಾಲಗಾರರಿಂದ ಅವರನ್ನು ಹಿಂಸಿಸಿ ಹಿಂದಕ್ಕೆ ಹಣ ಪಡೆದ, ವ್ಯಾಪಾರದಲ್ಲಿ ಗಮನವಿಟ್ಟ, ಸೋತಾಗ ತಾಳ್ಮೆಗೆಟ್ಟು ಕಂತುಗಳಲ್ಲಿ ಸಾಲ ಹಿಂದಿರುಗಿಸುವವರನ್ನು ಬೈದ. ಭಿಕ್ಷುಕರ ಬಗ್ಗೆ ನಿರ್ದಯನಾಗಿ ವರ್ತಿಸಿದ. ದಾನ-ಧರ್ಮ, ಸಾಲ ಕೊಡುವುದನ್ನು ನಿಲ್ಲಿಸಿದ. ಪಗಡೆಯಾಡುವಾಗ ಸಾವಿರಾರು ರೂಪಾಯಿಗಳನ್ನು ನಿರ್ಲಕ್ಷ್ಯವಾಗಿ ಎಸೆದವನು ವ್ಯಾಪಾರದಲ್ಲಿ ಜಿಪುಣನಾದ; ಹಣಕ್ಕಾಗಿ ನಿದ್ರೆಯಲ್ಲಿ ಕನವರಿಸಿದ. ಈ ತಿರಸ್ಕೃತಿಯಿಂದ ಜಾಗೃತಿಕೊಂಡು ಮಲಗುವ ಕೋಣೆಯ ನಿಲುವುಗನ್ನಡಿಯಲ್ಲಿ ಮುಖವನ್ನು ನೋಡಿಕೊಂಡಾಗ ವಯಸ್ಸಾದಂತೆ, ರೂಪುಗೆಟ್ಟಂತೆ ಕಾಣಿಸಿತು. ಅಪಮಾನದಿಂದ ಉದ್ರೇಕಿತನಾದಾಗ

ಪುನಃ ತನ್ನ ಅದೃಷ್ಟವನ್ನು ಕಾಣಲು ಪಗಡೆಯಾಟವಾಡಿದ. ಗೊಂದಲಗೊಂಡು ಮದ್ಯ ಕುಡಿದ. ಮತ್ತೆ ಹಣಕ್ಕಾಗಿ ಅದೃಷ್ಟದ ಬೆನ್ನೇರಿದ. ಅರ್ಥರಹಿತ ಅಸಂಗತ ಚಕ್ರದಲ್ಲಿ ಸಿಕ್ಕಿ ಕೊರಗಿ, ರೋಗಬಾಧೆಗಳಿಂದ ಪೀಡಿತನಾಗಿ ಸವೆದ.

ಕನಸು ಎಚ್ಚರಿಸಿತು. ಸಂಜೆ ಕಮಲೆಯೊಂದಿಗೆ ಅವಳ ಸುಖ ಸಂಪತ್ತಿನ ಉಪವನಕ್ಕೆ ಹೋದ. ಇಬ್ಬರೂ ಮಾತನಾಡುತ್ತ ಮರದಡಿ ಕುಳಿತರು. ಗಂಭೀರ ವಾಗಿ ಮಾತನಾಡುತ್ತಿದ್ದ ಕಮಲೆಯ ಮಾತಿನ ಹಿಂದೆ ದುಃಖ, ಚಿಂತೆ ವ್ಯಕ್ತವಾಗು ತ್ತಿತ್ತು. ಗೌತಮನ ಬಗ್ಗೆ ಹೇಳುವಂತೆ ಕೇಳಿದಳು. ಆತನ ಕಣ್ಣುಗಳ ಪರಿಶುದ್ಧತೆ, ತುಟಿಗಳ ಸೌಂದರ್ಯ, ಅವು ತುಳುಕಿಸುತ್ತಿದ್ದ ಶಾಂತಿ, ಮಂದಹಾಸದ ಬೆಳಕು, ಅವನ ಪ್ರತಿ ಚಲನೆಯೂ ಗಾಂಭೀರ್ಯ ಹಾಗೂ ತೇಜಸ್ಸಿನಿಂದ ತುಂಬಿದ್ದುದನ್ನು ಅವಳು ಸಿದ್ಧಾರ್ಥನ ಮಾತಿನಿಂದ ಪೂರ್ಣವಾಗಿ ಅರಿಯಲಾಗಲಿಲ್ಲ. ಬುದ್ಧದೇವನ ಬಗ್ಗೆ ಬಹಳ ಹೊತ್ತು ಹೇಳುತ್ತಿದ್ದ. ಕೊನೆಗೆ ಆಳವಾಗಿ ಉಸಿರು ಬಿಟ್ಟು ಹೇಳಿದಳು. ''ಬಹುಶಃ ಸದ್ಯದಲ್ಲಿಯೇ ಒಂದು ದಿವಸ ನಾನು ಬುದ್ಧನ ಅನುಯಾಯಿಯಾಗುತ್ತೇನೆ. ಅವನಿಗೆ ಈ ಉಪವನವನ್ನಿತ್ತು ಅವನ ಉಪದೇಶದ ಆಶ್ರಯ ಪಡೆಯುತ್ತೇನೆ.''

ಅವನನ್ನು ಉದ್ರೇಕಗೊಳಿಸಿದಳು. ಪ್ರೇಮಕೇಳಿಯಲ್ಲಿ ತನ್ನ ಮೈಯ ಇಚ್ಛಾತಾಪ ನಂದಿಸಲು ಉಕ್ಕುವ ಸುಖಸಾಗರದ ಕಡೆಯ ಹನಿಯನ್ನು ಹೀರುವವ ಳಂತೆ ಬಿಗಿದಪ್ಪಿದಳು. ಅದುವರೆವಿಗೂ ಆಕರ್ಷಣೆ ಸಾವಿಗೆ ಸಮೀಪವಿದೆ ಎಂಬ ಅರಿವು ಸಿದ್ಧಾರ್ಥನಿಗೆ ಸ್ಪಷ್ಟವಾಗಿರಲಿಲ್ಲ. ನಂತರ ಕಮಲೆಯ ಪಕ್ಕಕ್ಕೆ ಹೊರಳಿದ. ಅವಳ ಮುಖ ಅವನ ಮುಖದ ಹತ್ತಿರವಿತ್ತು. ಅವಳ ಕಣ್ಣೆವೆಯ ಕೆಳಗೆ, ಬಾಯಿಯ ಅಂಚಿನಲ್ಲಿ ವೃದ್ಧಾಪ್ಯವನ್ನು ಸೂಚಿಸುವ ಸುಕ್ಕಾದ ಗೆರೆಗಳು ಮೊಟ್ಟಮೊದಲಿಗೆ ಸ್ಪಷ್ಟವಾಗಿ ಕಾಣಿಸಿತು. ಸಿದ್ಧಾರ್ಥ ತನ್ನ ನಲವತ್ತನೇ ವಯಸ್ಸಿಗೆ ನೆರೆತ ಕೂದಲುಗಳನ್ನು ಗುರುತಿಸಿದ್ದ. ಕಮಲೆಯ ಸುಂದರ ಮುಖದಲ್ಲಿ ಸಂತೋಷವಿರದ ಬದುಕಿನ ಉಳಿದ ದೀರ್ಘ ದಿನಗಳ, ಮುಂಬರುವ ವೃದ್ಧಾಪ್ಯದ ಚಿಂತೆ ಎದ್ದು ಕಾಣುತ್ತಿತ್ತು. ಅರಿವಿಗೆ ಬಾರದೆ ಗೌಪ್ಯವಾಗಿರುವ, ಬಹುಶಃ ಸ್ಮೃತಿಗೂ ಬಾರದಿರುವ ಬರುವ ಬದುಕಿನ ಬೇಸಗೆಯ ದಿನಗಳು. ವೃದ್ಧಾಪ್ಯ ಹಾಗೂ ಸಾವಿನ ಚಿಂತೆ ಅವಳ ಮುಖದಲ್ಲಿ ಮುದ್ರಿಸಿ

ದಂತೆ ಕಾಣಿಸಿತು. ನಿಟ್ಟುಸಿರಿಟ್ಟು, ಅವಳನ್ನು ಬಿಟ್ಟು ಹೃದಯದಲ್ಲಿ ದುಃಖ, ಭಯ ತುಂಬಿ ಕೊಂಡು ಅಲ್ಲಿಂದ ಹೊರಟ.

ಇಲ್ಲದ ಶ್ರೀಮಂತಿಕೆಯನ್ನು ಪ್ರದರ್ಶಿಸುತ್ತಾ, ಎಲ್ಲರಿಗಿಂತ ಉತ್ತಮ ವೆಂದು ನಟಿಸುತ್ತಾ ತನ್ನ ಮನೆಯಲ್ಲಿ ನೃತ್ಯ ಮಾಡುವವರೊಂದಿಗೆ ಕುಡಿದ. ರಾತ್ರಿ ಹೆಚ್ಚು ಮದ್ಯವನ್ನು ಸೇವಿಸಿ ಆಯಾಸದಿಂದ ಮಧ್ಯರಾತ್ರಿ ಮಲಗಿದ. ಭರವಸೆಯುಳಿದು ದುಃಖದಿಂದ ಕಣ್ಣಿನಲ್ಲಿ ಹನಿಗೂಡಿತ್ತು. ಸಹಿಸಲಾಗದ ಸಂಕಟ ಹೃದಯವನ್ನು ತುಂಬಿತ್ತು. ರುಚಿರಹಿತ ಮದ್ಯದಂತೆ, ಅತಿ ಮಧುರವೂ, ಸಾಮಾನ್ಯನ ಅನುಭೂತಿಯ ಎಲ್ಲೆಯಿಂದ ದೂರ ಉಳಿದ ಸಂಗೀತದಂತೆ, ಕರಗುತ್ತಾ ಇಲ್ಲವಾಗುವ ನರ್ತಕಿಯರ ತಲೆಗೂದಲಿನ ಪರಿಮಳದಂತೆ, ಆಕರ್ಷಕ ನಗುವಿನಂತೆ, ತುಂಬಿದ ಪ್ರಾಯದ ದುಂಡು ಮೊಲೆಗಳು ಜೋತು ಬಿದ್ದು ಮುದಿಯಾದಾಗ ಉಂಟಾಗುವ ಅಳತೆ ಮೀರಿದ ಓಕರಿಕೆ ಈಗ ಅವನನ್ನು ಆವರಿಸಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ತನ್ನನ್ನೆ ತಾನು ಕಂಡು, ಪರಿಮಳದ ಕೂದಲು, ಬಾಯಿಯಿಂದ ಬರುವ ಮದ್ಯದ ವಾಸನೆ, ಗಟ್ಟಿತನವಳಿದು ಮೆತ್ತಗಾಗಿರುವ ತನ್ನ ಮೈ ಚರ್ಮ ಓಕರಿಕೆ ತರಿಸುತ್ತಿತ್ತು. ಮಿತಿಮೀರಿ ಕುಡಿದವನು ಸಂಕಟದಿಂದ ವಾಂತಿ ಮಾಡಿದ ನಂತರ ಸಂತೋಷಗೊಳ್ಳುವಂತೆ ಅಶಾಂತಿಯಿಂದಿರುವ ಮನುಷ್ಯ ಈ ಅರ್ಥವಿಲ್ಲದ ಅಭ್ಯಾಸಗಳಿಂದ, ಜೀವನದಿಂದ, ಸುಖಗಳಿಂದ ಹೊರಬರಲು ಇಚ್ಛಿಸುತ್ತಾನೆ. ಬೆಳಗಾಗಿ ತನ್ನ ಮನೆಯ ಸುತ್ತಮುತ್ತ ನಿತ್ಯ ಚಟುವಟಿಕೆಗಳು ಪ್ರಾರಂಭವಾಗುವಾಗ ಅವನಿಗೆ ತೂಕಡಿಕೆ ಬಂದು ಅರೆಮರವಿನ ನಿದ್ರೆಯಲ್ಲಿ ಒಂದು ಕನಸು:

ಕಮಲ ಚಿಕ್ಕ ಚಿನ್ನದ ಪಂಜರದಲ್ಲಿ ಒಂದು ಅಪರೂಪವಾದ ಸಣ್ಣ ಹಾಡುವ ಹಕ್ಕಿಯನ್ನು ಇಟ್ಟಿದ್ದಳು. ಸಾಮಾನ್ಯವಾಗಿ ಬೆಳಿಗ್ಗೆ ಹಾಡುತ್ತಿದ್ದ ಹಕ್ಕಿ ಮೌನವಾದು ದನ್ನು ಕಂಡು ಆಶ್ಚರ್ಯದಿಂದ ಪಂಜರದ ಹತ್ತಿರ ಹೋಗಿ ನೋಡಿದ. ಹಕ್ಕಿ ಸತ್ತು ಬಿದ್ದಿತ್ತು. ಕೈಗೆ ತೆಗೆದುಕೊಂಡು ಕ್ಷಣ ಕೈಲಿ ಹಿಡಿದು ನೋಡಿ ರಸ್ತೆಗೆ ಎಸೆದ. ಅದರೊಂದಿಗೇ ತನ್ನಲ್ಲಿರುವ ಒಳ್ಳೆಯ ಬೆಲೆಯುಳ್ಳ ಎಲ್ಲವನ್ನೂ ಸತ್ತ ಹಕ್ಕಿಯೊಂದಿಗೆ ಇತ್ತ ಎಸೆದಂತೆ ಭಾಸವಾಗಿ ಹೃದಯನೊಂದು ದಿಗಿಲುಗೊಂಡ.

ಎಚ್ಚೆತ್ತಾಗ ನೋವಿನ ಸಂವೇದನೆ ಅವನಲ್ಲಿತ್ತು. ಬದುಕನ್ನು ಅವಿವೇಕ ದಿಂದ ನಿಷ್ಪ್ರಯೋಜಕವಾಗಿ ಕಳೆದಂತೆನಿಸಿತು. ಅಗತ್ಯವಾದ, ಬೆಲೆಬಾಳುವ ಯಾವು ದನ್ನೂ ತಾನು ಉಳಿಸಿಕೊಂಡಿಲ್ಲವೆನಿಸಿತು. ಒಡೆದು ಹೋದ ಹಡಗನ್ನು ನೋಡುವ ನಿಸ್ಸಹಾಯಕನಂತೆ ಸಿದ್ಧಾರ್ಥ ಏಕಾಂಗಿಯಾಗಿ ನಿಂತ.

ದುಃಖದಿಂದ ತನ್ನ ಉದ್ಯಾನವನಕ್ಕಿದ್ದ ಬಾಗಿಲನ್ನು ಮುಚ್ಚಿ, ಮಾವಿನ ಮರದಡಿ ಕುಳಿತ. ಅವನ ಹೃದಯದಲ್ಲಿ ಸಾವಿನ ಭೀತಿ ತಲೆಯೆತ್ತಿತು. ನಿಧಾನವಾಗಿ ಭಾವನೆಗಳನ್ನು ಹಿಡಿದು ತನ್ನ ಬದುಕಿನ ಮೊದಲ ದಿನಗಳನ್ನು ಸ್ಮರಿಸಿಕೊಂಡ. ಅವನು ಯಾವಾಗ ನಿಜವಾದ ಸಂತೋಷದಲ್ಲಿದ್ದ? ಯಾವಾಗ ನಿಜವಾಗಿ ಆನಂದವನ್ನನು ಭವಿಸಿದ್ದ ? ಅನೇಕ ಬಾರಿ ಆನಂದ ಅನುಭವಿಸಿದ್ದಾನೆ. ವಿದ್ಯಾರ್ಥಿಯಾಗಿದ್ದಾಗ, ಮೇಧಾವಿಗಳಿಂದ ಬಹುಮಾನ ಗೆದ್ದಾಗ, ತನ ಒಡನಾಡಿಗಳಲ್ಲಿ ಮೊದಲಿಗನಾದಾಗ, ಶ್ಲೋಕಗಳ ಕಂಠ ಸ್ಪರ್ಧೆಯಲ್ಲಿ ಮೇಲಾದಾಗ, ವಿದ್ಯಾವಂತರೊಂದಿಗೆ ವಾದಿಸುವಾಗ, ಯಜ್ಞ ಯಾಗಾದಿಗಳಲ್ಲಿ ಪಾಲ್ಗೊಳ್ಳುವಾಗ ಆನಂದವನ್ನು ಅನುಭವಿಸಿದ್ದ. ನಂತರ ಅವನ ಹೃದಯಕ್ಕೆನಿಸಿತು; 'ಅನುಸರಿಸಲು ನಿನ್ನನ್ನ ಕರೆದಿರುವ ದಾರಿ ನಿನ್ನ ಮುಂದಿದೆ. ದೇವತೆಗಳು ನಿನ್ನನ್ನು ಎದುರು ನೋಡುತ್ತಿದ್ದಾರೆ' ಅವನು ಯುವಕನಾಗಿದ್ದಾಗ ನಿರಂತರವಾಗಿ ಹಾರುವ ಗುರಿ ತನ್ನಂತೆ ಹುಡುಕುತ್ತಿರುವವರ ಗುಂಪಿನಿಂದ ಮುಂದೂ ಡುತ್ತಿತ್ತು. ಅವರಿವರ ಉಪದೇಶಗಳನ್ನು ಅರ್ಥಮಾಡಿಕೊಳ್ಳಲು ಹವಣಿಸಿದಾಗ, ಒಳಗೊಂಡ ಹೊಸಜ್ಞಾನ ಮತ್ತೊಂದು ಹೊಸ ತೃಷ್ಣೆಯನ್ನು ಹುಟ್ಟಿಸುತ್ತಿದ್ದಾಗ, ಪುನಃ ಆ ತೃಷ್ಣೆಯ ಮಧ್ಯದಲ್ಲಿ, ತನ್ನ ಶ್ರಮದ ಮಧ್ಯದಲ್ಲಿ ಆಲೋಚಿಸಿದ. ಮುಂದೆ ಇದು ತನ್ನ ದಾರಿ ಎನಿಸಿತು. ಈ ಕರೆಯನ್ನು ತಾನು ಮನೆಬಿಟ್ಟು ಸಮಣನ ಬದುಕನ್ನು ಹಿಡಿದಾಗ ಕೇಳಿದ್ದ. ಪುನಃ ಸಮಣ ಮಾರ್ಗ ಬಿಟ್ಟು ಪರಿಪಕ್ವನಾದ ಗೌತಮ ಬುದ್ಧನಲ್ಲಿಗೆ ಹೋದಾಗ, ಮತ್ತೆ ಅಲ್ಲಿಂದ ಅರಿವಿರದ ಹಾದಿಯನ್ನು ಹಿಡಿದಾಗ ಕೇಳಿದ್ದ. ಆ ಕರೆಯನ್ನು ಕೇಳಿ ಮೇಲೇರಿ ಎಷ್ಟು ಕಾಲವಾಗಿದೆ! ಈ ದಾರಿ ನಿರ್ಜನವಾಗಿ ಮೇಲೆ ಅರಿಯದಾಗಿದೆ ! ನಲಿವಿನ ಗುರಿಯಿರದೆ, ತೃಷ್ಣೆ, ಉತ್ಕರ್ಷೆಗಳಿಲ್ಲದೆ, ನಿಜವಾಗಿ ತೃಪ್ತಿಯಿರದೆ ಅಲ್ಪ ತೃಪ್ತನಾಗಿ ಎಷ್ಟು ದೀರ್ಘವರ್ಷಗಳು ಕಳೆದಿವೆ ! ಇದನ್ನು ತಿಳಿಯದೆಯೆ ಈ ಎಲ್ಲ ಜನರಂತೆ, ಮಕ್ಕಳಂತಿರಬೇಕೆಂದು ಬಹುಕಾಲ ಪ್ರಯತ್ನಪಟ್ಟರೂ

ಇವನ ಗುರಿ ಅವರದಾಗದೆ, ಅವರ ದುಃಖ ಇವನದಾಗದೆ, ಬಡತನದಿಂದ ಅವರಿಗಿಂತ ಹೆಚ್ಚು ನೊಂದಿದ್ದ. ನೋಡುವವರಿಗೆ ಕಾಮಸ್ವಾಮಿಯ ಪ್ರಪಂಚವೆಲ್ಲವೂ ನೃತ್ಯವಾಗಿ, ತಮಾಷೆಯಾಗಿ ಆಟವಾಗಿದ್ದುದು ಮತ್ತೆ ಈಗ ಅರಿವಾಗಿತ್ತು. ಕಮಲ ಮಾತ್ರ ಆತ್ಮೀಯಳಾಗಿದ್ದಳು, ಬೆಲೆಯುಳ್ಳವಳಾದ್ದಿಳು. ಈಗಲೂ ಆಗಿದ್ದಾಳೆಯೆ ? ಇನ್ನೂ ಅವಳ ಅವಶ್ಯಕತೆ ಇದೆಯೇ ? ಅವಳಿಗೆ ತನ್ನ ಅವಶ್ಯಕತೆ ಇದೆಯೇ ? ಕೊನೆಯಲ್ಲಿಲ್ಲದ ಪ್ರೇಮದಾಟದಲ್ಲಿ ತೊಡಗಿ ಅದಕ್ಕಾಗಿ ಬದುಕುವ ಅಗತ್ಯತೆ ಇದೆಯೇ ? ಇದು ಮಕ್ಕಳಾಡುವ ಸಂಸಾರದಾಟ. ಒಂದು, ಎರಡು ಅಥವಾ ಹತ್ತು ಬಾರಿ ಆಡಿ ಆನಂದಿಸ ಬಹುದು. ಆದರೆ ಅದು ಸದಾಕಾಲ ಆಡುವಷ್ಟು ಬೆಲೆಯುಳ್ಳದ್ದೆ ?

ಆಟ ಮುಗಿಯಿತು. ಇನ್ನು ತಾನು ಆಡುವಂತಿಲ್ಲ ಎಂದು ನಿರ್ಣಯಿಸಿದ ಸಿದ್ಧಾರ್ಥ. ಅವನಲ್ಲಿ ವಿಲವಿಲ ಒದ್ದಾಡಿ ವಿಲಪಿಸುತ್ತಾ ಏನೋ ಸತ್ತಂತಾಯಿತು. ದಿನವಿಡೀ ತಂದೆಯನ್ನು, ಗೋವಿಂದನನ್ನು, ಗೌತಮನನ್ನು ಕುರಿತು ಚಿಂತಿಸುತ್ತಾ ಮಾವಿನ ಮರದಡಿಯೇ ಕುಳಿತಿದ್ದ. ಈ ಎಲ್ಲವನ್ನೂ ತೊರೆದು ಬಂದದ್ದು ಕಾಮಸ್ವಾಮಿಯಾಗಲೆಂದೇ ?!

ಕತ್ತಲಾಯಿತು. ನಕ್ಷತ್ರಗಳನ್ನು ಕಂಡಾಗ ತನ್ನ ಸಂತಸದ ಉದ್ಯಾನದ ಮಾವಿನ ಮರದಡಿ ಕುಳಿತಿದ್ದೇನೆ ಎನಿಸಿತು. ಹಿಂದೆಯೇ ನಗೆ ಅರಳಿತು. ಮಾವಿನ ಮರ, ಉದ್ಯಾನ ಇವೆಲ್ಲವನ್ನೂ ಗಳಿಸುವುದು ಅಗತ್ಯವೇ ಉಚಿತವೇ ? ಇದು ಮೂರ್ಖತೆ ಯಲ್ಲವೇನು ?

ಅನಿಸಿಕೆಯನ್ನು ಅಲ್ಲಿಯೇ ನಿಲ್ಲಿಸಿದ; ಅದು ಸಾವಪ್ಪಿತು. ಎದ್ದು ಉದ್ಯಾನ ದಿಂದ ಹೊರಬಂದ. ಊಟ ಮಾಡಿರಲಿಲ್ಲ. ಹಸಿವು ತಲೆ ಎತ್ತಿತು. ನಗರದಲ್ಲಿರುವ ತನ್ನ ಮನೆ, ಕೊಠಡಿ, ಸಜ್ಜಾದ ಹಾಸಿಗೆ, ಆಹಾರದಿಂದ ವ್ಯವಸ್ಥಿತವಾದ ಊಟದ ಕೋಣೆ ನೆನಪಾಯಿತು. ನಕ್ಕು ತಲೆ ಕೊಡವಿ ಎಲ್ಲವನ್ನೂ ಬಿಟ್ಟ.

ಆ ರಾತ್ರಿಯೇ ಉದ್ಯಾನವನ್ನು, ಮನೆಯನ್ನು, ನಗರವನ್ನು ಬಿಟ್ಟು ಹೋದ ಸಿದ್ಧಾರ್ಥ ಹಿಂದಿರುಗಲಿಲ್ಲ. ಢಕಾಯಿತರ ಕೈಗೆ ಸಿಕ್ಕಿರಬಹುದೆಂದು ಭಾವಿಸಿ ಕಾಮಸ್ವಾಮಿ

ಅವನಿಗಾಗಿ ಹುಡುಕಿಸಿದ. ಕಮಲ ಅವನನ್ನು ಹುಡುಕಲು ಪ್ರಯತ್ನಿಸಲಿಲ್ಲ. ಸಿದ್ಧಾರ್ಥ ಕಾಣದಾದ ಎಂದು ತಿಳಿದಾಗ ಅವಳಿಗೆ ಆಶ್ಚರ್ಯವಾಗಲಿಲ್ಲ. ಅದನ್ನು ಅವಳೇ ನಿರೀಕ್ಷಿಸಿರಲಿಲ್ಲವೆ. ಮನೆಯಿಲ್ಲದ ಸಮಣನಾದ ಯಾತ್ರಿಯಲ್ಲವೇ? ಅವರ ಕೊನೆಯ ಭೇಟಿಯ ನೆನಪಿನಲ್ಲಿ ಮೊದಲಿಗಿಂತ ಹೆಚ್ಚಾದ ಸುಖವನ್ನು ಅನುಭವಿಸಿದಳು. ತನ್ನ ನೋವಿನ ನಷ್ಟದ ಮಧ್ಯೆ ಕೊನೆಯ ಸಾರಿ ಅವನನ್ನು ತನ್ನ ಹೃದಯದಾಳಕ್ಕೆ ಎಳೆದುಕೊಂಡು ಅಪ್ಪಿದಾಗ ಅವನನ್ನೇ ಪೂರ್ಣವಾಗಿ ಅಡಗಿಸಿಕೊಂಡಂತೆ ಅವನಿಂದ ಪರಿಪಕ್ವವಾದಂತೆ ಭಾಸವಾಯಿತು.

ಸಿದ್ಧಾರ್ಥ ಕಾಣದಾದ ಎಂದು ಕೇಳಿದಾಗ ಅಪೂರ್ವ ಹಕ್ಕಿಯನ್ನು ಇಟ್ಟಿದ್ದ ಚಿನ್ನದ ಪಂಜರದತ್ತ ನಡೆದಳು. ಪಂಜರದ ಬಾಗಿಲನ್ನು ತೆರೆದು ಹಕ್ಕಿಯನ್ನು ಹೊರತೆಗೆದು ಹಾರಿಬಿಟ್ಟು ಅದು ಕಾಣದಾಗುವವರೆಗೆ ನೋಡುತ್ತಾ ನಿಂತಳು. ಅಂದಿನಿಂದ ಕಮಲೆಯ ಮನೆ ಬಾಗಿಲು ಮುಚ್ಚಿತು. ವಿಟರನ್ನು ದೂರ ಮಾಡಿದಳು. ಸ್ವಲ್ಪಕಾಲದ ನಂತರ ಸಿದ್ಧಾರ್ಥನ ಕೊನೆಯ ಭೇಟಿಯ ಫಲದಿಂದ ಗರ್ಭವತಿಯಾಗಿರುವುದನ್ನು ಗುರುತಿಸಿದಳು.

೪. ನದಿಯಲ್ಲಿ

ಕಾಡಿನಲ್ಲಿ ಬಹುದೂರ ನಡೆದು ಬಂದ ಸಿದ್ಧಾರ್ಥನ ಪಾಲಿಗೆ ಓಕರಿಕೆ ಬರುವವರೆಗೆ ಅನುಭವಿಸಿ ಇಲ್ಲವಾದ ಸುಖ ಬದುಕಿಗೆ ಮಂಗಳ ಹಾಡಿಯಾಗಿತ್ತು. ಮತ್ತೆ ಹಿಂದಿರುಗೆ ಅಲ್ಲಿಗೆ ಹೋಗಲಾಗದು. ತಾನು ಕನಸಿನಲ್ಲಿ ಕಂಡ ಹಾಡುವ ಹಕ್ಕಿ ಸತ್ತಿತು. ಮೋದ ಬಯಸಿದ ಹೃದಯದ ಹಕ್ಕಿ ಅದೇ ಎನಿಸಿತು. ಸಂಸಾರದಲ್ಲಿ ಸಿಲುಕಿ ತಾನು ತುಂಬುವವರೆಗೆ ನೀರನ್ನು ಹೀರುವ ಸ್ಪಂಜಿನಂತೆ ಉದ್ರೇಕವನ್ನು, ಸಾವನ್ನು ಎಲ್ಲ ಕಡೆಯಿಂದಲೂ ತಂದುಕೊಂಡಿದ್ದ. ಜಿಗುಪ್ಸೆ, ಸಂಕಟ, ಸಾವಿನಿಂದ ತುಂಬಿದ ಇವನಿಗೆ ಆಕರ್ಷಿಸುವ, ಸುಖಕೊಡುವ, ಇಲ್ಲ ಸಂಕಟದಲ್ಲಿ ಸಮಾಧಾನ ಮಾಡುವ ಯಾವುದೂ ಪ್ರಪಂಚದಲ್ಲಿ ಉಳಿಯಲಿಲ್ಲ.

ವಿಶ್ರಾಂತಿಗೆ ಸತ್ತಂತಿರುವ ವಿಸ್ಮೃತಿಗೆ ಭಾವೋದ್ದೀಪ್ತನಾಗಿ ಇರಲಿಚ್ಛಿಸಿದ. ಸಿಡಿಲು ಮಾತ್ರ ಅವನನ್ನು ಉರುಳಿಸಬಹುದಾಗಿತ್ತು. ಹುಲಿ ಬಂದು ಮುಗಿಸ ಬಹುದಿತ್ತು ವಿಸ್ಮೃತಿಯನ್ನುಂಟುಮಾಡುವ ತನ್ನನ್ನು ಮರೆಯುವಂತೆ ಎಚ್ಚರ ತಪ್ಪಿಸುವ ಮದ್ಯವಿದ್ದಿದ್ದರೆ.... ಅದರಲ್ಲಿ ವಿಷವೂ ಸೇರಿದ್ದರೆ ಅವನನ್ನು ಮಲಿನ ಗೊಳಿಸದೆ ಉಳಿದಿರುವ ಬೇರೆ ಕೊಳೆಯಿದೆಯೇ? ಅವನು ಮಾಡದಿರುವ ಅವಿವೇಕ, ಪಾಪ ಉಳಿದಿದೆಯೇ? ಅವನ ಕಳಂಕಕ್ಕೆ ಅವನೊಬ್ಬನೇ ಜವಾಬ್ದಾರಿಯೇ? ಹೀಗಿದ್ದೂ ಇನ್ನೂ ಬದುಕಿರಲು ಸಾಧ್ಯವಿತ್ತೇ ? ಮತ್ತೆ ಹಸಿವು, ಊಟ, ನಿದ್ರೆ, ಉಸಿರಾಟ, ರತಿ ಸಾಧ್ಯವೇ ? ಈ ಚಕ್ರೀಯ ಕ್ರಿಯೆ ಅವನ ಪಾಲಿಗೆ ಮುಗಿದು ಬರಿದಾಗಿಲ್ಲವೇ ?

ಸಿದ್ಧಾರ್ಥ ಗೌತಮನಿಂದ ಬಂದಾಗ ಅಂಬಿಗನು ಹಿಂದೊಮ್ಮೆ ಅವನನ್ನು ಕರೆದು ತಂದಿದ್ದ ದೊಡ್ಡ ನದಿಯ ದಡಕ್ಕೆ ಮತ್ತೆ ಬಂದ. ಅನುಮಾನಿ ಸುತ್ತ ನದಿಯ ದಂಡೆಯಲ್ಲಿ ನಿಂತ. ಹಸಿವು ಹಾಗೂ ಆಯಾಸ ಅವನನ್ನು ನಿಶ್ಶಕ್ತನನ್ನಾಗಿಸಿತ್ತು. ಇನ್ನು ಮುಂದಕ್ಕೆ ಎಲ್ಲಿಗೆ ? ಏಕೆ ? ಆಳವಾದ ನೋವಿನಿಂದ ನರಳಿಸುತ್ತಿರುವ ಗೊಂದಲ ಗೊಂಡ ಈ ಕನಸನ್ನು, ಮಾದಕತೆಯನ್ನು ಹುಗಿದು ಕಹಿ ಸಂಕಟ ಬದುಕಿನಿಂದ ಹೊರ ಬರುವುದಕ್ಕಿಂತ ಉತ್ತಮ ಗುರಿ ಯಾವುದು ?

ನದಿಯ ದಡದಲ್ಲಿ ಒಂದು ತೆಂಗಿನ ಮರವಿತ್ತು. ಸಿದ್ಧಾರ್ಥ ಅದರ ಎದುರು ನಿಂತು ಕೈಗಳಿಂದ ಮರವನ್ನು ತಟ್ಟಿ ಕೆಳಗೆ ಹರಿಯುತ್ತಿದ್ದ ನೀರನ್ನು ನೋಡಿದ. ನೋಡುತ್ತಿದ್ದಂತೆ ತಾನೂ ಅದರೊಂದಿಗೆ ಬೆರೆತು ಕರಗಬೇಕೆನಿಸಿತು. ನೀರಿನ ಕನ್ನಡಿ ಅವನ ಬರಿದಾದ ಹೃದಯವನ್ನು ಪ್ರತಿಫಲಿಸಿತು ನಿಜ, ಅವನು ತುದಿಯಲ್ಲಿದ್ದಾನೆ. ತನ್ನನ್ನು ನಿರ್ಮೂಲಗೊಳಿಸಿ, ಗುರಿಯಿಲ್ಲದ ಬದುಕಿನ ರೀತಿಯನ್ನು ನಾಶಗೊಳಿಸಿ, ದೇವತೆಗಳು ನೋಡಿ ಅಣಕಿಸುವ ಬದುಕನ್ನು ಕಿತ್ತೆಸೆಯುವುದಕ್ಕಿಂತ ಹೆಚ್ಚಿನದೇನೂ ಅವನ ಪಾಲಿಗಿರಲಿಲ್ಲ. ಅವನು ಬಯಸದ ಈ ರೂಪವನ್ನು ಅಳಿಸಲು ಬಹಳವಾಗಿ ಕಾದಾಡಿದ್ದ. ತನ್ನಲ್ಲಿಯ ನಾಯಿಯನ್ನು, ಹುಚ್ಚನನ್ನು, ನಡತೆಗೆಟ್ಟ ಶರೀರವನ್ನು ದುರುಪಯೋಗಪಡಿಸಿ ಕೊಳೆತು ನಾರುವಂತೆ ಮಾಡಿದ ಜಡಹೃದಯವನ್ನು ತಿಮಿಂಗಿಲ ಕಬಳಿಸಲಿ! ಭಯಂಕರ ಮೊಸಳೆಗಳ ಹಲ್ಲಿಗೆ ಸಿಕ್ಕಿ ಜರ್ಝರಿತವಾಗಲಿ ! ಭೂತಗಳು ಚೂರು ಚೂರಾಗಿ ಕತ್ತರಿಸಲಿ !

ರೂಪಗೆಟ್ಟ ತನ್ನದೇ ಮುಖವನ್ನು ನೀರಿನ ತಟ್ಟೆಯಲ್ಲಿ ಕಂಡು ಉಗುಳಿದ; ಹಿಡಿ ಸಡಿಲವಾಗಿ ಮರದಿಂದ ಹಾರಿ ತಳಕ್ಕೆ ಮುಟ್ಟುವವನಂತೆ ನೀರಿನತ್ತ ತಿರುಗಿದ, ಕಣ್ಣುಮುಚ್ಚಿ ಸಾವಿನ ಕಡೆಗೆ ಬಾಗಿದ .

ಆಗ ಅವನ ಅಂತರಾಳದಿಂದ ಸಿದ್ಧಿಯನ್ನು ಅರಸುತ್ತಾ ಕಳೆದ ಬದುಕಿನಿಂದ ಬಂದ ವಾಣಿಯನ್ನು ಕೇಳಿದ. ಅದು ಪರಿಪಕ್ವವಾದ, ಪವಿತ್ರವಾದ, ಎಲ್ಲಾ ಪ್ರಾರ್ಥನೆಯ ಮೂಲವಾದ, ಅನಾದಿಯಾದ, ಚಿರಂತನವಾದ, ಅಕ್ಷರ ಬ್ರಹ್ಮ - ಓಂ. ಅಸ್ಫುಟವಾಗಿ ದನಿಗೂಡಿಸಿದ. ಅವನ ಕಿವಿಗೆ ನಾದಬ್ರಹ್ಮನ ಸ್ಪರ್ಶವಾಗುತ್ತಲೇ ಜಡವಾಗಿ ಮರಗಟ್ಟಿದ್ದ ಆತ್ಮ ಜಾಗೃತಿ ಹೊಂದಿ ತನ್ನ ವರ್ತನೆಯ ಅವಿವೇಕವನ್ನು ತಾನೆ ಗುರುತಿಸುವ ನೋಟ ಪಡೆದ.

ತುಂಬಾ ಗಾಬರಿ, ಪೂರ್ಣವಾಗಿ ಕಳೆದುಕೊಂಡು, ಗೊಂದಲ ಗೊಂಡು, ಉದ್ದೇಶರಹಿತವಾಗಿ ಅಂತ್ಯಕ್ಕೆ ಬಂದು ಸಾವನ್ನು ಬಯಸಿದ್ದ. ಈ ಕ್ಷುದ್ರ ಬಯಕೆ ಶರೀರವನ್ನು ನಾಶಗೊಳಿಸಿ ಶಾಂತಿಯನ್ನರಸುವ ಮಟ್ಟಕ್ಕೆ ಅವನಲ್ಲಿಯೇ ಪ್ರಬಲವಾಗಿ

ಬೆಳೆಯಿತು. ಇತ್ತೀಚಿನ ಯಾತನೆ, ಭ್ರಮೆ, ನಿರಾಸೆ ಯಾವ ಅನುಭೂತಿಯೂ ಅವನ ಸ್ಮೃತಿಯನ್ನು ಓಂ ಹೊಕ್ಕ ಕ್ಷಣದಲ್ಲಿ ಘಟಿಸಿದ ಆಘಾತವನ್ನುಂಟುಮಾಡಿರಲಿಲ್ಲ. ಅವನ ದುಃಖವನ್ನು ಹಾಗೂ ದುರಂತವನ್ನು ಗುರುತಿಸಿದ.

'ಓಂ' ಅನ್ನು ತನ್ನೊಳಗೇ ಉಚ್ಚರಿಸಿದ. ಅವಿನಾಶಿ ಬ್ರಹ್ಮನ ಅರಿವು ನೆನಪಾಯಿತು. ತಾನು ಮರೆತಿದ್ದ, ಪವಿತ್ರವೆನಿಸುವ ಎಲ್ಲವೂ ಅವನ ಸ್ಮರಣೆಗೆ ಬಂತು.

ಅದು ಕೇವಲ ಒಂದು ಕ್ಷಣದ ಮಿಂಚು. ದಣಿವನ್ನು ನಿವಾರಿಸಿ ಸಿದ್ಧಾರ್ಥ ತೆಂಗಿನ ಮರದಡಿ ಕುಳಿತು ಉದ್ಗೀಥವನ್ನು ಜಪಿಸುತ್ತಾ ಮರದ ಬುಡದಲ್ಲಿ ತಲೆಯಿಟ್ಟ. ಗಾಢನಿದ್ರೆ ಕ್ರಮವಾಗಿ ಆವರಿಸಿತು.

ಕನಸಿರದ ಆ ನಿದ್ರೆ ಗಾಢವಾಗಿತ್ತು. ಅಂತಹ ನಿದ್ರೆ ಮಾಡಿ ಎಷ್ಟು ಕಾಲವಾಗಿತ್ತು. ಅನೇಕ ಘಂಟೆಗಳ ನಂತರ ಎಚ್ಚರವಾದಾಗ ಎಷ್ಟೋ ವರ್ಷ ಕಳೆದಂತೆನಿಸಿತು. ಅಲೆಗಳ ಮೆದುವಾದ ಸಪ್ಪಳ. ತಾನು ಎಲ್ಲಿದ್ದೆ? ತನ್ನನ್ನು ಇಲ್ಲಿಗೆ ಕರೆತಂದದ್ದು ಯಾರು? ಯಾವುದೂ ಅವನಿಗೆ ತಿಳಿಯಲಿಲ್ಲ. ಮೇಲೆ ನೋಡಿದ, ಮರಗಳು, ಆಕಾಶ. ಅವನು ಮಲಗಿರುವುದು ಮರಳಿನ ಮೇಲೆ! ಆಶ್ಚರ್ಯವಾಯಿತು. ಎಲ್ಲಿದ್ದೆ? ಇಲ್ಲಿಗೆ ಹೇಗೆ, ಏಕೆ ಬಂದೆ? ಜ್ಞಾಪಿಸಿಕೊಂಡ. ಅಲ್ಲೇ ಇರುವ ಬಯಕೆ ಯಾಯಿತು. ಗತಕಾಲ ಈಗವನಿಗೆ ದೂರವಾಗಿ ಪರದೆಯಲ್ಲಿ ಮರೆಯಾದಂತೆ ಮಸುಕಾಗಿ ಕಂಡಿತು. ಮರು ಹುಟ್ಟಿನಿಂದ, ಅದರಿಂದ ದೂರವಾಗಿರುವಂತೆ ಭಾಸವಾಯಿತು. ದುಃಖದಿಂದ ಪಿತ್ತೋದ್ರೇಕದಿಂದ ತುಂಬಿದ್ದ ಗತಕಾಲ ಮುಕ್ತಾಯವಾದದ್ದು ಗೊತ್ತಿತ್ತು. ಆದರೂ ಅದನ್ನು ಬೂದಿ ಮಾಡಬೇಕೆಂಬ ಬಯಕೆ. ಪ್ರಣವ ಮಂತ್ರವನ್ನು ಉಚ್ಚರಿಸುತ್ತ ನದಿಯ ತೆಕ್ಕೆಗೆ, ತೆಂಗಿನಮರದ ನೆರಳಿಗೆ ಅವನಾಗಿಯೇ ಬಂದಿದ್ದ. ನಂತರ ಅಲ್ಲಿ ಮಲಗಿ ಎಚ್ಚೆತ್ತಾಗ ಹೊಸಬನಾಗಿ ಪ್ರಪಂಚವನ್ನು ನೋಡಿದ. ಮತ್ತೆ ಮತ್ತೆ ಪ್ರಣವವನ್ನು ತನ್ನಲ್ಲಿಯೆ ಜಪಿಸಿದ. ಓಂ ಕಾರದ ಆಳಕ್ಕಿಳಿದು, ಅದನ್ನೇ ಕುರಿತು ಚಿಂತಿಸುತ್ತಾ, ತೀಕ್ಷ್ಣ ದೃಷ್ಟಿಯಿಂದ ಓಂಕಾರ ದೊಂದಿಗೆ ಅವನೇ ಮೇಳೈಸಿದಂತೆ ದಿವ್ಯ ಅನುಭವ!

ಎಂಥ ಅದ್ಭುತ ನಿದ್ರೆ ! ಶಾಂತವಾದ, ಗಾಢವಾದ ಅವನನ್ನೇ ಹೊಸ ದಾಗಿಸಿದ್ದ ನವಉತ್ಸಾಹದ ಕಾರಂಜಿ ಪುಟಿಸಿದ ಅಂಥ ನಿದ್ರೆಯನ್ನೇ ಅವನು ಮಾಡಿ ರಲಿಲ್ಲ! ಬಹುಶಃ ಸಾವಿನಲ್ಲಿ ಮುಳುಗಿ ಮರುಹುಟ್ಟು ಪಡೆದಿರಬೇಕು. ಇಲ್ಲಿ ಅವನನ್ನು ಅವನು ಗುರುತಿಸಿದ. ಅವನ ಕೈಕಾಲುಗಳನ್ನು, ತಾನು ಮಲಗಿದ್ದ ಜಾಗವನ್ನು ಹಾಗೂ ತನ್ನ ಎದೆಯಲ್ಲಿ 'ಸ್ವಯಂ' ಅನ್ನು , ಇಚ್ಛಾಶಕ್ತಿಯುಳ್ಳ, ಏಕೈಕನಾದ, ಸಿದ್ಧಾರ್ಥನನ್ನು ಗುರುತಿಸಿದ. ಆದರೆ ಈ ಸಿದ್ಧಾರ್ಥ ಮರುಹುಟ್ಟು ಹಡೆದಂತೆ ಸ್ವಲ್ಪ ಬದಲಾಯಿಸಿದ್ದ. ಅಚ್ಚರಿಯಾಗುವಂತೆ ನಿದ್ರಿಸಿದ್ದ. ಗಣನೀಯವಾಗಿ ಸಂತೋಷ ದಿಂದ ಉತ್ಸಾಹದಿಂದ ಜಾಗೃತಿಗೊಂಡಿದ್ದ.

ಎದ್ದಾಗ ಹಳದಿ ನಿಲುವಂಗಿಯುಟ್ಟ ಸಂನ್ಯಾಸಿಯೊಬ್ಬ ಎದುರಿನಲ್ಲಿ ಯೋಚಿಸುತ್ತ ಕುಳಿತಿರುವ ಭಂಗಿಯಲ್ಲಿರುವುದನ್ನು ನೋಡಿದ. ಅವನ ಮುಖ ದಲ್ಲಾಗಲಿ, ತಲೆಯಲ್ಲಾಗಲಿ ಕೂದಲಿರಲಿಲ್ಲ. ತನ್ನ ಬಾಲ್ಯದ ಗೆಳೆಯನಾಗಿದ್ದ, ಬುದ್ಧನ ಅನುಯಾಯಿಯಾಗಿ ತನ್ನನ್ನು ಬಿಟ್ಟ ಗೋವಿಂದನೇ ಈ ಸಂನ್ಯಾಸಿ ಎಂದು ಗುರುತಿಸಿದರೂ, ಅವನು ಬಹಳ ಹೊತ್ತು ಇವನನ್ನು ನೋಡಲಿಲ್ಲ. ಗೋವಿಂದ ನಿಗೂ ವಯಸ್ಸಾಗಿದೆ. ಆದರೂ ಅವನ ಮುಖದಲ್ಲಿ ಉತ್ಸಾಹ, ಗುರುಭಕ್ತಿ, ಆತಂಕ, ಕುತೂಹಲ ಈ ಹಳೆಯ ಗುಣಗಳು ಇನ್ನೂ ಕಾಣಿಸುತ್ತಿವೆ. ಯೋಚನೆಯಿಂದ ಎಚ್ಚೆತ್ತು ಗೋವಿಂದ ಕಣ್ಣೆತ್ತಿ ಅವನನ್ನು ನೋಡಿದ. ತನ್ನನ್ನು ಗುರುತಿಸಲಿಲ್ಲ ಎಂಬು ದನ್ನು ಅರಿತ ಸಿದ್ಧಾರ್ಥ ಗೋವಿಂದನಿಗೆ ಅವನು ಎಚ್ಚರವಾಗಿದ್ದುದು ಕಂಡು ಸಂತೋಷವಾಯಿತು. ಅವನ ಗುರುತು ಇಲ್ಲದಿದ್ದರೂ ಅವನು ಎಚ್ಚರವಾಗು ವವರೆಗೂ ಅಲ್ಲೇ ಕುಳಿತಿದ್ದ.

''ನಾನು ನಿದ್ರಿಸುತ್ತಿದ್ದೆ'' ಸಿದ್ಧಾರ್ಥ ಹೇಳಿದ. ''ನೀನು ಇಲ್ಲಿಗೆ ಹೇಗೆ ಬಂದೆ?''

''ಹಾವು ದುಷ್ಟ ಪ್ರಾಣಿಗಳು ಸರಾಗವಾಗಿ ಓಡಾಡುವಂತಹ ಈ ಜಾಗ ದಲ್ಲಿ ನಿದ್ರಿಸುವುದು ಸೂಕ್ತವಲ್ಲ. ಶಾಕ್ಯವಂಶದ ಪ್ರಖ್ಯಾತ ಬುದ್ಧನ ಅನುಯಾಯಿ ಗಳಲ್ಲಿ ನಾನೂ ಒಬ್ಬ. ಆತನ ಆಜ್ಞೆಯ ಮೇರೆಗೆ ನಾನು ಯಾತ್ರೆಯಲ್ಲಿದ್ದೇನೆ. ಈ

ಅಪಾಯದ ಸ್ಥಳದಲ್ಲಿ ನೀನು ಮಲಗಿರುವುದನ್ನು ನೋಡಿದೆ. ನಿನ್ನನ್ನು ಎಚ್ಚರಿಸಲು ಪ್ರಯತ್ನಪಟ್ಟಾಗ ನೀನು ದೀರ್ಘನಿದ್ರೆಯಲ್ಲಿರುವುದನ್ನು ಕಂಡು ಸಹೋದರರಿಂದ ಹಿಂದುಳಿದ ನಿನ್ನ ಪಕ್ಕದಲ್ಲಿ ಕುಳಿತೆ. ನಿನ್ನನ್ನು ಕಾಯುತ್ತ ಕುಳಿತ ನಾನೂ ತೂಕಡಿಸಿದೆ. ಆಯಾಸದಿಂದ ನಿನ್ನನ್ನು ಸರಿಯಾಗಿ ಗಮನಿಸಲಿಲ್ಲ, ಕ್ಷಮಿಸು.

''ಸಮಣನೇ ನಾನು ಕ್ಷಮಿಸುವುದೇನಿದೆ ? ನಿದ್ರೆಯಲ್ಲಿದ್ದವನಿಗೆ ಕಾವಲಾಗಿದ್ದ ನಿನಗೆ ನಾನೆ ಕೃತಜ್ಞನಾಗಿರಬೇಕು. ಬುದ್ಧನ ಅನುಯಾಯಿಗಳು ಕರುಣೆಯುಳ್ಳವರು. ಇನ್ನು ನೀನು ನಿನ್ನ ಯಾತ್ರೆ ಮುಂದುವರಿಸಬಹುದು.''

''ನಾನು ಹೋಗುತ್ತಿದ್ದೇನೆ. ನಿನಗೆ ಮಂಗಳವಾಗಲಿ''

''ಸಮಣನೇ ವಂದನೆಗಳು.''

''ಶುಭಮಸ್ತು'' ಭಿಕ್ಷು ತಲೆಬಾಗಿ ನುಡಿದ.

''ಶುಭಮಸ್ತು ಗೋವಿಂದ.''

ಕ್ಷಣ ನಿಂತ ಭಿಕ್ಷು ಕೇಳಿದ: 'ಕ್ಷಮಿಸು, ನಿನಗೆ ನನ್ನ ಹೆಸರು ಹೇಗೆ ಗೊತ್ತು''

ಪ್ರಶ್ನೆ ಕೇಳಿ ಸಿದ್ಧಾರ್ಥ ನಕ್ಕ. ''ಗೋವಿಂದ, ನಿನ್ನ ತಂದೆಯ ಮನೆಯಿಂದ, ಗುರುಕುಲದಿಂದ, ಹವಿಸ್ಸನ್ನು ಅರ್ಪಿಸುವಾಗ, ಸಮಣರೊಂದಿಗೆ ಯೋಗ ಸಾಧನೆ ಸಾಗಿಸುತ್ತಿದ್ದಾಗ, ಜೇತವನದಲ್ಲಿ ಭಗವಾನ್ ಬುದ್ಧನಿಗೆ ನಿನ್ನನ್ನು ನೀನು ಸಮರ್ಪಿಸಿಕೊಂಡು ಅವನ ಅನುಯಾಯಿಯಾಗುವವರೆಗೆ ನನಗೆ ಗೊತ್ತು!''

''ನೀನು ಸಿದ್ಧಾರ್ಥನೇ ?'' ಆವೇಗದಿಂದ ನುಡಿದ ಗೋವಿಂದ. '' ಈಗ ಗುರುತಿಸಿದೆ ! ನಿನ್ನನ್ನು ಕೂಡಲೇ ನಾನೇಕೆ ಗುರುತಿಸಲಿಲ್ಲ ? ಶುಭಾಶಯಗಳು ಸಿದ್ಧಾರ್ಥ; ನಿನ್ನನ್ನು ನೋಡಿ ನನಗೆ ತುಂಬಾ ಸಂತೋಷವಾಗುತ್ತಿದೆ.''

''ನನಗೂ ನಿನ್ನನ್ನೂ ಕಂಡು ಹರ್ಷವಾಗುತ್ತಿದೆ. ನಿದ್ರಿಸುವಾಗ ಕಾವಲಿನ ಅಗತ್ಯವಿರದಿದ್ದರೂ ನೀನು ನನ್ನನ್ನು ಕಾಯ್ದಿದ್ದೀಯೆ ಗೆಳೆಯ, ಎಲ್ಲಿಗೆ ಹೋಗುತ್ತಿದ್ದಿ! ?''

‘‘ಎಲ್ಲಿಗೂ ಹೋಗುವ ಗುರಿಯಿಲ್ಲ. ಮಳೆಗಾಲವನ್ನುಳಿದ ಭಿಕ್ಷುಗಳು ಸದಾ ಸುತ್ತುತ್ತಿರಬೇಕು. ಹೋದೆಡೆಗಳಲ್ಲಿ ಉಪದೇಶವನ್ನಿತ್ತು ಭಿಕ್ಷೆಯನ್ನು ಸ್ವೀಕರಿಸಿ, ನಿಯಮಬದ್ಧ ಬಾಳು ಸಾಗಿಸುತ್ತೇವೆ. ಸಿದ್ಧಾರ್ಥ, ನೀನೆಲ್ಲಿಗೆ ಹೋಗುತ್ತಿರುವೆ ?’’

‘‘ನಿನ್ನಂತೆಯೇ ನನ್ನದೂ ಗುರಿ ಇಲ್ಲದ ಪಯಣ. ನಾನೂ ನನ್ನ ದಾರಿಯಲ್ಲಿ ಯಾತ್ರಿಕನಾಗಿದ್ದೇನೆ?’’

‘‘ನೀನೂ ಜೀವ ಪಥದ ಯಾತ್ರಿಕನೇ ಇರಬಹುದೆಂದು ನಂಬುತ್ತೇನೆ. ಆದರೆ ನೀನು ಆ ರೀತಿಯ ಯಾತ್ರಿಕನಂತೆ ಕಾಣುತ್ತಿಲ್ಲ. ಈ ಮಾತಿಗಾಗಿ ಕ್ಷಮಿಸು. ಶ್ರೀಮಂತನ ಉಡುಗೆ, ಬೆಲೆ ಬಾಳುವ ಪಾದರಕ್ಷೆ, ಪರಿಮಳ ಚೆಲ್ಲುವ ನಿನ್ನ ತಲೆಗೂದಲು....’’

‘‘ನಿನ್ನ ಚುರುಕು ಕಣ್ಣುಗಳಿಂದ ಎಲ್ಲವನ್ನೂ ಗಮನಿಸಿರುವೆ. ನಾನು ಈಗ ಸಮಣನೆಂದು ಹೇಳಲಿಲ್ಲ. ಯಾತ್ರೆ ಮಾಡುತ್ತಿರುವೆ ಎಂದದ್ದು ಮಾತ್ರ ನಿಜ.’’

‘‘ ಈ ರೀತಿಯ ಉಡುಗೆ ತೊಡುಗೆಗಳಿಂದ ಕೆಲವರು ಮಾತ್ರ ಯಾತ್ರೆ ಮಾಡುತ್ತಾರೆ ಎಂದು ಬಲ್ಲೆ. ಬಹಳ ವರ್ಷಗಳಿಂದ ಸುತ್ತಾಡುತ್ತಿರುವ ನಾನು ಈ ರೀತಿಯ ಯಾತ್ರಿಯನ್ನು ನೋಡಿಲ್ಲ.’’

‘‘ಗೋವಿಂದ ನಿನ್ನನ್ನು ನಂಬುತ್ತೇನೆ. ಇಂದು ನೀನು ಕಾಣುತ್ತಿರುವುದು ಅಂತಹ ಅಪೂರ್ವ ಯಾತ್ರಿಯನ್ನೇ ಗೆಳೆಯಾ, ಕಾಣುವ ಈ ಪ್ರಪಂಚ ಬದಲಾವಣೆಗೆ ಒಳಪಟ್ಟದ್ದು ಎಂಬುದು ನೆನಪಿರಲಿ. ನಮ್ಮ ಉಡುಗೆ, ಶರೀರ, ಕೂದಲು ತೀವ್ರವಾಗಿ ಬದಲಾವಣೆಯಾಗುವಂತಹವು. ಅವನ್ನೇ ನೀನು ಗಮನಿಸಿದ್ದೀ. ನಾನು ಶ್ರೀಮಂತನ ಉಡಿಗೆ ತೊಟ್ಟಿದ್ದೇನೆ. ಪ್ರಾಪಂಚಿಕರಲ್ಲಿ ಒಂದಾಗಿದ್ದುದರಿಂದ ಅವರಂತೆಯೇ ಕೂದಲನ್ನು ಬಿಟ್ಟಿದ್ದೇನೆ. ಪರಿಮಳ ಪೂಸಿ, ಸುಂದರ ಪಾದರಕ್ಷೆ ಮೆಟ್ಟಿದ್ದೇನೆ.....’’

‘‘ಸಿದ್ಧಾರ್ಥ, ಈಗ ಏನಾಗಿದ್ದೀಯ ?’’

''ನನಗೆ ಗೊತ್ತಿಲ್ಲ. ನನಗೂ ನಿನಗೆ ಗೊತ್ತಿರುವಷ್ಟೇ ಗೊತ್ತು! ನಾನು ನನ್ನ ದಾರಿಯಲ್ಲಿದ್ದೆ. ಶ್ರೀಮಂತನಾಗಿದ್ದೆ. ಈಗಲ್ಲ. ಹಾಗೂ ನಾಳೆ ನಾನೇನಾಗಿರುತ್ತೇನೆ ಎಂಬುದು ಗೊತ್ತಿಲ್ಲ.''

''ನಿನ್ನ ಐಶ್ವರ್ಯವನ್ನು ಕಳೆದುಕೊಂಡೆಯಾ ?''

''ನಾನೇ ಕಳೆದುಕೊಂಡೆನೋ, ಅವೇ ನನ್ನನ್ನು ಕಳೆದುಕೊಂಡವೋ ನನಗೆ ಗೊತ್ತಿಲ್ಲ. ತೋರಿಕೆಯ ಈ ಚಕ್ರದ ವೇಗ ತುಂಬಾ ಹೆಚ್ಚು ಗೋವಿಂದ. ಬ್ರಾಹ್ಮಣನಾದ ಸಿದ್ಧಾರ್ಥನೆಲ್ಲಿ? ಸಮಣನಾದ ಸಿದ್ಧಾರ್ಥನೆಲ್ಲಿ? ಶ್ರೀಮಂತನಾದ ಸಿದ್ಧಾರ್ಥನೆಲ್ಲಿ? ಗೋವಿಂದ, ಬದಲಾವಣೆ ತುಂಬಾ ಆಗುತ್ತದೆಂಬುದನ್ನು ತಿಳಿ.''

ಗೋವಿಂದ ಬಹಳ ಹೊತ್ತು ಬಾಲ್ಯದ ಗೆಳೆಯನನ್ನು ಅನುಮಾನದಿಂದ ನೋಡಿದ. ಹಿರಿಯರಿಗೆ ಮಣಿಯುವಂತೆ ಸಿದ್ಧಾರ್ಥನಿಗೆ ನಮಸ್ಕರಿಸಿ ಅಲ್ಲಿಂದ ಹೊರಟು ಹೋದ.

ಸಿದ್ಧಾರ್ಥ ನಕ್ಕು ಅವನು ಹೋಗುವುದನ್ನೇ ನೋಡುತ್ತಿದ್ದ. ವ್ಯಾಕುಲ ಚಿತ್ತಕ್ಕೆ ನಂಬಿಕೆಯ ಗೆಳೆಯ ಇನ್ನೂ ಹತ್ತಿರದವನಾದ. ಸೊಗಸಾದ ನಿದ್ರೆಯ ನಂತರ ಪ್ರಣವದ ವೈಭವ ಅವನನ್ನು ಎಲ್ಲವನ್ನೂ ಪ್ರೀತಿಸಿ ಮಮತೆಯಿಂದ ಕಾಣುವಂತೆ ಮಾಡಿತ್ತು. ಅವನು ನಿದ್ರಿಸುವಾಗ ಅವನು ಅನುಭವಿಸಿದ್ದು ಒಂದು ತಂತ್ರವೇನೋ ? ಅವನಲ್ಲಿ ಅಡಗಿದ್ದ ಪ್ರಣವದಿಂದ ಎಲ್ಲವನ್ನೂ ಪ್ರೀತಿಸಿದ. ಅಕ್ಕರೆಯಿಂದ ನೋಡಿದ. ಎಲ್ಲದರಲ್ಲೂ ಸಂತೋಷವನ್ನೇ ಕಂಡ. ಮೊದಲು ತಾನೇಕೆ ಖಿನ್ನನಾಗಿದ್ದೆ ಎಂಬುದು ಈಗ ತಿಳಿಯಿತು - ಯಾರನ್ನೂ ಏನನ್ನೂ ಪ್ರೀತಿಸಲಾರದೇ ಇದ್ದುದೇ ತನ್ನ ಖಿನ್ನತೆಗೆ ಮೂಲ!

ಈಗ ನಗುವಿನಿಂದ ಬೀಳ್ಕೊಂಡ ಸಂನ್ಯಾಸಿಯನ್ನು ಗಮನಿಸಿದ. ನಿದ್ರೆ ಅವನಲ್ಲಿ ಶಕ್ತಿಯನ್ನು ತುಂಬಿತ್ತು. ಎರಡು ದಿವಸಗಳ ಉಪವಾಸದಿಂದ ನರಳಿದ. ಹಸಿವನ್ನು ತೊಡೆದು ಹಾಕುವ ಕಾಲ ಮೀರಿ ಹೋಗಿತ್ತು. ಪ್ರಯತ್ನದಿಂದ ನಕ್ಕು ಆ ಕಾಲವನ್ನು ಸ್ಮರಿಸಿಕೊಂಡ. ಪವಿತ್ರವಾದ, ಅಜೇಯವಾದ ತನ್ನ ಮೂರು ವಿದ್ಯೆಗಳ

ಬಗ್ಗೆ ಕಮಲೆಯೊಂದಿಗೆ ಕೊಚ್ಚಿಕೊಂಡಿದ್ದ. ಆಲೋಚನೆ, ತಾಳ್ಮೆ ಹಾಗೂ ಉಪವಾಸ. ಹುಡುಗನಾಗಿದ್ದಾಗ ಇದನ್ನೇ ಪರಿಶ್ರಮದಿಂದ ತತ್ಪರನಾಗಿ ಕಲಿತಿದ್ದ. ಈಗ ಉಪವಾಸ ಮಾಡುವುದನ್ನಾಗಲಿ, ತಾಳ್ಮೆಯಿಂದಿರುವುದನ್ನಾಗಲಿ, ಆಲೋಚಿಸುವುದನ್ನಾಗಲಿ, ಉಳಿದವುಗಳೊಂದಿಗೇ ಕಳೆದುಕೊಂಡಿದ್ದ. ದರ್ಪದ ಬದುಕು, ಶ್ರೀಮಂತಿಕೆ, ಇಂದ್ರಿಯಗಳ ಸುಖ, ತುಚ್ಛ ಪದಾರ್ಥಗಳಿಗಾಗಿ ಅವೆಲ್ಲವನ್ನೂ ಬದಲಾಯಿಸಿ ಕೊಂಡಿದ್ದ. ಅಪರಿಚಿತ ದಾರಿಯಲ್ಲಿ ಹೋದ. ಈಗ ಅವನಿಗೆ ತಾನೊಬ್ಬ ಸಾಮಾನ್ಯ ಮನುಷ್ಯನೆನಿಸಿತು.

ತನ್ನ ಸ್ಥಿತಿಯನ್ನು ಕುರಿತು ಚಿಂತಿಸಲು ಪ್ರಯತ್ನಿಸಿದ, ಶ್ರಮ ವೆನಿಸಿತು. ಮನ ಕೇಂದ್ರಿಕೃತಗೊಳ್ಳಲಿಲ್ಲ. ಆದರೂ ತನ್ನನ್ನೇ ಬಲವಂತದಿಂದ ಯೋಚನೆ ಯಲ್ಲಿ ತೊಡಗಿಸಿದ.

ಈಗ ಈ ರೂಪ ಪರಿವರ್ತನೆಯ ಶಕ್ತಿ ಮಾಯವಾಗಿದೆ. ಚಿಕ್ಕವನಾಗಿದ್ದಾಗ ನಿಂತಂತೆ . ನಾನೀಗ ಸೂರ್ಯನ ಮುಕ್ತ ರಶ್ಮಿಯಲ್ಲಿದ್ದೇನೆ. ನನ್ನದೇನೂ ಇಲ್ಲ . ನನಗೇನೂ ಗೊತ್ತಿಲ್ಲ. ನನ್ನಲ್ಲೇನೂ ಇಲ್ಲ. ನಾನೇನನ್ನೂ ಕಲಿತಿಲ್ಲ. ಎಷ್ಟು ವಿಚಿತ್ರ ವಾಗಿದೆ! ಕೂದಲು ಬೆಳ್ಳಗಾಗಿ ನಿಶ್ಯಕ್ತನಾಗುತ್ತಿರುವ ನಾನು ಇನ್ನೂ ಚಿಕ್ಕವನಲ್ಲ. ಈಗ ಪುನಃ ನಾನು ಮಗುವಿನಂತಾಗುತ್ತಿದ್ದೇನೆ. ಮತ್ತೊಮ್ಮೆ ನಕ್ಕ. ನಿಜ, ಅವನ ಅದೃಷ್ಟ ವಿಚಿತ್ರವಾಗಿದೆ ! ಹಿಂದೆ ಹಿಂದೆ ಹೋಗಿ ಈಗ ಏನೂ ಇಲ್ಲವಾಗಿ ದಿಗಂಬರ ನಾಗಿ ಮೂಢನಾಗಿದ್ದಾನೆ. ಅದಕ್ಕಾಗಿ ದುಃಖಿಸಲಿಲ್ಲ. ತನ್ನನ್ನೇ ಕಂಡು, ಈ ಅಪರಿಚಿತ ಮೂರ್ಖ ಜಗತ್ತನ್ನು ಕಂಡು ಗಟ್ಟಿಯಾಗಿ ನಕ್ಕುಬಿಡುವ ಹೆಬ್ಬಯಕೆ ಯಾಯಿತು.

'ಎಲ್ಲವೂ ನಿನ್ನಲ್ಲಿ ಹಿಂದ ಹಿಂದಕ್ಕೆ ಅಡಿ ಇರಿಸುತ್ತಿದೆ ! ತನ್ನಲ್ಲಿಯೇ ಹೇಳಿಕೊಂಡು ನಕ್ಕ. ನದಿಯತ್ತ ನೋಡಿದ. ಶಬ್ದ ತರಂಗವನ್ನುಂಟುಮಾಡುತ್ತ ಉಲ್ಲಾಸದಿಂದ ನದಿಯು ಹಿಂದ ಹಿಂದಕ್ಕೆ ಹರಿಯುತ್ತಿರುವುದನ್ನು ಕಂಡು ಸಂತೋಷ ದಿಂದ ನಕ್ಕ. ಇದರೊಳಗೆ ನೂರಾರು ವರ್ಷಗಳ ಹಿಂದೆ - ಮುಳುಗಿ ಒಂದಾಗ ಬೇಕೆಂದು ಬಯಸಿದ ನದೀ ಇದೇ ಅಲ್ಲವೇ? ಇಲ್ಲ ಅದು ಕನಸು ಮಾತ್ರವೇ?

ಎಷ್ಟು ವಿಚಿತ್ರವಾಗಿದೆ ತನ್ನ ಬದುಕು ? ಅಪರಿಚಿತ ದಾರಿಗಳಲ್ಲಿ ಅಲೆದಾಡಿದೆ. ಹುಡುಗನಾಗಿದ್ದಾಗ ನನ್ನಲ್ಲಿ ದೇವರು ಹವಿಸ್ಸಿನ ಅರ್ಪಣೆ ಇದೇ ಪ್ರಧಾನವೆನಿಸಿತ್ತು. ಯುವಕನಾಗಿದ್ದಾಗ ವೈರಾಗ್ಯ ಚಿಂತನೆ, ಧ್ಯಾನ, ಆತ್ಮನಲ್ಲಿ ಅನಂತವಾದುದನ್ನು ಆಧರಿಸಿ ಬ್ರಹ್ಮನನ್ನು ಅನ್ವೇಷಿಸಿದೆ. ಪ್ರಾಯಶ್ಚಿತ್ತದಲ್ಲಿ ಆಕರ್ಷಿತನಾದೆ. ಕಾಡಿನಲ್ಲಿದ್ದು ಚಳಿ, ಬಿಸಿಲನ್ನನುಭವಿಸಿದೆ. ಉಪವಾಸದಲ್ಲಿ ಶರೀರವನ್ನು ಗೆಲ್ಲುವುದನ್ನು ಕಲಿತೆ. ಕುತೂಹಲದಿಂದ ಬುದ್ಧದೇವನ ಉಪದೇಶವನ್ನು ಆಲಿಸಿದೆ. ವಿಶ್ವದ ಜ್ಞಾನ ಮತ್ತು ಐಕ್ಯಭಾವ ರಕ್ತದಂತೆ ಮೈಯಲ್ಲಿ ಸಂಚರಿಸಿತು. ಬುದ್ಧನನ್ನು ಅವನ ಹಾದಿಯನ್ನು ಬಿಟ್ಟು ಬರುವಂತೆ ಮಾಡಿದ್ದೂ ಅದೇ ! ಕಮಲೆಯಲ್ಲಿ ಪ್ರೇಮದ ಕಲೆಯನ್ನು, ಕಾಮಸ್ವಾಮಿಯಲ್ಲಿ ವ್ಯಾಪಾರವನ್ನು ಕಲಿತೆ. ಹಣಗಳಿಸಿ ಚೆಲ್ಲಿದೆ. ರುಚಿಯಾದ ಆಹಾರಕ್ಕೆ ಒಲಿದೆ. ಇಂದ್ರಿಯಗಳನ್ನು ಉದ್ದೀಪಿಸುವುದನ್ನು ಕಲಿತೆ. ಈ ರೀತಿಯಲ್ಲಿ ನನ್ನ ಚತುರತೆ, ಆಲೋಚನಾಶಕ್ತಿ ಇಲ್ಲವಾಗುವವರೆಗೆ, ಒಂದಾದ ಎಲ್ಲವೂ ಮರೆತು ಹೋಗುವವರೆಗೆ ಬಹಳ ವರ್ಷಗಳನ್ನು ಕಳೆದೆ. ಬಹು ಬಗೆಯ ದಾರಿಯಲ್ಲಿ ನಡೆದು ಮನುಷ್ಯನಾಗಿದ್ದವನು ಮಗುವಿನಂತಾದುದು, ಅದ್ಭುತ ಆಲೋಚನಾ ಶಕ್ತಿಯುಳ್ಳವನು ಸಾಮಾನ್ಯ ಮನುಷ್ಯನಂತಾದದ್ದು ನಿಜವಲ್ಲವೇ ? ಆದರೂ ಆ ದಾರಿಯೇ ಸರಿಯಾಗಿ ಕಂಡು ಎದೆಯ ಹಕ್ಕಿಯನ್ನು ಸಾವಿಗರ್ಪಿಸಲಿಲ್ಲವೇ ? ಅದೆಂಥ ದಾರಿ ? ಅಷ್ಟೊಂದು ಬುದ್ಧಿಹೀನತೆಯನ್ನು, ದುರ್ಗುಣಗಳನ್ನು, ಲೋಪದೋಷಗಳನ್ನು, ಉಮ್ಮಳಿಕೆಯನ್ನು, ಮೋಹ ಪರವಶತೆಯನ್ನು, ಸಂಕಟ ಪರಂಪರೆಯನ್ನು ಉಂಡು ಅನುಭವಿಸುವುದು, ಮತ್ತೆ ಮಗುವಿನಂತಾಗಲು ಮತ್ತೊಂದು ಬಗೆಯ ಜಾಗೃತಿಗಾಗಿ ಅನಿವಾರ್ಯವಾಯಿತು. ಆದರೆ ಅದು ಹಾದು ಹೋಗಲೇ ಬೇಕಾದ ಸತ್ಯ. ನನ್ನ ಕಣ್ಣುಗಳು ಹಾಗೂ ಹೃದಯ ಅದನ್ನೇ ಘೋಷಿಸುತ್ತವೆ. ಆ ಅನುಗ್ರಹವನ್ನನುಭವಿಸಲು, ಪ್ರಣವವನ್ನು ಪುನಃ ಕೇಳಲು ಗಾಢನಿದ್ರೆ ಮಾಡಿ ಜಾಗೃತಿಗೊಂಡು ಹೊಸಬನಾಗಲು ನಾನು ನಿರಾಶೆಯನ್ನು ಅನುಭವಿಸಬೇಕಿತ್ತು; ಮನಸ್ಸಿನ ಆಳಕ್ಕೆ ಮುಳುಗಿ ಆತ್ಮಹತ್ಯೆಯ ಆಲೋಚನೆಯಲ್ಲಿಳಿಯಬೇಕಿತ್ತು. ತನ್ನಲ್ಲಿಯೇ ಆತ್ಮನನ್ನು ಕಾಣಲು ಮತ್ತೆ ಮೂರ್ಖನಾಗಬೇಕಿತ್ತು. ಈ ನನ್ನ ದಾರಿ ಯಾವ ಕಡೆಗೆ ಕರೆದೊಯ್ಯುತ್ತದೆ? ಇದು ವೃತ್ತದಂತೆ ಸುಳಿಸುತ್ತುವ ಅರ್ಥರಹಿತ ಹಾದಿ. ಅದು ಯಾವಕಡೆಗೆ ಹೋದರೂ ಅದನ್ನೇ ಅನುಸರಿಸುತ್ತೇನೆ.

ಅವನೊಳಗೆ ಉಕ್ಕಿ ಹರಿಯುತ್ತಿದ್ದ ಆನಂದ ಅವನಲ್ಲಿ ಅನುಭಾವವಾಗಿ ಹೊಮ್ಮುತ್ತಿತ್ತು. ತನ್ನನ್ನೇ ಕೇಳಿಕೊಂಡ. ಎಲ್ಲಿಂದ ಬರುತ್ತಿದೆ ಈ ಆನಂದ ? ಈ ಆನಂದಾನುಭೂತಿಗೆ ಕಾರಣವೇನು ? ಇಷ್ಟೊಂದು ಒಳಿತನ್ನುಂಟುಮಾಡಿದ ಆ ಗಾಢ ನಿದ್ರೆಯಿಂದಾಯಿತೇ ? ಅಥವಾ ಪ್ರಣವ ಜಪದ ಫಲವೇ ? ಇಲ್ಲ ಪ್ರಾಪಂಚಿಕ ಬದುಕಿನಿಂದ ಫಲಾಯನಗೊಂಡಿದ್ದರಿಂದಲೇ ? ಸ್ವೈರವಿಹಾರ ಮುಗಿದಿದ್ದ ರಿಂದಲೇ ? ಈ ಬಿಡುಗಡೆಯ ಹೋರಾಟ ಅದೆಷ್ಟು ಹಿತಕರವಾಗಿದೆ ! ನಾನು ತಪ್ಪಿಸಿ ಕೊಂಡು ಬಂದ ಸ್ಥಳದಲ್ಲಿ ಯಾವಾಗಲೂ ಸುಗಂಧದ ರುಚಿಯ, ಜಡತ್ವದ ವಾತಾವರಣವಿತ್ತು. ಶ್ರೀಮಂತಿಕೆಯ ಮಿತಿಮೀರಿದ ಆಟ ಪ್ರಪಂಚವನ್ನು ಎಷ್ಟು ದ್ವೇಷಿಸುವಂತೆ ಮಾಡಿತ್ತು. ಆ ಭಯಂಕರ ಬಾಳಿನಲ್ಲಿ ನನ್ನನ್ನು ನಾನೇ ದ್ವೇಷಿಸಿದೆ. ಹಾನಿ ಉಂಟುಮಾಡಿಕೊಂಡೆ. ಚಿತ್ರಹಿಂಸೆಗೊಳಿಸಿಕೊಂಡೆ. ವಿರೂಪಗೊಂಡು ಆಯಸ್ಸು ಕಳೆದುಕೊಂಡೆ. ನಾನು ಇನ್ನೆಂದಿಗೂ ಇಚ್ಛೆಯಿಂದ ಭಾವಿಸಿದ ಸಿದ್ಧಾರ್ಥನನ್ನು ಪುನಃ ಚತುರನೆಂದು ಪರಿಗಣಿಸುವುದಿಲ್ಲ. ನಾನೇ ಇಚ್ಛಿಸುವಂತಹ, ಮೆಚ್ಚುವಂತಹ ಒಂದು ಕೆಲಸವನ್ನು ಮಾಡಿದ್ದೇನೆ-ತನ್ನನ್ನು ನಿರಸನಗೊಳಿಸುವ ಅರ್ಥರಹಿತ ಮೂರ್ಖ ಬದುಕನ್ನು ಕೊನೆಗೊಳಿಸಿದ್ದೇನೆ. ಸಿದ್ಧಾರ್ಥ ಅಷ್ಟು ದಿವಸಗಳ ಅವಿವೇಕದ ಬದುಕಿನ ನಂತರ ಪುನಃ ಒಳ್ಳೆಯ ಭಾವನೆಯನ್ನು ಪಡೆದಿದ್ದ. ಸ್ವಲ್ಪ ಸಾಧಿಸಿದ್ದೀಯ. 'ನಿನ್ನ ಎದೆಯ ಕರೆಗೆ ಓಗೊಟ್ಟು ಅದನ್ನು ಅನುಸರಿಸುತ್ತಿದ್ದೀಯ. ಅದಕ್ಕಾಗಿ ನಿನ್ನನ್ನು ಶ್ಲಾಘಿಸುತ್ತೇನೆ.'

ಅವನು ತನ್ನನ್ನೇ ಹೊಗಳಿ ತನ್ನಲ್ಲೇ ಸಂತೋಷಗೊಂಡ, ಹಸಿವಿನಿಂದ ಹೊಟ್ಟೆ, ಗುಡುಗುಡಿಸುತ್ತಿದ್ದುದನ್ನು ಕುತೂಹಲದಿಂದ ಕೇಳಿದ. ಹಿಂದಣ ಬದುಕಿನಲ್ಲಿ ನಿರಾಶೆಯ ತುದಿಗೇರುವತನಕ, ಮೃತಿ ಹೊಂದುವವರೆಗೆ ಸೇವಿಸಿದ. ಸಂಕಟದ ಒಂದು ಭಾಗವನ್ನು ಪೂರ್ಣವಾಗಿ ಸವಿದು ಹೊರ ಚೆಲ್ಲಿದ್ದುದರ ಅರಿವಾಯಿತು. ಎಲ್ಲವೂ ಒಳ್ಳೆಯದೇ ಆಯಿತು. ಆ ಕ್ಷಣದಲ್ಲಿ ನದಿಗೆ ಧುಮುಕಿ ಆತ್ಮಹತ್ಯೆಗೆ ಸಿದ್ಧವಾಗದೇ ಹೋಗಿದ್ದರೆ ಬಾಳೆಲ್ಲಾ ಬರಿದೆನಿಸಿ, ನಿರಾಸೆಯ ಸಾಗರವೆನಿಸದೆ ಹೋಗಿದ್ದರೆ ಕಾಮಸ್ವಾಮಿಯೊಂದಿಗೆ ಹಣಗಳಿಸಿ ವ್ಯಯ ಮಾಡುತ್ತ ತನ್ನ ಅಂತ ರಂಗವನ್ನು ಮರೆತು ಸವೆಯುವ ಶರೀರವನ್ನೇ ಪೋಷಿಸುತ್ತಾ, ಮೆತ್ತನೆಯ ಸಜ್ಜು ಗೊಳಿಸಿದ ನರಕದಲ್ಲಿ ಇನ್ನೂ ಕೆಲವು ಕಾಲ ಇರಬಹುದಿತ್ತು. ಅವನು ಅನುಭವಿಸಿದ ನಿರಾಶೆ,

ಪಿತ್ತೋದ್ರೇಕಗಳು ಅವನನ್ನು ಹತ್ತಿಕ್ಕಲಿಲ್ಲ. ತನ್ನ ಅಂತರಂಗದಿಂದ ಜಿಗಿದು ಬರುವ ವಾಣಿ ಜೀವಂತವಾಗಿತ್ತು. ಆದ್ದರಿಂದಲೇ ಸಂತೋಷಗೊಂಡು ನೆರೆತ ತಲೆಗೂದಲಿನ ಮುಖ ದೀಪ್ತಿಯುತವಾಗಿತ್ತು.

ತನ್ನಲ್ಲಿ ತಾನೇ ಎಲ್ಲದರ ಅನುಭವವನ್ನು ಪಡೆಯುವುದು ಒಳ್ಳೆಯ ದೆಂದು ತಿಳಿದ. ಹುಡುಗನಾಗಿದ್ದಾಗಲೇ ಪ್ರಾಪಂಚಿಕ ಸುಖ, ಸಂಪತ್ತುಗಳು ಒಳ್ಳೆಯದಲ್ಲ ಎಂಬುದನ್ನು ತಿಳಿದಿದ್ದ. ಈಗ ಅದು ಅನುಭವವೇದ್ಯ ಸತ್ಯವಾಯಿತು. ಈ ಸತ್ಯವನ್ನು ಪ್ರಜ್ಞೆಯಿಂದ, ಕಣ್ಣಿನಿಂದ, ಹೃದಯದಿಂದ, ಉದರದಿಂದಲೂ, ತಿಳಿದಿದ್ದೇನೆ. ಇದರ ಅರಿವಾದದ್ದು ಒಳ್ಳೆಯದೇ ಆಯಿತು.

ಅವನಲ್ಲಾದ ಬದಲಾವಣೆಯನ್ನು ಕುರಿತು ಬಹಳ ಹೊತ್ತು ಚಿಂತಿಸಿದ. ಅಂತರ್ವಾಣಿ ಸಂತೋಷದಿಂದ ಹಾರಾಡುತ್ತಿರುವುದನ್ನು ಕೇಳಿದ. ಅಂತರ್ವಾಣಿ ಮೃತಿ ಹೊಂದಿದ್ದರೆ ಅವನು ನಾಶವಾಗುತ್ತಿದ್ದನೇ ? ಇಲ್ಲ ಬಹಳ ಕಾಲದಿಂದಲೂ ನಾಶವಾಗಬೇಕೆಂದು ಬಯಸುತ್ತಿದ್ದ ಮತ್ತಾವುದೋ ಈಗ ಸತ್ತಿತು. ಅದನ್ನೇ ತಾನು ಉತ್ಸುಕ ಸಂನ್ಯಾಸಿಯಾಗಿದ್ದಾಗ ತೊಡೆದು ಹಾಕಲು ಪ್ರಯತ್ನಿಸಿದ್ದು ? ಅವನನ್ನು ಸ್ವಾಧೀನ ಪಡಿಸಿಕೊಂಡು ಮತ್ತೆ ಮತ್ತೆ ವ್ಯಕ್ತವಾಗಿ ಅವನ ಸಂತೋಷವನ್ನು ಕಬಳಿಸಿ ಭಯವನ್ನು ತುಂಬಿದ 'ನಾನು' ಹಮ್ಮಿಗೆ, ಬಿಮ್ಮಿಗೆ ಬುನಾದಿ - ಅದೇ 'ನಾನು', ಬಹಳ ವರ್ಷಗಳು ಅದರೊಂದಿಗೆ ಹೋರಾಡಿದ 'ನಾನು' ಅದೇ ಅಲ್ಲವೇ? ಕೊನೆಗೆ ಕಾಡಿನಲ್ಲಿ ಹರಿಯುವ ಪುಣ್ಯ ಸ್ರವಂತಿಯಾದ ಈ ನದಿಯಲ್ಲಿ ಸತ್ತದ್ದು ಅದೇ ತಾನೇ ? ಅದು ಸತ್ತ ಕಾರಣದಿಂದಲೇ ಅಲ್ಲವೇ ಈಗ ಅವನು ಮಗುವಿನಂತೆ, ನಂಬಿಕೆಯಿಂದ, ಆನಂದದಿಂದ ತುಂಬಿ ಆತಂಕವಿಲ್ಲದೆ ಇರುವುದು.

ನಾನು ಬ್ರಾಹ್ಮಣನಾಗಿದ್ದಾಗ, ಸಂನ್ಯಾಸಿಯಾಗಿದ್ದಾಗ ವ್ಯರ್ಥವಾಗಿ ಈ 'ನಾನು' ವಿನೊಂದಿಗೆ ಏಕೆ ಹೆಣಗಿದೆ ಎಂಬುದನ್ನು ಈಗ ಅರಿತುಕೊಂಡ. ಅತಿಯಾದ ಜ್ಞಾನ, ಅಸಂಖ್ಯಾತ ಶ್ಲೋಕಗಳು, ಲೆಕ್ಕವಿಲ್ಲದಷ್ಟು ಯಜ್ಞ ಯಾಗಾದಿಗಳು, ಹವಿಸ್ಸಿನ ಅರ್ಪಣೆ, ಬಲಿ, ಶ್ರಮ, ಹೆಣಗಾಟ ಅವನಿಗೆ ಅಡ್ಡಿಯಾದವು. ಯಾವಾಗಲೂ ಚತುರನಾಗಿ, ಆತುರದಿಂದ ಕಲಿತು ಬುದ್ಧಿವಂತನಾಗಿ, ಎಲ್ಲರಿಗಿಂತ ಮುಂದಿದ್ದು, ಪಂಡಿತನಂತೆ,

ಋಷಿಯಂತೆ ಅಹಂಕಾರದಿಂದ ತುಂಬಿದ್ದ. ಅವನ ಪಾಂಡಿತ್ಯ ಬುದ್ಧಿ-ಚತುರತೆಗೆ, ಗರ್ವಕ್ಕೆ ಅವನ 'ಅಹಂ' ಅಂಬೆಗಾಲಾಗಿತ್ತು. ಉಪವಾಸ, ಪ್ರಾಯಶ್ಚಿತ್ತದಿಂದ ಅದನ್ನು ನಾಶಗೊಳಿಸುತ್ತಿದ್ದೇನೆ ಎಂದು ತಿಳಿದಿದ್ದರೂ ಅದು ಅಲ್ಲಿ ಭದ್ರವಾಗಿ ಕುಳಿತು ಬೇರು ಬಿಡುತ್ತಿತ್ತು. ಈಗ ಯಾವ ದಾರ್ಶನಿಕನೂ ತನಗೆ ಮುಕ್ತಿಯನ್ನು ಕೋರಲಾರ, ತನ್ನ ಅಂತರ್ವಾಣಿಯೇ ಸರಿಯಾದ ಗುರು, ದಾರ್ಶನಿಕ ಎಂದು ಅರಿತುಕೊಂಡ. ತಾನು ಪಂಡಿತ, ಸಮಣ ಎನ್ನುವುದು ಸಾಯುವುದಕ್ಕಾಗಿ. ಪ್ರಪಂಚದಲ್ಲಿ ಅಧಿಕಾರ, ಹೆಣ್ಣು, ಹಣ ಪಡೆದ; ಅದಕ್ಕಾಗಿ ವರ್ತಕನಾದ, ಜೂಜುಗಾರನಾದ, ಕುಡುಕನಾದ; ಆಸ್ತಿ ಐಶ್ವರ್ಯವುಳ್ಳವನಾದ, ಸುಖ ಕೊಡುವ ಸಿದ್ಧಾರ್ಥ, ಶ್ರೀಮಂತ ಸಿದ್ಧಾರ್ಥ ಸಾಯುವವರೆಗೆ ಪಿತ್ತೋದ್ರೇಕದಿಂದ ನರಳಿ, ಅರ್ಥರಹಿತ ಬದುಕಿನಲ್ಲಿ ಹುಚ್ಚನಂತಾಗಿ ,ನಿಷ್ಪ್ರಯೋಜಕ ಜೀವನದ ಕೊನೆಯವರೆಗೆ ಕಹಿಯಾದ ನಿರಾಸೆ ತುಂಬುವವರೆಗೆ ಎಷ್ಟೋ ಭಯಂಕರ ವರ್ಷಗಳ ಬದುಕು ಸಾಗಿಸಬೇಕಾಯಿತು. ಅವನು ಸತ್ತು ಹೊಸ ಸಿದ್ಧಾರ್ಥ ನಿದ್ರೆಯಿಂದೆಚ್ಚೆತ್ತ. ಅವನೂ ವೃದ್ಧನಾಗಿ ಸಾಯುತ್ತಾನೆ. ಎಲ್ಲವೂ ಸೃಷ್ಟಿ, ಸ್ಥಿತಿ, ಲಯ, ತಿರೋಧಾನದ ಚಕ್ರೀಯ ಕ್ರಿಯೆಯಲ್ಲಿ ಸುತ್ತುವುದೇ. ಸಿದ್ಧಾರ್ಥನೂ ಇದೇ ಚಕ್ರಕ್ಕೆ ಬಂಧಿತನು. ಇಂದು ಅವನು ಮಗುವಾಗಿ, ಯುವಕನಾಗಿ, ಹೊಸ ಸಿದ್ಧಾರ್ಥನಾಗಿ ಬಹಳ ಆನಂದದಿಂದಿದ್ದಾನೆ.

ಅವನ ಮನಸ್ಸಿನಲ್ಲಿ ಈ ಎಲ್ಲ ಭಾವನೆಗಳು ಹಾದು ಹೋದುವು. ನಗುತ್ತ ತನ್ನ ಹೊಟ್ಟೆಯನ್ನು ಗಮನಿಸಿದ. ಝೇಂಕರಿಸುವ ದುಂಬಿಗಳ ನಾದವನ್ನು ಕೃತಜ್ಞತೆಯಿಂದ ಕೇಳಿದ. ಸಂತೋಷದಿಂದ ಹರಿಯುತ್ತಿರುವ ನದಿಯನ್ನು ನೋಡಿದ. ಈ ನದಿಯು ಅವನನ್ನು ಆಕರ್ಷಿಸಿದಷ್ಟು ಮತ್ತಾವುದೂ ಆಕರ್ಷಿಸಿರಲಿಲ್ಲ. ಅಷ್ಟು ಸುಂದರವಾದ ನೋಟವನ್ನು, ಮಂಜುಳಗಾನದೊಂದಿಗೆ ಪ್ರವಹಿಸುವ ನೀರನ್ನು ಅವನು ಕಂಡಿರಲಿಲ್ಲ. ಅವನಿಗೆ ತಿಳಿದಿರದ, ಅವನಿಗಾಗಿ ಕಾದಿರುವ ಯಾವುದೋ ವಿಶೇಷವನ್ನು ಹೇಳಲು ನದಿ ಪ್ರಯತ್ನಿಸುತ್ತಿದೆ ಅನಿಸಿತು. ನದಿಯಲ್ಲಿ ಮುಳುಗಬೇಕೆನಿಸಿತು; ಆಯಾಸ, ನಿರಾಸೆ ಹೊತ್ತು ಅದರಲ್ಲಿ ಮುಳುಗಿದ. ಹರಿಯುವ ನೀರನ್ನು ಗಾಢವಾಗಿ ಪ್ರೀತಿಸಿದ. 'ಹೊಸ' ಸಿದ್ಧಾರ್ಥ ಮತ್ತೆ ಅದರಿಂದ ಬೇಗ ದೂರವಾಗುವುದಿಲ್ಲ ಎಂದು ತೀರ್ಮಾನಿಸಿಕೊಂಡ.

●

೫. ಅಂಬಿಗ

‘ಈ ನದಿಯ ಬಳಿಯೇ ಉಳಿಯುತ್ತೇನೆ’ ಎಂದು ತೀರ್ಮಾನಿಸಿದ್ದ ಸಿದ್ಧಾರ್ಥ ! ನಗರಕ್ಕೆ ಹೋಗುವಾಗ ಇದೇ ನದಿಯನ್ನು ಹಾದು ಹೋದೆ. ಸ್ನೇಹ ಪ್ರಿಯ ಅಂಬಿಗ ಇದೇ ನದಿಯನ್ನು ದಾಟಿಸಿದ್ದ. ಅವನಲ್ಲಿಗೆ ಹೋಗುತ್ತೇನೆ. ಇಂದು ಕನಸಿನಂತೆ ಕರಗಿ ಸತ್ತು ಇಲ್ಲವಾಗಿರುವ ಆ ಹೊಸ ಜೀವನದತ್ತ ಮೊದಲ ಹೆಜ್ಜೆ ಇರಿಸಿದ್ದು ಅವನ ಗುಡಿಸಿಲಿನಿಂದಲೇ. ಮತ್ತೆ ಪ್ರಸ್ತುತ ಹೊಸ ಬಾಳು, ಹೊಸ ಹಾದಿಯ ಅರಿವಿಗೂ ಅದೇ ತಾಣ ನಾಂದಿ ಹಾಡಲಿ.

ಹರಿಯುವ ನೀರಿನತ್ತ, ಪ್ರತಿಫಲಿಸುವ ಹಸಿರಿನತ್ತ, ಸ್ಫಟಿಕದಂತೆ ಸುಂದರ ವಾದ ಅದರ ವಿನ್ಯಾಸದತ್ತ ಪ್ರೀತಿಯಿಂದ ನೋಡಿದ. ಮುತ್ತಿನ ಮಣಿಗಳಂತೆ ಅದರ ಆಳದಿಂದ ಬಂದು ತೇಲುವ ಗುಳ್ಳೆಗಳನ್ನು ಅವುಗಳಲ್ಲಿ ಪ್ರತಿಫಲಿಸುವ ಆಕಾಶವನ್ನು ನೋಡಿದ. ನದಿ ಹಸುರಾಗಿ, ಬಿಳಿಯಾಗಿ, ಆಕಾಶ ನೀಲಿಯಾಗಿ, ಮುತ್ತಿನ ಮಣಿಯಾಗಿ ಸಾವಿರ ಕಣ್ಣುಗಳಿಂದ ಅವನತ್ತ ನೋಡಿತ್ತು ಅದೆಷ್ಟು ಆನಂದ ನೀಡಿತು, ಅವನದೆಷ್ಟು ಕೃತಜ್ಞನಾಗಿದ್ದಾನೆ ! ಅವನ ಹೃದಯದಲ್ಲಿ ಹೊಸದಾಗಿ ಜಾಗೃತಿಗೊಂಡ ವಾಣಿ, ಅವನಿಗೆ ಹೇಳಿತು. ‘ಈ ನದಿಯನ್ನು ಪ್ರೀತಿಸು. ಅದಲ್ಲಿರು, ಅದರಿಂದ ಕಲಿ’ ಹೌದು, ಅದನ್ನು ಕೇಳಿ ಕಲಿಯಲಿಚ್ಛಿಸಿದ. ಈ ನದಿಯನ್ನು ಅದರ ರಹಸ್ಯವನ್ನು ಅರ್ಥ ಮಾಡಿಕೊಂಡವರು ಇನ್ನೂ ಹೆಚ್ಚು ರಹಸ್ಯಗಳನ್ನು ಅರ್ಥ ಮಾಡಿಕೊಳ್ಳಬಹುದು.

ತನ್ನ ಆತ್ಮವನ್ನು ಭದ್ರವಾಗಿ ಹಿಡಿದ ಒಂದು ನದಿಯ ರಹಸ್ಯವನ್ನು ಇಂದು ನೋಡಿದ. ನೀರು ಸತತವಾಗಿ ಹರಿದು ಹೋಗುತ್ತಿದ್ದರೂ ಅದು ಯಾವಾ ಗಲೂ ಅಲ್ಲೆ ಇರುವುದನ್ನು ಯಾವಾಗಲೂ ನೀರೇ ಆಗಿರುವುದನ್ನು, ಆದರೂ ಪ್ರತಿಕ್ಷಣವೂ ಹೊಸ ದಾಗುತ್ತಿರುವುದನ್ನು ಗಮನಿಸಿದ. ಇದನ್ನು ಯಾರು ಅರ್ಥ ಮಾಡಿಕೊಂಡು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬಲ್ಲರು ? ಅದನ್ನು ಅವನು ಅರ್ಥ ಮಾಡಿಕೊಳ್ಳಲಿಲ್ಲ. ಆದರೆ ಅವನಿಗೆ ಮಬ್ಬಾದ ಅನುಮಾನ, ಅಸ್ಪಷ್ಟ ಜ್ಞಾಪಕ, ಪವಿತ್ರವಾದ ನಾದ ಮಾತ್ರ ಅರಿವಿತ್ತು.

ಸಿದ್ಧಾರ್ಥ ಎದ್ದಾಗ ಹಸಿವಿನ ವೇದನೆಯನ್ನು ತಡೆಯದಾದ. ನೋವಿನಿಂದ ನದಿಯ ದ್ರಡದಲ್ಲಿ ಅಡ್ಡಾಡಿದ, ನೀರಿನ ಅಲೆಯ ತರಂಗಗಳನ್ನು ಕೇಳಿದ. ಯಾತನೆ ಕೊಡುವ ಶರೀರದ ಹಸಿವನ್ನು ಗಮನಿಸಿದ.

ಅವನು ದಡದ ಹತ್ತಿರ ಬಂದಾಗ ದೋಣಿಯೂ ಇತ್ತು. ಅಂಬಿಗನೂ ಅಲ್ಲಿಯೇ ಇದ್ದ. ಒಮ್ಮೆ ದೋಣಿಯಲ್ಲಿ ಸಮಣನನ್ನು ಆಚೆ ದಾಟಿಸಿದ ಅಂಬಿಗ ಅವನೇ ಆಗಿದ್ದ. ಸಿದ್ಧಾರ್ಥ ಅವನನ್ನು ಗುರುತಿಸಿದ. ಅವನಿಗೂ ವಯಸ್ಸಾಗಿತ್ತು.

''ನನ್ನನ್ನು ದಾಟಿಸುವೆಯಾ ?'' ಕೇಳಿದ ಸಿದ್ಧಾರ್ಥ.

ಶ್ರೀಮಂತನಂತೆ ಕಾಣುವ ಅವನು ಏಕಾಂಗಿಯಾಗಿ ನಡೆದು ಬರುತ್ತಿರುವುದನ್ನು ಕಂಡು ಅಂಬಿಗ ಆಶ್ಚರ್ಯದಿಂದ ಮರುಮಾತಿಲ್ಲದೆ ದೋಣಿಯಲ್ಲಿ ಕೂರಿಸಿ ಹುಟ್ಟು ಹಾಕಿದ.

''ನೀನು ವೈಭವದ ಜೀವನದಲ್ಲಿದ್ದೀಯ'' ಸಿದ್ಧಾರ್ಥ ಹೇಳಿದ, '' ಈ ನದಿಯ ಹತ್ತಿರವಿದ್ದು ಪ್ರತಿನಿತ್ಯ ಅದರಲ್ಲಿ ಹಾಯುವುದು ಶ್ರೇಷ್ಠ.''

ಗಂಭೀರವಾಗಿ ಅತ್ತಿತ್ತ ಓಲಾಡಿ ಮಂದಸ್ಮಿತ ನಗುವಿನಿಂದ ಹೇಳಿದ ಅಂಬಿಗ; ''ನಿಮ್ಮ ಮಾತು ನಿಜ. ಆದರೆ ಎಲ್ಲರ ಬದುಕೂ, ಎಲ್ಲರ ಕೆಲಸವೂ ಶ್ರೇಷ್ಠವೇ ಅಲ್ಲವೇ?''

'' ಇರಬಹುದು. ಆದರೆ ನಿನ್ನದನ್ನು ಕಂಡು ಕರುಬುತ್ತೇನೆ.''

''ನೀವು ಈ ಕೆಲಸದ ಬಗ್ಗೆ ಆಸ್ಥೆಯನ್ನು ಬಹುಬೇಗ ಕಳೆದು ಕೊಳ್ಳುತ್ತೀರಿ. ಇದು ಶ್ರೀಮಂತ ಉಡುಪು ತೊಟ್ಟವರಿಗಲ್ಲ.''

ಸಿದ್ಧಾರ್ಥ ನಕ್ಕ. ಉಡುಪಿನ ಬಗ್ಗೆ ಆಗಲೇ ನಿರ್ಣಯಿಸಿದ್ದೇನೆ. ತೊಂದರೆ ಎನಿಸಿರುವ ಈ ಬಟ್ಟೆಗಳನ್ನು ನನ್ನಿಂದ ಸ್ವೀಕರಿಸುತ್ತೀಯಾ ? ಹೇಳುವುದಾದರೆ, ನದಿ ದಾಟಿಸಿದ ನಿನಗೆ ಕೊಡಲು ನನ್ನಲ್ಲಿ ಹಣವಿಲ್ಲ.''

''ಮಾನ್ಯರು ಹಾಸ್ಯ ಮಾಡುತ್ತಿಲ್ಲವಷ್ಟೆ ?'' ಅಂಬಿಗ ನಕ್ಕ.

''ಸ್ನೇಹಿತನೇ, ಇದು ಹಾಸ್ಯವಲ್ಲ, ಹಣವಿಲ್ಲದೆ ಹಿಂದೊಮ್ಮೆ ನನ್ನನ್ನು ದಾಟಿಸಿದ್ದೀಯ. ಇವತ್ತೂ ಹಾಗೆ ಮಾಡಿ ಹಣಕ್ಕೆ ಬದಲು ಈ ಬಟ್ಟೆಗಳನ್ನು ತೆಗೆದುಕೋ.''

''ನೀವು ಬಟ್ಟೆಯಿಲ್ಲದೆ ಮುಂದೆ ಹೋಗುತ್ತೀರಾ ?''

''ಮುಂದೆ ಹೋಗಲು ನಾನು ಇಚ್ಛಿಸುವುದಿಲ್ಲ. ನಿನ್ನ ಹಳೆಯ ಬಟ್ಟೆಗಳನ್ನು ಕೊಟ್ಟು ಸಹಾಯಕನಾಗಿ ಇಲ್ಲ ಶಿಷ್ಯನನ್ನಾಗಿ ಇರಿಸಿಕೊಂಡರೆ ಇರುತ್ತೇನೆ. ನಾನು ದೋಣಿ ನಡೆಸುವುದನ್ನು ಕಲಿಯಬೇಕು.''

ಅಂಬಿಗ ಅಪರಿಚಿತನನ್ನು ಬಹಳ ಹೊತ್ತು ತೀಕ್ಷ್ಣವಾಗಿ ನೋಡಿದ. ''ನಿನ್ನನ್ನು ಗುರುತಿಸಿದೆ. ಒಮ್ಮೆ ನನ್ನ ಗುಡಿಸಿಲಲ್ಲಿ ನಿದ್ರಿಸಿದ್ದೀಯ. ಇದು ಬಹಳ ಹಿಂದೆ. ಬಹುಶಃ ಇಪ್ಪತ್ತು ವರ್ಷಗಳಾಗಿರಬಹುದು. ನಾನು ನದಿಯನ್ನು ದಾಟಿಸಿದ ಮೇಲೆ ಸ್ನೇಹಿತರಾಗಿ ಬೀಳ್ಕೊಂಡೆವು. ನಿನ್ನ ಹೆಸರು ಜ್ಞಾಪಕಕ್ಕೆ ಬರಲೊಲ್ಲದು. ನೀನು ಸಮಣ ನಲ್ಲವೆ''

''ನನ್ನ ಹೆಸರು ಸಿದ್ಧಾರ್ಥ. ಆಗ ನಾನು ಸಮಣನಾಗಿದ್ದೆ''

''ಸಿದ್ಧಾರ್ಥ ನಿನಗೆ ಸ್ವಾಗತ. ನನ್ನ ಹೆಸರು ವಾಸುದೇವ. ಇಂದು ನನ್ನ ಅತಿಥಿಯಾಗಿದ್ದು ನನ್ನ ಗುಡಿಸಿಲಿನಲ್ಲಿಯೇ ನಿದ್ರಿಸು. ನೀನು ಎಲ್ಲಿಂದ ಬರುತ್ತಿದ್ದೀಯ? ಶ್ರೀಮಂತ ಉಡುಗೆ ಧರಿಸಿಯೂ ಇಷ್ಟೊಂದು ದಣಿವೇಕೆ ?''

ಅವರಾಗಲೇ ನದಿಯ ಮಧ್ಯಕ್ಕೆ ಬಂದಿದ್ದರು. ನೀರಿನ ಸೆಳೆತವಿದ್ದುದರಿಂದ ವಾಸುದೇವ ಬಿರುಸಾಗಿ ಹುಟ್ಟು ಹಾಕಿದ. ದೋಣಿಯ ತುದಿಯನ್ನು ನೋಡುತ್ತ ತನ್ನ ಬಲಿಷ್ಟವಾದ ಕೈಗಳಿಂದ ಗಾಬರಿಯಿಲ್ಲದೆ ದೋಣಿಯನ್ನು ನಡೆಸಿದ.

ಸಿದ್ಧಾರ್ಥ ಅವನನ್ನು ಗಮನಿಸಿದ. ತಾನು ಸಮಣನಾಗಿದ್ದಾಗ ಇವನ ಬಗ್ಗೆ ವಾತ್ಸಲ್ಯ ಉಂಟಾದುದನ್ನು ಜ್ಞಾಪಿಸಿಕೊಂಡ. ವಾಸುದೇವನ ಆತಿಥ್ಯವನ್ನು ಸಂತೋಷ

ದಿಂದ ಸ್ವೀಕರಿಸಿದ. ನದಿಯ ದಡವನ್ನು ಸೇರುತ್ತಿದ್ದಂತೆ ದೋಣಿಯನ್ನು ಹಿಡಿದು ಕಟ್ಟಲು ಸಹಕರಿಸಿದ, ವಾಸುದೇವ ಅವನನ್ನು ತನ್ನ ಗುಡಿಸಲಿಗೆ ಕರೆದುಕೊಂಡು ಹೋಗಿ ನೀರನ್ನಿತ್ತು ರೊಟ್ಟಿ, ಮಾವಿನ ಹಣ್ಣನ್ನು ಕೊಟ್ಟ. ಸಿದ್ಧಾರ್ಥ ತೃಪ್ತಿಯಿಂದ ಸೇವಿಸಿದ.

ಸಂಧ್ಯಾ ಸಮಯಕ್ಕೆ ಇಬ್ಬರು ನದಿಯ ದಡದಲ್ಲಿದ್ದ ಒಂದು ಮರದ ಬುಡದಲ್ಲಿ ಕುಳಿತರು. ಸಿದ್ಧಾರ್ಥ ತನ್ನ ಬದುಕಿನ ಕತೆಯನ್ನು ಹೇಳಿದ! ಮುಗಿಯುವ ಹೊತ್ತಿಗೆ ರಾತ್ರಿ ಬಹಳವಾಗಿತ್ತು.

ವಾಸುದೇವ ಹೆಚ್ಚು ಗಮನವಿಟ್ಟು ಕೇಳಿದ. ಅವನ ಹುಟ್ಟು ಬಾಲ್ಯ, ವಿದ್ಯಾರ್ಜನೆ, ಅನ್ವೇಷಣೆ, ಸುಖ ಸಂತೋಷ ಹಾಗೂ ಅಗತ್ಯತೆಗಳೆಲ್ಲವನ್ನು ಕುರಿತು ವಿಚಾರಿಸಿದ. ಕೇವಲ ಕೆಲವರಂತೆ ಅಂಬಿಗರ ಅತ್ಯಂತ ಸದ್ಗುಣಗಳಲ್ಲೊಂದಾದ ಕಿವಿಗೊಟ್ಟು ಕೇಳುವುದನ್ನವನು ಕಲಿತಿದ್ದ. ಒಂದು ಮಾತನ್ನೂ ಆಡದೆ ಮೌನವಾಗಿ, ಪ್ರತಿಯೊಂದು ಪದವನ್ನು ವಾಸುದೇವ ಕೇಳಿದ್ದಾನೆ ಎನಿಸಿತು ಸಿದ್ಧಾರ್ಥನಿಗೆ. ತಾಳ್ಮೆಗೆಟ್ಟು ಯಾವುದನ್ನು ಎದುರು ನೋಡದೆ, ಹೊಗಳಿಕೆಯನ್ನಾಗಲಿ `ಇಲ್ಲ ನಿಂದನೆ ಯನ್ನಾಗಲಿ ಹೇಳದೆ - ಅವನು ಆಲಿಸಿದ. ತನ್ನ ದುಃಖವನ್ನು ಹೋರಾಟವನ್ನು, ಬದುಕನ್ನು ಸೆಳೆದು ಕೊಳ್ಳಬಲ್ಲ ಅಂತಹ ಕಿವಿಗೊಟ್ಟು ಕೇಳುವವರನ್ನು ಪಡೆದು ಕೊಳ್ಳುವುದು ಎಷ್ಟು ಸೊಗಸು ಎನಿಸಿತು ಸಿದ್ಧಾರ್ಥನಿಗೆ.

ಸಿದ್ಧಾರ್ಥ ತನ್ನ ಅನುಭವದ ಕೊನೆಯಲ್ಲಿ ನದಿಯ ದಡದಲ್ಲಿದ್ದ ಮರ, ಅಲ್ಲಿ ಅನುಭವಿಸಿದ ಪೂರ್ಣ ನಿರಾಸೆಯ ಬಗ್ಗೆ ಪ್ರಣವದ ಬಗ್ಗೆ, ನಿದ್ರೆಯ ನಂತರ ನದಿಯ ಬಗ್ಗೆ ತನಗುಂಟಾದ ಒಲವನ್ನು ಕುರಿತು ಹೇಳಿದಾಗ ಅಂಬಿಗ ತನ್ನೆರಡು ಕಣ್ಣುಗಳನ್ನು ಮುಚ್ಚಿ, ಪೂರ್ಣ ತಲ್ಲೀನನಾಗಿ, ತುಂಬಿದ ಆಸಕ್ತಿಯಿಂದ ಕೇಳಿದ.

ಸಿದ್ಧಾರ್ಥ ಹೇಳಿ ಮುಗಿಸಿದ ಮೇಲೆ ಬಹಳ ಹೊತ್ತು ಮೌನ ಆವರಿಸಿತ್ತು. ವಾಸುದೇವ ಹೇಳಿದ, ''ನಾನು ನೆನೆಸಿದಂತೆಯೇ ನದಿ ನಿನ್ನೊಂದಿಗೆ ಮಾತನಾಡಿದೆ. ನಿನ್ನೊಂದಿಗೂ ಸಹ ಅದು ಸ್ನೇಹ ತೋರಿದೆ. ನನ್ನೊಂದಿಗೇ ನೀನು ಇರು.

ನನ್ನ ಹೆಂಡತಿಯ ಹಾಸಿಗೆ ಇನ್ನೂ ಇದೆ. ತುಂಬಾ ಹಿಂದೆಯೇ ಅವಳು ಸತ್ತಳು. ಅಂದಿನಿಂದ ನಾನು ಒಂಟಿ. ಇಬ್ಬರಿಗೂ ಸಾಕಾಗುವಷ್ಟು ಊಟವೂ ದೊರೆಯುತ್ತದೆ. ಒಟ್ಟಿಗೇ ಇರೋಣ.''

''ಈ ಕೃಪೆಗೆ ಕೃತಜ್ಞ. ನೀನು ಅದೆಷ್ಟು ಸೊಗಸಾಗಿ ಕಿವಿಗೊಟ್ಟು ಕೇಳಿದೆ ! ಕೇಳುವುದನ್ನು ಎಲ್ಲೋ ಕೆಲವರು ಮಾತ್ರ ಕಲಿತಿದ್ದಾರೆ. ನಿನ್ನಂತೆ ಕೇಳುವವರನ್ನು ನಾನು ಕಂಡಿಲ್ಲ. ಇದನ್ನೂ ನಾನು ನಿನ್ನಿಂದ ಕಲಿಯುತ್ತೇನೆ.''

''ನೀನು ಕಲಿಯುತ್ತೀಯ. ಆದರೆ ನನ್ನಿಂದಲ್ಲ. ಕೇಳುವುದನ್ನ ನದಿ ಹೇಳಿಕೊಟ್ಟಿತು; ಅದರಿಂದಲೇ ಕಲಿಯುವೆ. ನದಿಗೆ ಎಲ್ಲವೂ ಗೊತ್ತು. ಅದರಿಂದ ಯಾರು ಏನನ್ನು ಬೇಕಾದರೂ ಕಲಿಯಬಹುದು. ಒಳಗೆ ಇಳಿಯುವುದು ಒಳ್ಳೆಯ ದೆಂದು. ಮುಳುಗುವುದನ್ನು, ಆಳದಲ್ಲಿ ಹುಡುಕುವುದನ್ನು ಈಗಾಗಲೇ ನದಿಯಿಂದ ಕಲಿತಿದ್ದಿ. ಶ್ರೀಮಂತನೂ, ಗಣ್ಯನೂ ಆದ ಸಿದ್ಧಾರ್ಥ ದೋಣಿ ನಡೆಸುವವ ನಾಗುತ್ತಾನೆ; ಜ್ಞಾನಿಯಾದ ಬ್ರಾಹ್ಮಣ ಅಂಬಿಗನಾಗುತ್ತಾನೆ ಎಂಬುದನ್ನೂ ನದಿಯಿಂದ ಕಲಿತಿರುವೆ. ಅಂತೆಯೇ ಉಳಿದವನ್ನೂ ಕಲಿಯುವೆ''

ಬಹಳ ಹೊತ್ತು ಸಿದ್ಧಾರ್ಥ ಮೌನದಿಂದಿದ್ದ.

''ಆಗಲೇ ಹೊತ್ತಾಗಿದೆ'' ಎದ್ದು ನಿಂತು ವಾಸುದೇವ ಹೇಳಿದ. '' ಇನ್ನು ನಿದ್ರಿಸೋಣ. ನಿನಗೆ ಬೇರೆ ಹೇಳಲಾರೆ. ಎಲ್ಲವನ್ನೂ ನೀನೇ ಕಂಡುಕೊಳ್ಳುತ್ತಿ. ಈಗಾಗಲೇ ನಿನಗೆ ಗೊತ್ತಿರಲೂ ಬಹುದು. ನಾನು ಕಲಿತವನಲ್ಲ. ಮಾತನಾಡು ವುದಾಗಲಿ, ಆಲೋಚಿಸುವುದಾಗಲಿ ನನಗೆ ಗೊತ್ತಿಲ್ಲ. ನನಗೆ ಆಲಿಸುವುದು ಭಕ್ತಿಯಿಂದ ವರ್ತಿಸುವುದು ಮಾತ್ರ ಗೊತ್ತು. ಮತ್ತೇನನ್ನು ಕಲಿಯಲಿಲ್ಲ. ನಾನು ಮಾತು ಕಲಿತು ಹೇಳಿಕೊಡುವ ವಿದ್ಯೆ ಕಲಿತಿದ್ದರೆ ಬಹುಶಃ ನಾನು ಗುರುವಾಗು ತ್ತಿದ್ದೆ. ಅದಕ್ಕೇ ಈಗ ನಾನು ಅಂಬಿಗನಾಗಿರುವೆ. ನನಗೆ ತಿಳಿದಿರುವುದು ಜನರನ್ನು ದಾಟಿಸುವುದು. ಸಾವಿರಾರು ಜನರನ್ನು ನದಿ ದಾಟಿಸಿದ್ದೇನೆ. ಈ ನದಿ ಅವರ ಪಾಲಿಗೆ ಅವರ ಪ್ರಯಾಣಕ್ಕೆ ದೊಡ್ಡ ಅಡಚಣೆ. ಯಾತ್ರೆಗಾಗಿ, ಮದುವೆಗಾಗಿ, ವ್ಯಾಪಾರಕ್ಕಾಗಿ, ಕಾರ್ಯಾರ್ಥವಾಗಿ

ಪ್ರಯಾಣ ಮಾಡುವ ಅವರಿಗೆ ಈ ನದಿ ಅಡ್ಡಿ ಎನಿಸದೆ ಮತ್ತೇನನಿಸೀತು ? ಈ ಅಡ್ಡಿಯನ್ನು ದೂರೀಕರಿಸಲು ಅಂಬಿಗ ಅವಶ್ಯ. ಈ ಬೇಡಿಕೆಯನ್ನು ನಾನು ಪೂರೈಸುತ್ತಿದ್ದೇನೆ. ಸಾವಿರಾರು ಜನರಲ್ಲಿ ನಾಲ್ಕೈದು ಮಂದಿಗೆ ಮಾತ್ರ ಈ ನದಿ ಅಡಚಣೆ ಎನಿಸಲಿಲ್ಲ. ಅವರೆಲ್ಲರೂ ಅದರ ಮಧುರ ಸಂಗೀತವನ್ನು ಕಿವಿಗೊಟ್ಟು ಆಲಿಸಿದ್ದಾರೆ. ಅವರ ಪಾಲಿಗೆ ಇದು ಪವಿತ್ರ ನದಿ, ಸಿದ್ಧಾರ್ಥ, ತುಂಬಾ ಹೊತ್ತಾಯಿತು ನಿದ್ರಿಸೋಣ.''

ಸಿದ್ಧಾರ್ಥ ಅಂಬಿಗನೊಂದಿಗಿದ್ದು ದೋಣಿಯ ಹುಟ್ಟು ಹಾಕುವುದನ್ನು ಕಲಿತ. ವಾಸುದೇವನೊಂದಿಗೆ ಗದ್ದೆಯಲ್ಲಿ ಕೆಲಸ ಮಾಡಿ, ಕಟ್ಟಿಗೆಯನ್ನು ಆಯ್ದು, ಬಾಳೆಯ ಗಿಡದಲ್ಲಿ ಹಣ್ಣನ್ನು ಬಿಡಿಸಿ ತರುತ್ತಿದ್ದ. ಹುಟ್ಟುಗೋಲು ಮಾಡುವುದನ್ನು, ದೋಣಿಯನ್ನು ಬಲಪಡಿಸುವುದನ್ನು, ಹೆಣಿಗೆಯನ್ನು ಕಲಿತು ಮಾಡುತ್ತಿದ್ದ, ಕಲಿತ ಎಲ್ಲದರಲ್ಲು ಸಂತೋಷಗೊಂಡಿದ್ದ. ಕಾಲ ಬೇಗ ಉರುಳಿತು. ವಾಸುದೇವ ಹೇಳಿ ಕೊಡುವುದಕ್ಕಿಂತ ಹೆಚ್ಚಾಗಿ ನದಿಯಿಂದ ನಿರಂತರವಾಗಿ ಕಲಿತ. ಶಾಂತ ಮನಸ್ಕನಾಗಿ ಕಾಯುತ್ತ ಬಿಚ್ಚು ಹೃದಯದಿಂದ ಮೋಹವಿಲ್ಲದೆ, ಬಯಕೆಯಿಲ್ಲದೆ, ಅಭಿಪ್ರಾಯ ನಿರ್ಣಯಗಳಿಲ್ಲದೆ ಸಾವಧಾನವಾಗಿ ಕೇಳುವುದನ್ನು ಕಲಿತ.

ವಾಸುದೇವನೊಂದಿಗೆ ಸಾಂದರ್ಭಿಕವಾಗಿ ಗಹನವಾದ ವಿಷಯಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದ. ವಾಸುದೇವ ಅವನೇ ಹೇಳಿದಂತೆ ಮಾತುಗಾರನಾಗಿರಲಿಲ್ಲ. ಅವನಿಂದ ಮಾತು ಹೊರಡಿಸುವುದರಲ್ಲಿ ಎಲ್ಲೋ ಒಮ್ಮೆ ಯಶಸ್ವಿಯಾಗುತ್ತಿದ್ದ. ಒಮ್ಮೆ ಕೇಳಿದ. ''ಕಾಲ ಎಂಬುದಿಲ್ಲ ಎನ್ನುವ ರಹಸ್ಯವನ್ನು ನದಿಯಿಂದಲೇ ಕಲಿತೆಯ ?''

ವಾಸುದೇವನ ಮುಖದಲ್ಲಿ ಮಿಂಚಿನ ನಗೆ ಮಿನುಗಿತು. ''ಹೌದು, ಹುಟ್ಟುವ ಮೂಲದಲ್ಲಿ ಜಿನುಗಿ ಹರಿದು ಜಲಪಾತ ಮೂಡಿಸುವಲ್ಲಿ, ಅಲೆಯ ಸೆಳೆತದಲ್ಲಿ, ದೋಣಿಯನ್ನು ತೇಲಿಸುವಲ್ಲಿ ಸಾಗರದಲ್ಲಿ ಹಾಗೆಯೇ ಉತ್ತುಂಗ ಶಿಖರದಲ್ಲಿ ಅದು ಒಂದೇ ಕಾಲದಲ್ಲಿರುತ್ತದೆ. ಇದಕ್ಕೆ ಇರುವುದು ವರ್ತಮಾನ ಮಾತ್ರ. ಭೂತ ಭವಿಷ್ಯ ಇದರ ಪಾಲಿಗಿಲ್ಲ. ನೀನು ಕೇಳಿದ್ದು ಇದೇನೇ ?''

''ಹೌದು. ಅದನ್ನು ಕಲಿತಾಗ ನನ್ನ ಜೀವನವನ್ನ ಸ್ಮರಿಸಿಕೊಂಡೆ. ಅದು ಒಂದು ಬಗೆಯ ನದಿ. ಬಾಲಕ ಸಿದ್ಧಾರ್ಥ, ಯುವಕ ಸಿದ್ಧಾರ್ಥ, ವೃದ್ಧ ಸಿದ್ಧಾರ್ಥ ರೂಪದ ಬದಲಾವಣೆಯೇ ಹೊರತು ವಾಸ್ತವವಲ್ಲ. ಸಿದ್ಧಾರ್ಥನ ಹಿಂದಿನ ಜೀವನವೂ ಸಹ ಭೂತದಲ್ಲಿರಲಿಲ್ಲ ಅವನ ಸಾವು ಬ್ರಹ್ಮನನ್ನು ಸೇರುವಿಕೆ ಭವಿಷ್ಯ ದಲ್ಲಿಲ್ಲ. ಏನೂ ಇರಲಿಲ್ಲ. ಏನೂ ಇರುವುದಿಲ್ಲ. ಇರುವುದೆಲ್ಲ ವಾಸ್ತವ ಹಾಗೂ ಪ್ರತ್ಯಕ್ಷ.''

ಅತ್ಯಾನಂದದಿಂದ ಮಾತನಾಡಿದ ಸಿದ್ಧಾರ್ಥ. ಅವನು ಕಂಡುಕೊಂಡ ಆ ಅರಿವು ಅವನಲ್ಲಿ ಹೆಚ್ಚು ಸಂತೋಷವನ್ನುಂಟು ಮಾಡಿತ್ತು. ಹಾಗಿದ್ದರೆ ದುಃಖ ಒಳಗಿನ ಯಾತನೆ, ಭಯ ಎಲ್ಲವೂ ಇರುವುದು ಕಾಲದಲ್ಲಿಯೆ ಅಲ್ಲವೇ ? ಕಾಲವನ್ನು ಗೆದ್ದಾಗ ಕಾಲವನ್ನು ಹೋಗಲಾಡಿಸಿದಾಗ ಪ್ರಪಂಚದ ತೊಂದರೆ ತಪ್ಪುಗಳೆಲ್ಲವನ್ನು ಗೆದ್ದಂತಾಗ ಲಿಲ್ಲವೇ ? ಸಿದ್ಧಾರ್ಥ ಆನಂದದಿಂದ ಮಾತನಾಡಿದ. ವಾಸುದೇವ ಅವನತ್ತ ದೀಪ್ತಿ ಯುತ ನಗುವಿನಿಂದ ನೋಡಿ ತಲೆದೂಗಿ ಸಮ್ಮತಿಸಿದ. ಸಿದ್ಧಾರ್ಥನ ಬೆನ್ನುತಟ್ಟಿ ಅವನ ಕೆಲಸಕ್ಕೆ ಹೊರಟು ಹೋದ.

ಮಳೆಗಾಲದಲ್ಲಿ ನೀರು ಉಕ್ಕಿ ಘರ್ಜಿಸುತ್ತ ಹರಿಯುವಾಗ ಮತ್ತೊಮ್ಮೆ ಸಿದ್ಧಾರ್ಥ ಹೇಳಿದ. ''ನದಿ ನಾದಮಯ ಎಂಬುದು ನಿಜವಲ್ಲವೇ ವಾಸುದೇವ ? ಅದು ರಾಜನ, ಸೈನಿಕನ, ಗೂಳಿಯ, ಮೈನಾಹಕ್ಕಿಯ, ಗರ್ಭಿಣಿಯ, ಹಾಡುವ ಮನುಷ್ಯನ ದ್ಯಾವಾಪೃಥ್ವಿಯ ಸ್ವರವಲ್ಲವೇ?

''ಹೌದು,'' ವಾಸುದೇವ ತಲೆದೂಗಿದ. ''ಬದುಕಿರುವ ಜೀವಗಲೆಲ್ಲದರ ಸ್ವರವೂ ಅದರ ಸ್ವರವೇ ಆಗಿದೆ.''

'' ಒಂದೇ ಕಾಲದಲ್ಲಿ ಸಾವಿರಾರು ಸ್ವರಗಳನ್ನು ಕೇಳುವುದರಲ್ಲಿ ಯಾರಾ ದರೂ ಜಯಶೀಲರಾದರೆ ಅದು ಯಾವ ನಾದವನ್ನು ಧ್ವನಿಸುತ್ತದೆ ?''

ಸಂತೋಷದಿಂದ ನಕ್ಕ ವಾಸುದೇವ ಸಿದ್ಧಾರ್ಥನತ್ತ ಬಾಗಿ ಅವನ ಕಿವಿಯಲ್ಲಿ ಉಚ್ಚರಿಸಿದ: ''ಓಂ.'' ಸಿದ್ಧಾರ್ಥ ಆಗ ತಾನೇ ಕೇಳಿದ್ದು ಅದೇ.

ಕಾಲ ಕಳೆದಂತೆ ಒಂದೇ ರೀತಿ ಹೊಳೆಯುವ, ತುಂಬಿದ ಸಂತೋಷದಿಂದ, ಸಾವಿರಾರು ಸಣ್ಣ ನರಿಗೆಗಳನ್ನು ಕೂಡಿಕೊಂಡು, ಮಕ್ಕಳಾಟಿಕೆಯಂತೆ, ವೃದ್ಧಾಪ್ಯದಂತೆ ಸಿದ್ಧಾರ್ಥನ ಮಂದಹಾಸವು ಅಂಬಿಗನ ಮಂದಹಾಸದಂತೆಯೆ ಕಾಣುತ್ತಿತ್ತು. ಎಷ್ಟೋ ಪ್ರಯಾಣಿಕರು ಇಬ್ಬರೂ ಒಂದಾಗಿರುವುದನ್ನು ಕಂಡಾಗ ಸೋದರರೆಂದೇ ತಿಳಿದರು. ನದಿಯ ದಡದಲ್ಲಿದ್ದ ಮರದ ಬುಡದಲ್ಲಿ ಆಗಾಗ್ಗೆ ಒಟ್ಟಿಗೇ ಕುಳಿತುಕೊಂಡು ಮೌನವಾಗಿ ನೀರಿನ ಸದ್ದನ್ನು ಆಲಿಸುತ್ತಿದ್ದರು. ಅದು ಅವರಿಗೆ ಕೇವಲ ನೀರಾಗಿರದೆ ಜೀವನದ ಅಸ್ತಿತ್ವ ಹಾಗೂ ಚಿರಸ್ಥಾಯಿಯಾಗುವುದರ ಸ್ವರ ವಾಗಿತ್ತು. ನದಿಯ ಸ್ವರವನ್ನು ಆಲಿಸುವಾಗ ಇಬ್ಬರಲ್ಲಿ ಒಂದೇ ಭಾವನೆ ಮೂಡುತ್ತಿತ್ತು. ಹಿಂದಿನ ದಿನದ ಮಾತು, ಇಲ್ಲ ಅವರ ಮನಸ್ಸನ್ನೊಳಗೊಂಡಿದ್ದ ಪ್ರಯಾಣಿಕರ ಅದೃಷ್ಟ, ಸ್ಥಿತಿಗತಿಗಳು, ಸಾವು ಅಥವಾ ಅವರ ಬಾಲ್ಯ ಸಂಗತಿಗಳು. ನದಿ ಅವರಿಗೆ ಒಳ್ಳೆಯದನ್ನು ಹೇಳಿದಾಗ ಇಬ್ಬರೂ ಒಂದೇ ಭಾವನೆಯಲ್ಲಿ ಆಲೋಚಿಸುತ್ತಾ, ಇಬ್ಬರಲ್ಲೂ ಉಂಟಾದ ಒಂದೇ ಪ್ರಶ್ನೆಗೆ ದೊರೆತ ಒಂದೇ ಉತ್ತರದಿಂದ ಸಂತೋಷಗೊಂಡು ಒಬ್ಬರನ್ನೊಬ್ಬರು ನೋಡುತ್ತಿದ್ದರು.

ದೋಣಿಯಿಂದ ಹಾಗೂ ಅಂಬಿಗರಿಬ್ಬರಿಂದ ಏನೋ ಹೊರಬಂದು ಆವರಿಸುತ್ತಿದೆ ಎಂದು ಬಹಳ ಜನ ಪ್ರಯಾಣಿಕರಿಗೆ ಅನಿಸಿತು. ಅಂಬಿಗರಲ್ಲಿ ಯಾರಾದರೊಬ್ಬರನ್ನು ನೋಡಿದಾಗ ಪ್ರಯಾಣಿಕರು ಅವರ ಜೀವನದ ಸಂಕಷ್ಟಗಳನ್ನು ಹೇಳಿಕೊಂಡು, ಪಾಪವನ್ನು ಒಪ್ಪಿಕೊಂಡು ಬುದ್ಧಿವಾದವನ್ನು ಕೇಳುತ್ತಿದ್ದರು. ಮತ್ತಾರಾದರು ಬಂದು ನದಿಯ ನಾದವನ್ನು ಆಲಿಸಲೋಸುಗ ಸಂಜೆ ಅವರೊಂದಿಗಿರಲು ಅನುಮತಿ ಬೇಡುತ್ತಿದ್ದರು. ಅಲ್ಲದೆ ಇಬ್ಬರು ಜ್ಞಾನಿಗಳು ಪವಿತ್ರರು ಅಥವಾ ಮಾಂತ್ರಿಕರು ದೋಣಿಯ ಹತ್ತಿರವಿದ್ದಾರೆ ಎಂದು ಕೇಳಿದ ಕುತೂಹಲವುಳ್ಳ ಜನರೂ ಬರುತ್ತಿದ್ದರು. ಆ ಕುತೂಹಲಿಗಳ ಪ್ರಶ್ನೆಗಳಿಗೆ ಉತ್ತರವಿಲ್ಲದಾಯಿತು. ಅಲ್ಲಿ ಮಾಂತ್ರಿಕರನ್ನಾಗಲಿ, ಜ್ಞಾನಿಗಳನ್ನಾಗಲಿ ಅವರು ಕಾಣಲಿಲ್ಲ. ಬದಲಾಗಿ ದಡ್ಡರಲ್ಲದ, ವ್ಯತ್ಯಾಸವಿರದ, ಮೌನವಾಗಿರುವ ಇಬ್ಬರು ವೃದ್ಧ ಗೆಳೆಯರನ್ನು ಕಂಡರು. ಈ ನಿಜವಿರದ ಸಂಗತಿಗಳನ್ನು ಹರಡುವವರು ಎಂಥ ಮೂರ್ಖರು ಎಂದು ಬಂದವರು ನಕ್ಕರು.

ವರ್ಷಗಳುರುಳಿದವು, ಯಾರೂ ಗಮನಿಸಲಿಲ್ಲ. ಒಂದು ದಿನ ಕೆಲವು ಜನ ಸಂನ್ಯಾಸಿಗಳು ಬಂದರು. ಗೌತಮಬುದ್ಧನ ಅನುಯಾಯಿಗಳಾದ ಅವರು ನದಿಯನ್ನು ದಾಟಿಸುವಂತೆ ಕೇಳಿದರು. ಪ್ರಖ್ಯಾತ ಗೌತಮಬುದ್ಧನು ತೀವ್ರ ಅಸ್ವಸ್ಥನಾಗಿ ರುವನೆಂದೂ, ತನ್ನ ಕಡೆಯ ಉಸಿರೆಳೆದು ಮುಕ್ತಿಗೇರುವನೆಂದೂ ಸುದ್ದಿ. ಆದ್ದರಿಂದ ಸಾಧ್ಯವಾದಷ್ಟು ಬೇಗ ಅವನಲ್ಲಿಗೆ ಹೋಗುತ್ತಿದ್ದೇವೆ ಎಂಬುದನ್ನು ಅಂಬಿಗ ಯಾತ್ರಿಕರಿಂದ ತಿಳಿದ. ಸ್ವಲ್ಪ ಹೊತ್ತಿನಲ್ಲಿಯೆ ಸಂನ್ಯಾಸಿಗಳ ಮತ್ತೊಂದು ಗುಂಪು. ಇನ್ನೊಂದು ..... ಬಂದ ಪ್ರಯಾಣಿಕರು, ಸಂನ್ಯಾಸಿಗಳೆಲ್ಲ ಗೌತಮನ ಸಾವಿನ ಸುದ್ಧಿಯನ್ನೇ ಮಾತನಾಡಿದರು. ಜನರು ಮರಣ ಶಯ್ಯೆ ಯಲ್ಲಿರುವ ಬುದ್ಧನಲ್ಲಿಗೆ, ಯುಗಪುರುಷನ ಮುಕ್ತಿಯಾತ್ರೆಯ ದೊಡ್ಡ ಘಟನೆ ನಡೆಯುವ ತಾಣಕ್ಕೆ, ಎಲ್ಲ ಕಡೆ ಯಿಂದಲೂ ರಾಜನ ಪಟ್ಟಾಭಿಷೇಕಕ್ಕೆ ಬಂದು ಸೇರುವಂತೆ ಆಯಸ್ಕಾಂತದಿಂದ ಆಕರ್ಷಿತರಾದವರಂತೆ ಜೇನುಹುಳಗಳ ಗುಂಪಿನಂತೆ ಬಂದು ಸೇರಿದರು.

ಯಾರ ವಾಣಿ ಸಾವಿರಾರು ಜನರನ್ನು ಜಾಗೃತಿಗೊಳಿಸಿತ್ತೋ, ಯಾರ ವಾಣಿಯನ್ನು ಇವನೂ ಒಮ್ಮೆ ಕೇಳಿದ್ದನೋ, ಯಾರ ಮುಖವನ್ನು ಚಕಿತನಾಗಿ ನೋಡಿದ್ದನೋ ಅವನೀಗ ಮರಣಶಯ್ಯೆಯಲ್ಲಿದ್ದಾನೆಂದು ತಿಳಿದು ಸಿದ್ಧಾರ್ಥನಿಗೂ ನೋವಾಯಿತು. ಅವನ ಮೋಕ್ಷದ ದಾರಿಯನ್ನ, ಮಂದಹಾಸವನ್ನ, ಆ ಸುಖ್ಯಾತ ನೊಂದಿಗೆ ಒಮ್ಮೆ ತಾನು ಮಾತನಾಡಿದ ಪದಗಳನ್ನು ಜ್ಞಾಪಿಸಿಕೊಂಡು ಅವನನ್ನು ಪ್ರೀತಿಯಿಂದ ನೆನಪು ಮಾಡಿಕೊಂಡ. ತಾನು ಆಡಿದ ಮಾತುಗಳು ಅಪ್ರೌಢಕ, ಅಹಂಕಾರಜನ್ಯ ಎನಿಸಿತು. ಆತನ ಉಪದೇಶ ತಾನು ಒಪ್ಪಲಾಗದಿದ್ದರೂ ಅವನಿಂದ ತಾನು ಬೇರೆಯಾಗಿರಲಿಲ್ಲ ಎಂಬುದು ಬಹಳ ಕಾಲದವರೆಗೆ ಗೊತ್ತಿತ್ತು. ಇಲ್ಲ, ನಿಜವಾದ ಅನ್ವೇಷಕ ನಿಸ್ಪೃಹತೆಯಿಂದ ಏನನ್ನಾದರೂ ಕಾಣಲು ಬಯಸಿದರೆ ಅವನು ಯಾವ ಉಪದೇಶವನ್ನು ಒಪ್ಪಿಕೊಳ್ಳಲಾರ. ಯಾರು ಕಂಡುಕೊಂಡಿರುವನೋ ಅವನು ಪ್ರತಿಯೊಂದು ದಾರಿಗೂ, ಗುರಿಗೂ ತನ್ನ ಸಮ್ಮತಿಯನ್ನು ನೀಡಬಹುದು; ಮಿಕ್ಕ ಪಾರಮಾರ್ಥಿಕದಲ್ಲಿ ಬದುಕಿದ, ಪಾವಿತ್ರ್ಯವುಳ್ಳ ಸಾವಿರಾರು ಮಂದಿಯಿಂದ ಅವನನ್ನು ಯಾವುದೂ ಬೇರ್ಪಡಿಸದು.

ಮರಣಶಯ್ಯೆಯಲ್ಲಿರುವ ಬುದ್ಧನಲ್ಲಿಗೆ ಬಹಳ ಜನ ಯಾತ್ರಿಕರು ಹೋಗುತ್ತಿದ್ದಾಗ ಒಂದು ದಿನ ಗಣಿಕೆಯಾಗಿದ್ದ ಸುಂದರಿ ಕಮಲಳೂ ಹೋಗುತ್ತಿದ್ದಳು. ಅವಳೀಗ ವೇಶ್ಯಾವೃತ್ತಿಯನ್ನು ಬಿಟ್ಟು ತನ್ನ ಉದ್ಯಾನವವನ್ನು ಬೌದ್ಧ ಸಂನ್ಯಾಸಿಗಳಿಗೆ ಕೊಟ್ಟು ದಾನಿಗಳ ಗುಂಪಿಗೆ ಸೇರಿ, ಅವರ ಉಪದೇಶದ ಆಶ್ರಯ ಪಡೆದು ಯಾತ್ರೆ ಸಾಗಿಸುತ್ತಿದ್ದಳು. ಗೌತಮನು ಸಾವಿನ ಸನಿಹದಲ್ಲಿದ್ದಾನೆ ಎಂದು ಕೇಳಿದಾಗ ಸಾಮಾನ್ಯ ಬಟ್ಟೆ ತೊಟ್ಟು ಅವಳ ಮಗನೊಂದಿಗೆ ನಡೆದು ಹೊರಟಿದ್ದಳು. ಅವರಾಗಲೇ ನದಿಯ ಹತ್ತಿರ ಬಂದಿದ್ದರು. ಆದರೆ ಆಯಾಸಗೊಂಡ ಮಗ ಮನೆಗೆ ಹೋಗಿ ಊಟಮಾಡಿ ಮಲಗಬೇಕೆಂದು ಬಯಸಿದ. ಆಗಾಗ್ಗೆ ಸಿಡುಕುವ ಮುಖದಿಂದ ಅಳುತ್ತಿದ್ದ. ಕಮಲ ಅವನೊಂದಿಗೆ ಅಲ್ಲಲ್ಲೇ ಕುಳಿತು ಸುಧಾರಿಸಿಕೊಳ್ಳಬೇಕಿತ್ತು. ಅವಳ ಇಚ್ಛೆಗೆ ವಿರುದ್ಧವಾಗಿ ವರ್ತಿಸುತ್ತಿದ್ದ ಮಗನನ್ನು ಬೈದು, ಸಮಾಧಾನ ಮಾಡಿ ತಿನಿಸು ಕೊಡಬೇಕಿತ್ತು. ನನ್ನ ತಾಯಿ ಸಾಯುತ್ತಿರುವ ಪವಿತ್ರ ಮನುಷ್ಯನಿರುವ ಗೊತ್ತಿರದ ಜಾಗಕ್ಕೆ ತೊಂದರೆ ಆಯಾಸಗಳಿಂದ ಏಕೆ ಯಾತ್ರೆ ಮಾಡುತ್ತಿದ್ದಾಳೆ ಎಂದು ಅವನಿಗೆ ಅರ್ಥವಾಗಲಿಲ್ಲ. ಅವನು ಸಾಯಲಿ - ಅದರಿಂದ ತಮಗೇನು ?

ಹುಡುಗ ವಿಶ್ರಾಂತಿಬೇಕೆಂದು ತನ್ನ ತಾಯಿಗೆ ಹೇಳಿದಾಗ ಸ್ವಲ್ಪ ದೂರದಲ್ಲಿ ವಾಸುದೇವನ ದೋಣಿ ಕಾಣಿಸಿತು. ಕಮಲೆಗೂ ದಣಿವಾಗಿತ್ತು. ಹುಡುಗ ಬಾಳೆಹಣ್ಣು ತಿನ್ನುತ್ತಿದ್ದಾಗ ಅವಳು ಅಲ್ಲಿಯೇ ಕುಳಿತು ಕಣ್ಣುಮುಚ್ಚಿ ದಣಿವಾರಿಸಿಕೊಳ್ಳುತ್ತಿದ್ದಳು. ಇದ್ದಕ್ಕಿದ್ದಂತೆ ನೋವಿನಿಂದ ಚೀರಿದಳು. ಹೆದರಿದ ಹುಡುಗ ಗಾಬರಿಯಿಂದ ಬಿಳಿಚಿಕೊಂಡ ತನ್ನ ತಾಯಿಯ ಮುಖವನ್ನು ನೋಡಿದ. ಕಮಲೆಯನ್ನು ಕಚ್ಚಿದ ಹಾವು ಅವಳು ತೊಟ್ಟ ಬಟ್ಟೆಯ ಅಡಿಯಿಂದ ಹರಿದು ಹೋಯಿತು.

ಜನರಿರುವತ್ತ ಇಬ್ಬರೂ ಓಡಿದರು. ಪ್ರಯತ್ನದಿಂದ ಎದ್ದು ದೋಣಿಯ ಹತ್ತಿರ ಬರುತ್ತಿದ್ದಂತೆ ಮುಂದೆ ಹೋಗಲಾರದೆ ಕಮಲ ಕುಸಿದುಬಿದ್ದಳು. ತಾಯಿಯನ್ನು ತಬ್ಬಿಕೊಂಡು ಸಹಾಯಕ್ಕಾಗಿ ಕಿರುಚಿದ. ದೋಣಿಯ ಪಕ್ಕದಲ್ಲಿ ನಿಂತಿದ್ದ ವಾಸುದೇವನಿಗೆ ಕೇಳುವಂತೆ ಅವಳೂ ಗಟ್ಟಿಯಾಗಿ ಚೀರಿದಳು. ವಾಸುದೇವ ಬೇಗ ಬಂದು ತನ್ನ ಕೈಗಳಲ್ಲಿ ಅವಳನ್ನು ಎತ್ತಿಕೊಂಡು ದೋಣಿಯಲ್ಲಿ ಹೋದ. ಹುಡುಗನೂ ವಾಸುದೇವನೊಂದಿಗೆ

ಸೇರಿ ಬೇಗ ಗುಡಿಸಲು ಹತ್ತಿರ ಬಂದರು. ಸಿದ್ಧಾರ್ಥ ಅಲ್ಲಿ ಬೆಂಕಿ ಹೊತ್ತಿಸುತ್ತಿದ್ದ. ಕತ್ತೆತ್ತಿದಾಗ ಮೊದಲು ಹುಡುಗನ ಮುಖ ಕಂಡು ಯಾವುದೋ ಮಾಸಿದ ನೆನಪಿನ ತೆರೆ ಸುಳಿಯಿತು. ನಂತರ ಸ್ಮೃತಿತಪ್ಪಿ ಅಂಬಿಗನ ತೋಳುಗಳಲ್ಲಿದ್ದ ಕಮಲೆಯನ್ನು ತಕ್ಷಣ ಗುರುತಿಸಿದ. ಮತ್ತೆ ಹುಡುಗನ ಮುಖ ನೋಡಿದಾಗ ಅವನು ತನ್ನ ಮಗನೆಂದು ಅನಿಸಿ ಹೃದಯದ ಉದ್ವೇಗ ಹೆಚ್ಚಾಯಿತು.

ಆಗಲೇ ಕಪ್ಪಾಗಿ ಊದಿಕೊಂಡಿದ್ದ ಗಾಯವನ್ನು ಒರೆಸಿ ಶುದ್ಧಿಗೊಳಿಸಿದರು. ಔಷಧಿಯನ್ನು ಕೊಟ್ಟ ಮೇಲೆ ಅವಳಿಗೆ ಸ್ಮೃತಿ ಬಂತು. ಸಿದ್ಧಾರ್ಥನ ಹಾಸಿಗೆಯ ಮೇಲೆ ವಾಸುದೇವನ ಗುಡಿಸಿಲಲ್ಲಿ ಮಲಗಿದ್ದಳು. ಒಂದು ಕಾಲದಲ್ಲಿ ಅವಳು ತುಂಬಾ ಪ್ರೀತಿಸಿದ್ದ ಸಿದ್ಧಾರ್ಥ ಬಾಗಿ ಅವಳನ್ನು ನೋಡುತ್ತಿದ್ದ.

ಕನಸೇನೋ ಎಂದುಕೊಂಡಳು. ನಗುತ್ತ ತನ್ನ ಪ್ರಿಯತಮನ ಮುಖವನ್ನು ನೋಡಿದಳು. ನಂತರ ಹಾವು ಕಚ್ಚಿದ್ದನ್ನು ಜ್ಞಾಪಿಸಿಕೊಂಡು ತನ್ನ ಸ್ಥಿತಿಯರಿತು ತವಕದಿಂದ ಮಗನನ್ನು ಕರೆದಳು.

''ಅವನು ಇಲ್ಲಿಯೇ ಇದ್ದಾನೆ, ಯೋಚಿಸಬೇಡ,'' ಹೇಳಿದ ಸಿದ್ಧಾರ್ಥ.

ಸಿದ್ಧಾರ್ಥನ ಕಣ್ಣುಗಳನ್ನು ನೋಡಿದಳು, ವಿಷವೇರಿದುದರಿಂದ ಮಾತನಾಡಲು ತ್ರಾಸಾಯಿತು. ''ಪ್ರಿಯನೇ ನೀನು ವೃದ್ಧನಾಗಿದ್ದೀಯೆ,'' ಕಮಲ ಹೇಳಿದಳು. ''ನಿನ್ನ ಕೂದಲು ಬೆಳ್ಳಗಾಗಿದೆ ಆದರೂ ಬಟ್ಟೆಯಿಲ್ಲದೆ ಧೂಳು ತುಂಬಿದ ಕಾಲುಗಳಿಂದ ನನ್ನ ಉಪವನಕ್ಕೆ ಬಂದ ಸಮಣನಂತೆ ಕಾಣುತ್ತೀಯ. ನನ್ನನ್ನು, ಕಾಮಸ್ವಾಮಿಯನ್ನು ಬಿಟ್ಟಾಗಲೂ ಹಾಗೆಯೇ ಇದ್ದೆ. ಸಿದ್ಧಾರ್ಥ, ನಿನ್ನ ಕಣ್ಣುಗಳೂ ಆ ಅಂಬಿಗನ ಕಣ್ಣಂತೆಯೆ ಹಾಗೆ ಇದೆ. ಹ್ಹಾ, ನನಗೂ ವಯಸ್ಸಾಯಿತು - ನನ್ನನ್ನು ಗುರುತಿಸಿದೆಯಾ ?''

''ಪ್ರಿಯಾ ಕಮಲ, ಒಡನೆಯೇ ಗುರುತಿಸಿದೆ''

ಮಗನನ್ನು ತೋರಿಸಿ ಹೇಳಿದಳು ಕಮಲ: ''ಅವನನ್ನೂ ಗುರುತಿಸಿದೆಯಾ? ಅವನು ನಿನ್ನ ಮಗ.''

ಅತ್ತಿತ್ತ ನೋಡಿ ಕಣ್ಣು ಮುಚ್ಚಿದಳು. ಹುಡುಗ ಅಳಲು ಪ್ರಾರಂಭಿಸಿದ. ತೊಡೆಯ ಮೇಲೆ ಹಾಕಿಕೊಂಡು ಅಳಲು ಬಿಟ್ಟು ಅವನ ತಲೆ ನೇವರಿಸುತ್ತಿದ್ದ ಸಿದ್ಧಾರ್ಥ ಮಗುವಿನ ಮುಖ ನೋಡುತ್ತ ತಾನು ಹುಡುಗನಾಗಿದ್ದಾಗ ಕಲಿತಿದ್ದ ಪ್ರಾರ್ಥನೆಯನ್ನು ಜ್ಞಾಪಿಸಿಕೊಂಡು ಮೆಲ್ಲಗೆ ರಾಗವಾಗಿ ಹಾಡಲು ಶುರುಮಾಡಿದ. ತಾನು ಮಗುವಾಗಿದ್ದಾಗ ಕೇಳಿದ ಪದಗಳು, ಹಾಡುಗಳು, ಜ್ಞಾಪಕಕ್ಕೆ ಬಂದುವು. ಅವನು ಹಾಡುತ್ತಿದ್ದಂತೆ ಮಗು ಅಳುವನ್ನು ನಿಲ್ಲಿಸಿ ಬಿಕ್ಕಳಿಸುತ್ತಾ ಮಲಗಿತ್ತು. ಅವನನ್ನು ವಾಸುದೇವನ ಹಾಸಿಗೆಯ ಮೇಲೆ ಮಲಗಿಸಿದ. ಅನ್ನ ಬೇಯಿಸುತ್ತಿದ್ದ ಒಲೆ ಮುಂದಿನಿಂದ ವಾಸುದೇವ ಎದ್ದ. ಸಿದ್ಧಾರ್ಥ ಅವನತ್ತ ನೋಡಿದ, ವಾಸುದೇವ ನಕ್ಕ.

''ಕಮಲ ಸಾಯುತ್ತಿದ್ದಾಳೆ'' ಮೆಲ್ಲಗೆ ಸಿದ್ಧಾರ್ಥ ಹೇಳಿದ. ವಾಸುದೇವ ತಲೆದೂಗಿದ. ಒಲೆಯಲ್ಲಿ ಉರಿಯುತ್ತಿದ್ದ ಬೆಂಕಿ ಅವನ ಕರುಣೆ ತುಂಬಿದ ಮುಖವನ್ನು ಬೆಳಗಿತು.

ಪುನಃ ಕಮಲೆಗೆ ಸ್ಮೃತಿ ಬಂತು. ವಿವರ್ಣಗೊಂಡ ಅವಳ ಮುಖದಲ್ಲಿಯ ನೋವನ್ನು ಕಂಡ ಸಿದ್ಧಾರ್ಥ ಗಮನಿಸಿ, ತಾಳ್ಮೆಯಿಂದ, ಮೌನವಾಗಿ ತಾನು ಅವಳ ನೋವನ್ನು ಅನುಭವಿಸುವಂತೆ ನೋಡಿದ. ಅದರ ಎಚ್ಚರವಿದ್ದ ಕಮಲಳ ನೋಟ ಅದರಲ್ಲಿ ಬೆರೆಯಿತು.

ಅವನತ್ತ ನೋಡುತ್ತ ಹೇಳಿದಳು. '' ಈ ನಿನ್ನ ಕಣ್ಣುಗಳು ಬದಲಾಗಿರುವುದನ್ನು ನೋಡುತ್ತಿದ್ದೇನೆ. ಅವು ಪೂರ್ಣವಾಗಿ ಬೇರೆಯಾಗಿವೆ. ನೀನಿನ್ನೂ ಸಿದ್ಧಾರ್ಥನೆಂದು ನಾನು ಹೇಗೆ ಗುರುತಿಸಲಿ ? ನೀನು ಸಿದ್ಧಾರ್ಥನಾದರೂ ಅವನಂತಲ್ಲ.''

ಸಿದ್ಧಾರ್ಥ ಮಾತನಾಡಲಿಲ್ಲ. ಮೌನವಾಗಿ ಅವಳ ಕಣ್ಣುಗಳಲ್ಲಿ ನೋಡಿದ.

''ನೀನು ಅದನ್ನು ಸಾಧಿಸಿದೆಯಾ?'' ಕೇಳಿದಳು ''ಶಾಂತಿಯನ್ನು ಕಂಡೆಯಾ?''

ಅವನು ನಗುತ್ತ ಅವಳ ಕೈಯಲ್ಲಿ ತನ್ನ ಕೈಯನ್ನಿರಿಸಿದ.

''ಹೌದು,'' ಅವಳು ಹೇಳಿದಳು. ''ನಾನೂ ಅದನ್ನು ನೋಡುತ್ತೇನೆ. ಶಾಂತಿಯನ್ನು ಅರಸುತ್ತೇನೆ.''

''ನೀನೂ ಅದನ್ನು ಕಂಡಿದ್ದೀಯ'' ಸಿದ್ಧಾರ್ಥ ಪಿಸುಗುಟ್ಟಿದ.

ದೃಷ್ಟಿಸಿ ಅವನತ್ತ ನೋಡಿದಳು. ಪ್ರಖ್ಯಾತ ಗೌತಮನಲ್ಲಿಗೆ ಹೋಗಿ ಅವನ ಮುಖವನ್ನು ನೋಡಿ ಶಾಂತಿಯನ್ನು ಪಡೆಯಬೇಕೆಂದುಕೊಂಡಿದ್ದಳು. ಬದಲಾಗಿ ಈಗ ಸಿದ್ಧಾರ್ಥನನ್ನು ಕಂಡಳು. ಅವನ ಮುಖ ಮುದ್ರೆಯೂ ಗೌತಮ ಬುದ್ಧನ ಮುಖದಂತೆಯೆ ಇತ್ತು. ಅದನ್ನೇ ಅವನಿಗೆ ಹೇಳ ಬಯಸಿದಳು. ಆದರೆ ನಾಲಿಗೆ ಅವಳ ಇಚ್ಚೆಗೆ ಮಣಿಯಲಿಲ್ಲ. ಮೌನವಾಗಿ ಅವನತ್ತ ನೋಡಿದಳು. ಅವಳ ಕಣ್ಣಿನಲ್ಲಿ ಜೀವಕಳೆ ಹೋದದ್ದನ್ನು ಸಿದ್ಧಾರ್ಥ ನೋಡಿದ. ಕಡೆಯ ನೋವು ಅವಳ ಕಣ್ಣುಗಳಲ್ಲಿ ತುಂಬಿಹೋದಾಗ, ಕೊನೆಯ ಕಂಪನ ಅವಳ ಶರೀರದಿಂದ ಹೋದ ಮೇಲೆ ತನ್ನ ಕೈಗಳಿಂದ ಅವಳ ಕಣ್ಣಿನ ರೆಪ್ಪೆಗಳನ್ನು ಸಿದ್ಧಾರ್ಥ ಮುಚ್ಚಿದ.

ಅವಳ ಮುಖವನ್ನೇ ಬಹಳ ಹೊತ್ತು ನೋಡುತ್ತ ಕುಳಿತ. ಅವಳ ಬಳಲಿದ ಬಾಯಿಯನ್ನು ಒಣಗಿಹೋಗಿದ್ದ ತುಟಿಗಳನ್ನು ಬಹಳಹೊತ್ತು ನೋಡಿ ತನ್ನ ಜೀವನದ ವಸಂತಕಾಲದಲ್ಲಿ ಅವಳ ತುಟಿಗಳನ್ನು ತೊಂಡೆಹಣ್ಣಿಗೆ ಹೋಲಿಸಿದುದನ್ನೂ ಜ್ಞಾಪಿಸಿಕೊಂಡ. ವಿವರ್ಣಗೊಂಡಿದ್ದ ಅವಳ ಮುಖವನ್ನು ಅದರಲ್ಲಿ ಮೂಡಿದ್ದ ನೆರಿಗೆಗಳನ್ನು ಬಹಳ ಹೊತ್ತು ನೋಡಿದ. ಹಾಗೆ ಬಿಳಿಸಿಕೊಂಡು ಮೃತಹೊಂದಿದ್ದ ತನ್ನ ಮುಖವನ್ನು ಕಂಡ. ಅಲ್ಲದೆ ಅದೇ ಕ್ಷಣದಲ್ಲಿ ಕೆಂಪಗಿದ್ದ ಎಳೆಯ ತುಟಿಗಳನ್ನು ಉತ್ಸುಕ ಕಣ್ಣುಗಳನ್ನ, ಅವಳ ಹಾಗು ಅವನ ಮುಖದಲ್ಲಿ ಕಂಡು ವಾಸ್ತವವಾದ ಪ್ರತ್ಯಕ್ಷ ಅನುಭವದಿಂದ ಅತ್ಯಾನಂದಗೊಂಡ. ಆ ವೇಳೆಯಲ್ಲಿ ಬದುಕಿನ ಅವಿನಾಶತ್ವವನ್ನು ಪ್ರತಿಕ್ಷಣದ ಅನಂತತೆಯನ್ನು ತೀವ್ರವಾಗಿ ಅನುಭವಿಸಿದ.

ಸಿದ್ಧಾರ್ಥ ಎದ್ದಾಗ ವಾಸುದೇವ ಅವನಿಗೆ ಅನ್ನವನ್ನು ಮಾಡಿದ್ದ. ಆದರೆ ಊಟ ಮಾಡಿರಲಿಲ್ಲ. ಇಬ್ಬರು ಕೊಟ್ಟಿಗೆಯಲ್ಲಿ ಕಟ್ಟಿದ ಮೇಕೆಗೆ ಒಣಹುಲ್ಲನ್ನು

ಹಾಕಿದರು. ವಾಸುದೇವ ಮಲಗಿದ. ಹೊರಗೆ ಬಂದು ಗುಡಸಲಿನ ಮುಂದೆ ರಾತ್ರಿಯೆಲ್ಲ ಕುಳಿತು ನದಿಯ ನಾದ ಆಲಿಸಿದ ಸಿದ್ಧಾರ್ಥ ತನ್ನ ಕಳೆದ ಜೀವನದ ಎಲ್ಲ ಕಾಲಗಳೂ ಒಂದಾದ ಮೇಲೊಂವರಂತೆ ಸುತ್ತುವರೆದು ಅವರಲ್ಲಿ ಸಿಲುಕಿದ. ಆಗಾಗ್ಗೆ ಗುಡಸಲಿನ ಬಾಗಿಲಿಗೆ ಹೋಗಿ ಮಗು ನಿದ್ರಿಸುತ್ತಿದೆಯೇ ಎಂದು ಕಿವಿಗೊಟ್ಟು ಆಲಿಸುತ್ತಿದ್ದ.

ಮುಂಜಾನೆಯಲ್ಲಿ ಸೂರ್ಯ ಹುಟ್ಟುವ ಮೊದಲೆ ಗುಡಿಸಲಿನಿಂದ ಹೊರಗೆ ಬಂದ ವಾಸುದೇವ ಸಿದ್ಧಾರ್ಥನಲ್ಲಿಗೆ ನಡೆದು ಕೇಳಿದ ''ನೀನು ನಿದ್ರಿಸಲಿಲ್ಲವೆ?''

'' ಇಲ್ಲ ಇಲ್ಲಿಯೇ ಕುಳಿತು ನದಿಯ ಉಪದೇಶವನ್ನು ಕೇಳಿದೆ. ಅದು ವಿಶ್ವದ, ಐಕ್ಯತೆಯ ಮಹಿಮೆ ವಿವರಿಸುತ್ತಿತ್ತು. ಎಷ್ಟೋ ಮಹೋನ್ನತ ಸಂಗತಿಗಳನ್ನು ತಿಳಿಸಿತು.''

''ಸಿದ್ಧಾರ್ಥ ನೀನು ತುಂಬಾ ಸಂಕಟ ಅನುಭವಿಸಿದ್ದೀಯ. ಆದರೂ ಅದು ನಿನ್ನ ಹೃದಯವನ್ನು ಮುಟ್ಟಿದಂತೆ ಕಾಣಲಿಲ್ಲ.''

''ನಾನೇಕೆ ದುಃಖಿಗೊಳ್ಳಲಿ? ನಾನು ಶ್ರೀಮಂತನಾಗಿ ಸಂತೋಷ ದಿಂದಿದ್ದವನು. ಇನ್ನೂ ಹೆಚ್ಚಿನ ಶ್ರೀಮಂತನಾಗಿ ಸಂತೋಷಗೊಂಡಿದ್ದೇನೆ. ನನ್ನ ಮಗ ನನಗೆ ದೊರಕಿದ್ದಾನೆ.''

''ನಾನು ನಿನ್ನ ಮಗನನ್ನು ಸ್ವಾಗತಿಸುತ್ತೇನೆ. ಈಗ ಕೆಲಸಕ್ಕೆ ತೊಡ ಗೋಣ; ಮಾಡಬೇಕಾದ ಕೆಲಸ ಕೈತುಂಬ ಇದೆ. ನನ್ನ ಹೆಂಡತಿ ಸತ್ತ ಹಾಸಿಗೆ ಯಲ್ಲಿ ಕಮಲೆಯೂ ಸತ್ತಿದ್ದಾಳೆ. ಕಮಲೆಗೂ ಸಹ ನನ್ನ ಹೆಂಡತಿಗೆ ಏರ್ಪಡಿಸಿದ್ದ ಗುಡ್ಡದಲ್ಲಿ ಚಿತೆಯನ್ನು ಸಿದ್ಧ ಮಾಡೋಣ''

ಹುಡುಗ ನಿದ್ರಿಸುತ್ತಿದ್ದಾಗಲೇ ಚಿತೆಯನ್ನು ನಿರ್ಮಿಸಿದರು.

೬. ಮಗ

ಹುಡುಗ ದಿಗಿಲಿನಿಂದ ಅಳುತ್ತ ತಾಯಿಯ ಶವಸಂಸ್ಕಾರಕ್ಕೆ ಬಂದಿದ್ದ. ತನ್ನ ಮಗನೆಂದು ಮುದ್ದಿಸುತ್ತ ಸಿದ್ಧಾರ್ಥ ವಾಸುದೇವನ ಗುಡಿಸಲಿಗೆ ಕರೆಯುತ್ತಿದ್ದುದನ್ನು ಭಯದಿಂದ ಮಂಕಾಗಿ ಕೇಳಿದ. ಕಳೆಗುಂದಿದ ಮುಖದಿಂದ ಬಹುದೂರ ದಿಟ್ಟಿಸಿ ನೋಡುತ್ತ ಗದ್ಗದನಾಗಿ ತಾಯಿಯನ್ನು ಸುಟ್ಟ ಗುಡ್ಡದ ಮೇಲೆ ಕುಳಿತು ತನ್ನ ದುರಾದೃಷ್ಟಕ್ಕಾಗಿ ಸಂಕಟಪಟ್ಟ.

ಅವನ ದುಃಖವನ್ನು ಅರಿತ ಸಿದ್ಧಾರ್ಥ ಅವನನ್ನು ಏಕಾಂತವಾಗಿ ಬಿಟ್ಟ. ಹುಡುಗನಿಗೆ ತಾನಾರು ಎಂಬುದು ತಿಳಿದಿಲ್ಲವೆಂದು, ತನ್ನನ್ನು ತಂದೆಯೆಂದು ಪ್ರೀತಿಸಲಾರನೆಂದು ಸಿದ್ಧಾರ್ಥ ಅರ್ಥಮಾಡಿಕೊಂಡ. ಕ್ರಮೇಣ ಹನ್ನೊಂದು ವರ್ಷದ ಹುಡುಗ ಸಂಪನ್ನಳಾಗಿದ್ದ ತಾಯಿಯ ಮಗನೆಂದು, ಶ್ರೀಮಂತಿಕೆಯಿಂದ ಬೆಳೆದು ಸೇವಕರನ್ನು ಆಜ್ಞಾಪಿಸುತ್ತಾ ರುಚಿಕರವಾದ ಪದಾರ್ಥಗಳಿಗೆ, ಮೃದುವಾದ ಹಾಸಿಗೆಗೆ ಹೊಂದಿಕೊಂಡಿರುವನೆಂಬುದು ಅರಿತುಕೊಂಡ. ಅವನು ತಕ್ಷಣ ಈ ಅಪರಿಚಿತವಾದ ಬಡ ಗುಡಿಸಲಿನ ವಾತಾವರಣಕ್ಕೆ ಹೊಂದಿಕೊಳ್ಳಲಾರ ಎಂಬುದನ್ನು ತಿಳಿದುಕೊಂಡ. ಅವನನ್ನು ಬಲಾತ್ಕರಿಸುತ್ತಿರಲಿಲ್ಲ; ಅವನಿಗಾಗಿ ಶ್ರಮ ತೆಗೆದುಕೊಂಡು ಉತ್ತಮ ಆಹಾರವನ್ನು ಮಾಡಿಕೊಡುತ್ತಿದ್ದ. ಸ್ನೇಹಭಾವದಿಂದ, ತಾಳ್ಮೆಯಿಂದ ಕ್ರಮೇಣ ಅವನನ್ನು ಒಲಿಸಿಕೊಳ್ಳಬಹುದೆಂದೇ ನಂಬಿದ.

ಸಿದ್ಧಾರ್ಥ ಅವನಲ್ಲಿಗೆ ಹುಡುಗ ಬಂದಾಗ ತಾನು ಶ್ರೀಮಂತ ಹಾಗೂ ಸಂತೋಷವುಳ್ಳವನು ಎಂದು ಭಾವಿಸಿದ. ಆದರೆ ದಿನಗಳೆದಂತೆ ಅವನು ಒಲವಿನಿಂದಿರದೆ ಮುಸುಗುಡುತ್ತಿದ್ದನ್ನು ಗರ್ವದಿಂದ ಎದುರು ಬೀಳುತ್ತಿದ್ದನು, ಯಾವ ಕೆಲಸವನ್ನೂ ಮಾಡದೆ ಹಿರಿಯರಿಗೆ ತೋರಬೇಕಾದ ಗೌರವವನ್ನೂ ತೋರದೆ, ವಾಸುದೇವನ ಹಣ್ಣಿನ ಗಿಡಗಳನ್ನು ಹಾಳು ಮಾಡುತ್ತಿದ್ದುದನ್ನು ಕಂಡು ಶಾಂತಿ ಸುಖಕ್ಕೆ ಬದಲಾಗಿ ತೊಂದರೆ ದುಃಖಗಳುಂಟಾದುವೆಂದುಕೊಂಡ. ಆದರೂ ಮಗನಿಲ್ಲದ ಸುಖ ಸಂತೋಷಕ್ಕಿಂತ ಅವನ ಪ್ರೀತಿಯ ತೊಂದರೆ, ದುಃಖಗಳನ್ನೇ ಇಚ್ಛಿಸಿದ.

ಹುಡುಗ ಗುಡಿಸಲಿನಲ್ಲಿದ್ದುದರಿಂದ ಅವರಿಬ್ಬರು ಕೆಲಸವನ್ನು ಹಂಚಿಕೊಂಡರು. ದೋಣಿಯ ಕೆಲಸವನ್ನೆಲ್ಲ ವಾಸುದೇವ ನೋಡಿಕೊಂಡ, ಸಿದ್ಧಾರ್ಥ ಅವನ ಮಗನೊಂದಿಗಿರಬೇಕಾಗಿದ್ದುದರಿಂದ ಗುಡಿಸಲಿನ, ಗದ್ದೆಯ ಕೆಲಸವನ್ನು ಮಾಡುತ್ತಿದ್ದ.

ಬಹಳ ತಿಂಗಳವರೆಗೆ ಸಿದ್ಧಾರ್ಥ ತನ್ನ ಮಗ ತಿಳಿದುಕೊಳ್ಳುತ್ತಾನೆ, ತನ್ನ ಪ್ರೀತಿಗೆ ಒಳಪಟ್ಟು ಅವನೂ ಪ್ರೀತಿಸುತ್ತಾನೆಂದು ತಾಳ್ಮೆಯಿಂದ ಕಾದ. ವಾಸುದೇವ ಇದನ್ನು ಗಮನಿಸಿ ಮೌನದಿಂದಿದ್ದ. ಒಂದು ದಿನ ಮಗ ತನ್ನ ತಂದೆಯನ್ನು ಸಿಟ್ಟಿನಿಂದ ನಿರ್ಲಕ್ಷಿಸಿ ಅನ್ನದ ಮಡಕೆಗಳೆರಡನ್ನೂ ಒಡೆದು ಹಾಕಿದಾಗ ಸಿದ್ಧಾರ್ಥನನ್ನು ಸಂಜೆ ಹೊರಗೆ ಕರೆದುಕೊಂಡುಹೋಗಿ ವಾಸುದೇವ ಹೇಳಿದ.

''ಕ್ಷಮಿಸು, ನಿನ್ನ ಸ್ನೇಹಿತನಾಗಿ ಹೇಳುತ್ತಿದ್ದೇನೆ. ನಿನ್ನ ಮಗ ನಿನಗೂ ನನಗೂ ತೊಂದರೆ ಉಂಟು ಮಾಡುತ್ತಿದ್ದಾನೆ. ಬೇರೆ ಕಡೆ ಬೆಳೆದ ಅವನು ಶ್ರೀಮಂತ ಜೀವನಕ್ಕೆ ಹೊಂದಿಕೊಂಡಿದ್ದಾನೆ. ನಿನ್ನಂತೆ ಶ್ರೀಮಂತಿಕೆಯನ್ನು, ನಗರವನ್ನು ಕಂಡು ಜಿಗುಪ್ಸೆಗೊಂಡು ಬಂದವನಲ್ಲ. ಅವನ ಇಚ್ಚೆಗೆ ವಿರುದ್ಧವಾಗಿ ಅನಿವಾರ್ಯವಾಗಿ ಬಿಟ್ಟು ಬಂದಿದ್ದಾನೆ. ಈ ಬಗ್ಗೆ ನಾನು ನದಿಯನ್ನು ಬಹಳ ಸಾರಿ ಕೇಳಿದ್ದೇನೆ. ನಿನ್ನತ್ತ ನನ್ನತ್ತ ನಮ್ಮ ದಡ್ಡತನದತ್ತ ನಗೆ ಬೀರಿ 'ನೀರು ನೀರಲ್ಲಿಗೆ ಹೊಗುವಂತೆ ತರುಣರಲ್ಲಿಗೆ ಸೇರುತ್ತಾರೆ. ಇಲ್ಲಿ ಅವನು ಸಂತೋಷದಿಂದಿರಲಾರ' ನೀನೂ ನದಿಯನ್ನು ಕೇಳಿ ಹೇಳುವುದನ್ನು ಆಲಿಸು !''

ಅಶಾಂತಿಯ ಸಿದ್ಧಾರ್ಥ ವಾಸುದೇವನ ಕರುಣೆಯ ಮುಖ ನೋಡಿದ, ''ನಾನು ಅವನನ್ನು ಹೇಗೆ ಅಗಲಲಿ?'' ಮೃದುವಾಗಿ ಹೇಳಿದ ಸಿದ್ಧಾರ್ಥ. ''ಇನ್ನೂ ಸ್ವಲ್ಪ ಕಾಲ ಕೊಡು. ಅವನ ಹೃದಯ ಮುಟ್ಟಲು ಪ್ರಯತ್ನಿಸುತ್ತಿದ್ದೇನೆ. ತಾಳ್ಮೆ ಹಾಗೂ ಪ್ರೀತಿಯಿಂದ ಅವನನ್ನು ಗೆಲ್ಲುತ್ತೇನೆ. ಎಂದಾದರೂ ನದಿ ಅವನನ್ನು ಮಾತನಾಡಿಸುತ್ತದೆ, ಕರೆಯುತ್ತದೆ.''

ವಾಸುದೇವನ ನಗು ಉತ್ಸಾಹದಿಂದ ತುಂಬಿತು. ''ಹೌದು ಅವನನ್ನೂ ಕರೆಯುತ್ತದೆ. ಅನಂತವಾದ ಬದುಕಿನಲ್ಲಿ ಅವನೂ ಸೇರಿದ್ದಾನೆ. ಆದರೆ ಅವನನ್ನು

ಯಾವ ದಾರಿಗೆ, ಯಾವ ಕಾರ್ಯಕ್ಕೆ, ಯಾವ ಸಂಕಟಗಳಿಗೆ ಕರೆಯುತ್ತದೆ ಎಂದು ನಿನಗಾಗಲಿ, ನನಗಾಗಲಿ ಗೊತ್ತೇ? ಅವನ ದುಃಖ ಅಲ್ಪವಾಗಿರುವುದಿಲ್ಲ. ಅವನ ಹೃದಯ ಹೆಮ್ಮೆಯಿಂದ ಕಠಿಣವಾಗಿದೆ. ಬಹುಶಃ ಅವನು ತುಂಬ ತೊಂದರೆ ಪಟ್ಟು, ಎಷ್ಟೋ ತಪ್ಪುಗಳನ್ನು ಮಾಡಿ ಅನೇಕ ಅನ್ಯಾಯಗಳನ್ನು ಮಾಡಿ, ಹೆಚ್ಚಿನ ಪಾಪಗಳನ್ನು ಮಾಡುತ್ತಾನೆ. ಹೇಳು, ನಿನ್ನ ಮಗನನ್ನು ವಿದ್ಯಾವಂತನನ್ನಾಗಿ ಮಾಡುತ್ತಿದ್ದೀಯ ? ನಿನಗೆ ವಿಧೇಯನಾಗಿದ್ದಾನೆಯೆ ? ಅವನಿಗೆ ಹೊಡೆದು ಶಿಕ್ಷೆ ಕೊಡಬಲ್ಲೆಯ ?

'' ಇಲ್ಲ ನಾನಿದಾವುದನ್ನು ಮಾಡಲಾರೆ ವಾಸುದೇವ''

''ನನಗೆ ಗೊತ್ತು, ನೀನು ಅವನೊಂದಿಗೆ ಕಠಿಣವಾಗಿ ವರ್ತಿಸುವುದಿಲ್ಲ. ಶಿಕ್ಷಿಸುವುದಿಲ್ಲ. ಅವನನ್ನು ಗದರಿಸುವುದಿಲ್ಲ, ಏಕೆಂದರೆ ಕಠೋರತೆಗಿಂತ ಮೃದುತ್ವ, ಬಂಡೆಗಿಂತ ನೀರು, ಶಕ್ತಿಗಿಂತ ಪ್ರೀತಿ ಹೆಚ್ಚು ಶಕ್ತಿವುಳ್ಳದ್ದು ಎಂಬುದು ನಿನಗೆ ಗೊತ್ತು. ಬಹಳ ಒಳ್ಳೆಯದು. ನಾನು ಪ್ರಶಂಸಿಸುತ್ತೇನೆ. ಅವನನ್ನು ಶಿಕ್ಷಿಸದೆ, ಅವನೊಂದಿಗೆ ಕಠಿಣವಾಗಿರದೆ ಇರುವುದು ತಪ್ಪಲ್ಲವೆ? ಅವನನ್ನು ನಿನ್ನ ಅತಿ ಪ್ರೀತಿ ಹಾಳು ಮಾಡು ತ್ತಿದೆ. ನಿನ್ನ ಒಳ್ಳೆಯತನ, ತಾಳ್ಮೆಗೆ ಪ್ರತಿಯಾಗಿ ಹೆಚ್ಚಿನ ತೊಂದರೆಯನ್ನುಂಟು ಮಾಡುತ್ತಿಲ್ಲವೆ ? ಈ ಅಹಂಕಾರದ ಪುಂಡು ಪ್ರವೃತ್ತಿಯ ಹುಡುಗನನ್ನು ಅವನ ಮನಕ್ಕೆ ಹೊಂದದ, ಅವನ ಹೃದಯ ಬಯಸುವುದಕ್ಕಿಂತಲೂ ಭಿನ್ನವಾಗಿದ್ದು, ಎರಡು ಬಾಳೆಹಣ್ಣು ತಿಂದೇ ತೃಪ್ತಿಹೊಂದುವ ಇಬ್ಬರು ವೃದ್ಧರೊಂದಿಗೆ ಈ ಗುಡಿಸಿಲಿನಲ್ಲಿ ವಾಸಿಸುವಂತೆ ಮಾಡಿರುವುದೆ ದೊಡ್ಡ ನಿರ್ಬಂಧ. ಇಲ್ಲಿಯ ಬಾಳೇ ಅವನ ಪಾಲಿಗೆ ದೊಡ್ಡ ಶಿಕ್ಷೆಯಾಗಿದೆ.''

ಕಳವಳದಿಂದ ಸಿದ್ಧಾರ್ಥ ನೆಲವನ್ನು ನೋಡಿ ''ಈಗ ನಾನೇನು ಮಾಡ ಬೇಕು?'' ಎಂದು ಮೆದುವಾಗಿ ಕೇಳಿದ.

''ನಗರಕ್ಕೆ, ಅವನ ತಾಯಿಯ ಮನೆಗೆ ಕರೆದುಕೊಂಡು ಹೋಗು. ಅಲ್ಲಿ ಸೇವಕರಿರುತ್ತಾರೆ. ಅವರಿಗೆ ಒಪ್ಪಿಸು. ಅವರ್‍ಯಾರೂ ಇಲ್ಲದಿದ್ದರೆ ಗುರುಕುಲಕ್ಕೆ ಕರೆದುಕೊಂಡು ಹೋಗು. ಬರಿಯ ವಿದ್ಯೆಗಾಗಿ ಅಲ್ಲ. ಅಲ್ಲಿ ಅನ್ಯ ಬಾಲ -ಬಾಲಕಿಯರನ್ನೂ ಅವನು ಭೇಟಿಯಾಗುವುದರಿಂದ ಅವನ ಪ್ರಪಂಚವನ್ನು ಸೇರಿ ದಂತಾಗಿ ಹರ್ಷಿತನಾಗುತ್ತಾನೆ. ನೀನು ಇದನ್ನು ಆಲೋಚಿಸಲೇ ಇಲ್ಲವೇ?''

''ಯೋಚಿಸಿದ್ದೇನೆ'' ದುಃಖದಿಂದ ಹೇಳಿದ ಸಿದ್ಧಾರ್ಥ, ''ಅನೇಕ ಬಾರಿ ಯೋಚಿಸಿದ್ದೇನೆ. ಆದರೆ ಇಷ್ಟು ಕಠಿಣ ಹೃದಯವುಳ್ಳ ಅವನು ಈ ಪ್ರಪಂಚದಲ್ಲಿ ಹೇಗೆ ಬೆಳೆಯುತ್ತಾನೆ? ತಾನೇ ಉತ್ಕೃಷ್ಟನೆಂದು ತಿಳಿಯುವುದಿಲ್ಲವೆ ? ಅಧಿಕಾರಕ್ಕೆ ಸುಖಕ್ಕೆ, ಲಾಲಸೆಗೆ ತನ್ನನ್ನು ಅರ್ಪಿಸಿಕೊಳ್ಳುವುದಿಲ್ಲವೇ? ತನ್ನ ತಂದೆ ಮಾಡಿದ ತಪ್ಪುಗಳನ್ನೇ ಅವನೂ ಮಾಡಿ ಸಂಸಾರ ಸಾಗರದಲ್ಲಿಯೇ ಮುಳುಗಿ ದಿಕ್ಕೆಡುವುದಿಲ್ಲವೇ?''

ಅಂಬಿಗ ನಕ್ಕು, ಸಿದ್ಧಾರ್ಥನ ಕೈಗಳನ್ನು ಮೃದುವಾಗಿ ಮುಟ್ಟಿ ಹೇಳಿದ, ''ಈ ಬಗ್ಗೆ ನದಿಯನ್ನು' ಕೇಳು ! ಅದರ ವಾಣಿ ಲಾಲಿಸಿ ನಕ್ಕುಬಿಡು ! ನಿನ್ನ ಮಗನನ್ನು ಅಮಿತ ದುರ್ವ್ಯಸನಗಳಿಂದ ತಪ್ಪಿಸಲೋಸುಗ ನೀನು ಆ ತಪ್ಪುಗಳನ್ನು ಮಾಡಿರುವೆನೆಂದು ಭಾವಿಸುವೆಯಾ? ನಿನ್ನ ಮಗನನ್ನು ಸಂಸಾರದಿಂದ ಹೇಗೆ ರಕ್ಷಿಸಬಲ್ಲೆ? ಅಧಿಕಾರ ವಾಣಿಯಿಂದ ಆಜ್ಞೆ ಮಾಡುವೆಯಾ ? ಅನುನಯ ವಿನಯದಿಂದ ಪ್ರಾರ್ಥಿಸುತ್ತೀಯಾ? ಅಕ್ಕರೆಯಿಂದ ಬೋಧಿಸುವೆಯಾ? ಒಮ್ಮೆ ನೀನು ಇಲ್ಲಿ ಬ್ರಾಹ್ಮಣಪುತ್ರ ಸಿದ್ಧಾರ್ಥನ ಬಗ್ಗೆ ಹೇಳಿದ ಬೊಧಪ್ರದ ಕತೆಯನ್ನು ಮರೆತು ಬಿಟ್ಟೆಯಾ? ಸಮಣನಾಗಿದ್ದ ಸಿದ್ಧಾರ್ಥನನ್ನು ದುರಾಶೆಯಿಂದ, ದಡ್ಡತನದಿಂದ, ಪಾಪದಿಂದ, ಸಂಸಾರದಿಂದ ಯಾರು ರಕ್ಷಿಸಿದರು? ಅವನ ತಂದೆಯ ಧರ್ಮನಿಷ್ಠೆ, ಗುರುಗಳ ಬೋಧನೆ, ಅವನ ಜ್ಞಾನ, ಅವನ ಅನ್ವೇಷಣೆ ಅವನನ್ನು ರಕ್ಷಿಸಿತೆ? ಅವನ ಬದುಕನ್ನು ,ಅವನ ಬದುಕು ಮಣ್ಣಾಗುವುದನ್ನು ಪಾಪದ ಹೊರೆ ಹೊರುವುದನ್ನು, ಕಹಿಯಾದ ಮದ್ಯಪಾನ ಮಾಡುವುದರಿಂದ ಅವನ ದಾರಿಯನ್ನು ಅವನು ಕಂಡುಕೊಳ್ಳುವುದರಿಂದ ಯಾವ ತಂದೆ, ಯಾವ ಗುರು, ಯಾವ ದಾರ್ಶನಿಕ ತಡೆಗಟ್ಟಲು ಸಾಧ್ಯವಾಯಿತು ? ಈ ದಾರಿಯಿಂದ ಇತರರೂ ಬೇರೆಯಾಗಿರುವರೆಂದು ಭಾವಿಸುವೆಯಾ? ದುಃಖದಿಂದ, ನೋವಿನಿಂದ, ಭ್ರಮೆಯಿಂದ ನಿನ್ನ ಮಗ ಬೇರೆಯಾಗಬೇಕೆಂದು ಬಯಸುವೆಯಾ ? ನೀನು ಅವನಿಗಾಗಿ ಸಾವಿರ ಸಲ ಸತ್ತರೂ ಅವನ ಪ್ರಾರಬ್ಧವನ್ನು ಕಿಂಚಿತ್ತೂ ಬದಲಿಸಲು ಸಾಧ್ಯವಿಲ್ಲ.''

ವಾಸುದೇವ ಎಂದೂ ಅಷ್ಟೊಂದು ಮಾತನಾಡಿರಲಿಲ್ಲ. ಕೃತಜ್ಞತೆ ಸಲ್ಲಿಸಿ ಚಿಂತೆ ತುಂಬಿದ ಎದೆ ಹೊತ್ತು ಸಿದ್ಧಾರ್ಥ ಗುಡಿಸಲಿಗೆ ಹೋದ. ನಿದ್ರೆ ಮಾಡಲಾಗಲಿಲ್ಲ. ಅವನಿಗೆ ತಿಳಿಯದ ಅಥವಾ ಅವನು ಮೊದಲೇ ಯೋಚಿಸಿದ ಯಾವುದನ್ನೂ

ವಾಸುದೇವ ಹೇಳಿರಲಿಲ್ಲ. ಹುಡುಗನನ್ನು ಕಳೆದುಕೊಳ್ಳುವ ಭಯ, ಅವನ ಮೇಲಿನ ಶ್ರದ್ಧೆ, ಅವನನ್ನು ಕುರಿತ ಪ್ರೀತಿ ಅವನ ಜ್ಞಾನಕ್ಕಿಂತ ಪ್ರಬಲವಾಗಿತ್ತು. ಈ ರೀತಿ ಪೂರ್ಣವಾಗಿ ತನ್ನ ಹೃದಯನ್ನು ತನ್ನ ಪ್ರೇಮವನ್ನು ಅಂಧನಂತೆ, ಇದೇ ತನ್ನ ಪೂರ್ಣ ಆಸ್ತಿ ಎನ್ನುವಂತೆ ಸಂತೋಷದಿಂದ ಯಾವ ಸಮಯದಲ್ಲಾದರೂ ಬೇರಾರಿಗಾದರೂ ಸಮರ್ಪಿಸಿದ್ದನೇ?

ಸಿದ್ಧಾರ್ಥನಿಗೆ ತನ್ನ ಉಪದೇಶವನ್ನು ಸ್ವೀಕರಿಸುವ ಮನ ಬರಲಿಲ್ಲ. ಮಗನನ್ನು ಬಿಟ್ಟು ಇರಲಾರೆ ಎಂದುಕೊಂಡ. ಅಗೌರವದಿಂದ ತನ್ನನ್ನು ಆಜ್ಞಾಪಿಸಲು ಮಗನಿಗೆ ಅವಕಾಶ ಕೊಟ್ಟ. ಮೌನವಾಗಿದ್ದು ಕಾದ, ಸ್ನೇಹದ ತಾಳ್ಮೆಯ ಮೂಕ ಯುದ್ಧವನ್ನು ನಿತ್ಯವೂ ಸಾಗಿಸುತ್ತಿದ್ದ. ವಾಸುದೇವನೂ ತಾಳ್ಮೆಯಿಂದ ಮೌನದಿಂದಿದ್ದು ಕಾದ. ತಾಳ್ಮೆಯಲ್ಲಿ ಇಬ್ಬರೂ ಪ್ರವೀಣರಾಗಿದ್ದರು.

ಒಮ್ಮೆ ಹುಡುಗನ ಮುಖ ಕಮಲೆಯ ಸ್ಮರಣೆ ತಂದಾಗ ಬಹಳ ಹಿಂದೆ ಒಮ್ಮೆ ಕಮಲ ಹೇಳಿದ ಮಾತನ್ನು ಜ್ಞಾಪಿಸಿಕೊಂಡ. 'ನೀನು ಪ್ರೀತಿಸಲಾರೆ' ಅವನಿಗೇ ಹೇಳಿದಳು. ಅವನೂ ಆ ಮಾತನ್ನು ಒಪ್ಪಿದ್ದ. ತನ್ನನ್ನು ನಕ್ಷತ್ರಕ್ಕೆ ಹೋಲಿಸಿಕೊಂಡು ಮಿಕ್ಕವರನ್ನು ಉದುರುವ ಎಲೆಗಳೆಂದು ಭಾವಿಸಿದ. ಆದರೂ ಅವಳ ಮಾತು ನಿಂದೆಯಂತೆ ಧ್ವನಿಸಿತು. ಅವನು ಪೂರ್ಣವಾಗಿ ತನ್ನನ್ನು ಮರೆಯುವಂತೆ ಯಾರಿಗೂ ಅರ್ಪಿಸಿಕೊಂಡಿರಲಿಲ್ಲವೆಂಬುದು ನಿಜ. ಇನ್ನೊಬ್ಬರನ್ನು ಪ್ರೀತಿಸುವ ದಡ್ಡತನದ ಸಾಹಸ ಮಾಡಿರಲಿಲ್ಲ. ಆ ಸಾಮರ್ಥ್ಯವೂ ಅವನಲ್ಲಿ ಇರಲಿಲ್ಲ. ಇದೇ ಸಾಮಾನ್ಯರಿಗೂ ತನಗೂ ಇರುವ ವ್ಯತ್ಯಾಸವೆಂದೆನಿಸಿತು. ಈ ತನ್ನ ಮಗನಿದ್ದುದರಿಂದ ದುಃಖದ ಮೂಲಕ ಪ್ರೀತಿಯ ಮೂಲಕ ಪೂರ್ಣವಾಗಿ ಸಾಮಾನ್ಯ ಜನಗಳಲ್ಲಿ ಸಿದ್ಧಾರ್ಥನೂ ಒಬ್ಬನಾಗಿದ್ದ. ಪ್ರೀತಿಯಿಂದ ದಡ್ಡನಾಗಿ ಪ್ರೀತಿಯಲ್ಲಿ ಹುಚ್ಚನಂತಾಗಿದ್ದ. ಜೀವನದಲ್ಲೊಮ್ಮೆ ಬಹಳ ಕಾಲವಾದ ಮೇಲೆ ಅವನೂ ಸಹ ಪ್ರಬಲ ತರವಾದ ಅನುರಾಗವನ್ನು ಅನುಭವಿಸಿದ; ಅದರಿಂದ ಅತೀವವಾಗಿ ಸಂಕಟಪಟ್ಟ, ಆದಾಗ್ಯೂ ಮೇಲಕ್ಕೇರಿ, ಒಂದು ವಿಧದಲ್ಲಿ ಹೊಸಬನಾಗಿ ಸಮೃದ್ಧನಾದ.

ಈ ಪ್ರೀತಿ ನನ್ನ ಮಗನ ಬಗ್ಗೆ ಇರುವ ಅಂಧಪ್ರೀತಿ, ಕೇವಲ ಮಾನವನ ಅನುರಾಗ, ಅದೇ ಸಂಸಾರ, ಆಳದಲ್ಲಿ ಹುದುಗಿ ಶ್ರಮದಿಂದ ಹೊರಬರುವ ನೀರಿನ

ಊಟಿ ಎನಿಸಿತು. ಅಪ್ರಯೋಜಕವಲ್ಲದ, ಅತ್ಯಗತ್ಯವಾದ ತನ್ನ ಸ್ವಭಾವದಿಂದಲೇ ಅದು ಬಂದುದು ಎಂದೂ ಅನಿಸಿತು. ಈ ಸ್ಫೂರ್ತಿಯನ್ನು, ನೋವನ್ನು, ದಡ್ಡತನವನ್ನು ಸಹ ಅನುಭವಿಸಲೇ ಬೇಕು.

ಹುಡುಗ ತನ್ನ ತಂದೆ ತಪ್ಪು ಮಾಡಲು, ಶ್ರಮಪಡಲು ಮೌನವಾಗಿ ನಿರುಕಿಸಿದ, ತನ್ನದೇ ಭಾವನೆಗಳಿಂದ ತೃಣಪ್ರಾಯನಾಗಲು ಅವಕಾಶ ಮಾಡಿಕೊಟ್ಟ. ತಂದೆಯತ್ತ ಆಕರ್ಷಿಸುವ ಅಥವಾ ಹೆದರಿ ಗೌರವ ತೋರುವ ಯಾವ ವಿಶೇಷವೂ ಅವನಿಗೆ ಕಾಣಿಸಿರಲಿಲ್ಲ. ತಂದೆ ಒಳ್ಳೆಯ ಮನುಷ್ಯ; ಕರುಣೆಯುಳ್ಳ ಸಭ್ಯ; ಬಹುಶಃ ಧಾರ್ಮಿಕ ಪ್ರವೃತ್ತಿಯ ಪರಿಶುದ್ಧ ಚೇತನ - ಆದರೆ ಇವಾವೂ ಅವನನ್ನು ಗೆಲ್ಲುವಂತಿರಲಿಲ್ಲ. ತಂದೆ ಅವನನ್ನು ಬಲವಂತದಿಂದ ಇರಿಸಿಕೊಂಡಿದ್ದ. ಆ ಅನಿಷ್ಟದ ಗುಡಿಸಲು ಬೇಸರ ತಂದಿತ್ತು. ಅವನ ಒರಟುತನಕ್ಕೆ ಅಣಕಕ್ಕೆ ತುಂಟುತನಕ್ಕೆ ಪ್ರತಿಯಾಗಿ ನಗುವಿನ ಒಲವಿನ ಕರುಣೆಯ ಉತ್ತರ ಕೇಳುವಾಗಲೆಲ್ಲಾ ಕುಬುದ್ಧಿಯ ಮುದಿ ನರಿಯನ್ನು ಕಂಡಂತಾಗಿ ದ್ವೇಷಿಸುತ್ತಿದ್ದ. ಇದಕ್ಕಿಂತಲೂ ಅವನನ್ನು ಗದರಿಸಿ ಹೀನಾಯವಾಗಿ ಬೈಯ್ದಿದ್ದರೆ ಅವನಿಗೆ ಹೆಚ್ಚು ಹಿತಕರವೆನಿಸುತ್ತಿತ್ತು.

ಅವನ ಮನಸ್ಸಿನಲ್ಲಿರುವುದನ್ನು ನೇರವಾಗಿ ತಂದೆಗೆ ಎದುರಾಗಿ ನಿಂತು ಹೇಳುವ ದಿನವೂ ಬಂತು. ಅಂದು ತಂದೆ ಅವನಿಗೆ ಕಡಿದ ಮರದ ರೆಂಬೆಗಳನ್ನು ಶೇಖರಿಸಿವಂತೆ ಹೇಳಿದ. ಗುಡಿಸಲಿಂದ ಹೋಗದೆ ಅಲ್ಲೇ ನಿಂತು ಸಿಟ್ಟಿನಿಂದ ಎದುರುಬಿದ್ದು ನೆಲವನ್ನು ಕಾಲಿನಿಂದ ಅಪ್ಪಳಿಸಿ, ಮುಷ್ಟಿಯಿಂದ ತನ್ನ ದ್ವೇಷವನ್ನು ತಾತ್ಸರವನ್ನು ವ್ಯಕ್ತಪಡಿಸುವವನಂತೆ ತಂದೆಯ ಮುಖದ ಮೇಲೆ ಒಗೆದಿದ್ದ.

''ನಿನಗೆ ಬೇಕಾಗುವ ರೆಂಬೆಗಳನ್ನು ನೀನೇ ಆರಿಸಿ ತಂದುಕೋ, ನಾನು ನಿನ್ನ ಆಳಲ್ಲ. ನನ್ನನ್ನು ನೀನು ಹೊಡೆಯಲಾರೆ ! ನಿನಗೆ ಧೈರ್ಯವಿಲ್ಲ ! ಆದರೆ ನಿನ್ನ ಹೇಡಿತನದ ಹೆಗ್ಗುರುತಾದ ತಾಳ್ಮೆಯಿಂದ ಶಾಂತಿಯಿಂದ ಯಾವಾಗಲೂ ನಾನು ನಿಕೃಷ್ಟನೆಂದೆಣಿಸಿ ಸದಾ ನನ್ನನ್ನು ಶಿಕ್ಷೆಗೆ ಗುರಿಮಾಡುತ್ತಿದ್ದೀಯೆ. ನಾನು ನಿನ್ನಂತೆ ಗೊಡ್ಡು ಸಂನ್ಯಾಸಿಯಾಗಿ, ಹೇಡಿಯಾಗಿ, ಕೂಲಿಯಾಗಿ, ಕುಬುದ್ಧಿಯ ನರಿಯಾಗ ಬೇಕೆಂದು ಬಯಸುತ್ತೀಯೆ. ನಿನ್ನನ್ನು ರೊಚ್ಚಿಗೆಬ್ಬಿಸಲೆಂದೇ ಕಳ್ಳನಾಗುತ್ತೇನೆ.

ಕೊಲೆಗಾರನಾಗುತ್ತೇನೆ. ಪಾಪ ಕೂಪಕ್ಕೆ ಹೋಗುತ್ತೇನೆ. ಎಂದಿಗೂ ನಿನ್ನಂತಾಗುವುದಿಲ್ಲ. ನೀನು ನನ್ನ ತಾಯಿಯ ಪ್ರಿಯನಾಗಿದ್ದರೂ ತಂದೆಯಲ್ಲ. ನೀನು ಎಂದರೆ ನನಗೆ ಅಪಾರ ದ್ವೇಷ.''

ತುಂಬಿದ ರೋಷದಿಂದ ಹತ್ತಿಕ್ಕಿದ ಮುಜುಗರದಿಂದ ತನ್ನ ತಂದೆಯನ್ನು ನಿಂದಿಸಿ ಸಮಧಾನಗೊಂಡ. ಅಲ್ಲಿಂದ ಹೋಗಿ ಮತ್ತೆ ಸಂಜೆ ಬಹಳ ಹೊತ್ತಾದ ಮೇಲೆ ಹಿಂತಿರುಗಿ ಬಂದ. ಮರುದಿನ ಬೆಳಿಗ್ಗೆ ಅವನು ಕಾಣಲಿಲ್ಲ. ಬೆತ್ತದಲ್ಲಿ ಮಾಡಿ ಬಣ್ಣ ಹಾಕಿದ್ದ ಅಂಬಿಗನ ಕಿರುಬುಟ್ಟಿಯಲ್ಲಿ ಇರಿಸಿದ್ದ ಬೆಳ್ಳಿಯ, ತಾಮ್ರದ ನಾಣ್ಯಗಳೂ ಇರಲಿಲ್ಲ; ದೋಣಿಯು ಸಹ ಕಾಣಿಸಲಿಲ್ಲ, ಅದು ಆಚೆಯ ದಡದಲ್ಲಿರುವುದನ್ನು ಸಿದ್ಧಾರ್ಥನೇ ನಂತರ ಗಮನಿಸಿದ. ಮಗ ಓಡಿಹೋಗಿದ್ದ.

''ಅವನನ್ನು ಹಿಂಬಾಲಿಸಬೇಕು'' ಹಿಂದಿನ ದಿನ ಹುಡುಗನಾಡಿದ ಕಠಿಣ ನುಡಿಗಳಿಂದ ಯಾತನೆಗೊಂಡಿದ್ದ ಸಿದ್ಧಾರ್ಥ ಹೇಳಿದ. ''ಈ ಕಾಡಿನಲ್ಲಿ ಹುಡುಗನೊಬ್ಬನೇ ಹೋಗಲಾರ; ಅವನಿಗೇನಾದರೂ ತೊಂದರೆಯಾಗಬಹುದು. ವಾಸುದೇವ ನದಿಯನ್ನು ದಾಟಲು ನಾವು ತೆಪ್ಪ ಕಟ್ಟಬೇಕು.''

'' ಆ ದಡದಲ್ಲಿ ಬಿಟ್ಟಿರುವ ದೋಣಿಯನ್ನು ಹಿಂದಕ್ಕೆ ತರಲು ತೆಪ್ಪವನ್ನು ಕಟ್ಟೋಣ. ಅವನು ಹೋಗಲಿ, ಅವನು ಇನ್ನೂ ಮಗುವಲ್ಲ. ತನ್ನನ್ನು ತಾನು ನೋಡಿಕೊಳ್ಳಬಲ್ಲ. ಅವನು ನಗರದ ಹಾದಿಯನ್ನು ಹುಡುಕುತ್ತಿರುವುದೇ ಸರಿ. ರುಚಿಸಿ ಕೈಬಿಟ್ಟಿದ್ದನ್ನು ಅವನು ಸವಿಯಬೇಕೆಂದಿದ್ದಾನೆ ಎಂಬುದನ್ನೇಕೆ ನೆನಪು ಮಾಡಿಕೊಳ್ಳಬಾರದು? ಅವನು ದಾರಿಯಲ್ಲಿ ನಡೆದು ತನ್ನನ್ನು ತಾನೇ ರಕ್ಷಿಸಿಕೊಳ್ಳುತ್ತಾನೆ. ನಿನ್ನ ಆತಂಕ ಕಾಣಬಲ್ಲೆ, ಯಾವುದರ ಬಗ್ಗೆ ಈಗ ಯಾತನೆ ಪಡುತ್ತಿರುವೆಯೋ ಅದನ್ನು ಕಂಡು ಯಾರಾದರು ಏಕೆ ಸದ್ದದಲ್ಲಿಯೇ ನೀನೇ ನಿನ್ನಲ್ಲಿ ನಗುತ್ತೀಯೆ''

ಸಿದ್ಧಾರ್ಥ ಮಾತನಾಡಲಿಲ್ಲ. ಕೈಬಾಚಿಯನ್ನು ಹಿಡಿದು ಬಿದಿರುಗಳುಗಳಿಂದ ತೆಪ್ಪ ಕಟ್ಟಲು ಶುರುಮಾಡಿದ. ಗಳುಗಳನ್ನು ಹಿಡಿದು ಹುಲ್ಲಿನ ಹಗ್ಗದೊಂದಿಗೆ ಬಿಗಿಯಾಗಿ ಕಟ್ಟಲು ವಾಸುದೇವ ಸಹಕರಿಸಿದ. ನಂತರ ನದಿ ದಾಟಲು ಮೊದಲು

ಮಾಡಿದರು. ನೀರು ಬೇರೆಡೆಗೆ ಸೆಳೆದುಕೊಂಡು ಹೋಯಿತು. ಬಲದಿಂದ ತೆಪ್ಪವನ್ನು ಆಚೆದಡಕ್ಕೆ ಹಾಯಿಸಿಕೊಂಡು ಬಂದರು.

''ಕೈ ಬಾಚಿಯೇಕೆ?'' ವಾಸುದೇವನ ಕೈಯಲ್ಲಿ ಕೈ ಬಾಚಿ ಇನ್ನೂ ಇರುವುದು ನೋಡಿ ಸಿದ್ಧಾರ್ಥ ಕೇಳಿದ.

''ದೋಣಿಯ ಹುಟ್ಟುಗೋಲುಗಳು ಕಳೆದುಹೋಗಿರುವ ಸಾಧ್ಯತೆ ಇದೆ'' ಗಂಭೀರವಾಗಿ ಹೇಳಿದ ವಾಸುದೇವ.

ಹುಡುಗ ತನ್ನನ್ನು ಹಿಂಬಾಲಿಸದಿರಲೆಂದು ಹುಟ್ಟುಗೋಲುಗಳನ್ನು ಎಲ್ಲೋ ಎಸೆದು, ಇಲ್ಲವೇ ಮುರಿದು ಹಾಕಿರಬೇಕೆಂದು ವಾಸುದೇವ ಯೋಚಿಸುತ್ತಿದ್ದಾನೆಂಬುದು ಸಿದ್ಧಾರ್ಥನಿಗೆ ಗೊತ್ತು. ಅಂತೆಯೇ ದೋಣಿಯಲ್ಲಿ ಹುಟ್ಟುಗೋಲುಗಳಿರಲಿಲ್ಲ. ವಾಸುದೇವ ದೋಣಿಯ ತಳವನ್ನು ತನ್ನ ಗೆಳೆಯನಿಗೆ ತೋರಿಸಿ ಮಾತಿಲ್ಲದೆಯೇ ನಕ್ಕ. ನಿನ್ನ ಮಗ ಅಂತಿಮವಾಗಿ ಏನು ಹೇಳಬೇಕೆಂದು ಇಚ್ಛಿಸಿದ ಎಂಬುದು ತಿಳಿಯಿತೇ 'ನನ್ನನ್ನು ಹಿಂಬಾಲಿಸಬೇಡಿ.' ಇದಾವುದನ್ನು ಹೇಳದಿದ್ದರೂ ಆ ನಗುವಿನಲ್ಲಿಯೆ ಅಡಕವಾಗಿದ್ದುದನ್ನು ಸಿದ್ಧಾರ್ಥ ಗಮನಿಸಿ ಗುರುತಿಸಿದ. ವಾಸುದೇವ ಹೊಸ ಹುಟ್ಟುಗೋಲುಗಳನ್ನು ಮಾಡಲು ಪ್ರಾರಂಭಿಸಿದ. ಹುಡುಗನನ್ನು ಹಿಂಬಾಲಿಸಲು ಸಿದ್ಧಾರ್ಥ ಅಲ್ಲಿಂದ ಹೊರಟ. ವಾಸುದೇವ ಅವನಿಗೆ ಅಡ್ಡಿಮಾಡಲಿಲ್ಲ.

ತಾನು ಹುಡುಕುತ್ತಿರುವುದು ನಿಷ್ಪ್ರಯೋಜಕ ಎನಿಸಿದಾಗ ಸಿದ್ಧಾರ್ಥ ಇನ್ನೂ ಕಾಡಿನಲ್ಲಿಯೇ ಇದ್ದ. ಅವನು ಆಗಲೇ ಕಾಡನ್ನು ಬಿಟ್ಟು ನಗರವನ್ನು ಸೇರಿರಬಹುದು ಅಥವಾ ಇನ್ನೂ ಕಾಡಿನಲ್ಲೇ ಹೋಗುತ್ತಿದ್ದು ಅನುಸರಿಸುತ್ತಿರುವುದನ್ನು ಗಮನಿಸಿ ಅವಿತುಕೊಳ್ಳುತ್ತಿರಬಹುದು ಎಂದು ಎರಡು ಸಾಧ್ಯತೆಗಳನ್ನೂ ನಂಬಿದ. ತನ್ನ ಮಗನ ಬಗ್ಗೆ ಅತಿ ಆಸೆ ವಹಿಸುವ ಅವಶ್ಯಕತೆ ಇಲ್ಲವೆಂಬ ಯೋಚನೆ ಮನದಲ್ಲಿ ಸುಳಿಯಿತು. ಅವನಿಗೆ ತೊಂದರೆಯಾಗಲಿ ಕಾಡಿನಲ್ಲಿ ಅಪಾಯವಾಗಲಿ ತಟ್ಟಿಲ್ಲ. ಅವನನ್ನು ರಕ್ಷಿಸುವ ಅಗತ್ಯತೆ ಅವನಿಗಿಲ್ಲ. ಆದರೂ ಒಮ್ಮೆ ಅವನನ್ನು ಕಾಣುವ ಬಯಕೆಯಿಂದ ನಗರದ ಹೊರವಲಯದ ತನಕ ನಡೆದು ಬಂದ.

ನಗರದ ಸಮೀಪದಲ್ಲಿ ದೊಡ್ಡ ಬೀದಿಯ ಹತ್ತಿರ ಬರುತ್ತಿದ್ದಂತೆ ಸುಂದರವಾದ ಉಪವನದ ದ್ವಾರದಲ್ಲಿ ನಿಂತ. ಮೊದಲ ಬಾರಿ ಪಲ್ಲಕ್ಕಿಯಲ್ಲಿ ಕಮಲೆಯನ್ನು ಕಂಡದ್ದು ಅಲ್ಲಿಯೆ. ಗತಕಾಲವೆಲ್ಲ ಕಣ್ಣ ಮುಂದೆ ನಿಂತಿತ್ತು. ಧೂಳಿನಿಂದ ತುಂಬಿದ್ದ ಕೂದಲು ಗಡ್ಡಗಳೊಂದಿಗೆ ತಾನು ನಗ್ನ ಸಮಣನಾಗಿ ಅಲ್ಲಿ ನಿಂತಿರುವುದನ್ನು ತನ್ನ ಕಣ್ಮುಂದೆ ಚಿತ್ರಿಸಿಕೊಂಡ. ಬಹಳ ಹೊತ್ತು ಅಲ್ಲೆ ನಿಂತಿದ್ದ ಸಿದ್ಧಾರ್ಥ ತೆರೆದ ಬಾಗಿಲುಗಳಿಂದ ಉಪವನದತ್ತ ನೋಡಿದ. ಮರಗಳ ತಂಪಾದ ನೆರಳಲ್ಲಿ ಸಂನ್ಯಾಸಿಗಳು ಅಡ್ಡಾಡುತ್ತಿರುವುದನ್ನು ಕಂಡ.

ಆಲೋಚಿಸುತ್ತಾ, ಅಲ್ಲಿಯ ಆಗುಹೋಗುಗಳನ್ನು ನೋಡುತ್ತಾ ತನ್ನ ಜೀವನದ ಚಿತ್ರಗಳನ್ನು ನೆನಪು ಮಾಡಿಕೊಳ್ಳುತ್ತಾ ಬಹಳ ಹೊತ್ತು ಅಲ್ಲಿಯೇ ನಿಂತಿದ್ದ. ಸಂನ್ಯಾಸಿಗಳತ್ತ ನೋಡುತ್ತಾ ನೋಡುತ್ತಾ ಅದೇ ಸ್ಥಳದಲ್ಲಿ ಕಮಲ ತನ್ನ ಮಗುವಿನೊಂದಿಗೆ ಅದೇ ಮರಗಳ ಕೆಳಗೆ ಅಡ್ಡಾಡುತ್ತಿದ್ದುದನ್ನು ಕಲ್ಪಿಸಿಕೊಂಡ. ಕಮಲೆಯಿಂದ ತಾನು ಸ್ವೀಕರಿಸಿದ ಮೊದಲ ಚುಂಬನದ ಸ್ಪಷ್ಟವಾದ ಅನುಭವ ಮತ್ತೊಮ್ಮೆ ಆಯಿತು. ಗರ್ವದಿಂದ, ತಿರಸ್ಕಾರದಿಂದ ಕಂಡ ಸಮಣ ಜೀವನ, ಹೆಮ್ಮೆಯಿಂದ ಆತುರದಿಂದ ಪ್ರಾರಂಭಿಸಿದ ಪ್ರಾಪಂಚಿಕ ಜೀವನವನ್ನು ವೀಕ್ಷಿಸಿದ. ಕಾಮಸ್ವಾಮಿಯನ್ನು, ಸೇವಕರನ್ನು, ರತ್ನಗಂಬಳಿಗಳನ್ನು, ಪಗಡೆ ಆಟಗಾರರನ್ನು ಸಂಗೀತಗಾರರನ್ನು ಕಂಡ. ಚಿನ್ನದ ಪಂಜರದಲ್ಲಿ ಕಮಲೆಯ ಹಾಡುವ ಹಕ್ಕಿಯನ್ನು ಕಂಡ. ಈ ಎಲ್ಲದರಿಂದ ಸಿಡಿದು ಮತ್ತೆ ಬದುಕಿದ. ಸಂಸಾರದಲ್ಲಿ ಸಿಲುಕಿ ವಯಸ್ಸಾಗಿ ನಿಶ್ಯಕ್ತನಾದ. ಮತ್ತೆ ಓಕರಿಕೆ ಬಂದು ಸಾಯುವ ಬಯಕೆಯಾಯಿತು. ಮತ್ತೆ ಉದ್ಗೀಥ ಕೇಳಿಸಿತು.

ಉಪವನದ ದ್ವಾರದಲ್ಲಿ ಬಹಳ ಹೊತ್ತು ನಿಂತ ಮೇಲೆ ಸಿದ್ಧಾರ್ಥ ತನ್ನನ್ನು ಇಲ್ಲಿಗೆ ಕರೆತಂದ ಬಯಕೆ ಅರ್ಥವಿಲ್ಲದ್ದು, ತನ್ನ ಮಗನಿಗೆ ತಾನೇನೂ ಮಾಡಲಾರೆ. ಅವನನ್ನು ಹಿಂಸಿಸಬಾರದು ಎಂದು ಅರಿತುಕೊಂಡ. ಓಡಿಹೋದ ಹುಡುಗನ ಬಗ್ಗೆ ಇದ್ದ ಅಮಿತ ಪ್ರೀತಿ ವ್ರಣವಾಗಿದ್ದರೂ ಅದೆ ತೀವ್ರಗಟ್ಟಿ ಅರ್ಬುದವಾಗಲು ಅವನು ಬಯಸಲಿಲ್ಲ. ಅದನ್ನು ಕೂಡಲೇ ವಾಸಿಮಾಡಬೇಕು.

ಆ ಘಳಿಗೆಯಲ್ಲಿ ವ್ರಣ ವಾಸಿಯಾಗಲಿಲ್ಲ. ಸಿದ್ಧಾರ್ಥ ವಿಷಣ್ಣನಾದ. ಮಗನನ್ನು ಹಿಂಬಾಲಿಸಿ ಬಂದಿದ್ದ ತನ್ನ ಗುರಿಯ ಸ್ಥಳದಲ್ಲಿ ಈಗ ಶೂನ್ಯ ಆವರಿಸಿತ್ತು.

ದುಃಖದಿಂದ ಅಲ್ಲೆ ಕುಳಿತ. ಹೃದಯಲ್ಲಿ ಏನೋ ಸಾಯುತ್ತಿರುವಂತೆ ತೋರಿತು. ಇನ್ನು ಸಂತೋಷ ಗುರಿ ಯಾವುದೂ ಇಲ್ಲ. ಧೃತಿಗೆಟ್ಟು ಅಲ್ಲೇ ಕಾಯುತ್ತಾ ಕುಳಿತ. ಕಾಯು ವುದನ್ನು ತಾಳ್ಮೆಯಿಂದಿರುವುದನ್ನು, ಕಿವಿಗೊಟ್ಟು ಆಲಿಸುವುದನ್ನು ನದಿಯಿಂದ ಕಲಿತಿದ್ದ. ಧೂಳಿನಿಂದ ತುಂಬಿದ ದಾರಿಯಲ್ಲಿ ಕುಳಿತು ಆಯಾಸಗೊಂಡಿರುವ ದುಃಖ ತಪ್ತ ಹೃದಯವನ್ನು ಕೇಳಿದ. ಅದರ ವಾಣಿಗೆ ಕಾಯ್ದ. ಬಹಳ ಹೊತ್ತು ಗಮನವಿಟ್ಟು ಆಲಿಸಿದ. ಕಣ್ಣಿಗೆ ಏನೂ ಕಾಣಲಿಲ್ಲ. ಶೂನ್ಯದಲ್ಲಿ ಮುಳುಗಿದ. ಹೊರದಾರಿ ಕಾಣದೆ ಮುಳುಗಿದ. ಉಪವನದಲ್ಲಿದ್ದ ಸಂನ್ಯಾಸಿಗಳು ಬಹಳಹೊತ್ತು ಅವನು ಬಾಗಿ ಕುಳಿತಿರು ವುದನ್ನು ಕಂಡರು. ಅವನ ಬಿಳಿಯ ಕೂದಲು ಧೂಳಿನಿಂದ ತುಂಬಿತ್ತು. ಸಂನ್ಯಾಸಿ ಯೊಬ್ಬ ಬಂದು ಅವನ ಮುಂದೆ ಎರಡು ಬಾಳೆಹಣ್ಣುಗಳನ್ನು ಇಟ್ಟರೂ ಗಮನಿಸಲಿಲ್ಲ.

ಅವನ ಭುಜವನ್ನು ಮುಟ್ಟಿದ ಕೈಯ ಮೃದುಸ್ಪರ್ಶ ತನ್ಮಯಾವಸ್ಥೆಯಲ್ಲಿದ್ದ ಅವನನ್ನು ಎಚ್ಚರಿಸಿತು. ಅವನನ್ನು ಅನುಸರಿಸಿ ಬಂದು ವಾಸುದೇವನಿಗೆ ಎದ್ದು ನಿಂತು ತಲೆಬಾಗಿ ವಂದಿಸಿದ. ವಾಸುದೇವನ ಕರುಣೆ ತುಂಬಿದ ಮುಖವನ್ನು ನೋಡಿದಾಗ, ಅವನ ನಗುವ ಸಣ್ಣ ನರಿಗೆಗಳನ್ನು ಹೊಳೆವ ಕಣ್ಣುಗಳನ್ನು ಕಂಡಾಗ ತಾನೂ ನಕ್ಕ. ತನ್ನ ಹತ್ತಿರವಿದ್ದ ಬಾಳೆಹಣ್ಣುಗಳನ್ನು ನೋಡಿದ. ಅವುಗಳನ್ನು ತೆಗೆದುಕೊಂಡು ಒಂದನ್ನು ವಾಸುದೇವನಿಗೆ ಕೊಟ್ಟು ಒಂದನ್ನು ತಿಂದ. ನಂತರ ವಾಸುದೇವ ನೊಂದಿಗೆ ಮೌನವಾಗಿ ಕಾಡಿನಲ್ಲಿ ನಡೆದು ಪುನಃ ದೋಣಿಯಲ್ಲಿಗೆ ಬಂದ. ಅದುವರೆಗೆ ಏನಾಯಿತೆಂದಾಗಲಿ ಮಗನ ಬಗ್ಗೆಯಾಗಲಿ, ಕಾಲ ಕಳೆದದ್ದಾಗಲಿ ಅಥವಾ ತನ್ನ ಹೃದಯದ ವ್ರಣದ ಬಗ್ಗೆಯಾಗಲಿ ಹೇಳಲಿಲ್ಲ. ಸಿದ್ಧಾರ್ಥ ಗುಡಿಸಲಲ್ಲಿದ್ದ ತನ್ನ ಹಾಸಿಗೆಗೆ ಸಮೀಪಿಸಿದ. ಸ್ವಲ್ಪಹೊತ್ತಿನ ನಂತರ ವಾಸುದೇವ ಎಳನೀರು ಕೊಡಲೆಂದು ಒಳಗೆ ಹೋದಾಗ ಸಿದ್ಧಾರ್ಥ ನಿದ್ರಿಸುತ್ತಿದ್ದ.

೭.೬೦

ಸಿದ್ಧಾರ್ಥನ ಮನದ ಅಳಲು ತುಂಬಾ ಬಾಧಿಸುತ್ತಿತ್ತು. ತಮ್ಮ ಮಕ್ಕಳೊಂದಿಗೆ ಬರುತ್ತಿದ್ದ ಅನೇಕ ಪ್ರಯಾಣಿಕರನ್ನು ನದಿ ದಾಟಿಸುತ್ತಿದ್ದ. ಅವನೆಷ್ಟೆ ಪ್ರಯತ್ನಿಸಿದರೂ ನಿರ್ಲಿಪ್ತನಾಗಿದ್ದರೂ ಅವನಿಗೇ ಅರಿಯದಂತೆ ಸಂದೇಹ ಉದ್ಭವಿಸುತ್ತಿತ್ತು. 'ಇಷ್ಟೊಂದು ಮಂದಿ ಅನುಭವಿಸುತ್ತಿರುವ ಈ ಪುತ್ರ ಸೌಖ್ಯ ನನಗೇಕೆ ಲಭ್ಯವಾಗಬಾರದು ? ದುಷ್ಟರು, ಕಳ್ಳರು, ದರೋಡೆಕೋರರು ಕೂಡ ತಾವು ಅಕ್ಕರೆಯಿಂದ ಕಾಣುವಂತಹ ಮಕ್ಕಳನ್ನು ಹೊಂದಿದ್ದಾರೆ. ಅವರ ಮಮತೆಗೆ ಭಾಜನರಾಗಿದ್ದಾರೆ. ನಾನು ಮಾತ್ರ ಅವರ ಮಧ್ಯೆ ಇರುವ ಏಕಮಾತ್ರ ಪಾಪಿ' ಈ ರೀತಿ ಅವನ ಯೋಚನೆ ದಿಕ್ಕುಗೆಟ್ಟು ಹರಿಯುತ್ತಿತ್ತು. ಮಗುವಿನಂತೆ ಅರ್ಥ ರಹಿತನಾಗಿ ಚಿಂತಿಸುತ್ತಾ ಎಲ್ಲಾ ಸಾಮಾನ್ಯರಂತೆಯೇ ಸಿದ್ಧಾರ್ಥನೂ ಆಗಿದ್ದ. ಜನರನ್ನು ಕಾಣುವ ಅವನ ನೋಟವೇ ಈಗ ಬದಲಿಸಿತ್ತು. ಮೊದಲಿರದ ಸಹಾನುಭೂತಿಗಳ ಫಲವಾಗಿ ಅವರ ಬಗ್ಗೆ ಹೆಚ್ಚು ಕರುಣೆ, ಕುತೂಹಲಗಳನ್ನು ವ್ಯಕ್ತಪಡಿಸುತ್ತಿದ್ದ.

ಪ್ರತಿನಿತ್ಯದಂತೆ ವರ್ತಕರನ್ನ, ಭಟರನ್ನ, ಹೆಂಗಸರನ್ನ ಮತ್ತಿತರ ಪ್ರಯಾಣಿಕರನ್ನ ತನ್ನ ನಾವೆಯಲ್ಲಿ ಕರೆದೊಯ್ಯುವಾಗ ಅವರ ಪಾಲಿಗೆ ಹಿಂದಿನ ಅಪರಿಚಿತ ಅಂಬಿಗನಾಗಿ ಉಳಿಯಲಿಲ್ಲ. ಅವರ ಭಾವನೆಯನ್ನು ಹಾಗೂ ದೃಷ್ಟಿಯನ್ನು ಅರ್ಥ ಮಾಡಿಕೊಳ್ಳದಿದ್ದರೂ ಅವರ ಬದುಕಿನ ಕೋರಿಕೆಯಲ್ಲಿ, ಬಯಕೆಯಲ್ಲಿ ಭಾಗಿಯಾದ. ಆತ್ಮಸಂಯಮದ ಸಿದ್ಧಿ ಪಡೆದಿದ್ದರೂ, ಶ್ರೇಷ್ಟತೆಯನ್ನು ಪಡೆದಿದ್ದರೂ ಈ ಸಾಮಾನ್ಯ ಜನರು ತನಗಿಂತ ಭಿನ್ನ ಎನಿಸಿದೆ ತನ್ನ ಸೋದರರು ಎಂದೇ ಅನಿಸುತ್ತಿತ್ತು. ಅವರ ಹೆಮ್ಮೆ, ''ಬಯಕೆ, ಕ್ಷುದ್ರತನ ಅವನಿಗೆ ಅಸಂಗತ ಎನಿಸದೆ ಅವರನ್ನು ಅರಿತು ಆಕ್ಕರೆಯಿಂದ ಕಂಡು ಗೌರವಿಸಬೇಕಾದಂತಹುದು ಎಂದು ತೊರುತ್ತಿತ್ತು. ಮಗುವಿಗಾಗಿ ಮಾತೆಯ ಮುಗ್ಧ ಪ್ರೇಮ, ಮಗನಿಗಾಗಿ ಮಮ್ಮಲ ಮರುಗುವ ತಂದೆ, ಆಭರಣಗಳಿಗಾಗಿ ಪುರುಷರ ಮೆಚ್ಚಿಗೆಗಾಗಿ ಕಾತರಿಸುವ ಯುವತಿಯರು, ಸರಳ, ಕ್ಷುಲ್ಲಕ ಹೆಡ್ಡತನದ ಪ್ರಚಂಡ ಶಕ್ತಿಯುಳ್ಳ ಅತಿಮಹತ್ವದ ಪ್ರೇರಣೆಗಳು. ಬಯಕೆಗಳು

ಯಾವುವೂ ಸಿದ್ಧಾರ್ಥನಿಗೆ ಗೌಣವೆನಿಸಲಿಲ್ಲ. ಅವರಿಗಾಗಿ ಅವರು ಬದುಕುತ್ತಿರುವುದನ್ನ, ಯಾವುದೋ ಹಿರಿಯ ಸಾಧನೆಯ ನಿರೀಕ್ಷೆಯಲ್ಲಿ ಬಾಳು ಸಾಗಿಸುತ್ತಿರುವುದನ್ನು ಯಾತ್ರೆ ಮಾಡುವುದನ್ನ, ಹೊಡೆದಾಡುವುದನ್ನ, ನರಳುವುದನ್ನು ಸಂಕಟವನ್ನು ತಾಳ್ಮೆಯಿಂದ ಸಹಿಸಿಕೊಳ್ಳುವುದನ್ನ ಕಂಡು ಇವೆಲ್ಲಕ್ಕಾಗಿ ಅವರನ್ನು ಪ್ರೀತಿಸಿದ. ಬದುಕನ್ನು ಅದರಲ್ಲಿಯ ಜೀವಸತ್ವವನ್ನು ಅದರ ಚಿರಂತನತೆಯನ್ನು ಕಂಡು ಅವರ ಕಾಮನೆ ಬಯಕೆಗಳಲ್ಲೆಲ್ಲಾ ಬ್ರಹ್ಮಸ್ವರೂಪವನ್ನು ಸಾಕ್ಷಾತ್ಕಾರ ಗೊಳಿಸಿಕೊಂಡಿದ್ದ. ಈ ಜನರು ಅವರ ಕುರುಡುಭಕ್ತಿ, ಶಕ್ತಿ ಸಾಮರ್ಥ್ಯಗಳಲ್ಲಿ, ಕುರುಡು ಹಠದಲ್ಲಿ ಮೆಚ್ಚಿಗೆಗೆ ಅರ್ಹರು. ಋಷಿಯು ಅರಿಯಬಲ್ಲ ಜೀವನದ ಐಕ್ಯತಾ ಸೂತ್ರದ ಪ್ರಜ್ಞೆಯನ್ನುಳಿದು ಮತ್ತಾವುದರಲ್ಲೂ ಅವರು ಋಷಿಗಳಿಂದ ಹಿಂದುಳಿದವರಲ್ಲ. ಅಲ್ಲದೆ ಸಿದ್ಧಾರ್ಥ ಅವರ ಈ ಜ್ಞಾನ, ಚಿಂತನೆ ಅಷ್ಟೊಂದು ಮಹತ್ವವುಳ್ಳದ್ದೆ. ಚಿಂತನಕಾರ ಬಹುಶಃ ಚಿಂತನೆಗೆ ಒಳಪಟ್ಟು ಅದರ ಕೂಸಾಗಿರುವವರ ಅತಿಯಾದ ಆತ್ಮಪ್ರಶಂಸೆಯಲ್ಲವೆ ಎಂದು ಬಹಳ ಸಲ ಅನುಮಾನಿಸಿದ್ದ. ಈ ಸಾಮಾನ್ಯ ಜನರು ಮಿಕ್ಕೆಲ್ಲ ವಿಷಯಗಳಲ್ಲೂ ಚಿಂತನಕಾರರೊಂದಿಗೆ ಸರಿಯಾಗಬಲ್ಲರು. ಅಲ್ಲದೆ ಆಗಾಗ್ಗೆ ತಮ್ಮ ಬದಲಿರದ ವರ್ತನೆಗಳಿಂದ ಅಗತ್ಯಬಿದ್ದಲ್ಲಿ ಮಾನವನಿಗಿಂತ ಮೇಲಾಗುವ ಪ್ರಾಣಿಗಳಂತೆ ಅವರನ್ನೂ ಮೀರಿ ನಿಲ್ಲಬಲ್ಲರು.

ಈ ಪರಿಸರದಲ್ಲಿ ಸಿದ್ಧಾರ್ಥ ಬೆಳೆದಂತೆ ಸಚ್ಚಿದಾನಂದದ ಅನುಭೂತಿ ತನ್ನ ದೀರ್ಘ ಅನ್ವೇಷಣೆಯ ಗುರಿಯ ಜ್ಞಾನ ಪಕ್ವವಾಗುತ್ತ ಬಂತು. ಜೀವನದ ಪ್ರತಿಕ್ಷಣದಲ್ಲೂ ಐಕ್ಯ ಭಾವವನ್ನು ಕಂಡು ಅನುಭವಿಸುತ್ತಾ ಚಿಂತನೆಯ ರಹಸ್ಯವನ್ನರಿತು ಸಾಮರ್ಥ್ಯದಿಂದ ಆತ್ಮವನ್ನು ಅನುವುಗೊಳಿಸುವುದಲ್ಲದೆ ಬೇರೆನೂ ಅಲ್ಲ. ಈ ಭಾವನೆ ಬೆಳೆದಂತೆ ಸಾಮರಸ್ಯ, ಚಿರವಾದ ವಿಶ್ವೈಕ್ಯಜ್ಞಾನ ವಾಸುದೇವನ ಮುಗ್ಧ ಮುಖದಲ್ಲಿ ಪ್ರತಿಫಲಿಸಿತು.

ಆದರೆ ಗಾಯವಿನ್ನೂ ಬಾಧಿಸುತ್ತಿತ್ತು. ಸಿದ್ಧಾರ್ಥ ತನ್ನ ಮಗನ ಬಗ್ಗೆ ಹಲುಬುತ್ತಾ ಕರುಣೆಯಿಂದ ತಪ್ಪು ನಲಿವುಗಳನ್ನೆಲ್ಲಾ ಅನುಭವಿಸಿದ. ಪ್ರೇಮ ಹೊತ್ತಿಸಿದ ಕಿಚ್ಚು ತನ್ನಷ್ಟಕ್ಕೆ ತಾನೇ ಆರುವುದಿಲ್ಲ.

ಒಂದು ದಿನ ಗಾಯ ತುಂಬ ಯಾತನೆಯನ್ನುಂಟುಮಾಡಿದಾಗ ಸಿದ್ಧಾರ್ಥ ತುಂಬಿದ ಹಂಬಲದಿಂದ ನದಿಯನ್ನು ದಾಟಿದ. ನಗರಕ್ಕೆ ಹೋಗಿ ಮಗನನ್ನು ಹುಡುಕುವ ಉದ್ದೇಶದಿಂದ ದೋಣಿಯಿಂದಿಳಿದ. ನದಿ ಗಂಭೀರವಾಗಿ ಹರಿಯುತ್ತಿತ್ತು. ಬೇಸುಗೆಯಾದ್ದರಿಂದ ನೀರು ಕಡಿಮೆಯಾಗಿ ಸದ್ದು ಸಣ್ಣಗಾಗಿ ಸುಳುಸುಳು ಕೇಳಿಸುತ್ತಿತ್ತು. ನದಿ ನಗುತ್ತಿತ್ತು. ಹೌದು ನಗುತ್ತಿತ್ತು! ವೃದ್ಧ ಅಂಬಿಗನತ್ತ ಉಲ್ಲಾಸದಿಂದ ಸ್ಪಷ್ಟವಾಗಿ ನಗುತ್ತಿತ್ತು. ಸಿದ್ಧಾರ್ಥ ಅಲ್ಲೆ ನಿಂತ; ಸ್ಪಷ್ಟವಾಗಿ ಕೇಳಲು ನದಿಯತ್ತ ಕಿವಿಗೊಟ್ಟು ಬಾಗಿದ. ಮಂದವಾಗಿ ಹರಿಯುತ್ತಿದ್ದ ನೀರಿನಲ್ಲಿ ತನ್ನ ಮುಖವನ್ನು ಕಂಡ. ಆ ಪ್ರತಿಬಿಂಬದಲ್ಲಿ ಮರೆತಿದ್ದ ಯಾವುದೋ ಸ್ಮರಣೆಗೆ ಬಂತು. ಒಮ್ಮೆ ತಾನು ಅದೇ ಮುಖ ಕಂಡಿದ್ದ, ಪ್ರೀತಿಸಿದ್ದ. ಆ ಮುಖದಲ್ಲಿ ಭಯ ಹರವಿದ್ದಂತೆ ಅನಿಸಿತು. ಅದು ಯಾರ ಮುಖ! ಹೌದು, ತಂದೆಯ ಮುಖ. ಖಂಡಿತ ತಂದೆಯ ಮುಖವೂ ಹಾಗೆಯೇ ಇತ್ತು. ತಾನು ಯುವಕನಾಗಿದ್ದಾಗ ಸಮಣನಾಗಲು ಅನುಮತಿಗಾಗಿ ಹಠಮಾಡಿ, ಅವನಿಂದ ಬೀಳ್ಕೊಂಡು ಮತ್ತೆ ಹಿಂದಿರುಗದುದು ತಟ್ಟನೆ ನೆನಪಾಯಿತು. ಅವನೀಗ ಮಗನಿಗಾಗಿ ಕೊರಗುತ್ತಿರುವಂತೆ ಅವನ ತಂದೆ ಆಗ ಅವನಿಗಾಗಿ ಕೊರಗಲಿಲ್ಲವೆ? ಪುನಃ ಮಗನನ್ನು ಕಾಣದೆಯೇ ತಂದೆ ಸಾಯಲಿಲ್ಲವೇ? ಅವನೂ ಅದೇ ಗತಿಯನ್ನು ನಿರೀಕ್ಷಿಸಿರಲಿಲ್ಲವೇ? ಪ್ರಾರಬ್ಧದ ಸುಳಿಯಲ್ಲಿ ಸಿಕ್ಕುವ ಅಪರಿಚಿತವಾದ ಈ ಪುನರಾವರ್ತ ಘಟನೆಗಳು ತಮಾಷೆಯಲ್ಲದೆ ಮತ್ತೇನು?

ನದಿ ನಕ್ಕಿತು. ಹೌದು. ಅದು ಇದ್ದದ್ದು ಹಾಗೆಯೇ. ಯಾವುದೇ ಆಗಲಿ ಪೂರ್ಣವಾಗಿ ಅನುಭವಿಸಿ ಕೊನೆಮುಟ್ಟದ ತನಕ ಪುನರಾವರ್ತನಗೊಂಡು, ಅದೇ ಮುಖದಲ್ಲಿ ನರಳಬೇಕಾಗುತ್ತದೆ. ಸಿದ್ಧಾರ್ಥ ದೋಣಿಯಲ್ಲಿ ಕುಳಿತು ತಂದೆಯನ್ನು, ಮಗನನ್ನು ಕುರಿತು ಚಿಂತಿಸುತ್ತ ನದಿಯತ್ತ ನಕ್ಕ. ಒಳಗಿನ ತಿಕ್ಕಾಟದಿಂದ ನಿರಾಶೆಯಂಚಿನಲ್ಲಿ ತನ್ನತ್ತ ಪ್ರಪಂಚದತ್ತ ಜೋರಾಗಿ ನಕ್ಕು ಗುಡಿಸಲಿನ ಕಡೆಗೆ ಹುಟ್ಟು ಹಾಕಿದ. ಗಾಯ ಇನ್ನೂ ಬಾಧಿಸುತ್ತಿತ್ತು. ಅವನೂ ಅದರ ವಿರುದ್ಧ ಪ್ರತಿಭಟಿಸುತ್ತಿದ್ದ. ಯಾತನೆಯನ್ನು ಗೆದ್ದ ಪ್ರಶಾಂತತೆ ಇನ್ನೂ ಇರಲಿಲ್ಲ. ಆದಗ್ಯೂ ಅವನಿಗೆ ನಂಬಿಕೆ ಇತ್ತು. ಗುಡಿಸಲಿಗೆ ಬರುತ್ತಿದ್ದಂತೆ ಲಾಲಿಸುವ ಕಲೆಯುಲ್ಲಿ ನಿಪುಣನಾಗಿದ್ದ ವಾಸುದೇವನಲ್ಲಿ ಎಲ್ಲವನ್ನೂ ಹೇಳಿಕೊಳ್ಳುವ ಬಲವತ್ತರ ಬಯಕೆಯಾಯಿತು.

ವಾಸುದೇವ ಬುಟ್ಟಿಯನ್ನು ಹೆಣೆಯುತ್ತ ಕುಳಿತಿದ್ದ. ಅವನೀಗ ದೋಣಿಯನ್ನು ನಡೆಸುತ್ತಿರಲಿಲ್ಲ. ಕಣ್ಣು ಮಂಜಾಗಿತ್ತು. ಕೈಕಾಲು ಶಕ್ತಿಗುಂದಿತ್ತು. ಆದರೂ ಅವನ ಮುಖದಲ್ಲಿ ಮಾಸದ ಆನಂದ, ಶಾಂತಿ ಪ್ರಕಾಶಿಸುತ್ತಿತ್ತು. ಸಿದ್ಧಾರ್ಥ ವೃದ್ಧನ ಬಳಿ ಕುಳಿತು ನಿಧಾನವಾಗಿ ಮಾತನಾಡಲು ಪ್ರಾರಂಭಿಸಿದ. ನಾನು ನಗರಕ್ಕೆ ಹೋದದ್ದು, ಬಾಧಿಸುವ ಗಾಯ, ಮಕ್ಕಳೊಂದಿಗೆ ಸಂತೋಷದಿಂದಿರುವ ಪಿತೃಗಳನ್ನು ಕಂಡಾಗಿನ ಅಸೂಯೆ, ಆ ಭಾವನೆಗಳ ದಡ್ಡತನ ಎನ್ನುವ ಜ್ಞಾನ, ತನ್ನೊಳಗಿನ ನಿರರ್ಥಕ ಹೋರಾಟ ತನ್ನಲ್ಲಿ ಅತೀವ ಸಂಕಟವನ್ನುಂಟು ಮಾಡುವ ವಿಷಯ. ಅಂದು ನಗರಕ್ಕೆ ಹೋಗಲು ನದಿಯನ್ನು ದಾಟಿದಾಗ ಅದು ನಕ್ಕಿದ್ದರ ಸಹಿತವಾಗಿ ಮೊದಲು ತಿಳಿಸದೆ ಇದ್ದ ಎಲ್ಲವನ್ನೂ ವಾಸುದೇವನಿಗೆ ಹೇಳಿದ.

ಅವನು ಮಾತನಾಡುತ್ತ ಹೋದಂತೆ ವಾಸುದೇವ ಪ್ರಸನ್ನ ಮುಖದಿಂದ ಕೇಳಿದ. ಸಿದ್ಧಾರ್ಥನಿಗೆ ವಾಸುದೇವನ ಕುತೂಹಲದ ಬಗ್ಗೆ ಮೊದಲಿಗಿಂತ ಹೆಚ್ಚು ಗಮನವಿತ್ತು. ಅವನ ತೊಂದರೆಗಳು, ದುಗುಡಗಳು, ಗುಪ್ತ ಭರವಸೆಗಳು ವಾಸುದೇವನನ್ನು ಮುಟ್ಟಿ ಪುನಃ ಹಿಂದಿರುಗುತ್ತಿರುವುದರ ಅನುಭವವಾಯಿತು. ಅವನ ನೋವನ್ನು ವಾಸುದೇವನಲ್ಲಿ ಹೇಳಿಕೊಳ್ಳುವುದೆಂದರೆ ನದಿಯಲ್ಲಿ ಮಿಂದಂತೆ. ನೋವಳಿದು ನದಿಯಲ್ಲಿ ಒಂದಾದಂತೆ. ತನ್ನೆಲ್ಲವನ್ನೂ ನಿವೇದಿಸಿಕೊಳ್ಳುತ್ತ ಹೋದಂತೆ ಸಿದ್ಧಾರ್ಥನಿಗೆ ಕೇಳುತ್ತಿರುವವನು ವಾಸುದೇವನಲ್ಲ. ಮೊದಲಿನ ವ್ಯಕ್ತಿಯಲ್ಲ ಎಂದು ಸ್ಪಷ್ಟವಾಗಿ ಅನಿಸಿತು. ನಿಶ್ಚಲವಾಗಿ ಕೇಳುತ್ತಿರುವ ಇವನು ಮರ ಮಳೆಯನ್ನು ಸೆಳೆದುಕೊಳ್ಳುವಂತೆ ಅವನ ನಿವೇದನೆಯನ್ನೆಲ್ಲಾ ಸೆಳೆದುಕೊಳ್ಳುತ್ತಿದ್ದಾನೆ. ಅಚಲನಾಗಿರುವ ಇವನು ತಾನೆ ನದಿಯಾಗಿ, ದೇವರಾಗಿ, ಅನಂತವಾಗಿದ್ದನೆ ಎನಿಸಿತು. ಸಿದ್ಧಾರ್ಥ ತನ್ನ ಬಗ್ಗೆ ತನ್ನ ಗಾಯದ ಬಗ್ಗೆ ಯೋಚಿಸುವುದನ್ನು ನಿಲ್ಲಿಸಿದಂತೆ ವಾಸುದೇವನಲ್ಲಿ ಗುರುತಿಸಿದ ಬದಲಾವಣೆ ಅವನನ್ನು ಒಳಗೊಂಡಿತು. ಅದನ್ನು ಅರಿತುಕೊಂಡಂತೆ ಹೆಚ್ಚು ಪರಿಚಿತವಾಗಿ ಕಂಡಿತು, ತಿಳಿದುಕೊಂಡಂತೆಲ್ಲ ವ್ಯವಸ್ಥಿತವಾಗಿ, ವಾಸ್ತವವಾಗಿ ತೋರಿತು. ವಾಸುದೇವ ಬಹಳ ಹಿಂದೆಯೆ ಹಾಗಿದ್ದ. ಆದರೆ ಸಿದ್ಧಾರ್ಥ ಅದನ್ನು ಗುರುತಿಸಿರಲಿಲ್ಲ. ಹೆಚ್ಚಾಗಿ ಅವನೂ ವಾಸುದೇವನಿಗಿಂತ

ಭಿನ್ನವಾಗಿರಲಿಲ್ಲ. ಮಾನವರೂ ಸದಾ ದೇವತೆಗಳನ್ನು ಕಾಣಬೇಕೆಂದು ಬಯಸುವಂತೆ ಸದಾಕಾಲ ವಾಸುದೇವನನ್ನು ಕಾಣಬೇಕೆನಿಸಿತು ಸಿದ್ಧಾರ್ಥನಿಗೆ. ತನ್ನೊಳಗೆ ವಾಸುದೇವನಿಂದ ಬೇರೆಯಾಗಲು ಪ್ರಾರಂಭಿಸಿದ. ಈ ನಡುವೆ ತನ್ನ ಮಾತನ್ನು ಮುಂದುವರಿಸಿದ.

ಸಿದ್ಧಾರ್ಥ ಮಾತು ಮುಗಿಸಿದಾಗ ವಾಸುದೇವ ತನ್ನ ಹಣ್ಣಾದ ದೃಷ್ಟಿಯನ್ನು ಅವನತ್ತ ಹರಿಸಿದ. ಮಾತನಾಡಲಿಲ್ಲ. ಆದರೆ ಅವನ ಮುಖದಲ್ಲಿ ಪ್ರೀತಿ ಪ್ರಸನ್ನತೆ ತಿಳಿವು ಜ್ಞಾನಪ್ರಕಾಶಿಸಿತು. ಸಿದ್ಧಾರ್ಥನ ಕೈಹಿಡಿದು ನದಿಯ ದಂಡೆಯ ಬಳಿಹೋಗಿ ಅವನ ಪಕ್ಕ ಕುಳಿತು ನದಿಯತ್ತ ನಕ್ಕು ಹೇಳಿದ, ''ನದಿ ನಗುವುದನ್ನು ಮಾತ್ರ ಕೇಳಿದ್ದೀಯ. ನೀನು ಎಲ್ಲವನ್ನೂ ಕೇಳಿಲ್ಲ. ಈಗ ಕಿವಿಕೊಟ್ಟು ಕೇಳೋಣ ನಿನಗೆ ಇನ್ನೂ ಹೆಚ್ಚಾಗಿ ತಿಳಿಯುತ್ತದೆ.''

ಅವರು ಕಿವಿಗೊಟ್ಟು ಕೇಳಿದರು. ನದಿಯ ವಿವಿಧ ಸ್ವರ ಮೆಲುವಾಗಿ ಮರುಧ್ವನಿಸಿತು. ಸಿದ್ಧಾರ್ಥ ನದಿಯತ್ತ ನೋಡಿದ. ಮಂದವಾಗಿ ಹರಿಯುವ ನೀರಿನಲ್ಲಿ ಚಿತ್ರಗಳನ್ನು ಕಂಡ. ತನ್ನ ಮಗನಿಗಾಗಿ ಮರುಗುತ್ತ ಏಕಾಂಗಿಯಾಗಿರುವ ಅವನ ತಂದೆಯನ್ನ; ಬಹುದೂರದಲ್ಲಿರುವ ಮಗನಿಗಾಗಿ ಕಾತರಗೊಂಡು ಒಂಟಿಯಾಗಿರುವ ತನ್ನನ್ನ ಸುಡುವ ಜೀವನದ ಬಯಕೆಗಳತ್ತ ನಿರಾಶ್ರಿತನಾಗಿ ಧಾವಿಸಿ ಹೋಗುತ್ತಿರುವ ತನ್ನ ಮಗನನ್ನ ಒಬ್ಬೊಬ್ಬರೂ ತಮ್ಮ ಗುರಿಯಲ್ಲಿ ಮಗ್ನರಾಗಿ, ಗುರಿಯಿಂದ ಪೀಡಿತರಾಗಿ ನರಳುತ್ತಿರುವುದನ್ನು ಕಂಡ. ನದಿಯ ಸ್ವರ ದುಃಖದಿಂದ ತುಂಬಿತ್ತು. ಅದು ಯಾತನೆಯ ದುಃಖತಪ್ತ ಸ್ವರದಲ್ಲಿ ಹಾಡುತ್ತ ತನ್ನ ಗಿರಿಯತ್ತ ಹರಿಯುತ್ತಿತ್ತು.

''ಕೇಳುತ್ತಿದ್ದೀಯ ?'' ವಾಸುದೇವನ ಮೌನ ದೃಷ್ಟಿ ಕೇಳಿತು. ಸಿದ್ಧಾರ್ಥ ತಲೆದೂಗಿದ. ''ಚೆನ್ನಾಗಿ ಕೇಳು !'' ವಾಸುದೇವ ಸಂಜ್ಞೆ ಮಾಡಿದ .

ಸಿದ್ಧಾರ್ಥ ಸ್ಪಷ್ಟವಾಗಿ ಕೇಳಲು ಪ್ರಯತ್ನಿಸಿದ . ಅವನ ತಂದೆಯ, ಅವನ ಮಗನ ಚಿತ್ರಗಳು ಒಂದರೊಳಗೊಂದು ಪ್ರವಹಿಸಿದವು. ಕಮಲೆಯ ಚಿತ್ರವೂ ಇಣುಕಿ ಕಾಣಿಸಿತು. ಎಲ್ಲರೂ ಗೋಚರಿಸಿ ಮುಂದೆ ಸಾಗಿದರು. ಅವರೆಲ್ಲರೂ ನದಿಯಲ್ಲಿ

ಒಂದಾಗಿದ್ದರು. ದುಃಖಿಸುವುದು, ಬಯಸುವುದು, ನರಳುವುದು ಅವರೆಲ್ಲರ ಗುರಿಯಾಗಿತ್ತು; ನದಿಯ ಸ್ವರ ತೀಕ್ಷ್ಣ ದುಃಖದಿಂದ ತೀವ್ರ ಶೋಕದಿಂದ ಅಸಂತುಷ್ಟ ಬಯಕೆಗಳಿಂದ ತುಂಬಿತ್ತು. ನದಿ ತನ್ನ ಗುರಿಯತ್ತ ಹರಿಯಿತು. ಸಿದ್ಧಾರ್ಥ ತನ್ನ ಬಂಧು ಬಳಗದವರ, ತಾನೆಂದೂ ಕಾಣದ ಜನರನ್ನೊಳಗೊಂಡ ನದಿ ಇದನ್ನೆಲ್ಲ ತೋರ್ಪಡಿಸುವುದನ್ನು ಕಂಡ. ನೀರು, ನೀರಿನ ಎಲ್ಲ ಅಲೆಗಳೂ ಬಹು ಗುರಿಗಳತ್ತ, ಜಲಪಾತದತ್ತ, ಪ್ರವಾಹದತ್ತ, ಮಹಾಸಾಗರದತ್ತ ನರಳುತ್ತ ಆತುರದಿಂದ ಧಾವಿಸು ತ್ತಿದ್ದವು. ಒಂದು ಮತ್ತೊಂದರಿಂದ ಜಯಹೊಂದಿ ಎಲ್ಲ ಗುರಿಗಳು ಕೊನೆ ಮುಟ್ಟಿದ್ದುವು. ನೀರು ಆವಿಯಾಗಿ ಮೇಲಕ್ಕೇರಿ ಮಳೆಯಾಗಿ ಕೆಳಗಿಳಿದು ಊಟೆಯಾಗಿ ಚಿಲುಮೆಯಾಗಿ, ಜಲಪಾತವಾಗಿ, ನದಿಯಾಗಿ, ಹೊಸದಾಗಿ ಬದಲಾಗಿ ಹರಿಯಿತು. ಅದರ ಸಂಕಟದ ಧ್ವನಿ ಬದಲಿಸಿತು. ಆದರೂ ದುಃಖದಿಂದ ಅನ್ವೇಷಣೆಯ ಸ್ವರ ಪ್ರತಿಧ್ವನಿಸುತ್ತಿತ್ತು. ಸುಖ-ದುಃಖದ, ಒಳಿತು-ಕೆಡುಕಿನ, ಅಳು-ನಗುವಿನ ಸಾವಿರಾರು ಧ್ವನಿಗಳು ಅದರಲ್ಲಿ ಸೇರಿದ್ದುವು.

ಸಿದ್ಧಾರ್ಥ ಕಿವಿಗೊಟ್ಟು ಆಲಿಸಿದ. ಈಗವನು ಇಚ್ಛೆಯಿಂದ ತಾನು ಇಲ್ಲವಾಗಿ, ಅದರಲ್ಲಿ ಒಂದಾಗಿ, ಎಲ್ಲವನ್ನು ಒಳಗೊಳ್ಳುತ್ತ ಆಲಿಸಿದ. ಈಗ ಕಿವಿಕೊಟ್ಟು ಕೇಳುವ ಕಲೆ ಪೂರ್ಣವಾಗಿ ಕರಗತವಾಗಿದೆ ಎನಿಸಿತು. ನದಿಯ ಈ ವಿವಿಧ ಸ್ವರಗಳನ್ನು ಹಿಂದೆಯೂ ಆಲಿಸಿದ್ದ. ಆದ್ದರಿಂದ ಅವು ವಿಶಿಷ್ಟವಾಗಿ ಧ್ವನಿಸಿದ್ದುವು. ಈಗವನಿಗೆ ಸಂತೋಷದ ಮಧುರ ಸ್ವರದಲ್ಲಿ, ದುಃಖದ ಕೊರಗು ಸ್ವರದಲ್ಲಿ, ಮಗುವಿನ ಎಳೆಯ ಸ್ವರದಲ್ಲಿ, ವೃದ್ಧನ ಹಣ್ಣಾದ ಸ್ವರದಲ್ಲಿ ಯಾವ ವ್ಯತ್ಯಾಸವೂ ಕಾಣಲಿಲ್ಲ. ನರಳುವವರ ಕೊರಗು, ಚತುರರ ನಗು, ಕೋಪಗೊಂಡವರ ಕಿರುಚಾಟ, ಸಾಯುವವರ ಆರ್ತನಾದ ಎಲ್ಲವೂ ಒಂದರೊಳಗೊಂದು ಹೆಣೆದುಕೊಂಡು ಒಂದರೊಳಗೊಂದು ಬಂದಿಯಾಗಿವೆ. ಈ ಎಲ್ಲ ಸ್ವರಗಳ ಗುರಿಗಳ, ಸಂಕಟಗಳ ದುಃಖಗಳ, ಸುಖಗಳ, ಒಳಿತು ಕೆಡುಕುಗಳೆಲ್ಲವೂ ಒಳಗೊಂಡು ಈ ಸೃಷ್ಟಿಯಾಗಿದೆ. ಈ ಎಲ್ಲವೂ ಒಗ್ಗೂಡಿಯೆ ಘಟನೆಗಳ ಜೀವನ ಪ್ರವಾಹದ ಶ್ರುತಿಯಾಗಿದೆ.

ಸಿದ್ಧಾರ್ಥ ಗಮನವಿಟ್ಟು ನದಿಯನ್ನು ಆಲಿಸಿದಾಗ, ಅದರ ಸಾವಿರಾರು ಸ್ವರಗಳನ್ನು ಕೇಳಿದಾಗ ಸುಖ ದುಃಖಗಳಿಗೆಡೆಗೊಡದೆ, ಯಾವುದೇ ಒಂದು ಸ್ವರಕ್ಕೆ

ಒಲಿದು ಒಳಗಾಗದೆ, ಐಕ್ಯದಿಂದೊಳಗೊಂಡ ಎಲ್ಲವನ್ನೂ ಆಲಿಸಿದಾಗ ಆ ಸಾವಿರ ಸ್ವರಗಳು ಪರಮೋತ್ಕೃಷ್ಟವಾದ ಒಂದು ಪದವನ್ನು ಒಳಗೊಂಡಿದೆ. ಅದೇ ಪರಿಪೂರ್ಣವಾದ ಓಂ.

''ನಿನಗೆ ಕೇಳುತ್ತದೆಯೆ?'' ಪುನಃ ವಾಸುದೇವನ ನೋಟ ಕೇಳಿತು.

ವಾಸುದೇವನ ನಗೆಯಲ್ಲಿ ಪ್ರಕಾಶವಿತ್ತು. ನದಿಯ ಎಲ್ಲ ಸ್ವರಗಳಲ್ಲೂ ಓಂ ಸುಳಿಯುವಂತೆ ಅವನ ವೃದ್ಧ ಮುಖದ ನರಿಗೆಗಳಲ್ಲಿ ಪ್ರಕಾಶ ಸುಳಿದಾಡುತ್ತಿತ್ತು. ತನ್ನ ಗೆಳೆಯನತ್ತ ನೋಡಿದಾಗ ಅವನ ನಗೆಯಲ್ಲಿ ಪ್ರಕಾಶ ಕಂಡಿತು. ಅದೇ ನಗು ಸಿದ್ಧಾರ್ಥನ ಮುಖದಲ್ಲೀಗ ಕಾಣಿಸಿತು. ಅವನ ಗಾಯ ವಾಸಿಯಾಗುತ್ತಿತ್ತು. ನೋವು ಇಲ್ಲವಾಗುತ್ತಿತ್ತು. ಅವನ ಸ್ವಯಂ ಏಕದಲ್ಲಿ ಐಕ್ಯವಾಯಿತು.

ಆ ಕ್ಷಣದಿಂದ ತನ್ನ ವಿರುದ್ಧ ವಿಧಿಯ ಎದುರು ಹೋರಾಡುವುದನ್ನು ನಿಲ್ಲಿಸಿದ ಸಿದ್ಧಾರ್ಥ. ಅವನ ಮುಖದಲ್ಲಿ ಬಯಕೆಗಳ ಗೊಂದಲದಲ್ಲಿ ಸ್ಪಂದಿಸಿದ, ಮುಕ್ತಿಯನ್ನು ಕಂಡುಕೊಂಡ. ಘಟನೆಗಳ ಬದುಕಿನ ಪ್ರವಾಹದಲ್ಲಿ ಸೌಮ್ಯದಿಂದ, ಕನಿಕರ ಅನುಕಂಪಗಳಿಂದ ತುಂಬಿ ತನ್ನನ್ನು ನಿವೇದಿಸಿಕೊಂಡ ವಸ್ತುಗಳ ಐಕ್ಯದಲ್ಲಿ ಒಂದಾದ ಪ್ರಸನ್ನತೆಯ ಜ್ಞಾನವಿತ್ತು.

ವಾಸುದೇವ ಕುಳಿತಿದ್ದ ನದಿಯ ದಂಡೆಯಿಂದ ಮೇಲೆದ್ದ. ಅವನು ಸಿದ್ಧಾರ್ಥನ ಕಣ್ಣುಗಳನ್ನು ನೋಡಿದಾಗ ಅವುಗಳಲ್ಲಿ ಪ್ರಶಾಂತತೆಯ ಜ್ಞಾನ ಮಿನುಗುತ್ತಿರುವುದನ್ನು ಕಂಡ. ಕರುಣೆ ತುಂಬಿದ ಹಸ್ತದಿಂದ ಮೆದುವಾಗಿ ಅವನ ಭುಜವನ್ನು ಮುಟ್ಟಿ ಹೇಳಿದ. ''ಸ್ನೇಹಿತನೆ, ಈ ದಿವಸಕ್ಕಾಗಿ ನಾನು ಕಾಯ್ದಿದ್ದೆ. ಈಗ ಅದು ಬಂದಿದೆ, ನಾನು ಹೋಗುತ್ತೇನೆ. ಇಲ್ಲಿಗೆ ಪರಿಪೂರ್ಣವಾಯಿತು. ಗುಡಿಸಲಿಗೆ, ನದಿಗೆ, ಸಿದ್ಧಾರ್ಥನಿಗೆ ಇದೋ ವಂದನೆಗಳು.''

ತನ್ನನ್ನು ಬೀಳ್ಕೊಳ್ಳುತ್ತಿರುವ ವಾಸುದೇವನಿಗೆ ಬಾಗಿ ವಂದಿಸಿದ ಸಿದ್ಧಾರ್ಥ ಮೃದುವಾದ ನುಡಿಯಲ್ಲಿ ಹೇಳಿದ. ''ಇದು ನನಗೆ ಗೊತ್ತಿತ್ತು, ನೀನು ವನಕ್ಕೆ ಹೋಗುತ್ತಿದ್ದೀಯ?''

"ಹೌದು ನಾನು ವನಕ್ಕೆ - ಎಲ್ಲ ವಸ್ತುಗಳ ಐಕ್ಯದೆಡೆಗೆ ಹೋಗುತ್ತಿದ್ದೇನೆ" ಎಂದು ಹೇಳಿದ ತೇಜೋರೂಪಿ ವಾಸುದೇವ ಅಲ್ಲಿಂದ ಹೊರಟು ಹೋದ. ಸಿದ್ಧಾರ್ಥ ಅವನನ್ನೇ ನೋಡುತ್ತ ನಿಂತ. ತುಂಬಿದ ಸಂತೋಷದಿಂದ, ಗುರುತರ ಗಾಂಭೀರ್ಯದಿಂದ ಅವನನ್ನು ನೋಡಿ, ಅವನ ಶಾಂತಿ ತುಂಬಿದ ಹೆಜ್ಜೆಗಳನ್ನ, ತೇಜಸ್ಸಿನಿಂದ ತುಂಬಿದ ಮುಖವನ್ನ, ಬೆಳಕಿನಂತಿದ್ದ ಆ ಪೂರ್ಣ ರೂಪವನ್ನ ಕಂಡ.

೮. ಗೋವಿಂದ

ಒಮ್ಮೆ ಗೋವಿಂದ ಇತರ ಸಂನ್ಯಾಸಿಗಳೊಂದಿಗೆ ಪ್ರಖ್ಯಾತ ವೇಶ್ಯೆ ಕಮಲ ದಾನ ಮಾಡಿದ್ದ ಸುಂದರ ಉಪವನದಲ್ಲಿ ವಿಶ್ರಾಂತಿ ಪಡೆದಿದ್ದ. ಒಂದು ದಿನದ ಪ್ರಯಾಣದ ದೂರವಿರುವ ನದಿಯಲ್ಲಿ ಒಬ್ಬ ವೃದ್ಧ ಅಂಬಿಗನಿದ್ದಾನೆ. ಬಹಳ ಜನ ಅವನನ್ನು ಋಷಿ ಎನ್ನುತ್ತಾರೆ ಎಂದು ಮಾತನಾಡಿಕೊಳ್ಳುವುದನ್ನು ಕೇಳಿದ್ದ. ಪ್ರಯಾಣ ಕೈಗೊಂಡಾಗ ಗೋವಿಂದ ಅಂಬಿಗನನ್ನು ಕಾಣುವ ಕಾತುರದಿಂದ ದೋಣಿಯತ್ತ ನಡೆದ; ಬೌದ್ಧ ನಿಯಮದಂತೆ ತನ್ನ ಜೀವನ ನಡೆಸಿದ್ದರೂ ಅವನ ಹಿರಿಯತನಕ್ಕೂ ವಿನಯಶೀಲತೆಗೂ ಹಿರಿಯ ಸಂನ್ಯಾಸಿಗಳು ಗೌರವ ತೋರುತ್ತಿದ್ದರೂ ಅವನ ಹೃದಯದಲ್ಲಿ ಅಶಾಂತಿ ದೂರವಾಗದೆ ಅವನ ಅನ್ವೇಷಣೆ ಅತೃಪ್ತಿಯನ್ನುಂಟು ಮಾಡಿದ್ದುವು.

ನದಿಯ ಹತ್ತಿರ ಬಂದು ವೃದ್ಧನನ್ನು ದಾಟಿಸುವಂತೆ ಹೇಳಿದ. ಆಚೆ ದಡದಲ್ಲಿ ಇಳಿದಾಗ ವೃದ್ಧನನ್ನು ಕೇಳಿದ, ''ಯಾತ್ರಿಗಳಲ್ಲಿ ಹಾಗೂ ಸಂನ್ಯಾಸಿಗಳಲ್ಲಿ ಅಮಿತ ಅಕ್ಕರೆಯಿಂದ ನಡೆದುಕೊಳ್ಳುತ್ತೀಯ; ನಮ್ಮಲ್ಲಿ ಬಹಳ ಮಂದಿಯನ್ನು ಸಂತಸದಿಂದ ನದಿ ದಾಟಿಸಿದ್ದೀಯ. ನೀನು ಸಹ ಸತ್ಪಥದ ಅನ್ವೇಷಕನಲ್ಲವೆ?''

ಸಿದ್ಧಾರ್ಥನ ಹಣ್ಣಾದ ಕಣ್ಣುಗಳಲ್ಲಿ ನಗು ಸುಳಿಯಿತು. ಹೇಳಿದ: ''ವಯೋವೃದ್ಧನಾಗಿ ಗೌತಮನ ಸಂನ್ಯಾಸಿಗಳ ಉಡುಪು ತೊಟ್ಟು ಗಣ್ಯನೆನಿಸಿ ಪೂಜ್ಯನಾದ ನೀನೂ ನಿನ್ನನ್ನು ಅನ್ವೇಷಕನೆಂದು ಕರೆಯುವೆಯ?''

''ನಾನೂ ವೃದ್ಧನಾಗಿರುವೆ. ಆದರೆ ಅನ್ವೇಷಣೆ ಮಾತ್ರ ನಿಂತಿಲ್ಲ. ನನ್ನಲ್ಲಿ ಅದು ಕೊನೆಗೊಳ್ಳುವಂತೆಯೂ ಕಾಣಲಿಲ್ಲ. ಅದು ನನ್ನ ಪ್ರಾರಬ್ಧ. ನೀನು ಸಹ ಅನ್ವೇಷಿಸುವಂತೆ ತೋರುತ್ತದೆ ಗೆಳೆಯ. ಅದನ್ನು ಕುರಿತು ನನ್ನೊಂದಿಗೆ ಎರಡು ಮಾತನ್ನಾಡುವೆಯಾ?''

''ನಾನು ನಿನಗೆ ಹೇಳುವುದು ಅರ್ಥವುಳ್ಳದ್ದಾಗಬಹುದು, ಬಹುಶಃ ನೀನು ಅನ್ವೇಷಣೆಯಲ್ಲಿ ಅತಿಯಾಗಿ ತೊಡಗಿರುವೆ ಎಂದು ಕಾಣುತ್ತದೆ. ಆ ಅನ್ವೇಷಣೆಯ ಫಲವಾಗಿ ನೀನು ಯಾವುದನ್ನೂ ಕಾಣಲಾರೆ.''

''ಅದು ಹೇಗೆ?'' ಗೋವಿಂದ ಕೇಳಿದ .

''ಒಬ್ಬ ಅನ್ವೇಷಣೆಯಲ್ಲಿ ತೊಡಗಿದ್ದಾಗ ಯಾವುದನ್ನು ಹುಡುಕುತ್ತಿರುವನೋ ಅದು ಸಹಜವಾಗಿ ತನ್ನೊಬ್ಬನಿಗೇ ಕಾಣುತ್ತದೆ ಎನಿಸುತ್ತದೆ; ಅವನು ಗುರಿವುಳ್ಳವನಾಗಿ, ಗುರಿಯಿಂದ ಆಕ್ರಮಿಸಲ್ಪಟ್ಟು ಏನನ್ನೂ ಕಂಡು ಕೊಳ್ಳಲಾಗದೆ ಬರಿಯ ಅನ್ವೇಷಣೆಯ ಚಿಂತನೆಯಲ್ಲಿ ಉಳಿಯುತ್ತಾನೆ. ಅನ್ವೇಷಣೆ ಎಂದರೆ: ಗುರಿ ಇಟ್ಟುಕೊಳ್ಳುವುದು ! ಕಂಡುಕೊಳ್ಳುವುದೆಂದರೆ ಗುರಿಹೊಂದಿ ಅದರಿಂದ ಬಂದಿತನಾಗದೆ ಸ್ವತಂತ್ರನಾಗುವುದು; ಸಾಮರ್ಥ್ಯ ಹೊಂದುವುದು. ಪೂಜ್ಯನಾದ ನೀನೂ ಬಹುಶಃ ಅನ್ವೇಷಕನಾಗಿರುವುದರಿಂದ ನಿನ್ನ ಗುರಿಯತ್ತ ಹೋರಾಡುತ್ತ ನಿನ್ನ ಮೂಗಿನ ಕೆಳಗಿರುವ ಎಷ್ಟೋ ವಿಷಯಗಳನ್ನು ನೀನು ಕಾಣುತ್ತಿಲ್ಲ.''

''ನೀನು ಏನನ್ನು ಹೇಳುತ್ತಿದ್ದೀಯೆ ಎಂಬುದು ನನಗಿನ್ನೂ ಸ್ಪಷ್ಟವಾಗಲಿಲ್ಲ.''

'' ಒಮ್ಮೆ ಬಹಳ ವರ್ಷಗಳ ಹಿಂದೆ ನೀನು ಈ ನದಿಯ ಹತ್ತಿರ ಬಂದಾಗ ಅಲ್ಲಿ ಒಬ್ಬ ಮನುಷ್ಯ ನಿದ್ರಿಸುತ್ತಿದ್ದುದನ್ನು ಕಂಡೆ. ಅವನ ಪಕ್ಕದಲ್ಲಿ ಕುಳಿತೆ. ಆದರೆ ಆವನನ್ನು ನೀನು ಗುರುತಿಸಲಿಲ್ಲ, ಗೋವಿಂದ.''

ಸಂನ್ಯಾಸಿ ಚಕಿತನಾಗಿ ಮರುಳುಗೊಂಡಂತೆ ಅಂಬಿಗನನ್ನು ದೃಷ್ಟಿಸಿ ಅಂಜುವ ಧ್ವನಿಯಲ್ಲಿ ಕೇಳಿದ: ''ನೀನು ಸಿದ್ಧಾರ್ಥನೆ? ಈ ಬಾರಿಯೂ ನಾನು ನಿನ್ನನ್ನು ಗುರುತಿಸಲಿಲ್ಲ. ನಿನ್ನನ್ನು ಕಂಡು ತುಂಬಾ ಆನಂದವಾಯಿತು. ಸಿದ್ಧಾರ್ಥ, ನೀನು ಬಹಳ ಬದಲಾಯಿಸಿದ್ದೀಯೆ? ಏನು ನೀನೀಗ ಅಂಬಿಗನಾಗಿರುವೆಯಲ್ಲಾ !''

ಸಿದ್ಧಾರ್ಥ ನಕ್ಕ. ''ಹೌದು ಅಂಬಿಗನಾಗಿದ್ದೇನೆ. ಬದುಕಿನಲ್ಲಿ ಬಹಳ ಜನ ಬದಲಾವಣೆ ಆಗಬೇಕಾಗುತ್ತದೆ ಅವರಲ್ಲಿ ನಾನೂ ಒಬ್ಬ. ಗೋವಿಂದ, ನಿನ್ನನ್ನು

ಸ್ವಾಗತಿಸುತ್ತೇನೆ. ಅಲ್ಲದೆ ಈ ರಾತ್ರಿ ನನ್ನ ಗುಡಿಸಲಿನಲ್ಲಿ ತಂಗುವಂತೆ ಆಹ್ವಾನಿಸುತ್ತೇನೆ.''

ಅಂದು ರಾತ್ರಿ ಗೋವಿಂದ ಗುಡಿಲಿನಲ್ಲಿಯೆ ಉಳಿದು ವಾಸುದೇವನ ಹಾಸಿಗೆಯಲ್ಲಿ ನಿದ್ರಿಸಿದ. ತನ್ನ ಬಾಲ್ಯ ಗೆಳೆಯನಿಗೆ ಬಹಳ ಪ್ರಶ್ನೆಗಳನ್ನು ಕೇಳಿದ. ತನ್ನ ಬದುಕಿನ ಎಲ್ಲವನ್ನೂ ಹೇಳಲು ಬಿತ್ತರಿಸಿದ್ದ ಸಿದ್ಧಾರ್ಥ.

ಮರುದಿನ ಬೆಳಿಗ್ಗೆ ಹೋಗುವಾಗ ಗೋವಿಂದ ಹಿಂದೆಗೆಯುತ್ತ ಹೇಳಿದ: ''ಸಿದ್ಧಾರ್ಥ, ನಾನು ನನ್ನ ದಾರಿಯಲ್ಲಿ ಹೋಗುವ ಮುನ್ನ ಮತ್ತೊಂದು ಪ್ರಶ್ನೆಯನ್ನು ಕೇಳಲಿಚ್ಛಿಸುತ್ತೇನೆ. ನಿನ್ನ ಬದುಕಿಗೆ ನೆರವಾಗುವ, ಒಳಿತನ್ನುಂಟುಮಾಡುವ ನೀನು ಎತ್ತಿ ಹಿಡಿಯುವ ನಂಬಿಕೆಯೋ, ಸಿದ್ಧಾಂತವೋ ಅಥವಾ ತಿಳಿವೋ ಇದೆಯೇ ?''

''ಗೆಳೆಯ, ನಾನು ಯುವಕನಾಗಿದ್ದಾಗ, ನಾವಿಬ್ಬರೂ ಕಾಡಿನಲ್ಲಿ ಸಮಣರಾಗಿದ್ದಾಗ ನಂಬಿಕೆಗಳನ್ನು, ಸಿದ್ಧಾಂತಗಳನ್ನು, ಗುರುಗಳನ್ನು ಖಂಡಿಸಿ ಅವಕ್ಕೆ ಬೆನ್ನು ಮಾಡಿದ್ದನ್ನು ಚೆನ್ನಾಗಿ ಬಲ್ಲೆ. ಅಲ್ಲಿಂದ ಇದುವರೆವಿಗೂ ಎಷ್ಟೇ ಗುರುಗಳನ್ನು ಕಂಡರೂ ನಾನು ಬೆನ್ನು ಮಾಡಿಯೇ ಬಂದಿದ್ದೇನೆ. ಬಹಳ ದಿನಗಳ ಕಾಲ ಸುಂದರ ವೇಶ್ಯೆಯೊಬ್ಬಳು, ವರ್ತಕ ಹಾಗೂ ಪಗಡೆಯಾಟಗಾರ ಗುರುವಾಗಿದ್ದರು. ಮತ್ತೊಂದು ಸಂದರ್ಭದಲ್ಲಿ ಬುದ್ಧನ ಸಂಚಾರಿ ಸಂನ್ಯಾಸಿಯೊಬ್ಬ ಗುರುವಾಗಿದ್ದ. ಯಾತ್ರೆ ಹೋಗುತ್ತಿದ್ದ ಅವನು ಕಾಡಿನಲ್ಲಿ ನಿದ್ರಿಸುತ್ತಿದ್ದ ನನ್ನ ಪಕ್ಕದಲ್ಲಿ ಕಾಯುತ್ತ ಕುಳಿತ. ಅವನಿಂದಲೂ ಸ್ವಲ್ಪ ಕಲಿತಿದ್ದೇನೆ. ಅವನಿಗೂ ತುಂಬಾ ಕೃತಜ್ಞನಾಗಿದ್ದೇನೆ. ಆದರೆ ನಾನು ಹೆಚ್ಚು ಕಲಿತದ್ದು ಈ ನದಿಯಿಂದ ಹಾಗೂ ಮೊದಲು ಇಲ್ಲಿ ಅಂಬಿಗನಾಗಿದ್ದ ವಾಸುದೇವನಿಂದ. ಅವನು ಚಿಂತನಕಾರನಾಗಿರಲಿಲ್ಲ. ಸರಳ ವ್ಯಕ್ತಿ. ಆದರೆ ಅವನು ಅಗತ್ಯವಾದದ್ದನ್ನು ಹಾಗೂ ಗೌತಮನನ್ನು ಅರಿತುಕೊಂಡಿದ್ದ. ಅವನು ವಿಚಿತ್ರ ಮನುಷ್ಯನಾಗಿದ್ದ, ಅವನೊಬ್ಬ ಋಷಿ.''

''ಸಿದ್ಧಾರ್ಥ, ಇನ್ನೂ ಪರಿಹಾಸ್ಯ ಮಾಡುತ್ತಿರುವೆಯೆಂದೆನಿಸುತ್ತದೆ, ನಿನ್ನನ್ನು ನಂಬುತ್ತೇನೆ. ಅಲ್ಲದೆ ನೀನು ಯಾವ ಗುರುವನ್ನೂ ಅನುಸರಿಸಲಿಲ್ಲ

ಎಂಬುದು ಗೊತ್ತು. ಆದರೆ ಯಾವ ಸಿದ್ಧಾಂತವಲ್ಲದಿದ್ದರೂ ನಿನ್ನದೇ ಆದ ಕೆಲವು ಅನಿಸಿಕೆಗಳಿಲ್ಲವೆ ? ನಿನ್ನ ಬದುಕಿಗೆ ನೆರವಾದ ಕೆಲವು ಜ್ಞಾನವನ್ನು ಕಂಡು ಕೊಂಡಿಲ್ಲವೆ? ಅದನ್ನು ಕುರಿತು ಸ್ವಲ್ಪ ಹೇಳಿದರೆ ನನಗೆ ತುಂಬ ಸಂತೋಷ ವಾಗುತ್ತದೆ.''

''ಹೌದು ಅಲ್ಲಲ್ಲಿ ಕೆಲವು ಭಾವನೆಗಳನ್ನು, ಜ್ಞಾನವನ್ನು ಪಡೆದಿದ್ದೇನೆ; ಕೆಲವು ಸಲ ತನ್ನ ಬದುಕನ್ನು ತನ್ನ ಹೃದಯದಲ್ಲೆ ಅನುಭವಿಸುವವನಂತೆ ದಿನವಿಡೀ ಜ್ಞಾನದ ಜಾಗೃತಿ ಹೊಂದಿದ್ದೇನೆ. ಎಷ್ಟೋ ಭಾವನೆಗಳು ನನ್ನಲ್ಲುಂಟಾಗಿವೆ. ಅವುಗಳನ್ನು ಕುರಿತು ನಿನಗೆ ಹೇಳಲು ಸಾಧ್ಯವಾಗುವುದಿಲ್ಲ. ಆದರೆ ಈ ಒಂದು ಭಾವನೆ ನನ್ನಲ್ಲಿ ಬಹಳ ಪರಿಣಾಮವನ್ನುಂಟುವಾಡಿದೆ. ಸಚ್ಚಿದಾನಂದ ಅನುಭವವೇದ್ಯವೆ ಹೊರತು ತಿಳಿಸುವಂಥದ್ದಲ್ಲ ಗೋವಿಂದ. ಅದನ್ನು ತಿಳಿಸಲು ಯತ್ನಿಸುದಷ್ಟೂ ಎಡವುತ್ತಾನೆ.'

''ನೀನು ಹಾಸ್ಯ ಮಾಡುತ್ತಿಲ್ಲವಷ್ಟೆ ?''

'' ಇಲ್ಲ ಗೋವಿಂದ, ನಾನು ಕಂಡಿರುವುದನ್ನು ನಿನಗೆ ಹೇಳುತ್ತಿದ್ದೇನೆ. ಜ್ಞಾನವನ್ನು ತಿಳಿಯ ಹೇಳಬಹುದು ಆದರೆ ಸಚ್ಚಿದಾನಂದವನ್ನಲ್ಲ. ಯಾರಾದರು ಅದನ್ನು ಕಂಡುಕೊಳ್ಳಬಹುದು, ಅದರಿಂದ ಸಾಮರ್ಥ್ಯ ಪಡೆಯಬಹುದು. ಅದ್ಭುತಗಳನ್ನುಂಟು ಮಾಡಬಹುದು ಆದರೆ ಅದನ್ನು ಯಾರೂ ತಿಳಿಯಹೇಳಲು, ಉಪದೇಶಿಸಲು ಸಾಧ್ಯವಿಲ್ಲ. ಇದನ್ನೇ ನಾನು ಯುವಕನಾಗಿದ್ದಾಗ ಅನುಮಾನಿಸಿದ್ದು. ಇದೆ ನನ್ನನ್ನು ಗುರುಗಳಿಂದ ದೂರವಿರಿಸಿದ್ದು. ನೀನು ಪುನಃ ಹಾಸ್ಯ, ದಡ್ಡತನ ಎಂದು ಪರಿಗಣಿಸುವ ಮತ್ತೊಂಧು ಭಾವನೆ ನನ್ನಲ್ಲಿದೆ; ಅದೇ ಸತ್ಯದ ಮತ್ತೊಂದು ಮುಖವೂ ಅಷ್ಟೇ ಸತ್ಯವಾದುದು ಎಂಬುದು. ಉದಾಹರಣೆಗೆ, ಸತ್ಯ ಒಮ್ಮುಖವಾದರೆ ಅದನ್ನು ಪದಗಳಲ್ಲಿರಿಸಿ ವ್ಯಕ್ತಪಡಿಸಬಹುದು. ವ್ಯಕ್ತಪಡಿಸಬಲ್ಲೆ ಎಂಬ ಭಾವನೆಯೂ ಒಮ್ಮುಖವೇ, ಅದೆಲ್ಲವೂ ಅರ್ಧಸತ್ಯ ಮಾತ್ರ; ಅದು ಒಮ್ಮತವನ್ನು, ಏಕತೆಯನ್ನು ಪೂರ್ಣತ್ವವನ್ನು ಹೊಂದಿರುವುದಿಲ್ಲ. ಪ್ರಪಂಚವನ್ನು ಕುರಿತು ಪ್ರಖ್ಯಾತ ಬುದ್ಧನು ಉಪದೇಶಿಸಿದಾಗಲೂ ಸಂಸಾರ-ನಿರ್ವಾಣ, ಮಾಯೆ-ಸತ್ಯ, ದುಃಖ-ವಿಮುಕ್ತಿ ಎಂದು

ವಿಭಾಗಿಸಬೇಕಾಯಿತು. ಹಾಗಲ್ಲದೆ ಯಾರಿಗೂ ಸಾಧ್ಯವಿಲ್ಲ, ಉಪದೇಶಕರಿಗೆ ಈ ಮಾರ್ಗವನ್ನುಳಿದು ಬೇರೆ ಮಾರ್ಗವಿಲ್ಲ. ಆದರೆ ಒಮ್ಮುಖವಲ್ಲದ ಆ ಪ್ರಪಂಚವು ನಮ್ಮ ಒಳಗೆ ಹಾಗೂ ಸುತ್ತಲೂ ಇದೆ. ಯಾವ ಮನುಷ್ಯನೂ ಅಥವಾ ಕಾರ್ಯವೂ ಪೂರ್ಣವಾಗಿ ಸಂಸಾರ ಅಥವಾ ನಿರ್ವಾಣವಲ್ಲ, ಯಾವ ಮನುಷ್ಯನೂ ಪೂರ್ಣವಾಗಿ ಪಾಪಿ ಅಥವಾ ಋಷಿಯಲ್ಲ, ನಾವು ಮಾಯೆಯಿಂದ ಪೀಡಿತರಾಗಿರುವುದರಿಂದ ನಮಗೆ ಹಾಗೆ ತೋರುತ್ತದೆ, ಆ ವೇಳೆಯಲ್ಲಿ ಮತ್ತೇನೋ ನಿಜವಾಗಿರುತ್ತದೆ. ಗೋವಿಂದ ಕಾಲ ಎನ್ನುವುದು ನಿಜವಲ್ಲ. ಮತ್ತೆ ಮತ್ತೆ ನನಗದರ ಅರಿವಾಗಿದೆ. ಕಾಲ ಎನ್ನುವುದು ನಿಜವಲ್ಲವಾದರೆ ಇಹಕ್ಕೂ - ಪರಕ್ಕೂ ದುಃಖಕ್ಕೂ - ಆನಂದಕ್ಕೂ, ಕೆಡುಕಿಗೂ - ಒಳಿತಿಗೂ ಇರುವ ಬೇರ್ಪಡಿಸುವ ರೇಖೆಯೂ ಸುಳ್ಳು. ಅದು ಸಹ ಮಾಯೆ.''

''ಅದು ಹೇಗೆ ?'' ಗೊಂದಲಗೊಂಡ ಗೋವಿಂದ ಕೇಳಿದ.

''ಗೆಳೆಯ, ಗಮನವಿಟ್ಟು ಕೇಳು. ನಾನೂ ಪಾಪ ಮಾಡುವವನು, ನೀನೂ ಪಾಪ ಮಾಡುವವನು, ಆದರೆ ಒಂದು ದಿನ ಈ ಪಾಪಿ ಪುನಃ ಬ್ರಹ್ಮನಾಗುತ್ತಾನೆ, ನಿರ್ವಾಣ ಹೊಂದುತ್ತಾನೆ, ಬುದ್ಧನಾಗುತ್ತಾನೆ. ಈಗ ಈ ' ಒಂದು ದಿನ' ಮಾಯೆಯಾಗಿದೆ. ಇದು ಬರಿಯ ಸಾಮ್ಯ. ನಮ್ಮ ಆಲೋಚನೆಯು ಬೇರೆಯದನ್ನು ಒಳಗೊಳ್ಳಲು ಸಾಧ್ಯವಾಗದಿರುವುದರಿಂದ ಪಾಪಿಯಾದವನು ಬುದ್ಧ ಸ್ಥಿತಿಗೇರುವ ಸ್ಥಿತಿಯಲ್ಲಿಲ್ಲ; ಅವನು ವಿಕಸಿತನಾಗುತ್ತಿಲ್ಲ. ಇಲ್ಲ, ಪಾಪಿಯಲ್ಲಾಗಲೇ ಚೇತನ ಬುದ್ಧನಿದ್ದಾನೆ; ಅವನ ಭವಿಷ್ಯ ಆಗಲೇ ರೂಪುಗೊಂಡಿದೆ. ಆ ಅಂತಸ್ಥ ಬುದ್ಧನನ್ನು ನಿನ್ನಲ್ಲಿ, ನನ್ನಲ್ಲಿ ಎಲ್ಲರಲ್ಲಿಯೂ ಗುರುತಿಸಬೇಕು. ಗೋವಿಂದ, ಪ್ರಪಂಚವೆನ್ನುವುದು ಅಪೂರ್ಣವೂ ಅಲ್ಲ ಅಥವಾ ದೀರ್ಘಕಾಲಾವಧಿಯಲ್ಲಿ ಪರಿವರ್ತನಗೊಂಡು ಪೂರ್ಣವಾಗುವುದೂ ಅಲ್ಲ. ಅದು ಪ್ರತಿಕ್ಷಣದಲ್ಲೂ ಪೂರ್ಣವಾದದ್ದು. ಪ್ರತಿಯೊಂದು ಪಾಪವೂ ತನ್ನೊಳಗೆ ಅನುಗ್ರಹವನ್ನು ಒಳಗೊಂಡಿದೆ. ಮೊಲೆ ಉಣ್ಣುವ ಮಗುವಿನಲ್ಲಿ ಸಾವು ಸೇರಿಕೊಂಡಿದೆ. ಸಾಯುವ ಜನರಲ್ಲಿ ಅನಂತ ಜೀವನವಿದೆ. ಯಾರೊಬ್ಬರಿಗೂ ಮತ್ತೊಬ್ಬನು ಯಾವ ಸ್ಥಿತಿಯಲ್ಲಿರುವನೆಂದು ಹೇಳಲು ಸಾಧ್ಯವಿಲ್ಲ. ದರೋಡೆಕಾರನಲ್ಲಿ, ಜೂಜುಗಾರನಲ್ಲಿ ಬುದ್ಧನಿದ್ದಾನೆ. ಬ್ರಾಹ್ಮಣನಲ್ಲಿ ದರೋಡೆ

ಕಾರನಿದ್ದಾನೆ. ಕಾಲದಿಂದ ಬಿಡಿಸಿಕೊಂಡು ವರ್ತಮಾನ, ಭೂತ, ಭವಿಷ್ಯಗಳೆಲ್ಲವನ್ನೂ ಒಟ್ಟಾರೆ ಕಾಣಲು ಧ್ಯಾನದಲ್ಲಿ ಮುಳುಗಿದ್ದಾಗ ಸಾಧ್ಯ; ಆಗ ಎಲ್ಲವೂ ಒಳಿತಾಗಿ ಪಕ್ವವಾಗಿ ಬ್ರಹ್ಮವಾಗುತ್ತದೆ. ಆದ್ದರಿಂದ ಹುಟ್ಟು-ಸಾವು, ಪುಣ್ಯ-ಪಾಪ, ಸಚ್ಚಿದಾನಂದ -ಹೆಡ್ಡತನ ಎಲ್ಲವೂ ನನಗೆ ಒಳ್ಳೆಯದಾಗಿ ಕಾಣುತ್ತದೆ. ಎಲ್ಲವೂ ಅಗತ್ಯವಾಗಿದೆ. ಎಲ್ಲಕ್ಕೂ ನನ್ನ ಒಪ್ಪಿಗೆ, ಸಮ್ಮತಿ, ಪ್ರೀತಿಯ ಸಾಮ್ಯ ಅಗತ್ಯವಾಗಿದೆ; ಆಗ ನನ್ನಲ್ಲಿ ಎಲ್ಲವೂ ಒಳಿತಾಗಿ ಯಾವುದೂ ತೊಂದರೆ ಕೊಡಲಾರವು. ನನಗೆ ಪಾಪ ಮಾಡುವುದರ ಅಗತ್ಯವಿತ್ತು. ನನಗೆ ಅತಿಭೋಗ ಬೇಕಿತ್ತು ಎಂಬುದನ್ನು ನನ್ನ ಶರೀರ ಮತ್ತು ಆತ್ಮಗಳ ಮೂಲಕ ಕಲಿತಿದ್ದೆ. ಆಸ್ತಿಗೋಸ್ಕರ ಹೋರಾಡಿ ನಿರಾಶೆಯನನ್ನುಭವಿಸಿ ನಿರಾಸೆಯ ಆಳಕ್ಕಿಳಿದು ಅನುಭವ ಹೊಂದಿ ಅವುಗಳನ್ನಿಲ್ಲಗೈಯುವುದನ್ನು ಅರಿತು ಪ್ರಪಂಚವನ್ನು ಪ್ರೀತಿಸುವುದನ್ನು ಕಲಿಯಬೇಕಿತ್ತು. ಇನ್ನು ಅದನ್ನು ಬಯಸಿದ ಕನಸಿನ ಪ್ರಪಂಚದೊಂದಿಗೆ, ಊಹೆಯ ಪ್ರಕೃತಿಯೊಂದಿಗೆ ಸೇರಲಿಚ್ಚಿಸಿದೆ.

ಸಿದ್ಧಾರ್ಥ ನೆಲದ ಮೇಲಿದ್ದ ಒಂದು ಕಲ್ಲನ್ನು ತೆಗೆದುಕೊಂಡು ಕೈಯಿನಲ್ಲಿ ಆಡಿಸುತ್ತ ಹೇಳಿದ; ''ಇದು ಈಗ ಕಲ್ಲು. ಒಂದು ಕಾಲಕ್ಕೆ ಬಹುಶಃ ಮಣ್ಣಾಗಿ, ಮಣ್ಣಿಂದ ಗಿಡವಾಗಿ ಪ್ರುಗ ಇಲ್ಲ ಮನುಷ್ಯನಾಗುತ್ತದೆ. ಹಿಂದಾಗಿದ್ದರೆ ನಾನು ಇದನ್ನು ಬರಿಯಕಲ್ಲು; ಬೆಲೆಯಿಲ್ಲದ್ದು, ಇದು ಮಾಯಾ ಪ್ರಪಂಚಕ್ಕೆ ಸೇರಿದೆ, ಆದರೆ ಬಹುಶಃ ತನ್ನಲ್ಲಿಯ ಬದಲಾವಣೆಯಿಂದ ಅದೂ ಮನುಷ್ಯನಾಗಬಹುದು, ಚೈತನ್ಯವಾಗಬಹುದು ಬೆಲೆಯುಳ್ಳದ್ದಾಗಬಹುದು ಎಂದಷ್ಟೆ ಯೋಚಿಸುತ್ತಿದ್ದೆ. ಆದರೀಗ ಈ ಕಲ್ಲು ಕಲ್ಲೇ; ಇದು ಪ್ರಾಣಿಯೂ ಹೌದು, ಬುದ್ಧ ಹಾಗೂ ದೇವರೂ ಹೌದು ಎಂದು ತಿಳಿಯುತ್ತೇನೆ. ಕಲ್ಲಾಗಿರುವ ಇದು ಮುಂದೆ ಮತ್ತೇನೋ ಆಗುತ್ತದೆಂದು ನಾನದನ್ನು ಪ್ರೀತಿಸಿ ಗೌರವಿಸುತ್ತಿಲ್ಲ, ಆದರೆ ಇದು ಬಹಳ ಹಿಂದೆಯೇ ಎಲ್ಲವೂ ಆಗಿದ್ದು ಹಾಗೆ ಎಲ್ಲವೂ ಆಗಿದೆ. ಇದು ಕಲ್ಲಾಗಿರುವುದರಿಂದ ಇಂದು ಈಗ ನನಗೆ ಕಲ್ಲಾಗಿ ಕಾಣಿಸುವುದರಿಂದ ನಾನು ಪ್ರೀತಿಸುತ್ತೇನೆ. ಅದರಲ್ಲಿರುವ ಪ್ರತಿಯೊಂದು ಗೆರೆಗಳಲ್ಲಿ, ಟೊಳ್ಳುಭಾಗದಲ್ಲಿ, ಹಳದಿ ಬೂದುಬಣ್ಣದಲ್ಲಿ, ಅದರ ಗಟ್ಟಿತನದಲ್ಲಿ,

ಮಿಡಿದಾಗ ಬರುವ ಶಬ್ದದಲ್ಲಿ ಅದರ ಸುತ್ತ ಇರುವ ಶೀತೋಷ್ಣದಲ್ಲಿ ನಾನು ಅರ್ಥ ಮತ್ತು ಮೌಲ್ಯಗಳನ್ನು ಕಾಣುತ್ತೇನೆ. ಎಲೆಗಳಂತೆ ಇಲ್ಲ ಮರಳಿನಂತೆ ಕಾಣುವ, ಎಣ್ಣೆ ಅಥವಾ ಸಾಬೂನಿನ ಅನುಭವ ತರುವ ಕಲ್ಲುಗಳಿವೆ. ಪ್ರತಿಯೊಂದೂ ಒಂದೊಂದು ವಿಧದಲ್ಲಿದ್ದು ತಮ್ಮದೇ ಆದ ರೀತಿಯಲ್ಲಿ ಓಂ ಅನ್ನು ಆರಾಧಿಸುತ್ತವೆ, ಪ್ರತಿಯೊಂದು ಬ್ರಹ್ಮವೆ. ಇದನ್ನು ಕುರಿತು ನಾನು ಹೆಚ್ಚು ಹೇಳುವುದಿಲ್ಲ. ಭಾವನೆಯನ್ನು ಪದಗಳು ಸ್ಪಷ್ಟವಾಗಿ ಹೇಳಲಾರವು. ಅವು ಯಾವಾಗಲೂ ಉಚ್ಚರಿಸಿದ ಕ್ಷಣದಲ್ಲಿ ವ್ಯತ್ಯಾಸ ಹೊಂದಿ ಸ್ವಲ್ಪ ಅರ್ಥ ವಿಕಲ್ಪಕ್ಕೆ ಎಡೆಕೊಡುತ್ತವೆ. ಅಲ್ಲದೆ ನನಗೆ ಸಂತೋಷವನ್ನುಂಟುಮಾಡುವ ಮತ್ತೊಂದು ಸರಿದೋರಿದ ಅಂಶವೆಂದರೆ ಒಬ್ಬನಿಗೆ ಮೌಲ್ಯ ಹಾಗೂ ಆನಂದ ಎಂದು ತೋರುವುದು ಮತ್ತೊಬ್ಬನಿಗೆ ಅರ್ಥರಹಿತವಾಗುವುದು.''

ಮೌನವಾಗಿ ಕುಳಿತು ಆಲಿಸಿದ ಗೋವಿಂದ ಸ್ವಲ್ಪ ಹೊತ್ತಿನ ನಂತರ ಹಿಂದೆಗೆಯುತ್ತ ಹೇಳಿದ: ''ನೀನು ನನಗೆ ಕಲ್ಲನ್ನು ಕುರಿತು ಏಕೆ ಹೇಳಿದೆ ?''

''ಯಾವ ಪೂರ್ವ ನಿಶ್ಚಯವೂ ಇಲ್ಲದೆ ಹೇಳಿದೆ. ಬಹುಶಃ ಅದು ನಾನು ನದಿಯನ್ನ, ಕಲ್ಲನ್ನ ಪ್ರೀತಿಸುವುದನ್ನ ತೋರಿಸುತ್ತದೆ, ಕಾಣುವ ಸರ್ವ ಚರಾಚರಗಳಿಂದಲೂ ಕಲಿಯಬಹುದು. ಗೋವಿಂದ ನಾನು ಕಲ್ಲನ್ನ, ಮರವನ್ನ ತುಂಡು ತೊಗಟೆ ಇಲ್ಲ ತೊಗಲನ್ನ ಪ್ರೀತಿಸಬಲ್ಲೆ. ಇವೆಲ್ಲವು ವಸ್ತುಗಳು, ಇವುಗಳನ್ನ ಯಾರಾದರೂ ಪ್ರೀತಿಸಬಹುದು. ಆದರೆ ಯಾರೊಬ್ಬರೂ ಪದಗಳನ್ನು ಪ್ರೀತಿಸಲು ಸಾಧ್ಯವಿಲ್ಲ. ಆದ್ದರಿಂದ ನನಗೆ ಉಪದೇಶ ಉಪಯೋಗವಿಲ್ಲದ್ದು. ಅವಕ್ಕೆ ಗಟ್ಟಿತನವಾಗಲಿ, ಮೃದುತ್ವವಾಗಲಿ, ವರ್ಣಗಳಾಗಲಿ, ಕೋನಗಳಾಗಲಿ, ವಾಸನೆಯಾಗಲಿ, ರುಚಿಯಾಗಲಿ ಯಾವುದೂ ಇಲ್ಲದೆ ಅವು ಬರಿಯ ಪದಗಳಷ್ಟೆ. ಬಹುಶಃ ಶಾಂತಿ ಕಂಡುಕೊಳ್ಳುವುದರಲ್ಲಿ ನಿನ್ನನ್ನು ತಡೆದಿರುವುದು ಅದೆ ಎಂದು ತೊರುತ್ತದೆ. ಅಸಂಖ್ಯಾತ ಪದಗಳಿವೆ ಗೋವಿಂದ. ಈ ಮುಕ್ತಿ ಪವಿತ್ರತೆ, ಸಂಸಾರ, ನಿರ್ವಾಣ ಎಲ್ಲವೂ ಪದಗಳಷ್ಟೆ, ನಿರ್ವಾಣ ಎನ್ನುವುದು ವಸ್ತುವಲ್ಲ. ಅಲ್ಲಿರುವುದು ನಿರ್ವಾಣ ಎನ್ನುವ ಪದವಷ್ಟೆ.''

''ಗೆಳೆಯ, ನಿರ್ವಾಣವೆನ್ನುವುದು ಬರಿಯ ಪದವಲ್ಲ; ಅದು ಭಾವನೆ'' ಎಂದ ಗೋವಿಂದ.

''ಅದು ಭಾವನೆ ಇರಬಹುದು, ಆದರೆ ನನಗದು ಒಪ್ಪಿಗೆಯಾಗಬೇಕು. ನನಗೆ ಪದಗಳಿಗೂ, ಭಾವನೆಗಳಿಗೂ ಹೆಚ್ಚು ವ್ಯತ್ಯಾಸ ಕಾಣುವುದಿಲ್ಲ. ನಿಜವಾಗಿ ಹೇಳುವುದಾದರೆ ಭಾವನೆಗಳಿಗೂ ನಾನು ಹೆಚ್ಚು ಬೆಲೆ ಕೊಡುವುದಿಲ್ಲ. ನಾನು ವಸ್ತುಗಳೊಂದಿಗೆ ಹೆಚ್ಚು ಹೊಂದಿಕೊಳ್ಳುತ್ತೇನೆ. ಉದಾಹರಣೆಗೆ, ಈ ದೋಣಿಯಲ್ಲಿ ನನ್ನ ಗುರುವೂ ಪೂರ್ವಾಧಿಕಾರಿಯೂ ಆಗಿದ್ದ ವಾಸುದೇವನಿದ್ದ. ಪವಿತ್ರ ಮನುಷ್ಯನಾದ ಅವನು ನದಿಯನ್ನಲ್ಲದೆ ಮತ್ತಾವುದನ್ನೂ ನಂಬಲಿಲ್ಲ. ತನಗೆ ನದಿ ಮಾತನಾಡಿದ್ದನ್ನು ಅವನು ಗುರುತಿಸಿದ್ದ. ಅವನು ಅದರಿಂದ ಕಲಿತ; ಅದು ಅವನಿಗೆ ಉಪದೇಶಿಸಿ ಅರಿವು ಮಾಡಿಕೊಟ್ಟಿತು. ಅವನಿಗೆ ನದಿ ಚೈತನ್ಯವಾಗಿ ಕಂಡಿತು; ಅಲ್ಲದೆ ಪ್ರತಿ ಹಕ್ಕಿ, ಮೋಡ, ಗಾಳಿ, ದಿಮ್ಮಿಗಳು ಸಹ ಪವಿತ್ರವಾದುವು, ಅವೂ ಪರಿಣತ ಗುರುವಿನಂತೆ ಕಲಿಸಬಲ್ಲವು ಎಂದು ಅವನಿಗೆ ಬಹಳ ವರ್ಷಗಳವರೆಗೆ ತಿಳಿದಿರಲಿಲ್ಲ. ಆದರೆ ಆ ಪವಿತ್ರ ಮನುಷ್ಯ ಕಾಡಿಗೆ ಹೋದಾಗ ಗುರುಗಳಿಲ್ಲದೆ, ಗ್ರಂಥಗಳಿಲ್ಲದೆ ಬರಿಯ ನದಿಯನ್ನು ನಂಬಿದ ಮಾತ್ರದಿಂದಲೆ ಅವನಿಗೆ ಎಲ್ಲವೂ ತಿಳಿದಿತ್ತು. ನನಗಿಂತ, ನಿನಗಿಂತ ಹೆಚ್ಚಾಗಿ''

''ಆದರೆ ನೀನು ವಸ್ತು ಎಂದು ಕರೆಯುವುದು ನಿಜವಾದದ್ದೆ? ನೈಜವಾದದ್ದೆ? ಅದೂ ಮಾಯೆಯ ಭ್ರಮೆಯಲ್ಲವೆ ? ಕಾಣುವ ಬರಿ ಪ್ರತಿಮೆಯಲ್ಲವೆ? ನಿನ್ನ ಕಲ್ಲು, ಮರ ಎಲ್ಲವೂ ನಿಜವೆ?'' ಗೋವಿಂದ ಕೇಳಿದ.

'' ಇದೂ ನನ್ನನ್ನು ಗೊಂದಲಕ್ಕೀಡುಮಾಡುವುದಿಲ್ಲ. ಅದು ಮಾಯೆಯಾದರೆ ನಾನೂ ಸಹ ಮಾಯೆ ಮತ್ತು ಅವೂ ನನ್ನ ಗುಣಗಳನ್ನೆ ಹೊಂದಿರುತ್ತವೆ. ಇದೇ ಅವುಗಳನ್ನು ಅಷ್ಟು ಪ್ರೀತಿಸುವಂತೆ, ಪೂಜಿಸುವಂತೆ ಮಾಡುತ್ತವೆ. ಅದಕ್ಕಾಗಿಯೆ ನಾನು ಅವುಗಳನ್ನು ಪ್ರೀತಿಸಬಹುದು. ನೀನು ಕೇಳಿ ನಗುವ ಸಿದ್ಧಾಂತ ಒಂದಿದೆ ಗೋವಿಂದ. ಅದು ಪ್ರಪಂಚದಲ್ಲಿ ಪ್ರೀತಿಯೇ ಪ್ರಧಾನವಾದುದು ಎಂದು ನನಗೆ

ತೋರುತ್ತದೆ. ಚಿಂತನಕಾರರಿಗೆ ಸೃಷ್ಟಿಯನ್ನು ಪರೀಕ್ಷಿಸಿ ವಿವರಣೆ ಕೊಡುವುದು ಹಾಗೂ ನಿರ್ಲಕ್ಷಿಸುವುದು ಪ್ರಾಮುಖ್ಯವಾಗಿರಬಹುದು. ಆದರೆ ನನಗೆನಿಸುತ್ತದೆ ಪ್ರೀತಿಸುವುದು ಪ್ರಾಮುಖ್ಯವೆಂದು. ಅದನ್ನ ಉಪೇಕ್ಷಿಸದೆ, ಒಬ್ಬರನ್ನೊಬ್ಬರು ದ್ವೇಷಿಸದೆ ನಮ್ಮನ್ನು, ಸೃಷ್ಟಿಯನ್ನು ಸೃಷ್ಟಿಯ ಎಲ್ಲವನ್ನು ಪ್ರೀತಿಯಿಂದ ಶ್ಲಾಘಿಸಿ ಗೌರವದಿಂದ ಗುರುತಿಸುವ ಸಾಮರ್ಥ್ಯ ಹೊಂದಬೇಕು.''

''ನನಗರಿವಾಯಿತು. ಆದರೆ ಅದನ್ನೆ ಪ್ರಖ್ಯಾತನಾದ ಗೌತಮ ಮಾಯೆ ಎಂದದ್ದು. ಅವನು ಉಪದೇಶಿಸಿದ್ದು ತ್ಯಾಗ, ತಾಳ್ಮೆ, ಸಹಾನುಭೂತಿ, ಸಹನೆ - ಪ್ರೀತಿಯನ್ನಲ್ಲ. ಅವನು ಈ ಪ್ರಾಪಂಚಿಕ ಪ್ರೀತಿಯಿಂದ ನಮ್ಮನ್ನು ಬಂಧಿಸಿ ಕೊಳ್ಳುವುದರಿಂದ ದೂರವಿರಿಸಿದ್ದಾನೆ.''

''ಅದು ನನಗೆ ಗೊತ್ತು'' ಪ್ರಕಾಶಿತ ನಗುವಿನಿಂದ ಹೇಳಿದ ಸಿದ್ಧಾರ್ಥ; ''ನಾವು ನಮ್ಮನ್ನು ಪದಗಳ ಘರ್ಷಣೆಯಲ್ಲಿ, ಅರ್ಥಗಳ ತೊಡಕಿನಲ್ಲಿ ಕಾಣುತ್ತೇವೆ. ಪ್ರೀತಿಯ ಬಗ್ಗೆ ನನ್ನ ಮಾತು ಗೌತಮನ ಉಪದೇಶಕ್ಕೆ ಪ್ರತ್ಯಕ್ಷ ವಿರೋಧೋಕ್ತಿ ಎಂಬುದನ್ನು ನಾನು ನಿರಾಕರಿಸುವುದಿಲ್ಲ. ಈ ವಿರೋಧೋಕ್ತಿಗಳು ಮಾಯೆ ಯಾದುದರಿಂದ ಅದಕ್ಕೆ ಕಾರಣವಾಗುವ ಪದಗಳ ಬಗ್ಗೆ ನಾನು ನಂಬಿಕೆ ಕಳೆದು ಕೊಂಡಿದ್ದೇನೆ. ನಾನು ಗೌತಮನಲ್ಲಿ ಒಂದಾಗಿದ್ದೇನೆ ಎಂಬುದನ್ನು ಬಲ್ಲೆ, ಮಾನವತೆಯ ಹೆಮ್ಮೆ, ಕ್ಷಣಿಕತ್ವವನ್ನರಿತು ಅದನ್ನು ಪ್ರೀತಿಸಿ ಅನನ್ಯವಾಗಿ ತನ್ನ ಬದುಕಿನ ಬಹುಭಾಗವನ್ನು ಜನರ ಸಹಾಯಕ್ಕಾಗಿ, ಉಪದೇಶಕ್ಕಾಗಿ ಕಳೆದ ಅವನು ಹೇಗೆ ಪ್ರೀತಿಯನ್ನು ತಿಳಿಯಲಿಲ್ಲ ? ನನಗೆ ಮಹಾತ್ಮ ಗೌತಮನ ನುಡಿಗಳಿಗಿಂತ ಅವನ ವಸ್ತು ಮುಖ್ಯವಾದುದು; ಅವನ ಅಭಿಪ್ರಾಯಕ್ಕಿಂತ ಅವನ ಬದುಕು ಹಾಗೂ ಕಾರ್ಯಗಳು ಮುಖ್ಯವಾದುವು. ನಾನು ಅವನನ್ನು ಮಹಾತ್ಮನೆಂದು ಕರೆಯುವುದು ಅವನ ಬದುಕು ಹಾಗು ಕಾರ್ಯಕ್ಕಾಗಿಯೆ ವಿನಃ ಅವನ ಭಾವನೆ ಅಥವಾ ಉಪದೇಶಕ್ಕಲ್ಲ.''

ಆ ವೃದ್ಧರಿಬ್ಬರೂ ಬಹಳ ಹೊತ್ತು ಮೌನವಾಗಿದ್ದರು, ಹೊರಡಲನುವಾದ ಗೋವಿಂದ ''ಸಿದ್ಧಾರ್ಥ, ನಿನ್ನ ಕೆಲವು ಭಾವನೆಗಳನ್ನ ತಿಳಿಯ ಹೇಳಿದುದಕ್ಕೆ ನನ್ನ

ಕೃತಜ್ಞತೆಗಳು. ಅವುಗಳಲ್ಲಿ ಕೆಲವು ಅಪರಿಚಿತ ಭಾವನೆಗಳು. ಅವುಗಳನ್ನು ನಾನು ತಕ್ಷಣ ಗ್ರಹಿಸಲಾಗಲಿಲ್ಲ. ಹೇಗಾದರಿರಲಿ, ನಿನಗೆ ನನ್ನ ಕೃತಜ್ಞತೆಗಳೊಂದಿಗೆ ಹೆಚ್ಚು ಶಾಂತಿ ತುಂಬಿದ ದಿನಗಳನ್ನು ಹಾರೈಸುತ್ತೇನೆ'' ಎಂದ.

ಅಂತರಂಗದಲ್ಲಿ ಭಾವಿಸಿಕೊಂಡ ಗೋವಿಂದ: ಸಿದ್ಧಾರ್ಥನೊಬ್ಬ ಅಪೂರ್ವ ವ್ಯಕ್ತಿ, ಅಪೂರ್ವ ಭಾವನೆಗಳನ್ನ ಹೊರಗೆಡಹಿದ್ದಾನೆ, ಅವನದು ಉನ್ಮತ್ತ ಅಭಿಪ್ರಾಯಗಳು. ಪ್ರಖ್ಯಾತ ಗೌತಮನ ಸಿದ್ಧಾಂತಗಳಿಗೆ ಎಷ್ಟು ಭಿನ್ನವಾಗಿ ಪ್ರತಿಧ್ವನಿಸುತ್ತದೆ! ಅವು ಸ್ಪಷ್ಟ ನೇರ, ಸರಳ. ಅವುಗಳಲ್ಲಿ ಅನಾಗರಿಕವಾದ ಹಾಸ್ಯಾಸ್ಪದವಾದ ಯಾವುದೂ ಇಲ್ಲ. ಆದರೆ ಸಿದ್ಧಾರ್ಥನ ಕೈಕಾಲುಗಳು, ಕಣ್ಣುಗಳು, ಹುಬ್ಬು, ಅವನ ಉಸಿರಾಟ, ಮುಗುಳುನಗೆ, ಸತ್ಕಾರ, ಅವನ ಭಂಗಿ, ಅವನ ಭಾವನೆಗಳಿಗಿಂತ ಬೇರೆಯ ಪರಿಣಾಮವನ್ನುಂಟುಮಾಡುತ್ತವೆ. ಪ್ರಖ್ಯಾತ ಗೌತಮನು ನಿರ್ವಾಣದಲ್ಲಿ ಐಕ್ಯನಾದ ಮೇಲೆ ಸಿದ್ಧಾರ್ಥನನ್ನು ಬಿಟ್ಟರೆ ಪರಿಪೂರ್ಣನೆಂದು ನಾನು ಮತ್ತಾರನ್ನಾದರೂ ಕಂಡಿದ್ದೇನೆ? ಅವನ ಭಾವನೆಗಳು ವಿಚಿತ್ರವಿರಬಹುದು, ಅವನ ಪದಗಳು ಅವಿವೇಕ ಎನಿಸಬಹುದು, ಆದರೆ ಅವನ ನೋಟ, ಹಸ್ತ, ತೊಗಲು, ಕೂದಲು ಎಲ್ಲವೂ ಪರಿಶುದ್ಧತೆಯನ್ನು, ಶಾಂತಿಯನ್ನು, ಪ್ರಸನ್ನತೆಯನ್ನು ಗಾಂಭೀರ್ಯವನ್ನು, ಋಷಿತ್ವವನ್ನು ಹೊರಸೂಸುತ್ತವೆ. ಬುದ್ಧನ ನಂತರ ಇದುವರೆವಿಗೂ ನಾನಿದನ್ನು ಕಂಡಿರಲಿಲ್ಲ.

ಈ ಭಾವನೆಗಳನ್ನು ಆಲೋಚಿಸುತ್ತಿದ್ದಂತೆ ಗೋವಿಂದನ ಹೃದಯಲ್ಲಿ ಘರ್ಷಣೆ ಉಂಟಾಯಿತು. ತುಂಬಿದ ಮಮತೆಯಿಂದ ಮೌನವಾಗಿ ಕುಳಿತಿದ್ದ ಸಿದ್ಧಾರ್ಥನತ್ತ ಬಾಗಿ ಹೇಳಿದ: ''ಸಿದ್ಧಾರ್ಥ, ಈಗ ನಾವು ವೃದ್ಧರಾಗಿದ್ದೇವೆ. ಪುನಃ ನಾವಿಬ್ಬರು ಸೇರಲಾರೆವು. ನೀನು ಶಾಂತಿಯನ್ನು ಕಂಡುಕೊಂಡಿರುವುದನ್ನು ತಿಳಿಯಬಲ್ಲೆ. ಅದನ್ನು ನಾನಿನ್ನೂ ಕಂಡುಕೊಂಡಿಲ್ಲ ಎಂಬುದನ್ನು ಅರಿತಿದ್ದೇನೆ. ಗೆಳೆಯ, ಅದನ್ನು ಒಳಗೊಳ್ಳುವ, ಅರಿತುಕೊಳ್ಳುವ ಒಂದು ನುಡಿಯನ್ನು ನನಗೆ ಹೇಳು!

ನನ್ನ ದಾರಿಯಲ್ಲಿ ಸಹಾಯಕವಾಗುವಂಥದನ್ನು ಕೊಡು. ನನ್ನ ದಾರಿ ಕತ್ತಲೆಯಿಂದ ಕಠಿಣವಾಗಿದೆ.''

ಸಿದ್ಧಾರ್ಥ ಮೌನವಾಗಿ ಶಾಂತಿ ತುಂಬಿದ ನಗುವಿನಿಂದ ಅವನತ್ತ ನೋಡಿದ. ಕುತೂಹಲದಿಂದ, ಹಂಬಲದಿಂದ ಅವನ ಮುಖವನ್ನು ನೋಡಿದ ಗೋವಿಂದನ ನೋಟದಲ್ಲಿ ಸಂಕಟ, ನಿರಂತರ ಅನ್ವೇಷಣೆ ಹಾಗು ಸೋಲು ಎದ್ದು ಕಾಣುತ್ತಿತ್ತು.

ಅದನ್ನು ನೋಡಿದ ಸಿದ್ಧಾರ್ಥ ನಕ್ಕು ಹೇಳಿದ; ''ಗೋವಿಂದ, ಬಾ ಹತ್ತಿರ ಬಾ. ಇನ್ನೂ ಹತ್ತಿರ ಬಾ ನನ್ನ ಹಣೆಯಲ್ಲಿ ಮುತ್ತಿಡು.''

ಅಚ್ಚರಿಗೊಂಡರೂ ಗೋವಿಂದ ಹೆಚ್ಚಿನ ಒಲವಿನ ಒತ್ತಾಯದಿಂದ ಪೂರ್ವ ಶಂಕೆಯಿಂದ ಹೇಳಿದಂತೆ ನಡೆಯಬೇಕಾಯಿತು; ಅವನಿಗೆ ಸೇರಿಕೊಂಡಂತೆ ಬಾಗಿ ಅವನ ಹಣೆಗೆ ತನ್ನ ತುಟಿಗಳನ್ನು ಮುಟ್ಟಿಸಿದ. ಮುಟ್ಟಿಸುತ್ತಿದ್ದಂತೆ ಅವನಿಗೆ ಒಂದು ತರಹ ವಿಸ್ಮಯ ಉಂಟಾಯಿತು. ಅವನಿನ್ನೂ ಸಿದ್ಧಾರ್ಥನ ಅಪೂರ್ವ ನುಡಿಗಳನ್ನು ಚಿಂತಿಸುತ್ತಿರುವಾಗಲೇ, ಕಾಲದ ವಿಚಾರವನ್ನು ಹೋಗಲಾಡಿಸಲು ಯತ್ನಿಸುತ್ತಿರುವ ಮಧ್ಯದಲ್ಲೆ, ಸಂಸಾರ-ನಿರ್ವಾಣ ಎಂಬುದು ಒಂದೆ ಎಂದು ಯೋಚಿಸುತ್ತಿರುವಾಗಲೆ, ಅವನಿಗೆ ಗೆಳೆಯನ ನುಡಿಗಳು ಪ್ರಚಂಡ ಪ್ರೀತಿಯಿಂದ ಪರಿಗಣಿತವಾಗಿ ಒಂದು ರೀತಿಯ ಅಸಡ್ಡೆಯಿಂದ ಘರ್ಷಣೆಯುಂಟಾದಾಗ ಈ ವಿಸ್ಮಯ ಉಂಟಾಯಿತು.

ಅವನಿಗೆ ಇನ್ನು ಅಲ್ಲಿ ಗೆಳೆಯ ಸಿದ್ಧಾರ್ಥನ ಮುಖ ಕಾಣದಾಯಿತು. ಬದಲಾಗಿ ಬೇರೆ ಮುಖಗಳನ್ನು, ಬಹುಮುಖಗಳನ್ನು ನಿರಂತರ ಹೊಳೆಯಾಗಿ ಹರಿದು ಬರುತ್ತಿರುವುದನ್ನು ಕಂಡು ಮರೆಯಾಗುವ-ನೂರಾರು, ಸಾವಿರಾರು ಮುಖಗಳನ್ನು ನೋಡಿದ. ಒಂದೇ ವೇಳೆಯಲ್ಲಿ ಎಲ್ಲವೂ ಅಲ್ಲಿರುವಂತೆ, ಅವು ತಮ್ಮತಮ್ಮಲ್ಲಿಯೆ ನಿರಂತರವಾಗಿ ಬದಲಾಗಿ ಹೊಸ ರೂಪ ಹೊಂದಿದಂತೆ ಅನಿಸಿತ್ತು. ಆದಾಗ್ಯು ಅವೆಲ್ಲವು ಸಿದ್ಧಾರ್ಥನೇ. ಅವನ ಮತ್ಸ್ಯದ ಮುಖವನ್ನು ನೋವಿನಿಂದ ಬಾಯ್ದೆರೆದ

ಭಯಂಕರ ಶವವನ್ನು, ಸಾಯುತ್ತಿರುವ ಕಳೆಗುಂದಿದ ಕಣ್ಣಿನ ಮೀನನ್ನ ಕಂಡ. ಕೆಂಪಗೆ ನರಿಗೆಗಳಿಂದ ತುಂಬಿ ಅಳಲು ಸಿದ್ಧವಿರುವ, ಆಗಿನ್ನು ಹುಟ್ಟಿದ ಮಗುವನ್ನು ನೋಡಿದ. ಮನುಷ್ಯನ ಶರೀರಕ್ಕೆ ರಭಸದಿಂದ ಚಾಕು ತಳ್ಳುತ್ತಿರುವ ಕೊಲೆಗಾರನ ಮುಖವನ್ನ; ಪ್ರೇಮದಿಂದ ಭಾವೋದ್ದೀಪ್ತನಾಗಿ ಮೈಮರೆತು ಅಂಗ ವಿನ್ಯಾಸಗಳಲ್ಲಿ ತೊಡಗಿರುವ ನಗ್ನ ಸ್ತ್ರಿ ಪುರುಷರನ್ನು ಕಂಡ. ತಣ್ಣಗಾದ ಶೂನ್ಯವಾದ ಹೆಣಗಳು ಇಣುಕಿದುದನ್ನು ಕಂಡ. ಪ್ರಾಣಿಗಳ ಮುಖಗಳನ್ನ, ವರಾಹವನ್ನ, ಮೊಸಳೆಗಳನ್ನ, ಆನೆಗಳನ್ನ, ವೃಷಭವನ್ನ, ಹಕ್ಕಿಗಳನ್ನ ಕಂಡ. ಮೇಘಶ್ಯಾಮನನ್ನ, ಬೆಂಕಿಯನ್ನ ಕಂಡ. ಈ ಎಲ್ಲ ರೂಪಗಳೂ ಮುಖಗಳೂ ಒಂದಕ್ಕೊಂದು ಸಾವಿರಾರು ರೀತಿಯಲ್ಲಿ ಸಂಬಂಧಿಸಿ, ಒಂದಕ್ಕೊಂದು ನೆರವಾಗಿ ಪ್ರೀತಿಸುತ್ತ ದ್ವೇಷಿಸುತ್ತ, ಒಂದನ್ನೊಂದು ನಾಶಗೊಳಿಸುತ್ತ ಮತ್ತೆ ಹೊಸರೂಪ ತಾಳುತ್ತಿರುವುದನ್ನು ಕಂಡ. ಎಲ್ಲವೂ ಮರ್ತ್ಯ, ಭಾವೋದ್ದೀಪ್ತ, ನಶ್ವರ ಎನ್ನುವುದಕ್ಕೆ ನೋವಿನಿಂದ ತುಂಬಿದ ಉದಾಹರಣೆಯಾಗಿತ್ತು; ಆದಾಗ್ಯೂ ಯಾವುದೂ ಸಾಯಲಿಲ್ಲ, ಬದಲಾಗಿ ಮರುಹುಟ್ಟಿ, ಬೇರೆ ರೂಪ ಹೊಂದಿ ನಿರಂತರ ಹೊಸ ಮುಖವನ್ನು ಪಡೆದುವು. ಒಂದು ಮುಖದಿಂದ ಮತ್ತೊಂದರ ಮಧ್ಯೆ ಇದ್ದದ್ದು ಕಾಲ ಮಾತ್ರ. ಈ ಎಲ್ಲ ಮುಖಗಳೂ, ರೂಪಗಳೂ ಕಾಣಧಾದುವು. ಹರಿದು ಸಾಗಿ ಪುನಃ ಕಂಡವು. ಭೂತಕ್ಕೆ ಹರಿದು ಒಂದರೊಡನೊಂದು ಸೇರಿದವು. ಅವುಗಳ ಮೇಲೆ ವಾಸ್ತವವಲ್ಲದ, ಆದರೂ ಇರುವ ಮಂಜಿನ ಗಡ್ಡೆಯಂತೆ ಚಾಚಿರುವ, ಹೊಳೆವ ಚರ್ಮದಂತೆ ಶಂಖ, ನೀರಿನ ರೂಪ ಅಥವಾ ಮೊಗವಾಡವಿತ್ತು ಈ ಮೊಗವಾಡ ಆ ಗಳಿಗೆಯಲ್ಲಿ ಗೋವಿಂದ ಮುತ್ತಿಟ್ಟ ಸಿದ್ಧಾರ್ಥನ ನಗುಮೊಗವಾಗಿತ್ತು. ಗೋವಿಂದ ನೋಡಿದ, ಈ ತೆರೆಯ ನಗು ಹರಿದು ಹೋಗುತ್ತಿರುವ ರೂಪಗಳ ಗುರುತ್ವದ ನಗು, ಸಾವಿರಾರು ಹುಟ್ಟು ಸಾವುಗಳ ಮೇಲಿರುವ ಈ ಸಿದ್ಧಾರ್ಥನ ಈ ನಿರಂತರ ನಗು ಶಾಂತವಾದ, ಲಲಿತವಾದ, ಗಹನವಾದ ಬಹುಶಃ ಆನಂದದಾಯಕವಾದ, ಹಾಸ್ಯವಾದ, ಚತುರವಾದ ಅವನು ಭಕ್ತಿಯಿಂದ ನೂರಾರು ಸಲ ಗ್ರಹಿಸಿದ ಗೌತಮಬುದ್ಧನ ಸಾವಿರ ಸುರುಳಿಯ ನಗುವಾಗಿತ್ತು. ಈ ರೀತಿಯಾಗಿ ಗೋವಿಂದ ಪ್ರಖ್ಯಾತನ ನಗುವನ್ನು ಅರಿತಿದ್ದ.

ಇನ್ನು ಕಾಲದ ಇರುವಿಕೆ; ಈ ತೆರನ ದೃಶ್ಯ ಒಂದು ಕ್ಷಣ ಇಲ್ಲ ನೂರು ವರ್ಷ, ಸಿದ್ಧಾರ್ಥ ಅಥವಾ ಗೌತಮ, ಸ್ವಯಂ ಇಲ್ಲ ಇತರರು ಯಾರೂ ಅರಿವಿರಲಿಲ್ಲ. ಎಲ್ಲರೂ ಸಂತಸವನ್ನು ತರುವ ಪವಿತ್ರ ಬಾಣದಿಂದ ಪೂರ್ಣಗಾಯಗೊಂಡಿದ್ದರು, ದೀರ್ಘವಾಗಿ ಘೋಷಿಸುತ್ತ, ಸ್ತೋತ್ರ ಮಾಡುತ್ತ ತಾನು ಮುತ್ತಿಟ್ಟ, ವರ್ತಮಾನದ ಭವಿಷ್ಯದ ರೂಪಗಳೆಲ್ಲ ಪ್ರತಿಫಲಿಸಿದ್ದ ಸಿದ್ಧಾರ್ಥನ ಶಾಂತ ಮುಖದತ್ತ ಗೋವಿಂದ ಬಾಗಿ ನಿಂತ. ಸಾವಿರಾರು ರೂಪಗಳು ಕಂಡು ಮಾಯವಾಗಿದ್ದರೂ ಸಿದ್ಧಾರ್ಥನ ಮುಖಭಾವ ಯಾವ ಬದಲವಣೆಯೂ ಇಲ್ಲದೆ ಯಥಾಪ್ರಕಾರವಿತ್ತು. ಶಾಂತ ಮುದ್ರೆಯಿಂದ, ಸೌಮ್ಯವಾಗಿ ಬಹುಶಃ ಪ್ರಖ್ಯಾತ ಗೌತಮನ ನಗುವಿನಂತೆ ನಕ್ಕ ಸಿದ್ಧಾರ್ಥ.

ಗೋವಿಂದ ಬಾಗಿದ. ತಡೆಯಲಾಗದ ಭಾಷ್ಪ ಅವನ ವೃದ್ಧ ಮುಖದಿಂದ ಹನಿಹನಿಯಾಗಿ ಉದುರಿತು. ನಮ್ರವಾಗಿ ಹೆಚ್ಚಿನ ಪ್ರೀತಿಯಿಂದ ಪುಳಕಿತನಾದ, ಯಾರ ನಗು, ಜೀವನದಲ್ಲಿ ಪ್ರೀತಿಸಿದ್ದ, ಪವಿತ್ರವಾದ, ಮೌಲ್ಯವುಳ್ಳ ಎಲ್ಲವನ್ನೂ ಮತ್ತೆ ಮರುಕಳಿಸಿತ್ತೊ, ಅಚಲನಾಗಿ ಕುಳಿತಿದ್ದ ಆ ಸಿದ್ಧಾರ್ಥನ ಮುಂದೆ ಗೋವಿಂದ ಸಾಷ್ಟಾಂಗ ಮಾಡಿದ.

ಅನುಬಂಧ

ನೊಬೆಲ್ ಪ್ರಶಸ್ತಿ ವಿಜೇತ ಲೇಖಕ ಲೇಖಕಿಯರು

ವರ್ಷ	ವಿಜೇತರು	ದೇಶ-ಭಾಷೆ
1901	ಸುಲಿ ಪ್ರುದೋಮ್ (Sully Prudhomme)	ಫ್ರಾನ್ಸ್-ಫ್ರೆಂಚ್
1902	ಥಿಯೆಡೋರ್ ಮೊಮೆಸೆನ್ (Theodor Mommesen)	ಜರ್ಮನಿ-ಜರ್ಮನ್
1903	ಬ್ಯೋರ್ನ್‌ಸ್ಟರ್ನ್ ಬ್ಯೋರ್ನ್‌ಸನ್ (Bjornstjerne Bjornson)	ನಾರ್ವೆ-ನಾರ್ವೇಜಿಯನ್
1904	ಫ್ರೆಡೆರಿಕ್ ಮಿಸ್ತ್ರಲ್ (Frederic Mistral)	ಫ್ರಾನ್ಸ್-ಫೆಂಚ್
	ಯೋಸೆ ಈಚೆಗಾರೆ (Jose Echegaray)	ಸ್ಪೇನ್-ಸ್ಪ್ಯಾನಿಷ್
1905	ಹೆನ್ರಿಕ್ ಸಿಯೆನ್‌ಕಿಯೆವಿಚ್ (Henryk Sienkiewicz)	ಪೋಲೆಂಡ್-ಪೋಲಿಷ್
1906	ಜಿಯೂಸೆ ಕಾರ್ದೂಚ್ಚಿ (Giouse Carducci)	ಇಟಲಿ-ಇಟಾಲಿಯನ್
1907	ರಡ್‌ಯಾರ್ಡ್ ಕಿಪ್ಲಿಂಗ್ (Rudyard Kipling)	ಗ್ರೇಟ್ ಬ್ರಿಟನ್-ಇಂಗ್ಲಿಷ್
1908	ರುಡಾಲ್ಫ್ ಯೂಕೆನ್ (Rudolf Eucken)	ಜರ್ಮನಿ-ಜರ್ಮನ್
1909	ಸೆಲ್ಮಾ ಲಾಗರ್‌ಲಾಫ್ (Selma Lagerlof)	ಸ್ವೀಡನ್-ಸ್ವೀಡಿಷ್
1910	ಪಾಲ್ ಹೇಸೆ (Paul Heyse)	ಜರ್ಮನಿ-ಜರ್ಮನ್
1911	ಮೌರೀಸ್ ಮ್ಯಾಟರ್‌ಲಿಂಕ್ (Mourice Maeterlinck)	ಬೆಲ್ಜಿಯಂ-ಫ್ರೆಂಚ್
1912	ಗೆರ್‌ಹಾರ್ಟ್ ಹಾಪ್ಟ್‌ಮನ್ (Gerhart Hauptmann)	ಜರ್ಮನಿ-ಜರ್ಮನ್
1913	ರವೀಂದ್ರನಾಥ ಠಾಕೂರ್ (Rabindranath Togore)	ಭಾರತ-ಬಂಗಾಳಿ

1914 ಯಾರಿಗೂ ಇಲ್ಲ

1915 ರೋಮೆರೋಲಾ (Romain Rolland) ಫ್ರಾನ್ಸ್-ಫ್ರೆಂಚ್

1916 ವೆರ್ನೆರ್ ವಿ.ಹೈದೆನ್‌ಸ್ಟ್ರಾಮ್
(Verner v. Heidenstam) ಸ್ವೀಡನ್-ಸ್ವೀಡಿಷ್

1917 ಕಾರ್ಲ್‌ಜ್ಯೆಲೆರೂಪ್ (Karl Gjellerup) ಡೆನ್ಮಾರ್ಕ್-ಡೇನಿಷ್
ಹೆನ್ರಿಕ್ ಪೋಂತೊಪ್ಪಿದಾನ್
(Henrik Pantoppidan) ಡೆನ್ಮಾರ್ಕ್-ಡೇನಿಷ್

1918 ಯಾರಿಗೂ ಇಲ್ಲ

1919 ಕಾರ್ಲ್ ಸಿಟೆಲರ್ (Carl Spitteler) ಸ್ವಿಟ್ಜರ್‌ಲ್ಯಾಂಡ್-ಜರ್ಮನ್

1920 ನುಟ್‌ಹ್ಯಾಮ್ಸುನ್ (Knut Hamsun) ನಾರ್ವೆ-ನಾರ್ವೇಜಿಯನ

1921 ಅನಾತೋಲ ಫ್ರಾನ್ಸ್ (Anatole France) ಫ್ರಾನ್ಸ-ಫಂಚ್

1922 ಯಾಸಿಂತೊಬೆನಾವೆಂತೆ
(Jacinto Benavente) ಸ್ಪೇನ-ಸ್ಪ್ಯಾನಿಷ್

1923 ಡಬ್ಲ್ಯು.ಬಿ.ಯೇಟ್ಸ್
(W.B. Yeats)
ಐರ್ಲೆಂಡ್-ಇಂಗ್ಲಿಷ್

1924 ವ್ಲಾದಿಸ್ಲಾರೇಮೋಂತ್
(Wladyslaw Reymont) ಪೋಲೆಂಡ್-ಪೋಲಿಷ್

1925 ಜಾರ್ಜ್ ಬರ್ನಾರ್ಡ್ ಷಾ
(George Bernard Shaw) ಗ್ರೇಟ್ ಬ್ರಿಟನ್ - ಇಂಗ್ಲಿಷ್

1926 ಗ್ರೇತ್ಸಿಯಾ ದೆಲೆದ್ದಾ
(Grazia Deledda) ಇಟಲಿ - ಇಟಾಲಿಯನ್

1927 ಹೆನ್ರಿ ಬೆರ್ಗ್‌ಸನ್ (Henri Bergson) ಫ್ರಾನ್ಸ್ - ಫ್ರೆಂಚ್

1928 ಸಿಗ್ರಿದ್ ಉಂದ್‌ಸೆತ್
(Sigrid Undset) ನಾರ್ವೆ - ನಾರ್ವೆಜಿಯನ್

1929 ಥಾಮಸ್ ಮಾನ್ (Thomas Mann) ಜರ್ಮನಿ - ಜರ್ಮನ್

1930 ಸಿಂಕ್ಲೇರ್ ಲೀವಿಸ್ (Sinclair Lewis) ಅಮೆರಿಕ - ಇಂಗ್ಲಿಷ್

1931 ಎರಿಕ್ ಏಕ್ಸೆಲ್ ಕಾರ್ಲ್‌ಫೆಲ್ತ್
(Erik Axel Karlfeldt) ಸ್ವೀಡನ್ - ಸ್ವಿಡೀಷ್

1932 ಜಾನ್ ಗಾಲ್ಸ್‌ವರ್ದಿ
(john Galsworthy) ಗ್ರೇಟ್ ಬ್ರಿಟನ್ - ಇಂಗ್ಲಿಷ್

1933 ಇವಾನ್ ಬುನಿನ್ (Ivan Bunin) ರಷ್ಯಾ / ಫ್ರಾನ್ಸ್ - ರಷ್ಯನ್

1934 ಲುಯಿಜಿ ಪಿರಾಂಡೆಲೊ
(Luigi Pirandello) ಇಟಲಿ - ಇಟಾಲಿಯನ್

1935 ಯಾರಿಗೂ ಇಲ್ಲ

1936 ಯೂಜೀನ್ ಓನೀಲ್
(Eugene O'Neill) ಅಮೆರಿಕ - ಇಂಗ್ಲಿಷ್

1937 ರೋಜರ್ ಮಾರ್ತಿನ್ ದೂ ಗಾರ್
(Roger martin Du Gard) ಫ್ರಾನ್ಸ್ - ಫ್ರೆಂಚ್

1938 ಪರ್ಲ್ ಎಸ್. ಬಕ್ (Pearl S. Buck) ಅಮೆರಿಕ - ಇಂಗ್ಲಿಷ್

1939 ಫ್ರಾನ್ಸ್ ಈಮಿಲ್ ಸಿಲ್ಲಾನ್‌ಪಾ
(Frans Eemil Sillanpaa) ಫಿನ್ಲೆಂಡ್ - ಫಿನ್ನಿಷ್

1940 ಯಾರಿಗೂ ಇಲ್ಲ

1941 ಯಾರಿಗೂ ಇಲ್ಲ

1942 ಯಾರಿಗೂ ಇಲ್ಲ

1943 ಯಾರಿಗೂ ಇಲ್ಲ

1944 ಯೊಹಾನ್ನೆಸ್ ವಿ. ಯೆನ್‌ಸೆನ್
(Johannes V. Jensen) ಡೆನ್ಮಾರ್ಕ್ - ಡೇನಿಷ್

1945 ಗೇಬ್ರಿಯೆಲಾ ಮಿಸ್ತ್ರಲ್ (Gabriela Mistral) ಚಿಲಿ - ಸ್ಪ್ಯಾನಿಷ್

1946 ಹರ್ಮನ್ ಹೆಸ್
(Hermann Hesse) ಸ್ವಿಟ್ಜರ್‌ಲ್ಯಾಂಡ್ - ಜರ್ಮನ್

1947 ಆಂದ್ರೆ ಜೀದ್ (Andre Gide) ಫ್ರಾನ್ಸ್ - ಫ್ರೆಂಚ್

1948	ಟಿ. ಎಸ್. ಎಲಿಯಟ್ (T. S. Eliot)	ಗ್ರೇಟ್ ಬ್ರಿಟನ್ - ಇಂಗ್ಲೀಷ್
1949	ವಿಲಿಯಂ ಫಾಕ್ನರ್ (William Faulkner)	ಅಮೆರಿಕ - ಇಂಗ್ಲೀಷ್
1950	ಬರ್ಟ್ರೆಂಡ್ ರಸೆಲ್ (Pertrand Russel)	ಗ್ರೇಟ್ ಬ್ರಿಟನ್ - ಇಂಗ್ಲೀಷ್
1951	ಪಾರ್ ಲಾಗರ್‌ಕ್ವಿಸ್ಟ್ (Par Lagerkvist)	ಸ್ವೀಡನ್ - ಸ್ವೀಡಿಷ್
1952	ಫ್ರಾನ್ಸುವಾ ಮೋರಿಯಾಕ್ (Francois Mouriac)	ಫ್ರಾನ್ಸ್ - ಫ್ರೆಂಚ್
1953	ವಿನ್ಸ್‌ಟನ್ ಚರ್ಚಿಲ್ (Winston Churchill)	ಗ್ರೇಟ್ ಬ್ರಿಟನ್ - ಇಂಗ್ಲಿಷ್
1954	ಅರ್ನೆಸ್ಟ್ ಹೆಮಿಂಗ್‌ವೇ (Ernest hemingway)	ಅಮೆರಿಕ - ಇಂಗ್ಲೀಷ್
1955	ಹಾಲ್‌ದೋರ್ ಲ್ಯಾಕ್ಸ್‌ನೆಸ್ (Halldor Laxness)	ಐಸ್‌ಲೆಂಡ್ - ಐಸ್‌ಲ್ಯಾಂಡಿಕ್
1956	ಯುಮಾನ್ ಆರ್. ಯಿಮೆನೆಸ್ (Juan R. Jimenez)	ಸ್ಪೇನ್ - ಸ್ಪ್ಯಾನಿಷ್
1957	ಆಲ್ಬರ್ಟ್ ಕಾಮು (Albert Camus)	ಫ್ರಾನ್ಸ್ - ಫ್ರೆಂಚ್
1958	ಬೋರಿಸ್ ಪಾಸ್ತರ್‌ನಾಕ್ (Boris Pasternak) (ಪ್ರಶಸ್ತಿ ಪಡೆಯಲಿಲ್ಲ)	(ಸೋವಿಯತ್ ಒಕ್ಕೂಟ - ರಷ್ಯನ್
1959	ಸಾಲ್ವತೋರೆ ಕಾಸಿಮೋದೊ (Salvatore Quasimodo)	ಇಟಲಿ - ಇಟಾಲಿಯನ್
1960	ಸೇಂಟ್-ಜಾನ್ ಪೆರ್ಸ್ (Saint - John Perse)	ಫ್ರಾನ್ಸ್ - ಫ್ರೆಂಚ್

1961 ಇವೊ ಆಂದ್ರಿಚ್

(Ivo Andric) ಯೂಗೋಸ್ಲಾವಿಯಾ - ಸೆರ್ಬೊ - ಕ್ರೋಶ್

1962 ಜಾನ್ ಸ್ಟೈನ್‌ಬೆಕ್

(John Steinbeck) ಅಮೆರಿಕ - ಇಂಗ್ಲೀಷ್

1963 ಜಿಯಾರ್ ಜೋಸ್ ಸೆಫೇರಿಸ್

(Giorgos Seferis) ಗ್ರೀಸ್ - ಗ್ರೀಕ್

1964 ಜೀನ್-ಪಾಲ್ ಸಾರ್ತ್ರ

(Jean-Paul Sartre) ಫ್ರಾಂಸ್-ಫ್ರೆಂಚ್

1965 ಮಿಖಾಯಿಲ್ ಶೊಲೋಖೊವ್

(Mikhail Sholokhov) ಸೋವಿಯೆತ್ ಒಕ್ಕೂಟ - ರಷ್ಯನ್

1966 ಎಸ್. ವೈ. ಆಗ್ನಾನ್ (S.Y. Agnon) ಇಸ್ರೇಲ್ - ಹೀಬ್ರೂ

ನೆಲ್ಲಿ ಸ್ಯಾಚ್ಸ್ (Nelly Sachs) ಜರ್ಮನಿ - ಜರ್ಮನ್

1967 ಮಿಗೇಲ್ ಏಂಜಲ್ ಅಸ್ಟೂರಿಯಾಸ್

(Miguel Angel Asturias) ಗ್ವಾಟೆಮಾಲಾ - ಸ್ಪ್ಯಾನಿಷ್

1968 ಯಸುನಾರಿ ಕವಾಬಾಟ

(Yasunari Kawabata) ಜಪಾನ್ - ಜಾಪನೀಸ್

1969 ಸ್ಯಾಮ್ಯುಯೆಲ್ ಬೆಕೆಟ್

(Samuel Becktt) ಐರ್ಲೆಂಡ್ / ಫ್ರಾನ್ಸ್ - ಫ್ರೆಂಚ್ / ಇಂಗ್ಲೀಷ್

1970 ಅಲೆಕ್ಸಾಂಡರ್ ಸೊಲ್ಜೆನಿತ್ಸಿನ್

(Alexsander Solzhemistyn) ಸೋವಿಯೆತ್ ಒಕ್ಕೂಟ - ರಷ್ಯನ್

1971 ಪ್ಯಾಬ್ಲೋ ನೆರೂದಾ (Pablo Neruda) ಚಿಲಿ - ಸ್ಪ್ಯಾನಿಷ್

1972 ಹೇನ್ರಿಶ್ ಬ್ಯೋಲ್

(Heinrich Boll) ಪಶ್ಚಿಮ ಜರ್ಮನಿ - ಜರ್ಮನ್

1973 ಪ್ಯಾಟ್ರಿಕ್ ವೈಟ್ (Patrick white) ಆಸ್ಟ್ರೇಲಿಯ - ಇಂಗ್ಲೀಷ್

1974 ಐವಿಂಡ್ ಜಾನ್ಸನ್ (Eyvind Johnson)

ಹ್ಯಾರಿ ಮಾರ್ತಿನ್‌ಸನ್ (Harry Martinson) ಸ್ವೀಡನ್ - ಸ್ವೀಡೀಷ್

1975	ಯೂಜೀನಿಯೊ ಮೊಂತಾಲೆ (Eugeoio Montale)	ಇಟಲಿ - ಇಟಾಲಿಯನ್
1976	ಸಾಲ್ ಬೆಲೊ (Saul Bellow)	ಅಮೆರಿಕ - ಇಂಗ್ಲೀಷ್
1977	ವಿನ್ಸೆಂತೆ ಅಲೆಕ್ಸಾಂದ್ರೆ (Vincente Aleixandre)	ಸ್ಪೇನ್ - ಸ್ಪ್ಯಾನಿಷ್
1978	ಐಸಾಕ್ ಬಾಷೆವಿಸ್ ಸಿಂಗರ್ (Isaac Bashevis Singer)	ಪೋಲೆಂಡ್/ ಅಮೆರಿಕ - ಯಿದ್ದಿಶ್
1979	ಒಡಿಸ್ಸ್ಯುಸ್ ಎಲೀಟಿಸ್ (Odysseus Elytis)	ಗ್ರೀಸ್ - ಗ್ರೀಕ್
1980	ಜೆಸ್ಲಾ ಮಿಲೋತ್ಸ್ (Czeslaw Milosz)	ಪೋಲೆಂಡ್/ ಅಮೆರಿಕ - ಪೋಲಿಷ್
1981	ಎಲಿಯಾಸ್ ಕ್ಯಾನೆಟಿ (Elias Canetti)	ಗ್ರೇಟ್ ಬ್ರಿಟನ್ - ಜರ್ಮನ್
1982	ಗೇಬ್ರಿಯಲ್ ಗಾರ್ಸಿಯಾ ಮಾರ್ಕೇಸ್ (Gabriel Garcia marquez)	ಕೊಲಂಬಿಯ - ಸ್ಪ್ಯಾನಿಷ್
1983	ವಿಲಿಯಂ ಗೋಲ್ಡಿಂಗ್ (William Golding)	ಗ್ರೇಟ್ ಬ್ರಿಟನ್ - ಇಂಗ್ಲೀಷ್
1984	ಯಾರೋಸ್ಲಾವ್ ಸೀಫರ್ತ್ (Jaroslow Seifert)	ಚೆಕೋಸ್ಲೋವಾಕಿಯ - ಚೆಕ್
1985	ಕ್ಲಾದ್ ಸಿಮೋನ್ (Claude Simon)	- ಫ್ರೆಂಚ್
1986	ವೊಲೆ ಷೊಯಿಂಕ (wole Soyinka)	ನೈಜಿರಿಯಾ -
1987	ಜೊಸೆಫ್ ಬ್ರಾಡ್‌ಸ್ಕಿ (Joseph Brodsky)	ರಷಿಯಾ/ ಅಮೆರಿಕ - ರಷ್ಯನ್
1988	ನಜೀಬ್ ಮಹಫಾಜ್ (Najib Mahfuz)	ಈಜಿಪ್ಟ್ - ಅರಾಬಿಕ್
1989	ಕಾಮಿಲೋ ಜೊಸೆ ಸೆಲಾ (Camilo Josi Cela)	ಸ್ಪೇನ್ - ಸ್ಪ್ಯಾನಿಷ್
1990	ಅಕ್ಟೊವಿಯ ಫಾಜ್ (octovio Paz)	ಮೆಕ್ಸಿಕೊ - ಸ್ಪ್ಯಾನಿಷ್

1991 ನ್ಯಾಡನ್ ಗೊರ್ಡಿಮರ್
(Nadine Gordimer) ದ. ಆಫ್ರಿಕ - ಇಂಗ್ಲೀಷ್

1992 ಡೆರೆಕ್ ವಾಲ್ಕಾಟ್
(Derck Wolcott) ಸೈಂಟ್ ಲೂಸಿಯಾ(ಕೆರಿಬಿಯನ್) - ಇಂಗ್ಲೀಷ್

1993 ಟೋನಿ ಮಾರಿಸನ್ (Toni Morrison) ಅಮೆರಿಕ - ಇಂಗ್ಲೀಷ್

1994 ಜೆಂಝುಬುರೊ ಒಯೆ (Kenzaburo Oe) ಜಪಾನ್ - ಜಪಾನಿ

1995 ಸೀಮನ್ ಹೀನಿ (Seaman Heany) ಯುಕೆ - ಐರಿಷ್

1996 ವಿಸ್ಲಾವಾ ಸಿಂಬೊ
(Wislawa zymoska) ಪೋಲೆಂಡ್ - ಪೋಲಿಷ್

1997 ಡೇರಿಯೊ ಫೊ (Dario Fo) ಇಟಲಿ - ಇಟಾಲಿಯನ್



೧೯೪೬ ರಲ್ಲಿ ನೊಬೆಲ್ ಪುರಸ್ಕಾರವನ್ನು ಪಡೆದ ಲೇಖಕ ಹರ್ಮನ್ ಹೆಸ್. ಜರ್ಮನ್ ಭಾಷೆಯಲ್ಲಿ ಆಧ್ಯಾತ್ಮಿಕ ಅನುಭವದ ಕೃತಿಗಳನ್ನು ರಚಿಸಿದ ಹೆಸ್ ಮಹಾಮಾನವತಾವಾದಿಯಾಗಿಯೂ ಪ್ರಸಿದ್ಧನಾಗಿದ್ದಾನೆ. ಭಾರತೀಯ ಚಿಂತನೆಯಿಂದ ತುಂಬ ಪ್ರಭಾವಿತನಾಗಿದ್ದ ಈತ ಭಾರತಕ್ಕೆ ಭೇಟಿ ಕೊಟ್ಟ ಫಲವಾಗಿ 'ಸಿದ್ಧಾರ್ಥ' ಎಂಬ ಕಾದಂಬರಿಯನ್ನು ರಚಿಸಿದ. ಯುದ್ಧಕಾಲದ ವೈರುಧ್ಯಗಳನ್ನು ಚಿತ್ರಿಸಿದ ಈತನ 'ಡಿಮಿಯನ್' ಕಾದಂಬರಿ ಜರ್ಮನ್ ಯುವಪೀಳಿಗೆಗೆ 'ಬೈಬಲ್' ಎಂಬಂತೆ ಪ್ರಭಾವ ಬೀರಿತ್ತು. ಸಮಾಜದಲ್ಲಿನ ದುಷ್ಟಶಕ್ತಿಗಳ ವಿರುದ್ಧದ ಹೋರಾಟವನ್ನೇ ತನ್ನ ಕೃತಿಗಳಲ್ಲಿ ಮುಖ್ಯ ವಸ್ತುವಾಗಿಸಿಕೊಂಡಿದ್ದ ಹೆಸ್ ಕತೆ - ಕಾದಂಬರಿಗಳೊಂದಿಗೆ ಕೆಲವು ಕವಿತೆ ಹಾಗೂ ಪ್ರಬಂಧಗಳನ್ನು ಕೂಡ ಬರೆದಿದ್ದಾನೆ. ತನ್ನ ಕೊನೆಗಾಲದಲ್ಲಿ ದೇಶದಿಂದ ಬಹಿಷ್ಕೃತನಾಗಿಯೂ ಒಬ್ಬ ದಿಟ್ಟ ಲೇಖಕನಾಗಿ ತನ್ನ ಜೀವಿತವನ್ನು ಕಳೆದ ಹರ್ಮನ್ ಹೆಸ್ ಸಾಹಿತ್ಯದ ಪರಿಚಯವನ್ನು ಈ ವಾಚಿಕೆಯಲ್ಲಿ ಮಾಡಿಕೊಡಲು ಯತ್ನಿಸಿದೆ.

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು - ೫೬೦ ೦೧೮